ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸೆಪ್ಟೆಂಬರ್‌ನಲ್ಲಿ ಏಷ್ಯಾ ಕಪ್

ಬಹುನಿರೀಕ್ಷಿತ 2025ರ ಟಿ20 ಏಷ್ಯಾ ಕಪ್ ಸೆಪ್ಟೆಂಬರ್ 9 ರಿಂದ 28ರ ವರೆಗೆ ಯುಎಇಯಲ್ಲಿ ನಡೆಯಲಿದೆ. ಭಾರತ ಮತ್ತು ಪಾಕ್ ನಡುವಿನ ಉದ್ವಿಗ್ನತೆಯಿಂದಾಗಿ 2027ರ ವರೆಗೂ ತಟಸ್ಥ ಸ್ಥಳಗಳಲ್ಲಿ ಟೂರ್ನಿ ನಡೆಸಲು ನಿರ್ಧರಿಸಲಾಗಿದೆ. ಭಾರತ ಮತ್ತು ಪಾಕ್ ನಡುವಿನ ಪಂದ್ಯ ಸೆ.14ರಂದು ನಡೆಯಲಿದೆ. ಈ ಬಾರಿ 8 ತಂಡಗಳ ನಡುವೆ ಪಂದ್ಯ ನಡೆಯಲಿದೆ.



ಬೆಂಗಳೂರಿನ ಎಫ್‌ಕೆಸಿಸಿಐ ಸಭಾಂಗಣದಲ್ಲಿ ಶನಿವಾರ ವಿಶ್ವವಾಣಿ ಪುಸ್ತಕ ಪ್ರಕಾಶನದ 8 ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು. ಸರಸ್ವತಿ ಸಮ್ಮಾನ ಪುರಸ್ಕೃತ ಸಾಹಿತಿ ಎಸ್.ಎಲ್. ಭೈರಪ್ಪ, ಧರ್ಮಸ್ಥಳದ ಧರ್ಮಾಧಿಕಾರಿ, ಸಂಸದ ವೀರೇಂದ್ರ ಹೆಗ್ಗಡೆ, ಮಾಜಿ ಸಿಎಂ, ಲೋಕಸಭಾ ಸದಸ್ಯ ಬಸವರಾಜ ಬೊಮ್ಮಾಯಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸಂಸದ ತೇಜಸ್ವಿ ಸೂರ್ಯ, ರಿಪಬ್ಲಿಕ್ ಕನ್ನಡ ಚಾನೆಲ್ ಸಂಪಾದಕಿ ಶೋಭಾ ಮಳವಳ್ಳಿ, ವಿಶ್ವವಾಣಿ ಪುಸ್ತಕ ಪ್ರಕಾಶಕರಾದ ಸುಷ್ಮಾ ಭಟ್, ಲೇಖಕರಾದ ಎಸ್.ಷಡಕ್ಷರಿ, ಕಿರಣ್ ಉಪಾಧ್ಯಾಯ, ರಾಜು ಅಡಕಳ್ಳಿ, ರೂಪಾ ಗುರುರಾಜ್, ಜಮಖಂಡಿಯ ಪುಸ್ತಕ ಪ್ರೇಮಿ ಧನ್ನೂರ್ ಉಪಸ್ಥಿತರಿದ್ದರು.

ರಾಹುಲ್ ಗಾಂಧಿಯವರ ಮತಕಳ್ಳತನ ಆರೋಪಕ್ಕೆ ಸಿಎಂ ಸಾಥ್

ಇಸಿ ದುರ್ಬಳಕೆ ವಿರುದ್ಧ ಅಭಿಯಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ಕೇಂದ್ರ ಚುನಾವಣಾ ಆಯೋಗವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದು, ಇದರ ವಿರುದ್ಧ ಕಾಂಗ್ರೆಸ್ ದೇಶಾದ್ಯಂತ ಅಭಿಯಾನ ನಡೆಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಮಾತನಾಡಿದ ಅವರು ಕಳೆದ ಲೋಕಸಭೆ ಚುನಾವಣೆ ವೇಳೆ ಕರ್ನಾಟಕದ ಕೆಲವು ಲೋಕಸಭಾ ಕ್ಷೇತ್ರಗಳಲ್ಲಿ ಮತಗಳ್ಳತನ ನಡೆದಿದೆ ಎಂಬ ಲೋಕಸಭೆಯ ಪ್ರತಿಪಕ್ಷದ ನಾಯಕ ಹಾಗೂ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಆರೋಪಕ್ಕೆ ಸಮ್ಮತಿ ಸೂಚಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರಗಳಲ್ಲಿ ಮತಕಳವು ಆಗಿರುವುದಕ್ಕೆ ಸಾಕ್ಷಿಗಳಿವೆ. ಕೆಪಿಸಿಸಿ ವತಿಯಿಂದ ನಡೆಸಿರುವ ಸಂಶೋಧನೆಯಿಂದ ಇದು ಸಾಬೀತಾಗಿದೆ. ಸೂಕ್ತ ಸಂದರ್ಭದಲ್ಲಿ ಆಯೋಗಕ್ಕೆ ಈ ಸಾಕ್ಷ್ಯಾಧಾರಗಳನ್ನು ಒದಗಿಸಲಾಗುವುದು ಎಂದು ಹೇಳಿದ್ದಾರೆ.

ಕೇಂದ್ರ ಸರಕಾರವು ಮತದಾರರ ಪಟ್ಟಿಯನ್ನು ದುರ್ಬಳಕೆ ಮಾಡುತ್ತಿದೆ ಮತ್ತು ಭಾರತ ಚುನಾವಣಾ ಆಯೋಗ ಸೇರಿದಂತೆ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿದೆ. ನಕಲಿ ಹೆಸರುಗಳನ್ನು ಸೇರ್ಪಡೆ ಮಾಡುವಾಗ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ ಎಂಬ ರಾಹುಲ್ ಗಾಂಧಿಯವರ ಆರೋಪವು ಸತ್ಯದಿಂದ ಕೂಡಿದೆ. ಮಹಾರಾಷ್ಟ್ರ, ಹರಿಯಾಣ ಮತ್ತು ಕರ್ನಾಟಕದಲ್ಲಿ ಇಂತಹ ಘಟನೆಗಳು ನಡೆದಿವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಮುಂಬರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲೂ ಇದೇ ಕುತಂತ್ರವನ್ನು ನಡೆಸಲು ಯೋಜಿಸುತ್ತಿದ್ದಾರೆ. ಇದು ಬಿಜೆಪಿಯ ಕಿಡಿಗೇಡಿತನ. ದೇಶಾದ್ಯಂತ ಈ ಕುತಂತ್ರ ನಡೆಸಲಾಗುತ್ತಿದೆ. ಚುನಾವಣಾ ಆಯೋಗವು ಇನ್ಮುಂದೆ ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದಿಲ್ಲ ಎಂದು ಅವರು ಆತಂಕ ವ್ಯಕ್ತಪಡಿಸಿ ಸಿಎಂ, ಚುನಾವಣಾ ಆಯೋಗವು ಕೇಂದ್ರ ಸರಕಾರದ ನಿರ್ದೇಶನದಂತೆ ಕೆಲಸ ಮಾಡುತ್ತಿದೆ. ಅದು ಸ್ವತಂತ್ರವಾಗಿಲ್ಲ. ಚುನಾವಣಾ ಆಯೋಗವು ಸ್ವತಂತ್ರವಾಗಿ ಮತ್ತು ನ್ಯಾಯಯುತವಾಗಿ ಕಾರ್ಯನಿರ್ವಹಿಸಬೇಕು, ಆದರೆ ಅದು ಹಾಗೆ ಮಾಡುತ್ತಿಲ್ಲ ಎಂದು ಅನುಮಾನ ಹೊರಹಾಕಿದ್ದಾರೆ.

> ಪ್ರಜಾಪ್ರಭುತ್ವ ಅಪಾಯದಲ್ಲಿದೆ. ಈ ಅಕ್ರಮಗಳನ್ನು ಬಹಿರಂಗಪಡಿಸಲು ಮತ್ತು ಚುನಾವಣಾ ಪ್ರಕ್ರಿಯೆಯ ಸಮಗ್ರತೆ ರಕ್ಷಿಸಲು ಸುಧಾರಣೆ ತರಲು ಕಾಂಗ್ರೆಸ್ ರಾಷ್ಟ್ರವ್ಯಾಪಿ ಅಭಿಯಾನ ಪ್ರಾರಂಭಿಸುತ್ತದೆ.
> -ಸಿದ್ದರಾಮಯ್ಯ ಸಿಎಂ

ಪ್ರತಿಯೊಂದು ರಾಜ್ಯದಲ್ಲೂ ಜಾತಿಗಣತಿ ಅವಶ್ಯ

ರಾಷ್ಟ್ರವ್ಯಾಪಿ ಜಾತಿಗಣತಿ ನಡೆಸುವ ಮಹತ್ವ ಬಲವಾಗಿ ಸಮರ್ಥಿಸಿಕೊಂಡಿರುವ ಸಿಎಂ ಸಿದ್ದರಾಮಯ್ಯ, ಪ್ರತಿಯೊಂದು ರಾಜ್ಯವೂ ಜಾತಿಗಣತಿ ಪ್ರಾರಂಭಿಸಬೇಕು. ಅದು ಸಾಮಾಜಿಕ-ಆರ್ಥಿಕ, ಶೈಕ್ಷಣಿಕ, ಉದ್ಯೋಗಾಧಾರಿತ ಮತ್ತು ರಾಜಕೀಯವಾಗಿರಬೇಕು. ಏಕೆಂದರೆ ಸ್ವಾತಂತ್ರ್ಯದ ನಂತರ ವ್ಯಕ್ತಿಯ ಸ್ಥಿತಿ-ಆರ್ಥಿಕ, ರಾಜಕೀಯ ಮತ್ತು ಸ್ವಾತಂತ್ರ್ಯ ಎಲ್ಲರಿಗೂ ತಲುಪಿದೆಯೋ ಇಲ್ಲವೋ, ಸಮಾನತೆ ಬಂದಿದೆಯೋ ಇಲ್ಲವೋ ಎಂಬುದು ಎಲ್ಲರಿಗೂ ತಿಳಿದಿರಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಬದಲಾವಣೆ ತರುವುದು ಮತ್ತು ಅಸಮಾನತೆ ಹೋಗಲಾಡಿಸುವುದು ಸಂವಿಧಾನದ ಉದ್ದೇಶವಾಗಿದೆ. ತಾನು ಒಬಿಸಿ ಸಲಹಾ ಸಮಿತಿಯ ಸಂಚಾಲಕನಲ್ಲ, ಅನಿಲ್ ಜೈಹಿಂದ್ ನೇತೃತ್ವದ ಸದಸ್ಯನಷ್ಟೆ. ಕರ್ನಾಟಕವು ಸ್ವಂತ ಜಾತಿಗಣತಿಗೆ ಸಂಬಂಧಿಸಿದಂತೆ ಪ್ರಕ್ರಿಯೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ. ಈ ಗಡುವನ್ನು ನಿಗದಿತ ಅವಧಿಯೊಳಗೆ ಪೂರೈಸುವ ಭರವಸೆ ವ್ಯಕ್ತಪಡಿಸಿದ್ದಾರೆ.

- ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರಗಳಲ್ಲಿ ಮತಕಳವು ಆಗಿರುವುದಕ್ಕೆ ಸಾಕ್ಷಿಗಳಿವೆ.
- ಕೆಪಿಸಿಸಿಯಿಂದ ನಡೆಸಿರುವ ಸಂಶೋಧನೆಯಿಂದ ಸಾಬೀತಾಗಿದ್ದು, ಸೂಕ್ತ ಸಂದರ್ಭದಲ್ಲಿ ಸಾಕ್ಷ್ಯಾಧಾರ ಒದಗಿಸಲಾಗುವುದು

2 ವರ್ಷದಲ್ಲಿ ಎತ್ತಿನಹೊಳೆ ಯೋಜನೆ ಪೂರ್ಣ: ಸಿಎಂ

ಗ್ಯಾರಂಟಿಗಳಿಂದಲೇ ತಲಾದಾಯ ಹೆಚ್ಚಳ

> ಕೊಟ್ಟ ಮಾತಿನಂತೆ ನಡೆದುಕೊಳ್ಳುವ ಸರಕಾರವಿದ್ದರೆ, ಅದು ಕಾಂಗ್ರೆಸ್ ಸರಕಾರ ಮಾತ್ರ. ಗ್ಯಾರಂಟಿ ಯೋಜನೆಗಳಿಗೆ ₹52 ಸಾವಿರ ಕೋಟಿ ಖರ್ಚು ಮಾಡುತ್ತಿದ್ದೇವೆ. ₹1.20 ಲಕ್ಷ ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಖರ್ಚು ಮಾಡುತ್ತಿದ್ದೇವೆ.
> -ಸಿದ್ದರಾಮಯ್ಯ ಸಿಎಂ

ಯೂರಿಯಾ ಕೊರತೆ ಇಲ್ಲ

ರಾಜ್ಯದಲ್ಲಿ ಯೂರಿಯಾ ರಸಗೊಬ್ಬರ ಕೊರತೆ ಇಲ್ಲ. ಈ ಬಾರಿ ಐದು ಲಕ್ಷ ಹೆಕ್ಟೇರ್ ಹೆಚ್ಚು ಬಿತ್ತನೆ ಆಗಿರುವುದರಿಂದ, ಗೊಬ್ಬರದ ಬೇಡಿಕೆ ಸ್ವಲ್ಪ ಹೆಚ್ಚಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಮಳೆ ಹೆಚ್ಚಾಗಿದ್ದು, ಮುಂಗಾರು ಮಳೆ ಬೇಗ ಶುರುವಾಯಿತು. ಜೋಳ ಹಾಕಿರುವುದು ಜಾಸ್ತಿ ಆಗಿದೆ. ಹಾಗಾಗಿ ಜಾಸ್ತಿ ರಸಗೊಬ್ಬರ ಉಪಯೋಗಿಸಿದ್ದಾರೆ ಎಂದರು.

ಹಾಸನ: ಗ್ಯಾರಂಟಿಗಳಿಂದ ಅಭಿವೃದ್ಧಿ ಕುಂಠಿತ ಆಗಿಲ್ಲ, ಆಗುವುದೂ ಇಲ್ಲ. ಇಡೀ ದೇಶದಲ್ಲಿಯೇ ತಲಾ ಆದಾಯ ಹೆಚ್ಚಾಗಿದ್ದರೆ, ಅದು ಕರ್ನಾಟಕದಲ್ಲಿ ಮಾತ್ರ. ತಲಾ ಆದಾಯದಲ್ಲಿ ನಾವೇ ನಂಬರ್ ಒನ್. ಬಿಜೆಪಿಯವರಿಗೆ ಅರ್ಥಶಾಸ್ತ್ರ ಗೊತ್ತಿಲ್ಲ. ತಲಾ ಆದಾಯ ಹೆಚ್ಚಳವಾಗಲು, ಗ್ಯಾರಂಟಿ ಯೋಜನೆಗಳೇ ಕಾರಣ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ₹570 ಕೋಟಿ ಮೊತ್ತದ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ಯಾರಂಟಿಗಳ ನಂತರ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿದ್ದು, ಸರಕಾರದ ಆದಾಯ ಹೆಚ್ಚಾಗಿದೆ. ಇದರಿಂದ ತಲಾ ಆದಾಯ ಹೆಚ್ಚಾಗಿದೆ. ಅಭಿವೃದ್ಧಿಗೆ ಹಣ ಇಲ್ಲದೇ ಹೋಗಿದ್ದರೆ, ತಲಾ ಆದಾಯದಲ್ಲಿ ನಂಬರ್ ಒನ್ ಆಗಲು ಆಗುತ್ತಿರಲಿಲ್ಲ. ಬಿಜೆಪಿಯವರು ಹೇಳುವ ಮಾತುಗಳು ಶುದ್ಧ ಸುಳ್ಳು. ರಾಜಕೀಯ ಪ್ರೇರಿತ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

2013-2018 ರವರೆಗೆ 165 ಭರವಸೆಗಳಲ್ಲಿ, 158 ಭರವಸೆಗಳನ್ನು ಈಡೇರಿಸಿದ್ದೇವು. ಬಿಜೆಪಿಯವರು 600 ರಲ್ಲಿ ಶೇ.10ರಷ್ಟೂ ಈಡೇರಿಸಿಲ್ಲ. ಇಂಥವರು ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ. ಬಿಜೆಪಿಯವರು ಯಾವತ್ತೂ ಜನರ ಆಶೀರ್ವಾದ ಪಡೆದು, ಅಧಿಕಾರಕ್ಕೆ ಬಂದಿಲ್ಲ. ಹಿಂಬಾಗಿಲಿನಿಂದ ಅಧಿಕಾರ ಹಿಡಿದು, ರಾಜ್ಯವನ್ನು ಲೂಟಿ ಮಾಡಿದರು. ಅದಕ್ಕಾಗಿ 2023ರಲ್ಲಿ ಸೋಲುವಂತಾಯಿತು ಎಂದರು.

ವರದಿ ಪುಟ → 5

ಸೊಂಪಾದ ಪುಟಗಳು

ರಸ್ತೆಗೆ ಹೆಸರಿಡುವವರು ಗೊತ್ತು, ಆದರೆ ಊರಿಗೆ ಯಾರು ಹೆಸರಿಡುತ್ತಾರೆ?
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
6

ಶತಮಾನ ಕಳೆದರೂ ತಗ್ಗದ ಅಮೃತಾಂಜನದ ಘಮ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
7

ದಾರಿದೀಪೋಕ್ತಿ

ನೀವು ಸತ್ಯವನ್ನು ಹೇಳಿದರೆ ಅದನ್ನು ನೀವು ನೆನಪಿಟ್ಟುಕೊಳ್ಳಬೇಕಾದ ಅಗತ್ಯವಿರುವುದಿಲ್ಲ. ಅದು ನಿಮ್ಮ ಗತಿಸಿ ಹೋದ ದಿನಗಳ ಭಾಗವಾಗಿರುತ್ತದೆ. ಆದರೆ ಸುಳ್ಳು ಹೇಳಿದರೆ ನೆನಪಿಟ್ಟುಕೊಳ್ಳಬೇಕಾಗುತ್ತದೆ ಮತ್ತು ನಿಮ್ಮ ಭವಿಷ್ಯದ ಭಾಗವೂ ಆಗಿರುತ್ತದೆ. ಆಯ್ಕೆ ನಿಮಗೆ ಬಿಟ್ಟದ್ದು.

ವಕ್ರತುಂಡೋಕ್ತಿ

ಗಂಡನಾದವನು ತನ್ನ ಹೆಂಡತಿಗೆ ಹೂಗೊಂಚಲನ್ನು ಯಾವುದೇ ಕಾರಣವಿಲ್ಲದೇ ತಂದರೂ, ಏನೋ ಕಾರಣ ಇದೆ ಎಂದರ್ಥ.

ಪ್ಯಾಲೆಸ್ತೀನ್ ದೇಶಕ್ಕೆ ಮಾನ್ಯತೆ: ಮ್ಯಾಕ್ರನ್

ಪ್ಯಾರಿಸ್: ಪ್ಯಾಲೆಸ್ತೀನ್‌ಗೆ ದೇಶದ ಮಾನ್ಯತೆ ನೀಡಲು ಫ್ರಾನ್ಸ್ ನಿರ್ಧರಿಸಿದೆ ಎಂದು ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಘೋಷಿಸಿದ್ದಾರೆ. ಗಾಜಾದಲ್ಲಿ ಜನರು ಹಸಿವಿನಿಂದ ಬಳಲುತ್ತಿದ್ದು, ಜಾಗತಿಕ ಮಟ್ಟದಲ್ಲಿ ತೀವ್ರ ವಿರೋಧ ವ್ಯಕ್ತವಾಗಿರುವ ಬೆನ್ನಲ್ಲೇ, ಫ್ರಾನ್ಸ್ ಈ ಘೋಷಣೆ ಮಾಡಿದೆ. ಈ ನಿರ್ಧಾರವನ್ನು ಇಸ್ರೇಲ್ ಖಂಡಿಸಿದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದಲ್ಲಿ ಈ ನಿರ್ಧಾರವನ್ನು ಅಂತಿಮಗೊಳಿಸಲಾಗುವುದು ಎಂದು ಮ್ಯಾಕ್ರನ್ ತಿಳಿಸಿದ್ದಾರೆ.

ಹಿಜಾಬ್ ಧರಿಸುವಂತೆ ಒತ್ತಾಯ: ವಿಸಿಗೆ ದೂರು

ಕಲಬುರಗಿ: ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದೊಯ್ದ ಸಹಾಯಕ ಪ್ರಾಧ್ಯಾಪಕರೊಬ್ಬರು ಹಿಜಾಬ್ ಧರಿಸುವಂತೆ ಒತ್ತಾಯ ಮಾಡಿರುವ ಆರೋಪ ಕೇಳಿ ಬಂದಿದೆ. ಕೇಂದ್ರಿಯ ವಿವಿ ಇತಿಹಾಸ ಮತ್ತು ಪುರಾತತ್ವ ವಿಭಾಗದ ಸಹಾಯಕ ಪ್ರಾಧ್ಯಾಪಕ ಅಬ್ದುಲ್ ಮಜಿದ್ ಹಿಜಾಬ್ ಧರಿಸುವಂತೆ ಒತ್ತಾಯ ಮಾಡಿದ್ದಾರೆ ಎಂದು ವಿದ್ಯಾರ್ಥಿನಿಯೊಬ್ಬರು ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಅವರಿಗೆ ದೂರು ಸಲ್ಲಿಸಿದ್ದಾರೆ.

ಪಿಸ್ತೂಲ್ ತೋರಿಸಿ ಚಿನ್ನಾಭರಣ ದರೋಡೆ

ಬೆಂಗಳೂರು: ಪಿಸ್ತೂಲ್ ತೋರಿಸಿ ಅಂಗಡಿಯಲ್ಲಿನ ಚಿನ್ನಾಭರಣದ ದರೋಡೆ ಮಾಡಿದ ಘಟನೆ ಮಾಗಡಿ ರಸ್ತೆಯ ಮಾಚೋಹಳ್ಳಿ ಗೇಟ್ ಬಳಿಯಿರುವ ರಾಮ್ ಜ್ಯುವೆಲ್ಲರಿ ಶಾಪ್‌ನಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ಪಿಸ್ತೂಲ್ ಹಿಡಿದು ಅಂಗಡಿಗೆ ನುಗ್ಗಿದ ಮೂವರು ಮುಸುಕುಧಾರಿಗಳು ಟೇಬಲ್ ಮೇಲಿದ್ದ ಚಿನ್ನ ಬಾಚಿಕೊಂಡು ಪರಾರಿಯಾಗಿದ್ದಾರೆ. ಈ ವೇಳೆ ಕೂಗಾಡಿದ್ದಾರೆ. ಕೂಗಾಟ ಕೇಳಿ ಅಕ್ಕ ಪಕ್ಕದ ಅಂಗಡಿಯವರು ಓಡಿ ಬರುವಷ್ಟರಲ್ಲಿ ಮುಸುಕುಧಾರಿ ಗ್ಯಾಂಗ್ ಅಲ್ಲಿಂದ ಕಾಲ್ಕಿತ್ತಿದೆ.

ಥಾಯ್ಲೆಂಡ್ ಕಾಂಬೋಡಿಯಾ ಸಂಘರ್ಷ: 33 ಸಾವು

ಸುರಿನ್: ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವಿನ ಸಂಘರ್ಷ ಶನಿವಾರ 3ನೇ ದಿನಕ್ಕೆ ಕಾಲಿರಿಸಿದ್ದು, ಎರಡೂ ದೇಶಗಳ ನಡುವಿನ ಕ್ಷಿಪಣಿ ದಾಳಿಯಲ್ಲಿ 33 ಜನರು ಮೃತಪಟ್ಟಿದ್ದಾರೆ. ತಕ್ಷಣವೇ ಕದನ ವಿರಾಮ ಘೋಷಿಸುವಂತೆ, ಇದಕ್ಕಾಗಿ ಮಧ್ಯಪ್ರವೇಶ ಮಾಡುವಂತೆ ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘಕ್ಕೆ ವಿಶ್ವಸಂಸ್ಥೆ ಕರೆ ನೀಡಿದೆ. ಕಾಂಬೋಡಿಯಾದೊಂದಿಗೆ ಹಂಚಿ ಕೊಂಡಿದ್ದ ಈಶಾನ್ಯ ಗಡಿಯನ್ನು ಥಾಯ್ಲೆಂಡ್ ಶನಿವಾರ ಮುಚ್ಚಿದೆ. ಥಾಯ್ಲೆಂಡ್ ನಡೆಸಿದ ದಾಳಿಯಲ್ಲಿ 13 ಮಂದಿ ಮೃತಪಟ್ಟಿರುವುದಾಗಿ ಕಾಂಬೋಡಿಯಾ ಹೇಳಿದೆ. ಕಾಂಬೋಡಿಯಾ ನಡೆಸಿದ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 20ಕ್ಕೆ ಏರಿಕೆಯಾಗಿದೆ ಎಂದು ಥಾಯ್ಲೆಂಡ್ ಹೇಳಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಬೆಂಗಳೂರಿನ ಬಗ್ಗೆ ಒಡಿಶಾ ಯುವತಿ ಬೈಗುಳ, ಸೋಷಿಯಲ್ ಮೀಡಿಯಾದಲ್ಲಿ ಆಕ್ರೋಶ
ಸುದ್ದಿ



ಶೇ.75ರಷ್ಟು ಬೆಂಬಲದೊಂದಿಗೆ ಅಗ್ರಸ್ಥಾನ

ಪ್ರಧಾನಿ ಮೋದಿ ವಿಶ್ವದಲ್ಲೇ ಅತ್ಯಂತ ವಿಶ್ವಾಸಾರ್ಹ ನಾಯಕ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವದ ಅತ್ಯಂತ ವಿಶ್ವಾಸಾರ್ಹ ಮತ್ತು ಉನ್ನತ ಶ್ರೇಯಾಂಕಿತ ಜಾಗತಿಕ ನಾಯಕರಾಗಿ ಮತ್ತೊಮ್ಮೆ ಅಗ್ರಸ್ಥಾನ ಪಡೆದಿದ್ದಾರೆ.

ಅಮೆರಿಕ ಮೂಲದ ಮಾರ್ನಿಂಗ್ ಕನ್ಸಲ್ಟ್ ಎಂಬ ಸಂಸ್ಥೆ ಜುಲೈ 4 ರಿಂದ 10ರವರೆಗೆ ನಡೆಸಿದ 'ಗ್ಲೋಬಲ್ ಲೀಡರ್ ಅಪ್ರೂವಲ್ ರೇಟಿಂಗ್' ಸಮೀಕ್ಷೆಯಲ್ಲಿ ಶೇ.75ರಷ್ಟು ಅನುಮೋದನೆ ರೇಟಿಂಗ್‌ನೊಂದಿಗೆ ಮೋದಿ ಜಾಗತಿಕ ಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದಾರೆ. ಆ ಮೂಲಕ ದಕ್ಷಿಣ ಕೊರಿಯಾದ ಲೀ ಜೇಮ್ಯುಂಗ್ (59%), ಅರ್ಜೆಂಟೀನಾದ ಜೇವಿಯರ್ ಮಿಲೀ (57%) ಮತ್ತು ಕೆನಡಾದ ಮಾರ್ಕ್ ಕಾರ್ನೆ (56%) ನಂತಹ ನಾಯಕರನ್ನು ಹಿಂದಿಕ್ಕಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶೇ.44ರಷ್ಟು ಅನುಮೋದನೆಯೊಂದಿಗೆ 8ನೇ ಸ್ಥಾನದಲ್ಲಿದ್ದಾರೆ.

2021ರ ಸೆಪ್ಟೆಂಬರ್‌ನಿಂದಲೂ ಮೋದಿಯವರು ಮಾರ್ನಿಂಗ್ ಕನ್ಸಲ್ಟ್‌ನ ಶ್ರೇಯಾಂಕದಲ್ಲಿ ನಿರಂತರವಾಗಿ ಅಗ್ರಸ್ಥಾನದಲ್ಲಿರುವುದು ಗಮನಾರ್ಹ. 2021ರ ಸೆಪ್ಟೆಂಬರ್‌ನಲ್ಲಿ ಶೇ.70 ರೇಟಿಂಗ್‌ನೊಂದಿಗೆ ಮುನ್ನಡೆ ಸಾಧಿಸಿದ್ದರೆ, 2022ರ ಆರಂಭದಲ್ಲಿ 71.2%ಗೆ ಏರಿತು. 2023ರಲ್ಲಿ ಏಪ್ರಿಲ್, ಸೆಪ್ಟೆಂಬರ್ ಮತ್ತು ಡಿಸೆಂಬರ್ ಸಮೀಕ್ಷೆಯಲ್ಲಿ 76% ರೇಟಿಂಗ್ ಪಡೆದಿದ್ದರು. 2024ರ ಫೆಬ್ರವರಿಯಲ್ಲಿ ಅವರ ಅನುಮೋದನೆ 78%ಗೆ ತಲುಪಿತ್ತು. ಈ ಫಲಿತಾಂಶಗಳು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಮೋದಿ ಯವರ ಜನಪ್ರಿಯತೆ ಮತ್ತು ವಿಶ್ವಾಸಾರ್ಹತೆಯನ್ನು ಒತ್ತಿಹೇಳುತ್ತವೆ. ಹೀಗಾಗಿ ಭಾರತದ ಪ್ರಧಾನಿಯನ್ನು ಇಡೀ ವಿಶ್ವವೇ ಕೊಂಡಾಡುತ್ತಿದೆ.

ಭಾರತ ಸುರಕ್ಷಿತ ಕೈಯಲ್ಲಿದೆ: ಮಾಳವೀಯ

ಮೋದಿ ಅತ್ಯಂತ ವಿಶ್ವಾಸಾರ್ಹ ನಾಯಕನಾಗಿರುವ ಈ ಸಾಧನೆಯನ್ನು ಕೊಂಡಾಡಿ, ಬಿಜೆಪಿ ನಾಯಕ ಅಮಿತ್ ಮಾಳವೀಯ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಒಂದು ಶತಕೋಟಿಗೂ ಹೆಚ್ಚು ಭಾರತೀಯರಿಂದ ಪ್ರೀತಿಸಲ್ಪಟ್ಟ ಮತ್ತು ಪ್ರಪಂಚದಾದ್ಯಂತ ಗೌರವಿಸಲ್ಪಟ್ಟ ಪ್ರಧಾನಿ ಮೋದಿ, ವಿಶ್ವದ ಅತ್ಯಂತ ವಿಶ್ವಾಸಾರ್ಹ ನಾಯಕರಾಗಿದ್ದಾರೆ. ಭಾರತ ಸುರಕ್ಷಿತ ಕೈಯಲ್ಲಿದೆ ಎಂದು ಬರೆದುಕೊಂಡಿದ್ದಾರೆ. ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್ ಅವರು ಕೂಡ ಪ್ರಧಾನಿ ಮೋದಿಯವರನ್ನು ಶ್ಲಾಘಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಸ್ಥಳಗಳಿಗೆ ಭೇಟಿ

ಧರ್ಮಸ್ಥಳ ನಿಗೂಢ ಸಾವು ಎಸ್‌ಐಟಿ ತನಿಖೆ ಆರಂಭ

ಮಂಗಳೂರು: ಧರ್ಮಸ್ಥಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ನಿಗೂಢ ಸರಣಿ ಸಾವುಗಳ ತನಿಖೆಗಾಗಿ ರಾಜ್ಯ ಸರಕಾರ ರಚಿಸಿರುವ ವಿಶೇಷ ತನಿಖಾ ತಂಡವು ಶನಿವಾರ ತನ್ನ ತನಿಖೆಯನ್ನು ಪ್ರಾರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಐಟಿ ತನ್ನ ಕಚೇರಿಯನ್ನು ಧರ್ಮಸ್ಥಳದ ಬದಲಿಗೆ ಬೆಳ್ತಂಗಡಿಯಲ್ಲಿ ಆರಂಭಿಸಿದೆ. ಮಲ್ಲಿಕಟ್ಟೆಯಲ್ಲಿರುವ ಗುಪ್ತಚರ ಬ್ಯೂರೋ ಆವರಣದಲ್ಲಿ ಸ್ಥಾಪಿಸಲಾದ ಎಸ್‌ಐಟಿ ಕಚೇರಿಗೆ ಹಿರಿಯ ಅಧಿಕಾರಿಗಳು ಆಗಮಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಸ್ಥಳಗಳಿಗೆ ಭೇಟಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

ತನಿಖೆಯ ಮೇಲ್ವಿಚಾರಣೆ ನಡೆಸುತ್ತಿರುವ ಪೊಲೀಸ್ ಉಪ ಮಹಾನಿರ್ದೇಶಕ(ಡಿಐಜಿ) ಎಂ.ಎನ್.ಅನುಚೇತ್ ಅವರು ಮಂಗಳೂರಿಗೆ ಆಗಮಿಸಿದ್ದು, ಎಸ್‌ಐಟಿಗೆ ನಿಯೋಜಿಸಲಾದ 20ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ಉನ್ನತಮಟ್ಟದ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

- ಡಿಐಜಿ ಎಂ.ಎನ್.ಅನುಚೇತ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಅಧಿಕಾರಿಗಳೊಂದಿಗೆ ಉನ್ನತಮಟ್ಟದ ಸಭೆ
- ಸಮಾಧಿಗಳ ಬಗ್ಗೆ ಆರಂಭದಲ್ಲಿ ಆರೋಪ ಎತ್ತಿದ್ದ ಅನಾಮಧೇಯ ದೂರುದಾರನನ್ನು ಪ್ರಶ್ನಿಸುವ ಸಾಧ್ಯತೆ

→ 4

ಬಿಹಾರ ಚುನಾವಣೆ ರಂಗೇರಿದ ಹೊತ್ತಲ್ಲೇ ಘಟನೆ

ಆಂಬ್ಯುಲೆನ್ಸ್‌ನಲ್ಲೇ ಅತ್ಯಾಚಾರ

ಗಯಾ: ಗೃಹ ರಕ್ಷಕ ದಳದ ನೇಮಕಾತಿ ಪರೀಕ್ಷೆ ವೇಳೆ ಪ್ರಜ್ಞೆ ತಪ್ಪಿ ಬಿದ್ದ ವೇಳೆ ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುವಾಗ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ ಎಂದು ಮಹಿಳೆಯೊಬ್ಬರು ಶನಿವಾರ ದೂರು ಸಲ್ಲಿಸಿದ್ದಾರೆ.

ಮಹಿಳೆ ನೀಡಿದ ದೂರು ಮತ್ತು ಅವರು ಆರೋಪಿಗಳನ್ನು ಗುರುತಿಸಿದ ಆಧಾರದ ಮೇಲೆ ಆಂಬುಲೆನ್ಸ್‌ನಲ್ಲಿದ್ದ ಚಾಲಕ ಹಾಗೂ ಟೆಕ್ನಿಷಿಯನ್ ಅನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ.

ಜುಲೈ 24ರಂದು ಪರೀಕ್ಷೆಗೆ ಹಾಜರಾಗಿದ್ದ ಮಹಿಳೆಯು ಮೂರ್ಛೆ ತಪ್ಪಿ ಬಿದ್ದಿದ್ದಾರೆ. ತಕ್ಷಣವೇ ಅವರನ್ನು ಆಂಬ್ಯುಲೆನ್ಸ್‌ನಲ್ಲಿ ಗಯಾದಲ್ಲಿರುವ ಅನುಗ್ರಹ ನಾರಾಯಣ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಪ್ರಜ್ಞೆ ಬಂದ ವೇಳೆ ವಾಹನದ ಒಳಗಡೆಯೇ ಅತ್ಯಾಚಾರ ಎಸಗಿದ್ದಾರೆ ಎಂದು ಮಹಿಳೆ ದೂರು ನೀಡಿದ್ದಾರೆ ಎಂದು ಗಯಾ (ನಗರ) ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಮಾನಂದ್ ಕುಮಾರ್ ಕೌಶಲ್ ತಿಳಿಸಿದ್ದಾರೆ.

ಪ್ರತಿಪಕ್ಷ ಕಿಡಿ

ಬಿಹಾರ ವಿಧಾನಸಭೆಗೆ ಈ ವರ್ಷದ ಅಕ್ಟೋಬರ್-ನವೆಂಬರ್‌ನಲ್ಲಿ ಚುನಾವಣೆ ನಡೆಯಲಿದ್ದು, ಇದೇ ವೇಳೆ ಅತ್ಯಾಚಾರ ಪ್ರಕರಣ ವರದಿಯಾಗಿರುವುದರಿಂದ ಕೇಂದ್ರ ಸಚಿವ ಚಿರಾಗ್ ಪಾಸ್ವಾನ್, ಪ್ರತಿಪಕ್ಷವಾದ ಕಾಂಗ್ರೆಸ್, ಆರ್‌ಜೆಡಿ ಮುಖಂಡರು ರಾಜ್ಯ ಸರಕಾರದ ವಿರುದ್ಧ ಕಿಡಿಕಾರಿದ್ದಾರೆ.

ಶಕ್ತಿ ಯೋಜನೆಯಿಂದಾಗಿ ಉದ್ಯೋಗಸ್ಥ ಮಹಿಳೆಯರ ಪ್ರಮಾಣ ಹೆಚ್ಚಳ

ಮಹಿಳೆಯರಿಗೆ ಶಕ್ತಿ ತುಂಬಿದ ಉಚಿತ ಸಾರಿಗೆ

ಬೆಂಗಳೂರು: ರಾಜ್ಯ ಸರಕಾರವು ಜಾರಿಗೆ ತಂದ 5 ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆ ಅತ್ಯಂತ ಉಪಯುಕ್ತವಾಗಿದೆ ಎಂಬುದನ್ನು ಸಮೀಕ್ಷೆಗಳು ಬಹಿರಂಗ ಪಡಿಸಿದೆ.

ಸಸ್ಟೈನೇಬಲ್ ಮೊಬಿಲಿಟಿ ನೆಟ್‌ವರ್ಕ್ ನಡೆಸಿದ ಸಮೀಕ್ಷಾ ವರದಿ ಪ್ರಕಾರ, ಶಕ್ತಿ ಯೋಜನೆಯಡಿ ಮಹಿಳೆಯರು ಉಚಿತವಾಗಿ ಬಸ್‌ನಲ್ಲಿ ಸಂಚಾರ ನಡೆಸಲು ಆರಂಭಿಸಿದ ಬಳಿಕ ಬೆಂಗಳೂರು, ಹುಬ್ಬಳ್ಳಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಉದ್ಯೋಗಸ್ಥ ಮಹಿಳೆಯರ ಪ್ರಮಾಣವು ಹೆಚ್ಚಾಗಿದೆ ಎಂದು ತಿಳಿಸಿದೆ.

ಶಕ್ತಿ ಯೋಜನೆಯಿಂದಾಗಿ ಉದ್ಯೋಗಸ್ಥ ಮಹಿಳೆಯರ ಪ್ರಮಾಣವು ಹೆಚ್ಚಾಗಿದ್ದು, ಬೆಂಗಳೂರು ಶೇ.23, ಹುಬ್ಬಳ್ಳಿ, ಧಾರವಾಡಗಳಲ್ಲಿ ಶೇ.21ರಷ್ಟು ಮಹಿಳೆಯರು ಉದ್ಯೋಗಕ್ಕೆ ಹೋಗುತ್ತಿರುವುದು ಬಹಿರಂಗವಾಗಿದೆ. ಶಕ್ತಿ ಯೋಜನೆಯಿಂದಾಗಿ ಶೇ.30 ರಿಂದ 50ರಷ್ಟು ಪ್ರಯಾಣದ ಖರ್ಚು ವೆಚ್ಚಗಳು ಕಡಿಮೆಯಾಗುತ್ತಿದ್ದು, ಶಕ್ತಿ ಯೋಜನೆಯು ಅತ್ಯಂತ ಅನುಕೂಲಕರ ಎಂದು ಸ್ವತಃ ಮಹಿಳೆಯರೇ ಅಭಿಪ್ರಾಯ ಹಂಚಿಕೊಂಡಿದ್ದಾರೆ.

500 ಕೋಟಿಗೂ ಹೆಚ್ಚು ಮಹಿಳೆಯರ ಪ್ರಯಾಣ

2023ರ ಜೂನ್ 11ರಂದು ಆರಂಭವಾಗಿದ್ದ ಈ ಯೋಜನೆಗೆ ಮಹಿಳೆಯರು ಭರ್ಜರಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದು, ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳಲ್ಲಿ 500 ಕೋಟಿಗೂ ಹೆಚ್ಚು ಮಹಿಳಾ ಪ್ರಯಾಣಿಕರು ಉಚಿತವಾಗಿ ಪ್ರಯಾಣಿಸಿದ್ದಾರೆ. ಪ್ರತಿದಿನ ನಾಲ್ಕು ಸಾರಿಗೆ ನಿಗಮದ ಬಸ್‌ಗಳಲ್ಲಿ 70 ರಿಂದ 75 ಲಕ್ಷ ಮಹಿಳೆಯರು ಉಚಿತವಾಗಿ ಸಂಚರಿಸುತ್ತಿದ್ದಾರೆ.

→ 4

ಸಮಾಚಾರ ಸಣ್ಣದಲ್ಲ

ಪ್ರಕೃತಿಯೇ ಮನುಷ್ಯನಿಗೆ ಪಾಠ ಕಲಿಸುವ ಗುರು

ನಂಜನಗೂಡು: ಪ್ರಕೃತಿಯು ಮನುಷ್ಯನಿಗೆ ಎಲ್ಲ ರೀತಿಯಿಂದಲೂ ಪಾಠವನ್ನು ಕಲಿಸುವುದರಿಂದ, ಪ್ರಕೃತಿಯನ್ನು ಸಹ ಗುರುವಿನ ರೂಪದಲ್ಲಿ ಕಾಣಲಾಗುತ್ತದೆ ಎಂದು ಪ್ರಾಧ್ಯಾಪಕರಾದ ಎಚ್.ಬಿ. ದೇವಣ್ಣ ಹೇಳಿದರು. ಸುತ್ತೂರು ಕ್ಷೇತ್ರದಲ್ಲಿ ನಡೆದ ಶ್ರಾವಣಮಾಸದ ಪ್ರವಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಗುರುವಿನಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಕಾಣುತ್ತೇವೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ಪುರಂದರದಾಸರ ಮಾತು ಸಾರ್ವಕಾಲಿಕ ಸತ್ಯ. ಗುರು ದೇವೋಭವ ಎಂಬಂತೆ ಅವರು ದೇವರಿಗೆ ಸಮಾನ ಎಂದು ಭಾವಿಸಲಾಗಿದೆ. ಪ್ರತಿಯೊಬ್ಬರ ಬದುಕಿನಲ್ಲೂ ಗುರುವಿಗೆ ಪವಿತ್ರವಾದ ಸ್ಥಾನವಿದೆ. ತಂದೆ-ತಾಯಿ ಮತ್ತು ಗುರು ಬದುಕನ್ನು ರೂಪಿಸುವ ಪ್ರಮುಖ ಶಕ್ತಿಗಳು. ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಗುರುವಿನ ಮಾರ್ಗದರ್ಶನದಲ್ಲಿ ಅಂತರಂಗದ ಸಾಧನೆಗೆ ಒತ್ತು ನೀಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಡಿ.ಎಂ. ಸಿದ್ದಲಿಂಗಸ್ವಾಮಿ, ಎಂ. ನಾಗಮ್ಮ, ಸಿದ್ಧರಾಮದೇವರು, ಎನ್.ಸಿ. ಗೀತಾ ಶಿವಪ್ಪದೇವರು, ಎಂ. ಮಹದೇವಪ್ಪ, ಜಿ. ಅಂಕನಾಥ್, ಜೀಮಾರಹಳ್ಳಿ ದೇವಮ್ಮ ಉಪಸ್ಥಿತರಿದ್ದರು.

ಚರಂಡಿ ಕಾಮಗಾರಿಗೆ ಶಾಸಕ ಭೂಮಿಪೂಜೆ

ಚಾಮರಾಜನಗರ: ತಾಲೂಕಿನ ಹೆಬ್ಬಸೂರು ಸಮೀಪದ ಅರಳೀಪುರ ಗ್ರಾಮದಲ್ಲಿಪರಿಶಿಷ್ಟ ಜಾತಿ ಬಡಾವಣೆಯಲ್ಲಿ ಎಸ್‌ಇಪಿ ಯೋಜನೆ ಅನುದಾನ 50 ಲಕ್ಷ.ರೂ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು. ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಜನತೆಯ ಆಶಯಕ್ಕೆ ಬದ್ದರಾಗಿ ಗ್ರಾಮಗಳಲ್ಲಿ ರಸ್ತೆ ಚರಂಡಿ, ಸಮುದಾಯ ಭವನ ಆಶ್ರಯಮನೆ ಗಂಗಾ ಕಲ್ಯಾಣ ಯೋಜನೆ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು ಎಂದು ಸೂಚನೆ ನೀಡಿದರು. ಗ್ರಾಮಪಂಚಾಯಿತಿ ಅಧ್ಯಕ್ಷೆಪದ್ಮಾ,ಸದಸ್ಯೆ ವಸಂತಿ, ಗ್ರಾ.ಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಹೆಬ್ಬಸೂರು ವೀರಭದ್ರಸ್ವಾಮಿ, ರಂಗಸ್ವಾಮಿ, ನಿರ್ಮಿತಿ ಕೇಂದ್ರದ ಎಂಜಿನಿಯರ್ ಬೀಮ್ ಸಾಗರ್ ಇದ್ದರು.

ಮಡಿಕೇರಿ ದಸರಾ: ಪೂರ್ವಭಾವಿ ಪೂಜೆ

ಮಡಿಕೇರಿ: ಐತಿಹಾಸಿಕ ಮಡಿಕೇರಿ ದಸರಾ ಆಚರಣೆಗೆ ಪೂರ್ವಭಾವಿಯಾಗಿ ಸಂಪ್ರದಾಯದಂತೆ ನಗರದ ಪೇಟೆ ಶ್ರೀರಾಮ ಮಂದಿರದಲ್ಲಿ ದಸರಾ ಉತ್ಸವ ಸಮಿತಿ ವತಿಯಿಂದ ವಿಶೇಷ ಪೂಜೆ ಸಲ್ಲಿಸಲಾಯಿತು. ಆ ಮೂಲಕ ದಸರಾ ಜನೋತ್ಸವದ ಸಿದ್ಧತಾ ಕಾರ್ಯಗಳಿಗೆ ಚಾಲನೆ ನೀಡಲಾಯಿತು. ಮಡಿಕೇರಿ ದಸರಾ ಉತ್ಸವವನ್ನು ಯಾವುದೇ ವಿಘ್ನಗಳಿಲ್ಲದೆ ಯಶಸ್ವಿಗೊಳಿಸುವಂತೆ ಸಮಿತಿಯ ಪ್ರಮುಖರು ಪ್ರಾರ್ಥಿಸಿದರು. ದಸರಾ ಸಮಿತಿಯ ನೂತನ ಕಾರ್ಯಾಧ್ಯಕ್ಷ ಬಿ.ಕೆ.ಅರುಣ್ ಕುಮಾರ್ ಮಾತನಾಡಿ, ದಸರಾ ಉತ್ಸವದ ಸಿದ್ಧತಾ ಕಾರ್ಯಗಳಿಗೆ ಚಾಲನೆ ನೀಡಲಾಗಿದೆ. ಈ ಬಾರಿ ಒಗ್ಗಟ್ಟಿನಿಂದ ಅದ್ದೂರಿಯಾಗಿ ಆಚರಿಸೋಣವೆಂದು ಮನವಿ ಮಾಡಿದರು. ಮಡಿಕೇರಿ ದಸರಾ ಸಮಿತಿಯ ಅಧ್ಯಕ್ಷರಾದ ನಗರಸಭೆಯ ಅಧ್ಯಕ್ಷೆ ಪಿ.ಕಲಾವತಿ, ನಗರಸಭಾ ಉಪಾಧ್ಯಕ್ಷ ಮಹೇಶ್ ಜೈನಿ, ದಸರಾ ಸಮಿತಿಯ ಮಾಜಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ದಶ ಮಂಟಪ ಸಮಿತಿಯ ಅಧ್ಯಕ್ಷ ಬಿ.ಎಂ.ಹರೀಶ್ ಅಣ್ವೇಕರ್, ಸಮಿತಿಯ ಪ್ರಮುಖರಾದ ಜಿ.ಎಂ.ಸತೀಶ್ ಪೈ, ಕಾನೆಹಿತ್ಲು ಮೊಣ್ಣಪ್ಪ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ಪ್ರೇರೇಪಿಸಿ

ಮದ್ದೂರು: ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲೂ ಪಾಲ್ಗೊಂಡು ತಮ್ಮಲ್ಲಿರುವ ಪ್ರತಿಭೆ ಅನಾವರಣಗೊಳಿಸಿಕೊಳ್ಳಬೇಕೆಂದು ಪುರಸಭಾ ಅಧ್ಯಕ್ಷೆ ಕೋಕಿಲಾಅರುಣ್ ತಿಳಿಸಿದರು. ಪಟ್ಟಣದ ಡಾ.ಶಾಂತಮರಿಯಪ್ಪ ಸಭಾಂಗಣದಲ್ಲಿ ಕಸ್ತೂರಿಬಾ ಉನ್ನತ ಪ್ರಾಥಮಿಕ ಪಾಠಶಾಲೆ, ಕಮಲಾನೆಹರು ಬಾಲಿಕ ಹಾಗೂ ಜವಾಹರ್ ಪ್ರೌಢಶಾಲೆಯ ಕರ್ನಾಟಕ ಸಂಘ ಉದ್ಘಾಟನೆ ಮತ್ತು ಸಮವಸ್ತ್ರ ವಿತರಣೆಗೆ ಚಾಲನೆ ನೀಡಿ ಮಾತನಾಡಿದರು. ಮಕ್ಕಳನ್ನು ಪಠ್ಯೇತರಗಳಲ್ಲೂ ಪಾಲ್ಗೊಳ್ಳಲು ಪ್ರೇರೇಪಿಸಬೇಕೆಂದ 'ರು.ಪ್ರಗತಿಪರ ಚಿಂತಕ ನ.ಲಿ.ಕೃಷ್ಣ , ಎ.ಪಿ.ಎಂ.ಸಿ ಮಾಜಿ ನಿರ್ದೇಶಕ ಎಸ್.ಶಿವರಾಜು ಮಾತನಾಡಿದರು. ರಾಣಿ ಐಶ್ವರ್ಯ ಬಿಲ್ಡರ್ಸ್ ಟೌನ್‌ಶಿಪ್ ಡೆವಲಪರ್ಸ್‌ನ ಎಚ್.ಎಲ್.ಸತೀಶ್ ಶಾಲೆಯ ಅಭಿವೃದ್ಧಿಗಾಗಿ 50 ಸಾವಿರ ನೆರವು ವಿತರಿಸಿದರು. ಸಿ.ಅಪೂರ್ವಚಂದ್ರ, ಪುರಸಭೆ ಉಪಾಧ್ಯಕ್ಷ ಪ್ರಸನ್ನಕುಮಾರ್, ಅಧ್ಯಕ್ಷ ಎಂ.ಆರ್.ಚಕ್ರಪಾಣಿ ಇದ್ದರು.

{ಪ್ರತಾಪ್ ಸಿಂಹ} ಮಾಜಿ ಸಂಸದ

ಮೈಸೂರಿನ ಮಹಾರಾಜರ ಮನೆತನದ ಬಗ್ಗೆ ಸಿದ್ದರಾಮಯ್ಯಗೆ ದ್ವೇಷ ಭಾವನೆ ಇದೆ. ದೇವರಾಜ ಅರಸುಗಿಂತ ದೊಡ್ಡವರು ಸಿದ್ದರಾಮಯ್ಯ ಅಂತ ಯತೀಂದ್ರ ಹೇಳುತ್ತಿದ್ದರು. ಈಗ ನಾಲ್ವಡಿ ಕೃಷ್ಣರಾಜರಿಗಿಂತ ದೊಡ್ಡವರೆಂದು ಹೇಳಿದ್ದಾರೆ. ಹತ್ತು ವರ್ಷ ಸಿಎಂ ಆಗಿಬಿಟ್ಟರಂತೂ ನಾಡದೇವತೆ ಶ್ರೀಚಾಮುಂಡೇಶ್ವರಿಗಿಂತಲೂ ದೊಡ್ಡವರೆಂದು ಹೇಳಿ ಬಿಡುತ್ತಾರೆ..!

ಬಿಳಿಗಿರಿಯ ರಂಗನಾಥಗೆ ವಿಶೇಷ ಪೂಜೆ । ಹುಲುಗನ ಮುರುಡಿ ಜಾತ್ರೆ ಸಂಪನ್ನ

ಶ್ರಾವಣ ಮಾಸದ ಸಡಗರ ಆರಂಭ ದೇಗುಲಗಳಿಗೆ ಬಂದ ಭಕ್ತ ಸಾಗರ

ಚಾಮರಾಜನಗರ: ಮೊದಲ ಶ್ರಾವಣ ಶನಿವಾರ ಹಿನ್ನೆಲೆ ಬಿಳಿಗಿರಿರಂಗನ ಬೆಟ್ಟಕ್ಕೆ ಭಕ್ತರ ದಂಡೇ ಹರಿದು ಬಂದು ವಿಶೇಷ ಪೂಜೆ ಸಲ್ಲಿಸಿದರು. ಪ್ರಸಿದ್ಧ ಯಾತ್ರಾಸ್ಥಳವಾದ ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟಕ್ಕೆ ರಾಜ್ಯ ಹಾಗೂ ಹೊರರಾಜ್ಯದಿಂದಲೂ ಸಹಸ್ರಾರು ಮಂದಿ ಭಕ್ತರು ಆಗಮಿಸಿ, ಬಿಳಿಗಿರಿರಂಗನಾಥಸ್ವಾಮಿ, ಅಲಮೇಲು ರಂಗನಾಯಕಿಗೆ ವಿಶೇಷ ಪೂಜೆ ಸಲ್ಲಿಸಿದರು.

ವಿವಿಧ ಬಗೆಯ ಪುಷ್ಪಗಳಿಂದ ದೇವರಿಗೆ ಅಲಂಕಾರ ಮಾಡಿದ್ದು ಭಕ್ತರ ಕಣ್ಮನ ಸೆಳೆಯಿತು. ಬಿಳಿಗಿರಿರಂಗನ ದರ್ಶನದೊಂದಿಗೆ ಹಿಮಾಚ್ಛಾದಿತ ಪರ್ವತಗಳನ್ನು ಕಂಡ ಭಕ್ತರು ಪುಳಕಿತರಾದರು. ಸಾರಿಗೆ ಇಲಾಖೆಯಿಂದ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಲಾಗಿತ್ತು.

ಹುಲುಗನ ಮುರುಡಿ ಜಾತ್ರೆ ಸಂಪನ್ನ:

ಗುಂಡ್ಲುಪೇಟೆ ತಾಲೂಕಿನ ಪ್ರಸಿದ್ಧ ಧಾರ್ಮಿಕ ಸ್ಥಳ ಹುಲುಗನ ಮುರುಡಿ ವೆಂಕಟರಮಣಸ್ವಾಮಿ ಚಿಕ್ಕ ಜಾತ್ರೆಯು ಸಾವಿರಾರು ಮಂದಿ ಭಕ್ತರ ಸಮ್ಮುಖದಲ್ಲಿ ಶನಿವಾರ ವಿಜೃಂಭಣೆಯಿಂದ ನಡೆಯಿತು.

ಶ್ರಾವಣ ಮಾಸದ ಮೊದಲ ಶನಿವಾರ ನಡೆಯುವ ಚಿಕ್ಕ ರಥೋತ್ಸವಕ್ಕೆ ತಹಸೀಲ್ದಾರ್ ತನ್ಮಯ್ ಪೂಜೆ ಸಲ್ಲಿಸುವ ಮೂಲಕ ಮಧ್ಯಾಹ್ನ 12 ಗಂಟೆಗೆ ಚಾಲನೆ ನೀಡಿದರು. ನಂತರ ಭಕ್ತಾದಿಗಳು ರಥ ಎಳೆದು ದೇವಸ್ಥಾನದ ಸುತ್ತಲು ಪ್ರದಕ್ಷಿಣೆ ಹಾಕಿ ಹಣ್ಣು ಧವನ ಎಸೆದು ಗೋವಿಂದ... ಗೋವಿಂದ... ವೆಂಕಟರಮಣ ಎಂಬ ಜಯ ಘೋಷ ಕೂಗುವ ಮೂಲಕ ರಥ ಎಳೆದರು. ಅರ್ಚಕರಾದ ರಾಘವನ್ ಮತ್ತು ನಾಗರಾಜು ನೇತೃತ್ವದಲ್ಲಿ ಅಭಿಷೇಕ, ಅಂಕುರಾರ್ಪಣ, ಧ್ವಜಾರೋಪಣ, ಭೇರಿತಾಡನ ಪ್ರವೇಶ, ನಿತ್ಯಾರ್ಚನೆ, ಕಲ್ಯಾಣೋತ್ಸವ ನೆರವೇರಿದವು.

ಕೇಸರಿ ಅಲಂಕಾರ:

ಹನೂರಿನ ಆಂಜನೇಯ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಿತು. ಅರ್ಚಕ ಸುನಿಲ್ ಮೊದಲ ಶ್ರಾವಣ ಶನಿವಾರ ಪಟ್ಟಣದ ಆಂಜನೇಯ ಸ್ವಾಮಿಗೆ ಮೂರ್ತಿಗೆ ಕೇಸರಿ ಲೇಪಿಸಿ ಕೇಸರಿನಂದನ ಅಲಂಕಾರವನ್ನು ಮಾಡಿದ್ದು ಆಕರ್ಷಕವಾಗಿತ್ತು.

ಹಿಮವದ್ ಬೆಟ್ಟಕ್ಕೆ ಭಕ್ತಸಾಗರ:

ಪ್ರಸಿದ್ಧ ಯಾತ್ರಾಸ್ಥಳವಾದ ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೂ ಶ್ರಾವಣ ಶನಿವಾರ ಹಿನ್ನೆಲೆ ಭಕ್ತಸಾಗರವೇ ಹರಿದು ಬಂದಿತ್ತು. ಜಿಲ್ಲೆ ಅಷ್ಟೇ ಅಲ್ಲದೆ ರಾಜ್ಯದ ನಾನಾ ಭಾಗಗಳಿಂದ ಬಂದ ಸಹಸ್ರಾರು ಮಂದಿ ಭಕ್ತರು ಗೋಪಾಲಸ್ವಾಮಿ ದರ್ಶನ ಪಡೆದು ಪ್ರಕೃತಿಯ ಸೊಬಗನ್ನು ಸವಿದರು.ದೇವಾಲಯಕ್ಕೆ ಬಂದ ಭಕ್ತರುಗೆ ವಿಶೇಷ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಮಾದಕ ವಸ್ತುಗಳಿಂದ ಯುವ ಜನ ದೂರವಿರಲಿ

ಕೆ.ಆರ್.ಪೇಟೆ: ಯುವ ಜನತೆ ದೇಶದ ಆಸ್ತಿಯಾಗಿದ್ದು, ಮಾದಕ ವಸ್ತುಗಳ ದುಶ್ಚಟಗಳಿಂದ ದೂರವಿರಬೇಕು ಈ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷರಾದ ಆರ್‌ಟಿಓ ಮಲ್ಲಿಕಾರ್ಜುನ್ ಅವರು ತಿಳಿಸಿದರು.

ಬೂಕನಕೆರೆ ಹೋಬಳಿಯ ಬಲ್ಲೇನಹಳ್ಳಿ ಸರ್ಕಾರಿ ಪ್ರೌಢಶಾಲಾ ಹಾಗೂ ಕಾಲೇಜಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸರಕಾರ ಮಾದಕ ವಸ್ತುಗಳ ಬಗ್ಗೆ ಎಷ್ಟೇ ಕಟ್ಟು ನಿಟ್ಟಿನ ಶಿಸ್ತು ಕ್ರಮ ಕೈಗೊಂಡರೂ ಕೂಡ ಮಾದಕ ವಸ್ತುಜಾಲ ಹೆಚ್ಚಾಗುತ್ತಿದೆ. ಗಾಂಜಾ, ಅಫೀಮು, ಮದ್ಯಪಾನ, ಗುಟ್ಕ, ಧೂಮಪಾನಗಳಿಂದ ಯುವ ಜನತೆಯ ಜೀವನ ಹಾಳಾಗುತ್ತಿದೆ. ಸಹವಾಸ ದೋಷ, ಆಕರ್ಷಣೆಗಳ ಕಾರಣ ದುಶ್ಚಟ ಒಮ್ಮೆ ಆರಂಭವಾದರೆ ಬದುಕು ವಿನಾಶದ ಹಾದಿಯಲ್ಲಿ ಸಾಗುತ್ತದೆ. ವಿದ್ಯಾರ್ಥಿ ಜೀವನದ ದೆಸೆಯಿಂದಲೇ ಓದುವ ಹವ್ಯಾಸ ರೂಢಿಸಿಕೊಂಡು ಉತ್ತಮ ಸಮಾಜ ಕಟ್ಟುವ ಸಂಕಲ್ಪ ಕೈಗೊಳ್ಳಬಹುದು ಎಂದರು.

ಸಿ.ಆರ್.ಪಿ ಮಹೇಶ್ ಮಾತನಾಡಿ, ವಿದ್ಯಾರ್ಥಿಗಳು ಮೊದಲು ದುಶ್ಚಟಗಳಿಂದ ದೂರವಿದ್ದು ಶಿಕ್ಷಣದ ಕಡೆದ ಹೆಚ್ಚು ಗಮನ ಹರಿಸಬೇಕು ಎಂದರು. ಮುಖ್ಯ ಶಿಕ್ಷಕ ಶಿವಣ್ಣ ಅಧ್ಯಕ್ಷತೆ ವಹಿಸಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ತಾ. ಯೋಜನಾಧಿಕಾರಿ ತಿಲಕ್ ರಾಜ್, ಕಾಲೇಜು ಪ್ರಾಂಶುಪಾಲ ರಾಜೇಗೌಡ, ಗ್ರಾ.ಪಂ ಅಧ್ಯಕ್ಷೆ ಸೌಮ್ಯ, ಹಿರಿಯ ಪತ್ರಕರ್ತ ಶ್ರೀನಿವಾಸ್, ಸಂಘದ ಮೇಲ್ವಿಚಾರಕ ಪ್ರಕಾಶ್ ಇದ್ದರು.

ವೈಜ್ಞಾನಿಕ ಚಿಂತನೆ ಬಿತ್ತುವ ವಚನ ಸಾಹಿತ್ಯ

ಮೈಸೂರು: ವಚನ ಸಾಹಿತ್ಯ ವೈಜ್ಞಾನಿಕ ಚಿಂತನೆಗಳನ್ನು ಬಿತ್ತುವ ಬೆಳಕು ಎಂದು ಸಂಸ್ಕೃತಿ ಚಿಂತಕರೂ ಆದ ನಿವೃತ್ತ ಮುಖ್ಯ ಎಂಜಿನಿಯರ್ ದೇವನೂರು ಶಂಕರ್ ಬಣ್ಣಿಸಿದರು.

ಶಾಲಾ ಶಿಕ್ಷಣ ಇಲಾಖೆ ಹಾಗೂ ಪದವಿ ಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆ ಆಶ್ರಯದಲ್ಲಿ ಜ್ಞಾನೋದಯ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಶೈಕ್ಷಣಿಕ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿಜ್ಞಾನ ವಿಶ್ಲೇಷಣಾತ್ಮಕವಾದುದು, ಸಾಹಿತ್ಯ ಸಂಶ್ಲೇಷಣಾತ್ಮಕವಾದುದ್ದು. ಎಲ್ಲರೂ ಒಳಗೊಳ್ಳುವಂತೆ ಮಾಡುವುದು ಸಾಹಿತ್ಯ. ಎಲ್ಲರೂ ಒಳಗೊಳ್ಳುವಿಕೆಯೇ ಮಾನವತೆ. ನಾವೆಲ್ಲರೂ ಮೊದಲು ಮಾನವರಾಗೋಣ ಎಂದು ಸೂಚ್ಯವಾಗಿ ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಎಲ್. ಚಿದಾನಂದ ಕುಮಾರ್ ಮಾತನಾಡಿ, ನಾನು ವಿಜ್ಞಾನ ವಿದ್ಯಾರ್ಥಿಯಾದರೂ

ಕನ್ನಡ ಕೊಟ್ಟಷ್ಟು ಪ್ರೇಮ ಇನ್ನಾವುದೇ ವಿಷಯ ಕೊಡಲಿಲ್ಲ ಎಂದರು.

ಲೇಖಕ ಅರವಿಂದ ಚೊಕ್ಕಾಡಿ ಮಾತನಾಡಿ, ಭಾಷೆ ಭೋದಿಸುವುದೆಂದರೆ ಬದುಕನ್ನು ಬೋಧಿಸಿದಂತೆ, ಮಕ್ಕಳಿಗೆ ಬಾಲ್ಯದಲ್ಲಿಯೇ ಸರಿಯಾದ ಭಾಷಾ ಶಿಕ್ಷಕರು ಸಿಕ್ಕರೆ ಮಕ್ಕಳ ಬದುಕು ಹಸನಾಗುವಲ್ಲಿ ಅನುಮಾನವಿಲ್ಲ. ಮಕ್ಕಳ ಬದುಕನ್ನು ರೂಪಿಸುವವರು, ಬದಲಿಸುವರು ಕನ್ನಡ ಭಾಷಾ ಶಿಕ್ಷಕರೇ. ನಿಜಕ್ಕೂ ನೀವು ಅದೃಷ್ಟಶಾಲಿಗಳು ಎಂದು ಕನ್ನಡ ಉಪನ್ಯಾಸಕರನ್ನ ಅಭಿನಂದಿಸಿದರು.

ವೇದಿಕೆ ಗೌರವಾಧ್ಯಕ್ಷ ಸಂತೋಷ ಚಕ್ಕಾಡಿ, ಅಧ್ಯಕ್ಷ ಕ್ಯಾತಮಾರನಹಳ್ಳಿ ಮಹೇಶ, ಜ್ಞಾನೋದಯ ಕಾಲೇಜಿನ ಪ್ರಾಂಶುಪಾಲೆ ಪದ್ಮಾರವಿ, ಮಹಾಜನ ಕಾಲೇಜು ಪ್ರಾಂಶುಪಾಲ ವಿಷಕಂಠಮೂರ್ತಿ, ಪ್ರಧಾನ ಕಾರ್ಯದರ್ಶಿ ಪಿ.ಕೆಂಪಯ್ಯ, ಖಜಾಂಚಿ ಡಾ. ಉಮೇಶ್, ಬೇವಿನಹಳ್ಳಿ , ಶ್ರೀಕಂಠಯ್ಯ, ಡಾ. ಮಾಲತಿ, ಉಪನ್ಯಾಸಕ ಕಿರಣ್ ಕುಮಾರ ಹಾಜರಿದ್ದರು. ಈ ವೇಳೆ ಪ್ರಾಂಶುಪಾಲರಾಗಿ ಪದೋನ್ನತಿ ಹೊಂದಿದ್ದ ಕೌಶಲ್ಯದೇವಿ, ನಂಜುಂಡಸ್ವಾಮಿ, ಸಂಶೋಧನಾ ಮಹಾಪ್ರಬಂಧ ಮಂಡಿಸಿ ಪಿಎಚ್ ಡಿ ಪದವಿ ಪಡೆದ ನೀ.ಗೂ. ರಮೇಶ್, ಸೇಸುನಾಥನ್, ಕೃಪ ಮಂಜುನಾಥ್, ಹೇಮಚಂದ್ರ ಅವರನ್ನು ಅಭಿನಂದಿಸಲಾಯಿತು.

ಕಾರ್ಗಿಲ್ ವಿಜಯ್ ದಿವಸ್

ಮಡಿಕೇರಿ: ಕೊಡಗು ವಿದ್ಯಾಲಯದ ಎನ್ ಸಿ ಸಿ ಘಟಕದ ವತಿಯಿಂದ ನಗರದಲ್ಲಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ

ಪ್ರತಿಮೆಯನ್ನು ಶುಚಿಗೊಳಿಸುವ ಮೂಲಕ ಕಾರ್ಗಿಲ್ ವಿಜಯ ದಿವಸ್‌ನ್ನು ಆಚರಿಸಲಾಯಿತು. ಕೊಡಗು ವಿದ್ಯಾಲಯದ ಎನ್ ಸಿ ಸಿ ಕೆಡೆಟ್ ಗಳು ಪ್ರತಿಮೆಯನ್ನು ಶುಚಿಗೊಳಿಸಿ, ಆವರಣದ ಸುತ್ತ ಬೆಳೆದಿದ್ದ ಕಾಡು ಸಸಿಗಳನ್ನು ಕಿತ್ತು, ಗುಡಿಸಿ ಶುಚಿಗೊಳಿಸಿದರು. ಶಾಲಾ ಪ್ರಾಂಶುಪಾಲರಾದ ಸುಮಿತ್ರಾ ಕೆ.ಎಸ್. ಉದ್ಘಾಟಿಸಿದರು. ಆಡಳಿತ ಅಧಿಕಾರಿ ಪಿ.ರವಿ ನೆರವೇರಿಸಿದರು. ಶಾಲೆಯ ಎನ್ ಸಿ ಸಿ ಅಧಿಕಾರಿ ಮೇಜರ್ ದಾಮೋದರಗೌಡ ಹಾಗೂ ಎನ್ ಸಿ ಸಿ ಸಿಬ್ಬಂದಿ ಹಾಜರಿದ್ದರು.

ಅಭಿವೃದ್ಧಿ ಬಗ್ಗೆ ಶ್ವೇತಪತ್ರ ಹೊರಡಿಸಲಿ

ಮೈಸೂರು: ಏನು ಅಭಿವೃದ್ಧಿ ಮಾಡಿದ್ದೇವೆ ಎಂಬ ಬಗ್ಗೆ ಶ್ವೇತ ಪತ್ರ ಹೊರಡಿಸಲಿ. ಶ್ವೇತ ಪತ್ರ ಬಂದ ಮೇಲೆ ಉಳಿದಿದ್ದರ ಬಗ್ಗೆ ನಾವು ಮಾತನಾಡುತ್ತೇವೆ ಎಂದು ಸಂಸದ ಯದುವೀರ್ ಒಡೆಯರ್ ಸವಾಲು ಹಾಕಿದ್ದಾರೆ.

ಅಭಿವೃದ್ಧಿ ಬಗ್ಗೆ ಚರ್ಚೆಗೆ ಬನ್ನಿ ಎಂದು ಸಿಎಂ ಸಿದ್ದರಾಮಯ್ಯರ ಪಂಥಾಹ್ವಾನ ವಿಚಾರಕ್ಕೆ ಹೀಗೆ ಪ್ರತಿಕ್ರಿಯಿಸಿದ ಯದುವೀರ್, ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದರು.

ಸಿದ್ದರಾಮಯ್ಯ ಅವರ ಅಭಿವೃದ್ಧಿ ಕಾರ್ಯವನ್ನು ಡಾ. ಯತೀಂದ್ರ ನಾಲ್ವಡಿಯವರಿಗೆ ಹೋಲಿಸಿದ ವಿಚಾರ ಕುರಿತು ಮೈಸೂರಿನಲ್ಲಿ ಹೇಳಿಕೆ ನೀಡಿದ ಅವರು, ಯಾರು ಯಾರನ್ನೋ ಹೋಲಿಕೆ ಮಾಡಿ ಮಾತನಾಡುವುದು ಸರಿಯಲ್ಲ. ನಾನು ಅವರಿಗಿಂತ ಜಾಸ್ತಿ, ಇವರಿಗಿಂತ ಕಡಿಮೆ ಎಂದುಕೊಳ್ಳಬಾರದು. ಮಹಾರಾಜರು ಅವರ ಕೆಲಸ ಅವರು ಮಾಡಿದ್ದಾರೆ. ಇವರು ಏನು ಕೆಲಸ ಮಾಡಿದ್ದಾರೆ ಎಂಬುದನ್ನು ಹೇಳಬೇಕು. ಮಹಾರಾಜರು ಮಾಡಿದ ಕೆಲಸ ಜನರ ಮುಂದೆ ಇದೆ. ನಾನು ಅದೇ ವಂಶಸ್ಥನಾಗಿ ಈ ಬಗ್ಗೆ ಮಾತನಾಡಿದರೆ ಸರಿ ಅನ್ನಿಸಲ್ಲ. ಜನರಿಗೆ ಗೊತ್ತಿದೆ ಮಹಾರಾಜರು ಏನು ಮಾಡಿದ್ದಾರೆ ಎಂಬುದು. ವಿಷಯಗಳನ್ನು ಡೈವರ್ಟ್ ಮಾಡಲು ಏನೋನೋ ಹೇಳುವುದು ಸರಿಯಲ್ಲ ಎಂದು ಟೀಕಿಸಿದರು.

ಮೈಸೂರು ವಿಮಾನ ನಿಲ್ದಾಣಕ್ಕೆ ಕಳೆದ 15 ವರ್ಷಗಳಿಂದ ಏನು ಕೊಟ್ಟಿದ್ದೀರಾ ?. ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದಾರೆ.

ಮೊದಲು ಜನರ ಸಮಸ್ಯೆ ಪರಿಹರಿಸಿ. ಟ್ಯಾಕ್ಸ್ ಹೆಸರಿನಲ್ಲಿ ಬಡ ವ್ಯಾಪಾರಸ್ಥರಿಗೆ ಹಿಂಸೆ ಕೊಡಲಾಗುತ್ತಿದೆ. ಮೊದಲು ಇದನ್ನು ನಿಲ್ಲಿಸಿ. ನೀವು ನೀವೇ ಹೋಲಿಕೆ ಮಾಡಿಕೊಳ್ಳುವುದು ಬೇಡ ಎಂದು ತಿರುಗೇಟು ನೀಡಿದರು.

ಗಣತಿ ಮಾಡುವ ಯೋಗ್ಯತೆಯೇ ಇಲ್ಲ

ರಾಜ್ಯ ಸರಕಾರಕ್ಕೆ ಜಾತಿ ಗಣತಿ ಮಾಡುವ ಯೋಗ್ಯತೆಯೇ ಇಲ್ಲ. ಈ ಹಿಂದೆ ಮಾಡಿಸಿದ ಕಾಂತರಾಜ್ ವರದಿಯನ್ನು ಕಸದ ಬುಟ್ಟಿಗೆ ಎಸೆದಿದ್ದು ಇದೇ ಕಾಂಗ್ರೆಸ್ ಸರಕಾರ. ಕೇಂದ್ರ ಈಗ ಜಾತಿ ಗಣತಿ ಮಾಡುತ್ತಿದೆ. ಕೇಂದ್ರದಲ್ಲಿ ಅಷ್ಟು ವರ್ಷ ಅಧಿಕಾರದಲ್ಲಿತ್ತು ಕಾಂಗ್ರೆಸ್. ಜಾತಿ ಗಣತಿ ಏಕೆ ಮಾಡಲಿಲ್ಲ. ಸುಮ್ಮನೆ ಜಾತಿ ಗಣತಿ ಹೆಸರಿನಲ್ಲಿ ರಾಜಕಾರಣ ಮಾಡುತ್ತೀರಾ?. ಕೇಂದ್ರವೇ ಜಾತಿ ಗಣತಿ ಮಾಡುವಾಗ ಮತ್ತೆ ರಾಜ್ಯವೂ ಮಾಡುವ ಅವಶ್ಯಕತೆ ಇಲ್ಲ ಎಂದರು.

ದಾಳಿ: ಪ್ಲಾಸ್ಟಿಕ್ ವಸ್ತು ವಶ, ದಂಡ

ಚಾಮರಾಜನಗರ: ನಗರಸಭೆ ಪೌರಾಯುಕ್ತ ರಾಮದಾಸ್ ಅವರ ನೇತೃತ್ವದಲ್ಲಿ ಪರಿಸರ ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳು ನಗರದ ಡಿವಿಯೇಷನ್ ರಸ್ತೆಯಲ್ಲಿರುವ ಮಟನ್, ಚಿಕನ್ ಅಂಗಡಿ, ಬೇಕರಿ, ಹೋಟೆಲ್, ಮೆಡಿಕಲ್ ಸ್ಟೋರ್, ಮೊಬೈಲ್ ಅಂಗಡಿಗಳ ಮೇಲೆ ಮಿಂಚಿನ ಕಾರ್ಯಾಚರಣೆ ನಡೆಸಿ ನಿಷೇಧಿತ ಪ್ಲಾಸ್ಟಿಕ್ ಬ್ಯಾಗ್, ಲೋಟ, ಫುಡ್ ಕಲರ್, ಟೆಸ್ಟಿಂಗ್ ಪೌಡರ್ ವಶಪಡಿಸಿಕೊಂಡು, ಮಾಲೀಕರಿಗೆ ದಂಡ ಹಾಕಿದರು.

ಪರವಾನಗಿ ಇಲ್ಲದ ಅಂಗಡಿಗಳಿಗೂ ದಂಡ ವಿಧಿಸಿ, ಒಂದು ವಾರದೊಳಗೆ ಪರವಾನಗಿ ಮಾಡಿಸಿಕೊಳ್ಳುವಂತೆ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದರು. ಸ್ವಚ್ಛತೆ ಇಲ್ಲದ ಹೋಟಲ್, ವೈನ್ ಸ್ಟೋರ್ ಸೇರಿದಂತೆ ಅಂಗಡಿ ಮಾಲೀಕರಿಗೆ ಒಟ್ಟು 10.500 ದಂಡ ಹಾಕಿದರು.

ಪೌರಾಯುಕ್ತ ರಾಮದಾಸ್ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು, ನಗರಸಭಾ ಅಧ್ಯಕ್ಷರ ಆದೇಶದ ಮೇರೆಗೆ ನಗರದಲ್ಲಿ ಆಹಾರ ಕಲಬೆರಕೆ ವಸ್ತು ಬಳಸಿಕೊಂಡು ಅಂಗಡಿ, ಬೇಕರಿ, ಫುಡ್ ತಯಾರಿಸುವ ಅಂಗಡಿ, ಹೋಟೆಲ್, ದಿನಸಿ ಅಂಗಡಿಗಳು, ಫಾಸ್ಟ್ ಫುಡ್, ಪಾನಿಪುರಿ, ಗೋಬಿ, ಸೆಂಟರ್ ಗಳಿಗೆ ಭೇಟಿ ನೀಡಿ ಪರಿಶೀಲಿಸಿ, ಶುಚಿತ್ವ ಕಾಪಾಡುವಂತೆ, ಕಲಬೆರಕೆ ವಸ್ತುಗಳನ್ನು ಬಳಸದಂತೆ ಎಚ್ಚರಿಕೆ ನೀಡಲಾಯಿತು.

ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ನಾರಾಯಣಸ್ವಾಮಿ, ಟಿಎಚ್ಓ ಡಾ.ಶ್ರೀನಿವಾಸ, ಆಹಾರ ಸುರಕ್ಷತಾಧಿಕಾರಿ ಶ್ರೀನಿವಾಸ, ಸೂಪರ್‌ವೈಸರ್‌ಗಳಾದ ಮಲ್ಲಿಕಾರ್ಜುನ ಸ್ವಾಮಿ, ಸಿ.ಡಿ.ವೆಂಕಟೇಶ್, ಚೇತನ್, ಮಣಿಕಂಠನಾಯಕ ಇದ್ದರು.

ಪತ್ರಕರ್ತರ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ

ಮೈಸೂರು: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಓವಲ್ ಮೈದಾನದಲ್ಲಿ ಎರಡು ದಿನಗಳ ಕಾಲ ಆಯೋಜಿಸಿರುವ ವಾರ್ಷಿಕ ಕ್ರೀಡಾಕೂಟಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊಫೆಸರ್ ಎನ್.ಕೆ.ಲೋಕನಾಥ್, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ನ ಮೈಸೂರು ವಲಯದ ಸಂಯೋಜಕ ಆರ್.ಕೆ.ಹರಿಕೃಷ್ಣ ಕುಮಾರ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಸಿ.ವೆಂಕಟೇಶ್, ಮತ್ತಿತರ ಗಣ್ಯರು ಬಲೂನ್ ಗಳನ್ನು ಹಾರಿಸಿ ಕ್ರಿಕೆಟ್ ಬ್ಯಾಟ್ ಬೀಸುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ಇದೇ ವೇಳೆ ಮೈಸೂರು ವಿವಿಯ ಕುಲಪತಿ ಲೋಕನಾಥ್ ಮಾತನಾಡಿ, ಮನೋ ವಿಕಾಸ ಮತ್ತು ಬುದ್ದಿ ಚುರುಕುಗೊಳ್ಳಲು ಕ್ರೀಡೆ ಪ್ರತಿಯೊಬ್ಬರಿಗೂ ಅಗತ್ಯ, ಹಾಗೆಯೇ ದೈಹಿಕ ಮಾನಸಿಕ ಆರೋಗ್ಯಕ್ಕೂ ಸಹಕಾರಿ. ಕೆಲಸದ ಒತ್ತಡದ ನಡುವೆಯೂ ಪತ್ರಕರ್ತರು ಒಂದೆಡೆ ಸೇರಿ ಕ್ರೀಡೆಯಲ್ಲಿ ಪಾಲ್ಗೊಂಡಿರುವುದು ಸಂತಸದ ಸಂಗತಿ. ಕೇವಲ ಗೆಲುವು ಮುಖ್ಯವಲ್ಲ ಸ್ಪರ್ಧೆಯಲ್ಲಿ ಭಾಗವಹಿಸುವುದು ಮುಖ್ಯ, ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಎಂದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಆದಿಚುಂಚನಗಿರಿ ವಿವಿ 5ನೇ ಘಟಿಕೋತ್ಸವ 29ರಂದು

ನಾಗಮಂಗಲ: ತಾಲೂಕಿನ ಆದಿಚುಂಚನಗಿರಿ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವ ಬಿಜಿಎಸ್ ಆಡಿಟೋರಿಯಂನಲ್ಲಿ ಜು.29 ರಂದು ನಡೆಯಲಿದೆ. ಒಟ್ಟು 1880ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ಪ್ರದಾನ ಮಾಡಲಾಗುವುದು ಎಂದು ಆದಿಚುಂಚನಗಿರಿ ವಿವಿ ಕುಲಪತಿ ಡಾ. ಎಸ್.ಎನ್.ಶ್ರೀಧರ ತಿಳಿಸಿದರು.

ಪಟ್ಟಣದ ಪತ್ರಕರ್ತರ ಸಂಘದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರೂ, ಕುಲಾಧಿಪತಿಗಳೂ ಆಗಿರುವ ಡಾ.ನಿರ್ಮಲಾನಂದನಾಥಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆಯಲಿದೆ. ಇಸ್ರೋ ಮಾಜಿ ಅಧ್ಯಕ್ಷ, ಚಾಣಾಕ್ಯ ವಿವಿ ಕುಲಾಧಿಪತಿ ಡಾ. ಎಸ್.ಸೋಮನಾಥ್ ಪ್ರಧಾನ ಭಾಷಣ ಮಾಡುವರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದರು.

ಘಟಿಕೋತ್ಸವದಲ್ಲಿ 968 ಹೆಣ್ಣು ಮಕ್ಕಳು ಮತ್ತು 912 ಗಂಡು ಮಕ್ಕಳು ಪದವಿ ಪಡೆಯಲಿದ್ದಾರೆ. 20 ಮಂದಿಗೆ ಪಿಎಚ್‌ಡಿ ನೀಡಲಾಗುತ್ತಿದೆ. ವೈದ್ಯಕೀಯ ಮತ್ತು ಅಲೈಡ್ ಸೈನ್ಸ್ ವಿಭಾಗ 200 ಮಂದಿ, ಫಾರ್ಮಸಿ 300 ಮಂದಿ, ಇಂಜಿನಿಯರಿಂಗ್ 700 ಮಂದಿ, ನರ್ಸಿಂಗ್ 100 ಮಂದಿ, ನ್ಯಾಚುರಲ್ ಸೈನ್ಸ್ 150, ಸೋಷಿಯಲ್ ಸೈನ್ಸ್‌ನಲ್ಲಿ 300 ಮಂದಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದು ಹೇಳಿದರು.

ಚಿನ್ನದ ಪದಕ:

ಅತಿ ಹೆಚ್ಚು ಅಂಕ ಪಡೆದಿರುವ ದೀಕ್ಷಿತಾಅಯ್ಯರ್‌ಗೆ ಲೇಟ್ ನಂಜಮ್ಮ ಲಕ್ಕೀಗೌಡ ಸ್ಮಾರಕ ಚಿನ್ನದ ಪದಕ, ಎಸ್. ರೇಖಾಗೆ ಲೇಟ್ ದಾಸೇಗೌಡ ಲಕ್ಕೀಗೌಡ ಸ್ಮಾರಕ ಚಿನ್ನದ ಪದಕ, ಮಂಪಿಡೈಗೆ ಲೇಟ್ ಸುನ್ನಾರಿ ಪಾರ್ವತಿ ಶೆಟ್ಟಿ ಸ್ಮಾರಕ ಚಿನ್ನದ ಪದಕ, ಡಾ. ಎಚ್.ದರ್ಶನ್ ಗೆ ದೇವಮ್ಮ ಪುಟ್ಟಚ್ಚೇ ಸಿದ್ದೇಗೌಡ ಸ್ಮಾರಕ ಚಿನ್ನದ ಪದಕ ಮತ್ತು ಫಾರ್ಮಸಿಯಲ್ಲಿ ಪ್ರೊ.ಪ್ರಕಾಶ್ ಎಸ್. ಗೌಡನವರ್‌ಗೆ ಲೇಟ್ ಜಯಪ್ರಕಾಶ್ ನಾಯರ್ ಚಿನ್ನದ ಪದಕ ಪ್ರದಾನ ಮಾಡಲಾಗುವುದು ಎಂದರು.

ಕುಲಸಚಿವ ಡಾ.ಸಿ.ಕೆ.ಸುಬ್ಬರಾಯ ಮಾತನಾಡಿ, ಕಳೆದ 2018ರಲ್ಲಿ ಆರಂಭಗೊಂಡಿರುವ ಆದಿಚುಂಚನಗಿರಿ ವಿವಿ 5 ನೇ ಘಟಿಕೋತ್ಸವ ಆಚರಿಸುತ್ತಿದೆ ಎಂದು ತಿಳಿಸಿದರು. ಬಿಜಿಎಸ್ ಕಾಲೇಜಿನ ಪ್ರಾಂಶುಪಾಲ ಪ್ರೊ.ರೋಹಿತ್, ಸಹಾಯಕ ಪ್ರಾಧ್ಯಾಪಕ ಜಿ.ಎಸ್.ನಾಗೇಶ್ ಇದ್ದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಓವಲ್ ಮೈದಾನದಲ್ಲಿ ವಾರ್ಷಿಕ ಕ್ರೀಡಾಕೂಟಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಮಾಸ್ತಿ ಕೆಪಿಎಸ್ ಶಾಲೆ ಕಟ್ಟಡ ಲೋಕಾರ್ಪಣೆ

ಕೋಲಾರ: ರಾಜ್ಯದ 500 ಕಡೆ 2500 ಕೋಟಿ ರೂ.ವೆಚ್ಚದಲ್ಲಿ ಹೊಸದಾಗಿ ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರೆಯಲಾಗುತ್ತಿದ್ದು ಬಜೆಟ್ ಘೋಷಣೆಯಂತೆ ಇಲಾಖೆಗೆ ಇದೀಗ ನಿಧಿ ಬಿಡುಗಡೆ ಆಗಿದೆ ಎಂದು ಶಿಕ್ಷಣ ಸಚಿವ ಮಧುಬಂಗಾರಪ್ಪ ಹೇಳಿದರು.

ಮಾಲೂರು ತಾಲೂಕಿನ ಮಾಸ್ತಿ ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್ ನೂತನ ಶಾಲಾ ಕಟ್ಟಡ ಉದ್ಘಾಟಿಸಿ ಮಾತನಾಡಿ, ದಾನಿ ಅಮೇರಿಕಾದ ಲಿಂಡಾಜನಾರ್ಧನ್ ಠಕ್ಕರ್ ದಂಪತಿ 8 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಕಟ್ಟಡದ ನಿರ್ವಹಣೆಗೆ ತಾವು 5 ಲಕ್ಷ ರೂ. ನೆರವು ನೀಡುವುದಾಗಿ ತಿಳಿಸಿದರು. ಜನತೆ ದೇವಸ್ಥಾನಗಳನ್ನು ಚಿಕ್ಕದು ಮಾಡಿ ಶಾಲೆಗಳನ್ನು ದೊಡ್ಡದಾಗಿ ಕಟ್ಟಿಸಬೇಕಾಗಿದ್ದು ಇದರಿಂದ ಸಾವಿರಾರು ಮಂದಿಗೆ ಶಿಕ್ಷಣದ ಬೆಳಕು ಸಿಕ್ಕುತ್ತದೆ. ಹೀಗಾಗಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಗುಣಮಟ್ಟದ ಶಿಕ್ಷಕರನ್ನು ಒದಗಿಸುವ ಜವಾಬ್ದಾರಿ ನನ್ನ ಮೇಲಿದೆ ಎಂದು ಸಚಿವರು ನುಡಿದರು. ಶಾಸಕ ಕೆ.ವೈ.ನಂಜೇಗೌಡ ಮಾತನಾಡಿ, ಮಾಸ್ತಿ ಕರ್ನಾಟಕ ಪಬ್ಲಿಕ್ ಸ್ಕೂಲ್ ನಿರ್ವಹಣೆಗೆ 5 ಲಕ್ಷ ರೂ.ದೇಣಿಗೆ ನೀಡುವುದಾಗಿ ತಿಳಿಸಿದರು. ಮಾಸ್ತಿ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯ್ತಿಯನ್ನಾಗಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಗ್ರಾಮದ ರಸ್ತೆಗಳನ್ನು 1 ಕೋಟಿ ರೂ.ವೆಚ್ಚದಲ್ಲಿ ಭಿವೃದ್ಧಿ ಮಾಡಲಾಗುತ್ತಿದೆ. ಮಾಲೂರಿನಿಂದ ಮಾಸ್ತಿವರೆಗೆ 26 ಕೋಟಿ ರೂ.ವೆಚ್ಚದಲ್ಲಿ ಸುಸಜ್ಜಿತ ರಸ್ತೆ ಮಾಡಲಾಗುತ್ತಿದ್ದು 1.50 ಕೋಟಿ ರೂ. ವೆಚ್ಚದಲ್ಲಿ ಕಲ್ಯಾಣಿ ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ತಿಳಿಸಿದರು. ಶಾಲಾ ಕಟ್ಟಡ ದಾನಿ ಲಿಂಡಾಜನಾರ್ಧನ್‌ಠಕ್ಕರ್ ಮಾತನಾಡಿ, ಓಸಾಟ್ ಸಂಸ್ಥೆಯಿಂದ 100 ನೇ ಶಾಲಾ ಕಟ್ಟಡವನ್ನು ಮಾಸ್ತಿಯಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಎಂಎಲ್‌ಸಿ ಇಂಚರಗೋವಿಂದರಾಜು, ಅನಿಲ್ ಕುಮಾರ್, ಜಿಲ್ಲಾಧಿಕಾರಿ ಡಾ.ರವಿ, ಎಸ್‌ಡಿಎಂಸಿ ಅಧ್ಯಕ್ಷ ಅಕ್ರಂಪಾಷ, ಗ್ರಾಪಂ ಉಪಾಧ್ಯಕ್ಷ ಎಂ.ವಿ.ಚೇತನ್ ಕುಮಾರ್ ಇದ್ದರು.

ಮಾಸ್ತಿ ಕೆಪಿಎಸ್ ಶಾಲೆ ನೂತನ ಕಟ್ಟಡ ಸಚಿವ ಮಧುಬಂಗಾರಪ್ಪ ನೆರವೇರಿಸಿದರು.

ಸಮಾಚಾರ ಸಣ್ಣದಲ್ಲ

ಶ್ರಾವಣದ ಮೊದಲ ಶನಿವಾರ: ಭಕ್ತರ ದಂಡು

ಚಿಕ್ಕಬಳ್ಳಾಪುರ: ಜಿಲ್ಲೆಯಾದ್ಯಂತ ಶ್ರಾವಣದ ಮೊದಲ ಶನಿವಾರ ದೇವಾಲಯಗಳಲ್ಲಿ ಭಕ್ತರು ತುಂಬಿದ್ದು ಶ್ರದ್ಧಾಭಕ್ತಿಯಿಂದ ಪೂಜೆ ನೆರವೇರಿಸಿದರು.ಆಷಾಢ ಕಳೆದು ಬರುವ ಶ್ರಾವಣ ಮಾಸವು ದೇವತಾ ಕಾರ್ಯಗಳಿಗೆ ಸೂಕ್ತವಾಗಿರುತ್ತದೆ ಎಂಬುದು ಆಸ್ತಿಕರ ನಂಬಿಕೆ.ಶ್ರಾವಣದ ಎಲ್ಲಾ ಶನಿವಾರಗಳಂದು ವೈಷ್ಣವ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಚಿಕ್ಕಬಳ್ಳಾಪುರ ನಗರ ವ್ಯಾಪ್ತಿಯ ಕಂದವಾರಪೇಟೆಯ ಶ್ರೀಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ದೇವರಿಗೆ ಅತ್ಯಂತ ಆಕರ್ಷಣೀಯವಾಗಿ ವೈಕುಂಠ ಅಲಂಕಾರ ಮಾಡಿದ್ದು ಭಕ್ತರು ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದರು. ಭಕ್ತಾದಿಗಳಿಗೆ ದೇವಾಲಯ ಅಭಿವೃದ್ಧಿ ಸಮಿತಿ ಮತ್ತು ಹರಕೆ ಹೊತ್ತು ಭಕ್ತಾದಿಗಳು ಅನ್ನ ಸಂತರ್ಪಣೆಯನ್ನು ಏರ್ಪಡಿಸಿದ್ದರು.

ದಲಿತರಿಗೆ ಕಾನೂನಿನ ಅರಿವು ಅಗತ್ಯ

ಗುಬ್ಬಿ: ದಲಿತ ಸಮುದಾಯಕ್ಕೆ ನ್ಯಾಯ ಒದಗಿಸುವ ಕಾನೂನುಗಳ ಬಗ್ಗೆ ಜನರು ತಿಳಿದುಕೊಳ್ಳಬೇಕು ಎಂದು ರೆಡ್ಸ್ ಸಂಸ್ಥೆ ಜಿಲ್ಲಾ ಸಂಚಾಲಕ ರಂಗಯ್ಯ ತಿಳಿಸಿದರು. ತಾಲೂಕಿನ ಚೇಳೂರು ಅಂಬೇಡ್ಕರ್ ನಗರದಲ್ಲಿ ಸ್ಲಂ ಜನಾಂದೋಲನ ಕರ್ನಾಟಕ, ಪರ್ಯಾಯ ಕಾನೂನು ವೇದಿಕೆ ಹಾಗೂ ಭುವನೇಶ್ವರಿ ಯುವಕ ಸಂಘ ಚೇಳೂರು ಸಹಯೋಗದಲ್ಲಿ ಎಸ್ಸಿ ಎಸ್ಟಿ ದೌರ್ಜನ್ಯ ತಡೆ 1989, ಪಿಟಿಸಿಎಲ್ 1978 ಹಾಗೂ 2013 ಮಲ ಹೊರುವ ನಿಷೇಧ ಕಾಯಿದೆ ಬಗ್ಗೆ ಕಾರ್ಯಾಗಾರದಲ್ಲಿ ಮಾತನಾಡಿದರು. ದಸಂಸ ಸಂಚಾಲಕ ಚೇಳೂರು ಶಿವನಂಜಪ್ಪ, ಹೈಕೋರ್ಟ್ ವಕೀಲರಾದ ನರಸಿಂಹಪ್ಪ ಮಾತನಾಡಿದರು. ಗ್ರಾಪಂ ಅಧ್ಯಕ್ಷೆ ಜಯಮ್ಮ, ಸದಸ್ಯೆ ಪದ್ಮ, ಸಂಯೋಜಕರಾದ ಮನೋಜ್, ಕಿಶೋರ್, ಪಿಎ??? ನಾಗರಾಜು, ಮುಖಂಡರಾದ ಕಚ್ಚೆನಹಳ್ಳಿ ಬಸವರಾಜ್, ರಮೇಶ್, ಕಲಾವಿದ ನರಸಿಂಹಮೂರ್ತಿ, ಮಾದಲಪುರ ಲೋಕೇಶ್, ದೊಡ್ಡಮ್ಮ, ಲಕ್ಕೆನಹಳ್ಳಿ ನರಸಿಯಪ್ಪ, ಪುಟ್ಟರಾಜು, ಸಂತು, ಅಭಿ, ವಿಜಯ್ ಇದ್ದರು.

ಶ್ರವಣ ಸ್ಕ್ರೀನಿಂಗ್ ಆರಂಭ ಇಂದು

ತುಮಕೂರು: ನಗರದ ಕೇಂದ್ರ ಗ್ರಂಥಾಲಯದ ಸಭಾಂಗಣದಲ್ಲಿ ಜು. 27 ರಂದು ಡಾ.ಎಸ್.ಆರ್. ಚಂದ್ರಶೇಖರ್ ಸ್ಪೀಚ್ ಅಂಡ್ ಹಿಯರಿಂಗ್ ಹಾಗೂ ಅಜೀಂ ಪ್ರೇಮ್‌ಜೀ ಫೌಂಡೇಶನ್ ಸಹಯೋಗದೊಂದಿಗೆ ನೂತನವಾಗಿ ಕಾರ್ನಿಯಾ ಯೋಜನೆ ಹಾಗೂ ಮಾತು ಮತ್ತು ಶ್ರವಣ ಸ್ಕ್ರೀನಿಂಗ್ ಯೋಜನೆಯ ಪ್ರಾರಂಭೋತ್ಸವ ನಡೆಯಲಿದೆ ಎಂದು ಕೇಂದ್ರದ ಅಧ್ಯಕ್ಷರಾದ ಜಪಾನಂದ ಸ್ವಾಮೀಜಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಾವಗಡದ ಸ್ವಾಮಿ ವಿವೇಕಾನಂದ ಸಂಘಟಿತ ಗ್ರಾಮಾಂತರ ಆರೋಗ್ಯ ಕೇಂದ್ರ, ಶಾರದಾದೇವಿ ಕಣ್ಣಿನ ಆಸ್ಪತ್ರೆ, ಬೆಂಗಳೂರಿನ ಇನ್ಫೋಸಿಸ್ ಫೌಂಡೇಷನ್ ವತಿಯಿಂದ ಇದನ್ನು ಹಮ್ಮಿಕೊಂಡಿದ್ದಾಗಿ ತಿಳಿಸಿದರು. ಸುರೇಶ್‌ಬಾಬು, ಅಭಿಷೇಕ್, ಋತುರಾಜನ್, ನಟರಾಜ ಶೆಟ್ಟಿ, ಕೆಯುಡಬ್ಲ್ಯೂ??ಜೆ ಜಿಲ್ಲಾ ಘಟಕದ ಅಧ್ಯಕ್ಷ ಚಿ.ನಿ. ಪುರುಷೋತ್ತಮ್ ಉಪಸ್ಥಿತರಿದ್ದರು.

ಉಚಿತ ಸಾಮೂಹಿಕ ವಿವಾಹ

ಶಿರಾ: ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ವತಿಯಿಂದ ಸಾವಿರದ ಎಂಟು ರೈತ ಕಲ್ಯಾಣೋತ್ಸವ ಸಮಾವೇಶವನ್ನು ಸೆಪ್ಟೆಂಬರ್ ಅಥವಾ ನವೆಂಬರ್ ತಿಂಗಳಲ್ಲಿ ಚಿತ್ರದುರ್ಗದಲ್ಲಿ ನಡೆಸಲಿದ್ದು ರೈತರು , ಕೂಲಿ ಕಾರ್ಮಿಕರು, ಹಾಗೂ ಬಡವರಿಗೆ ಉಚಿತವಾಗಿ ಸಾಮೂಹಿಕ ವಿವಾಹ ನಡೆಯಲಿದೆ. ತಾಳಿ, ವಧು ವರರಿಗೆ ಬಟ್ಟೆ ಹಾಗೂ ಕುಟುಂಬ ನಿರ್ವಹಣೆಗೆ ಬೇಕಾಗುವ ಹತ್ತು ಸಾವಿರ ರೂಗಳ ಬೆಲೆಯ ಪಾತ್ರೆಗಳನ್ನು ಉಚಿತವಾಗಿ ನೀಡಲಾಗುತ್ತದೆ ಎಂದು ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ರಾಜ್ಯಾಧ್ಯಕ್ಷ ಚಂದ್ರಶೇಖರ್ ಬಿ ಟಿ ತಿಳಿಸಿದರು. ವರ ಹಾಗೂ ವಧು ಕಡೆ ತಲಾ ಐದು ಜನ ಹಿರಿಯರು ಕಡ್ಡಾಯವಾಗಿ ಹಾಜರಾಗಬೇಕು.ರಾಜ್ಯದ ವಿವಿಧ ಕಡೆಯಿಂದ ಆಗಮಿಸುವ ವಧು ವರರಿಗೆ ಪ್ರಯಾಣ ಬತ್ಯ ನೀಡಲಾಗುತ್ತದೆ. ಆಸಕ್ತರು ಮೊ.87229 43106 ಸಂಪರ್ಕಿಸಿ, ಅವರಿಂದ ಅರ್ಜಿ ಪಡೆದು ವಧು ವರರ ಫೋಟೋ, ಆಧಾರ್ ಕಾರ್ಡ್ ಹಾಗೂ ಮದುವೆಗೆ ಸಮ್ಮತಿಸುವ ವಧು-ವರರ ಕಡೆಯ ತಲಾ ಐದು ಜನ ಸಂಬಂಧಿಕರ ಮೊಬೈಲ್ ನಂಬರ್ ಆಧಾರ್ ನಂಬರ್ ಕಡ್ಡಾಯವಾಗಿ ನೀಡಬೇಕು. ದಿನಾಂಕ ಹಾಗೂ ಮದುವೆ ನಡೆಯುವ ಸ್ಥಳವನ್ನು ಮುಂದಿನ ದಿನಗಳಲ್ಲಿ ಅರ್ಜಿದಾರರಿಗೆ ದೂರವಾಣಿ ಮೂಲಕ ತಿಳಿಸಲಾಗುತ್ತದೆ ಎಂದು ಜಿಲ್ಲಾಧ್ಯಕ್ಷ ರಘು ರಾಮ್ ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಎಚ್.ವಿಶ್ವನಾಥ್} ಎಂಎಲ್‌ಸಿ

ನಾಲ್ವಡಿಗಿಂತ ಹೆಚ್ಚು ಅಭಿವೃದ್ಧಿ ಮಾಡಿದ್ದು ಸಿದ್ದರಾಮಯ್ಯ ಎಂದು ಡಾ. ಯತೀಂದ್ರ ಹೇಳಿದ್ದಾರೆ. ಇದು ದುರಹಂಕಾರದ ಪರಮಾವಧಿ. ಸಿದ್ದರಾಮಯ್ಯ ಯಾವಾಗಲೂ ನಾನೇ ನಾನೇ ಅಂತಾರೆ. ದೇವರಾಜ ಅರಸುಗಿಂತಾ ನಾನೇ ಒಳ್ಳೆಯ ಆಡಳಿತ ಕೊಟ್ಟಿದ್ದು ಅಂತಾರೆ. ನಾನೇ ಎನ್ನುವ ದುರಹಂಕಾರ ಇವರ ಕುಟುಂಬಕ್ಕೆ ವಂಶವಾಹಿ ಬಂದಿದೆ. ನಮ್ಮ ಕಡೆ ಈ ರೀತಿ ಮಾತಾಡುವವರಿಗೆ 'ಹುಚ್ಚು ಮುಂಡೇದು' ಅಂತಾರೆ.

ಅರಸೀಕೆರೆಯಲ್ಲಿ ಫಲಾನುಭವಿಗಳ ಸಮಾವೇಶ | ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ

ಎತ್ತಿನಹೊಳೆ ಕೊರಗು ನೀಗಿಸಿಕೊಡಿ

ಅರಸೀಕೆರೆ: ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ನನ್ನ ಕ್ಷೇತ್ರಕ್ಕೆ ಸಾಕಷ್ಟು ಕೆಲಸ ಮಾಡಿಕೊಟ್ಟಿದ್ದಾರೆ. ಆದರೆ ಎತ್ತಿನಹೊಳೆ ನೀರಿನ ಕೊರಗು ಕಾಡುತ್ತಿದ್ದು, ಅದೊಂದು ಕೊರತೆ ನೀಗಿಸಿಕೊಡಿ ಎಂದು ಸ್ಥಳೀಯ ಶಾಸಕ ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಮನವಿ ಮಾಡಿದರು.

ಅವರು ಫಲಾನುಭವಿಗಳ ಸಮಾವೇಶದಲ್ಲಿ ಮಾತನಾಡಿ, ಅರಸೀಕೆರೆಯಲ್ಲಿ ಇಂಜಿನಿಯರಿಂಗ್ ಕಾಲೇಜು ಉದ್ಘಾಟನೆಗೊಂಡಿದೆ, ವಸತಿ ಶಾಲೆ ಸೇರಿ ಅನೇಕ ಕಾಮಗಾರಿಗಳಿಗೆ ಶಂಕುಸ್ಥಾಪನೆ ಆಗಿದೆ. ಅರಸೀಕೆರೆ ನತದೃಷ್ಟ ತಾಲ್ಲೂಕಾಗಿತ್ತು ಕುಡಿಯುವ ನೀರಿರಲಿಲ್ಲ, ಅದೂ ಸೇರಿದಂತೆ ಎಲ್ಲಾ ಕೆಲಸವನ್ನು ಮಾಡಿಕೊಟ್ಟಿದ್ದು ಸಿದ್ರಾಮಣ್ಣ ಎಂದರು.

ಇನ್ನೊಂದು ಕೊರಗಿದೆ. ಹೇಮಾವತಿ ನದಿ ಹಾಸನದಲ್ಲಿದ್ದರೂ ನೀರು ಬರಲಿಲ್ಲ, ಕೃಷ್ಣ ದಂಡೆ ಎಂದು ಕಾಲಹರಣ ಮಾಡಿದರು. ಕೆರೆಗಳು ತುಂಬಲಿಲ್ಲ, ಎತ್ತಿನಹೊಳೆ ಯೋಜನೆಗೆ ನಮ್ಮ ಪಕ್ಷದವರೇ ವಿರೋಧ ಮಾಡಿದ್ರು, ಅರಸೀಕೆರೆ ತಾಲ್ಲೂಕಿಗೆ ಎತ್ತಿನಹೊಳೆ ನೀರು ಬರಬೇಕು, ಡಿ.ಕೆ.ಶಿವಕುಮಾರ್ ನೀರಾವರಿ ಮಂತ್ರಿ ಆಗಿದ್ದಾರೆ, ಹತ್ತು ಬಾರಿ ದೆಹಲಿಗೆ ಹೋಗಿ ಬಂದಿದ್ದಾರೆ, ಎತ್ತಿನಹೊಳೆ ನೀರು ಎಲ್ಲೆಲ್ಲೋ ಹರಿದು ಹೋಗ್ತಿದೆ, ಮೊನ್ನೆ ಸಂಪುಟ ಸಭೆಯಲ್ಲೂ ಅನುಮೋದನೆ ನೀಡಿದ್ದೀರಿ, ಸಿಎಂ-ಡಿಸಿಎಂ ಆಪದ್ಬಾಂದವರಾಗಿ ನನ್ನ ಕ್ಷೇತ್ರಕ್ಕೆ ಎತ್ತಿನಹೊಳೆ ನೀರು ಕೊಡಿ ಎಂದು ಮನವಿ ಮಾಡಿದರು.

ನಿಮ್ಮಿಬ್ಬರಿಗೂ ಕೈಮುಗಿದು ಬೇಡುತ್ತೇನೆ, ಇಬ್ಬರು ಸೇರಿ ಮಾಡಿಕೊಡಿ ನಿಮ್ಮ ಋಣ ಮರೆಯೋದಿಲ್ಲ, ನಾವು ಬರಗಾಲ ಪ್ರದೇಶದವರು, ಹಿಂದೆ ನಮ್ಮ ತಾಲ್ಲೂಕನ್ನು ಬೇರೆ ರೀತಿ ನೋಡಿದ್ರು ಎಂದು ಮನವರಿಕೆ ಮಾಡಿದರು.



ಅರಸೀಕೆರೆಯಲ್ಲಿ ನಡೆದ ಫಲಾನುಭವಿಗಳ ಸಮಾವೇಶವನ್ನು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಸಚಿವರಾದ ಜಮೀರ್‌ಖಾನ್, ಶಾಶಕ ಕೆ.ಎಂ.ಶಿವಲಿಂಗೇಗೌಡ ಮತ್ತಿತರರು ಇದ್ದರು.

ವಿರೋಧ ಪಕ್ಷದವರು ಸರಕಾರ ದಿವಾಳಿಯಾಗಿದೆ ಅಂತಾರೆ, ಅವರಿಗೆ ಕೆಲಸವಿಲ್ಲ, ರಾಜ್ಯದಲ್ಲಿ ಬಡವರ ಬಗ್ಗೆ ಕಾಳಜಿ ಇಟ್ಟಿರುವುದು ಸಿದ್ರಾಮಣ್ಣನ ಸರಕಾರ, ನಿಮಗೆ ತಾಕತ್ ಇದ್ರೆ ಗ್ಯಾರಂಟಿ ರದ್ದು ಮಾಡಿ ಎಂದು ಸವಾಲು ಹಾಕಿದರು, ಆಗ ಜನ ಏನು ಮಾಡುತ್ತಾರೆ ನಿಮಗೆ ಗೊತ್ತಾಗುತ್ತೆ ಎಂದು ಎಚ್ಚರಿಸಿದರು.

ಇದೇ ವೇಳೆ ಕಾರ್ಯಕ್ರಮಕ್ಕೆ ಹೆಚ್ಚು ಜನರ ಆಗಮಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿದ ಕೆಎಂಶಿ,ಇಷ್ಟು ಜನ ಸೇರಿ ಇತಿಹಾಸ ಸೃಷ್ಟಿಸಿದ್ದೀರಿ, ಇದರಿಂದ ಸಿದ್ದರಾಮಯ್ಯ ಸರಕಾರ ಬಡವರ ಪರ ಕೆಲಸ ಮಾಡಿದೆ ಎಂಬುದನ್ನು ಸಾಬೀತು ಮಾಡಿದ್ದೀರಿ ಎಂದರು.

ಇಂಜಿನಿಯರಿಂಗ್ ಕಾಲೇಜಿಗೆ 240 ಸೀಟ್ ಪ್ರವೇಶ ಅವಕಾಶ ನೀಡಿದ್ದಾರೆ. ಅರಸೀಕೆರೆಯವರೇ 200 ಜನ ಓದುವುದಕ್ಕೆ ತಯಾರಾಗಿದ್ದಾರೆ. ಇಲ್ಲಿ ಪಾಲಿಟೆಕ್ನಿಕ್ ಓದಿ ಬೆಂಗಳೂರಿಗೆ ಹೋದ್ರೆ ಒಳ್ಳೆ ಸಂಬಳ ಸಿಗುತ್ತೆ, ಇದಕ್ಕೆ ಅವಕಾಶ ಮಾಡಿಕೊಟ್ಟ ನಮ್ಮ ಸರ್ಕಾರಕ್ಕೆ ಧನ್ಯವಾದ ಹೇಳುತ್ತೇನೆ ಎಂದರು.

ನೀರಿಗೆ ರಾಜಕೀಯ ಬೇಡ, ಸಚಿವ ಬೈರತಿ

ಗೌರಿಬಿದನೂರು: ಕುಡಿಯುವ ನೀರು ಪ್ರತಿಯೊಬ್ಬರಿಗೂ ಅವಶ್ಯವಾಗಿ ಬೇಕಾಗಿರುವುದರಿಂದ, ಕುಡಿಯುವ ನೀರಿನ ವಿಚಾರದಲ್ಲಿ ರಾಜೀ ಆಗುವ ಪ್ರಶ್ನೆಯೇ ಇಲ್ಲ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಬೈರತಿ ಸುರೇಶ್ ಸ್ಪಷ್ಟಪಡಿಸಿದರು.

ಅವರು ನಗರದ ಬೈಪಾಸ್ ಸಮೀಪ ವಾಟದ ಹೊಸಹಳ್ಳಿ ಕೆರೆಯ ಮೂಲದಿಂದ ನಗರಕ್ಕೆ ಕುಡಿಯುವ ನೀರು ಪೂರೈಸುವ ಸುಮಾರು 66.60 ಕೋಟಿ ವೆಚ್ಚದ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಿದ್ದರು.ಈ ಯೋಜನೆಯಡಿ ನಾವುಗಳು ಕೆರೆಯಲ್ಲಿನ ಶೇಕಡಾ 40 ನೀರನ್ನು ಮಾತ್ರ ತೆಗೆಯುತ್ತೇವೆ,ಮತ್ತು ಕೆರೆಯಲ್ಲಿ ತುಂಬಿರುವ ಹೂಳನ್ನು ತೆಗೆದು,ಕೆರೆ ಕಟ್ಟೆಯನ್ನು ಭದ್ರ ಪಡಿಸಿ, ನಗರ ಸೇರಿದಂತೆ ಒಟ್ಟು ಎಂಟು ಹಳ್ಳಿಗಳ ವ್ಯಾಪ್ತಿಯ ಸುಮಾರು 83 ಸಾವಿರ ಜನರಿಗೆ ಕುಡಿಯುವ ನೀರನ್ನು ಒದಗಿಸುತ್ತೇವೆ ಎಂದು ತಿಳಿಸಿದರು.

ಶಾಸಕ ಕೆಎಚ್ ಪುಟ್ಟಸ್ವಾಮಿಗೌಡರು,ಜಿಲ್ಲಾ ಉಸ್ತುವಾರಿ ಸಚಿವ ಡಾ ಎಂಸಿ.ಸುಧಾಕರ್,ಲ್ಲಿ ಸಂಸದ ಡಾ ಕೆ ಸುಧಾಕರ್, ನಗರಸಭೆ ಅಧ್ಯಕ್ಷ ಲಕ್ಷ್ಮೀನಾರಾಯಣ್, ಜಿಲ್ಲಾಧಿಕಾರಿ ಪಿಎನ್ ರವೀಂದ್ರ,ಜಿ.ಪಂ ಸಿಇಒ ಡಾ ನವೀನ್ ಬಟ್, ಇದ್ದರು.

ಸಚಿವರಾದ ಬೈರತಿ ಸುರೇಶ್ ಗುದ್ದಲಿ ಪೂಜೆ ನೆರವೇರಿಸಿದರು.

ಬೆನ್ನುಹುರಿ ರೋಗಿಗಳ ತಪಾಸಣೆ

ತುಮಕೂರು: ವಿವಿಧ ಅವಘಡದಿಂದಾಗಿ ಬೆನ್ನುಹುರಿ ಅಪಘಾತಕ್ಕೆ ಒಳಗಾದ ವ್ಯಕ್ತಿಗಳಿಗೆ ವೈದ್ಯಕೀಯ ತಪಾಸಣೆಯನ್ನು ಸಿದ್ಧಗಂಗಾ ವೈದ್ಯಕೀಯ ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು.

ಎಪಿಡಿ ಹಾಗೂ ಅರೇಕಲ್ ಸಂಸ್ಥೆಯ ಸಹಯೋಗದಲ್ಲಿ ನಡೆದ ಶಿಬಿರದಲ್ಲಿ ರೋಗಿಗಳಿಗೆ ಆರೋಗ್ಯ ತಪಾಸಣೆ ನಡೆಸಿ ಮಾರ್ಗದರ್ಶನ ನೀಡಲಾಯಿತು.

ಎಸ್‌ಎಂಸಿಆರ್‌ಐ ನಿರ್ದೇಶಕ ಡಾ.ಎಸ್ .ಪರಮೇಶ್ ಮಾತನಾಡಿ, ಶಿಬಿರದಲ್ಲಿ ತಪಾಸಣೆಗೆ ಒಳಗಾದ ಅನೇಕ ರೋಗಿಗಳಿಗೆ ಮರು ಜೀವನ ನಡೆಸುವ ಶಕ್ತಿ ಬಂದಿರುವುದು ನಮ್ಮ ಸೇವೆಗೆ ಸಾರ್ಥಕಥೆ ತಂದಿದೆ ಎಂದರು.

ವೈದ್ಯಕೀಯ ಮೇಲ್ವಿಚಾರಕ ಡಾ.ನಿರಂಜನ ಮೂರ್ತಿ ಮಾತನಾಡಿ, ಡಾ.ಶಿವಕುಮಾರ ಸ್ವಾಮೀಜಿ ಆಸ್ಪತ್ರೆಯ ಶಸ್ತ್ರಚಿಕಿತ್ಸೆ, ಇತರೆ ವಿಭಾಗದಲ್ಲಿ ಉಚಿತ ಸೇವೆ ನಿರಂತರವಾಗಿದ್ದು ಪ್ರಧಾನಮಂತ್ರಿ ಜನೌಷಧ ಕೂಡ ಔಷಧ ಖರ್ಚು ಕಡಿಮೆ ಮಾಡಿವೆ. ಜನ ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ವಿನಂತಿಸಿದರು. ಎಪಿಡಿ ಸಂಸ್ಥೆಯ ತೇಜಸ್,ಶ್ವೇತ, ಕೀಲುಮೂಳೆ ತಜ್ಞರಾದ ಡಾ.ದುಶ್ಯಂತ್ ಉಪಸ್ಥಿತರಿದ್ದರು.

ಕಾಂತರಾಜು ವರದಿಯಿಂದ ಮಡಿವಾಳ ಸಮಾಜಕ್ಕೆ ನ್ಯಾಯ

ರಾಮನಗರ: ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಎಚ್.ಕಾಂತರಾಜು ಆಯೋಗದ ವರದಿ ಅನುಷ್ಠಾನವಾದರೆ ಮಡಿವಾಳ ಸಮಾಜಕ್ಕೆ ನ್ಯಾಯ ದೊರೆಯಲಿದೆ ಎಂದು ರಾಜ್ಯ ಮಡಿವಾಳ ಸಂಘದ ಅಧ್ಯಕ್ಷ ಪಿ.ನಂಜಪ್ಪ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಮಡಿವಾಳ ಸಂಘದಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಡಾ.ಅನ್ನಪೂರ್ಣ ಆಯೋಗ ವರದಿ ಅನುಸಾರ ಮಡಿವಾಳರನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಕೆಲವರು ತಡೆದರು. ಮಾಚಿದೇವರ ಶಾಪವೋ ಏನೋ ಅವರು ಮನೆಯಲ್ಲೇ ಕುಳಿತುಕೊಳ್ಳುವಂತೆ ಆಯಿತು. ಮಡಿವಾಳ ಸಮಾಜ ಅತ್ಯಂತ ಸಣ್ಣ ಸಮುದಾಯವಾಗಿದ್ದ, ರಾಜಕೀಯ, ಸಾಮಾಜಿಕ ಪ್ರಾತಿನಿಧ್ಯ ದೊರೆತಿಲ್ಲ. ಸೊರಬ ಕ್ಷೇತ್ರ ಹೊರತು ಪಡಿಸಿದರೆ ಬೇರೆ ಕ್ಷೇತ್ರಗಳಲ್ಲಿ ಬೆರಳೆಣಿಕೆಯ ಮತದಾರರು ಇದ್ದಾರೆ. ಆದರೂ ನಮ್ಮ ಸಮಾಜ ಸೇರಿದಂತೆ ಸಣ್ಣಪುಟ್ಟ ಸಮಾಜಗಳ ಮತಗಳು ನಿರ್ಣಾಯಕವಾಗಿವೆ. ಹೀಗಾಗಿ ಮಡಿವಾಳ ಸಮಾಜ ಒಗ್ಗೂಡಬೇಕಿದೆ ಎಂದರು.

ನಮ್ಮ ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸದಿದ್ದರೂ ಚಿಂತೆಯಿಲ್ಲ. ಎಚ್.ಕಾಂತರಾಜ್ ಆಯೋಗದ ವರದಿ ಅನುಷ್ಠಾನಗೊಂಡಲ್ಲಿ ನಮ್ಮ ಸಮಾಜದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ರಾಮನಗರದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಮಡಿವಾಳ ಸಂಘದಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮಡಿವಾಳ ಸಂಘದ ಜಿಲ್ಲಾಧ್ಯಕ್ಷ ಮಂಟೇದಯ್ಯ ಮಾತನಾಡಿ, ಸಣ್ಣ ಸಮುದಾಯವಾದ ಮಡಿವಾಳರು ಶೈಕ್ಷಣಿಕವಾಗಿ ಪ್ರಗತಿ ಹೊಂದಿದಾಗ ಮಾತ್ರ ಸಮಾಜದ ಮುಖ್ಯವಾಹಿನಿಗೆ ಬರಬಹುದು. ಮೊದಲು ನಮ್ಮ ಜನಾಂಗದ ಮಕ್ಕಳು ಸುಶಿಕ್ಷಿತರಾಗಬೇಕು ಎಂದು ಹೇಳಿದರು.

ಈ ವೇಳೆ ರಾಮನಗರ, ಮಾಗಡಿ, ಚನ್ನಪಟ್ಟಣ, ಕನಕಪುರ ಸೇರಿದಂತೆ ವಿವಿಧ ತಾಲ್ಲೂಕಿನ 45ಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಆರ್.ಪ್ರಕಾಶ್, ಗೌರವಾಧ್ಯಕ್ಷ ಬಿ.ರಂಗಸ್ವಾಮಯ್ಯ, ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸತೀಶ್, ಮಾಗಡಿ ತಾ.ಅಧ್ಯಕ್ಷ ಟಿ.ಎಂ.ಶ್ರೀನಿವಾಸ್, ಬಿಸಿಎಂ ಒಕ್ಕೂಟದ ಜಿಲ್ಲಾಧ್ಯಕ್ಷ ರೈಡ ನಾಗರಾಜ್, ಕಾರ್ಯದರ್ಶಿ ನಾರಾಯಣ, ಸಮಾಜದ ಪ್ರಮುಖರಾದ ರಾಜಣ್ಣ, ಪದ್ಮ, ರವಿ, ಭವ್ಯ, ಪಾರ್ವತಮ್ಮ, ಲೋಕೇಶ್, ವೀರಭದ್ರಯ್ಯ, ಹರೀಶ್, ಚಂದ್ರಶೇಖರ್ ಶಿವಕುಮಾರ್, ಸಿದ್ದಗಂಗಯ್ಯ, ಮಂಜುನಾಥ್, ಆಂಜಿನಪ್ಪ, ರವಿಕುಮಾರ್, ಚಿಕ್ಕ ರಾಜ್ ಅಕ್ಷರ್ ಇದ್ದರು.

ಹೆತ್ತ ನೆಲಕ್ಕಾಗಿ ನೆತ್ತರು ಚೆಲ್ಲಿದ ವೀರ ಯೋಧರಿಗೆ ನಮನ

ಬಾಗೇಪಲ್ಲಿ: ಕಾರ್ಗಿಲ್ ವಿಜಯ ದಿನಕ್ಕೆ 26ನೇ ವರ್ಷದ ಸಂಭ್ರಮ. ಭಾರತೀಯ ಸೇನೆಯ ಶೌರ್ಯ, ಸಾಹಸಗಾಥೆ ಎಂದೆಂದಿಗೂ ಪ್ರೇರಣಾದಾಯಕ, ಭಾರತದ ವೀರಯೋಧರ ತ್ಯಾಗ ಮತ್ತು ಬಲಿದಾನ ಸ್ಮರಿಸುವ ಜೊತೆಗೆ ಕಾರ್ಗಿಲ್ ವೀರ ಮರಣ ಹೊಂದಿದ ಯೋಧ ಬಿ.ಎ. ರಫೀವುಲ್ಲಾಗೆ ನಮನಗಳನ್ನು ಸಲ್ಲಸುತ್ತೇವೆ ಎಂದು ಭಾರತೀಯ ನಿವೃತ್ತ ಯೋಧ ಅಮರನಾಥ್ ಬಾಬು ತಿಳಿಸಿದರು.

ಪಟ್ಟಣದ ಡಿ.ಸಿ.ಸಿ.ಬ್ಯಾಂಕ್ ಮುಂದೆ ಕಾರ್ಗಿಲ್ ವೀರ ಅಮರ ಯೋಧ ಬಿ.ಎ.ರಫೀವುಲ್ಲಾ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು

ಅಪ್ರತಿಮ ಶೌರ್ಯ, ದೇಶಭಕ್ತಿಯ ಸ್ಫೂರ್ತಿಯೊಂದಿಗೆ ದೇಶದ ಶತ್ರುಗಳನ್ನು ಸದೆಬಡಿದು, ಭಾರತಾಂಬೆಯ ಘನತೆ ಮುಗಿಲೆತ್ತರಕ್ಕೆ ಹಾರಿಸಿ ಅಮರರಾದ ಕಾರ್ಗಿಲ್ ಯುದ್ಧದ ಹುತಾತ್ಮ ಯೋಧರಿಗೆ ಕಾರ್ಗಿಲ್ ವಿಜಯ ದಿನ ಆಚರಿಸುತ್ತಿದ್ದವೆ ಎಂದು ಹೇಳಿದರು.

ಪುರಸಭೆ ಮಾಜಿ ಅಧ್ಯಕ್ಷ ಬಿ.ಆರ್.ನರಸಿಂಹ ನಾಯ್ಡು ಮಾತನಾಡಿ, 1999 ರಲ್ಲಿ ಆಪರೇಷನ್ ವಿಜಯ್ ಕಾರ್ಯಾಚರಣೆ ವೇಳೆ ಪಾಕಿಸ್ತಾನಿ ಸೈನಿಕರು ಭಾರತದ ಗಡಿಗಳನ್ನು ದಾಟಿ ಎತ್ತರದ ಬೆಟ್ಟದಲ್ಲಿನ ಪೋಸ್ಟ್‌ಗಳನ್ನು ವಶಪಡಿಸಿಕೊಂಡಿತ್ತು. ಅಂದು ಉಗ್ರರ ಸಮೇತ, ಪಾಕಿಸ್ತಾನದ ಸೈನ್ಯವನ್ನು ಹಿಮ್ಮೆಟ್ಟಿ ವಿಜಯದುಂದುಬಿ ಬಾರಿಸಿದೆವು. ಅದೇ ರೀತಿ, ಜಮ್ಮು ಮತ್ತು ಕಾಶ್ಮೀರದಲ್ಲಿ 26 ಜನರನ್ನು ಬಲಿತೆಗೆದುಕೊಂಡ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರದ ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಪಾಕಿಸ್ತಾನಕ್ಕೆ ಮುಟ್ಟಿ ನೋಡಿಕೊಳ್ಳುವಂತೆ ನಮ್ಮ ಯೋಧರು ದಾಳಿ ಮಾಡಿದ್ದಾರೆ ಎಂದು ಹೇಳಿದರು.

ರಫೀವುಲ್ಲಾ ಅವರ ಕುಟುಂಬ ಸದಸ್ಯರಿಂದ ಸಿಹಿ ಹಂಚಲಾಯಿತು. ಪುರಸಭೆ ಮುಖ್ಯಾಧಿಕಾರಿ ಶ್ರೀನಿವಾಸ್, ಅಧ್ಯಕ್ಷ ಎ.ಶ್ರೀನಿವಾಸ್, ಉಪಾಧ್ಯಕ್ಷೆ ಸುಜಾತ ನರಸಿಂಹ ನಾಯ್ಡು, ಸದಸ್ಯರಾದ ನಂಜುಂಡಪ್ಪ, ಶ್ರೀನಿವಾಸ್ ರೆಡ್ಡಿ,ನಿಜಾಮುದ್ದೀನ್ ಬಾಬು,ಮಂಜುನಾಥ, ಇರ್ಫಾನ್ ಖಾನ್ ಇದ್ದರು.



ವೀರ ಅಮರ ಯೋಧ ಬಿ.ಎ.ರಫೀವುಲ್ಲಾ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಾಯಿತು.

ಜಮೀನಿಗಾಗಿ ಮಾಜಿ ಸೈನಿಕನ ಸತ್ಯಾಗ್ರಹ

ಜಮೀನಿಗಾಗಿ ಮಾಜಿ ಸೈನಿಕ ಕುಟುಂಬ ಸತ್ಯಾಗ್ರಹ ಆರಂಭಿಸಿದರು.

ಚಿಂತಾಮಣಿ: ದೇಶಾದ್ಯಂತ ಕಾರ್ಗಿಲ್ ವಿಜಯೋತ್ಸವ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಆದರೆ ಇಲ್ಲಿ ಒಬ್ಬ ಮಾಜಿ ಸೈನಿಕ ನಿವೃತ್ತಿ ಯ ನಂತರ ತನಗೆ ನೀಡಬೇಕಾದ ಜಮೀನನ್ನು ಸಂಬಂಧಪಟ್ಟ ಅಧಿಕಾರಿಗಳು ನೀಡಿಲ್ಲ ಎಂದು ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ

ನಗರದ ತಾಲೂಕು ಕಚೇರಿ ಆವರಣದಲ್ಲಿ ಶನಿವಾರ ಬೆಳಗ್ಗೆ 11ಗಂಟೆಯಿಂದ ಉಪವಾಸ ಕುಳಿತು ಜಿಲ್ಲಾಡಳಿತದ ಗಮನ ಸೆಳೆದಿದ್ದಾರೆ. ಇವರು ಸೇನೆಯಿಂದ ನಿವೃತ್ತರಾಗಿ ಸುಮಾರು 26 ವರ್ಷಗಳು ಕಳೆದರೂ ಜಿಲ್ಲಾಡಳಿತ ಇವರಿಗೆ ಭೂಮಿ ನೀಡಿಲ್ಲ. ಜಮೀನಿಗಾಗಿ 26 ವರ್ಷಗಳಿಂದ ಹೋರಾಟ ಮಾಡುತ್ತಿರುವ ತಾಲೂಕಿನ ಅಂಬಾಜಿ ದುರ್ಗಾ ಹೋಬಳಿಯ ರಾಯಪಲ್ಲಿ ಗ್ರಾಮದ ಶಿವಾನಂದ ರೆಡ್ಡಿ ತನ್ನ ಪತ್ನಿ ಸಮೇತ ನ್ಯಾಯಕ್ಕಾಗಿ ಈಗ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ.

ಶಿವಾನಂದರೆಡ್ಡಿ ಸೇವೆ ಸಲ್ಲಿಸುವಾಗ ಗಡಿ ಭಾಗದಲ್ಲಿ ನಡೆದ ಅಪಘಾತದಲ್ಲಿ ಅಂಗವಿಕಲರಾಗಿದರು. ಕಾಲಿಗೆ ತೀವ್ರ ಪೆಟ್ಟಾದ ಕಾರಣ ಸೇನೆಯಿಂದ ಕಡ್ಡಾಯ ನಿವೃತ್ತಿ ಪಡೆಯಬೇಕಾಯಿತು. ಈತನಿಗೆ ಜಮೀನು ಮಂಜೂರು ಮಾಡುವಂತೆ ಸೇನಾಡಳಿತ ರಾಜ್ಯ ಸರಕಾರಕ್ಕೆ ಸೂಚಿಸಿದೆ. ಆದರೆ ಇದುವರೆಗೆ ಜಮೀನು ಸಿಕ್ಕಿಲ್ಲ.ಕಳೆದ 24 ವರ್ಷಗಳಿಂದ ಹೋರಾಟ ನಡೆಸಿ ಮುಖ್ಯಮಂತ್ರಿ, ಸಚಿವರು, ಡಿಸಿ, ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಹಾಗಾಗಿ ನಿರಶನ ಆರಂಭಿಸಿದ್ದೇನೆ. ನನಗೆ ಜಮೀನು ಸಿಗುವವರೆಗೂ ಸತ್ಯಾಗ್ರಹವನ್ನು ಮುಂದುವರಿಸುತ್ತೇನೆ ಎಂದು ಹೇಳಿದರು.

ಟ್ಯಾಂಕ್ ಸ್ವಚ್ಛತೆ ಕಡ್ಡಾಯ: ಸಿಇಒ

ಚಿಕ್ಕಬಳ್ಳಾಪುರ: ಗ್ರಾಮೀಣ ಪ್ರದೇಶದಲ್ಲಿ ಜಲ್ ಜೀವನ್ ಮಿಷನ್‌ನಿಂದ ನಿರ್ಮಿಸಿರುವ ಓವರ್ ಹೆಡ್ ಟ್ಯಾಂಕ್ ಗಳನ್ನು ಪ್ರತಿ ತಿಂಗಳಿಗೊಮ್ಮೆ ಶುಚಿಗೊಳಿಸಬೇಕು. ಈ ಬಗ್ಗೆ ಟ್ಯಾಂಕ್ ಮೇಲೆ ಮುದ್ರಿಸಬೇಕು. ಹೊಸ ಟ್ಯಾಂಕ್ ಕಾಮಗಾರಿಗಳನ್ನು ಗುಣಮಟ್ಟದಿಂದ ಮಾಡಬೇಕು ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ನವೀನ್ ಭಟ್.ವೈ. ಎಂಜಿನಿಯರ್ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು.

ಚಿಕ್ಕಬಳ್ಳಾಪುರ, ಮಂಚೇನಹಳ್ಳಿ ತಾಲೂಕುಗಳ ವಿವಿಧ ಗ್ರಾಮಗಳಲ್ಲಿ ಜಲ್ ಜೀವನ್ ಮಿಷನ್, ನರೇಗಾ ಹಾಗೂ ಸ್ವಚ್ಛ ಭಾರತ್ ಮಿಷನ್ ಯೋಜನೆಯ ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿ ಮಾತನಾಡಿದರು.

ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಗಳ ಸಭೆಯನ್ನು ಕರೆದು ಗ್ರಾಮದ ನೀರು ಮತ್ತು ನೈರ್ಮಲ್ಯ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು. ಶುದ್ಧ ಕುಡಿಯುವ ನೀರನ್ನು ಪೂರೈಕೆ ಮಾಡಬೇಕು. ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಎಫ್‌ಟಿಕೆ ಮೂಲಕ ನೀರು ಪರೀಕ್ಷೆ ಮಾಡಿಸಬೇಕು. ಕೆಟ್ಟು ಹೋಗಿರುವ ಗೇಟ್ ವಾಲ್‌ಗಳನ್ನು ತಕ್ಷಣವೇ ಬದಲಾಯಿಸಬೇಕು ಎಂದು ಸೂಚಿಸಿದರು.

ಪೆರೇಸಂದ್ರ ಗ್ರಾಮದಲ್ಲಿ ಜಲ್ ಜೀವನ್ ಮೀಷನ್ ಯೋಜನೆಯ ಕಾಮಗಾರಿ ವಿಳಂಬವಾಗಿದೆ, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಕಾರ್ಯಪಾಲಕ ಅಭಿಯಂತರರಿಗೆ ಆದೇಶಿಸಿದರು.

ನಂತರ ಗ್ರಾಮದ ಡಿಜಿಟಲ್ ಲೈಬ್ರರಿಗೆ ಭೇಟಿ ನೀಡಿ ಪರಿಶೀಲಿಸಿದರು.ನಂತರ ಮಂಚೇನಹಳ್ಳಿ ತಾಲ್ಲೂಕಿನ ಗೌಡಗೆರೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದರು. ಮುಂದಿನ ಅಕ್ಟೋಬರ್ 2 ರ ಗಾಂಧಿ ಜಯಂತಿ ವೇಳೆಗೆ ಸಂಪೂರ್ಣ ಕಾಮಗಾರಿ ಪೂರ್ಣಗೊಳಿಸಿ ಎಂದು ಸೂಚಿಸಿದರು.

ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ರಾಮಕೃಷ್ಣಪ್ಪ, ಚಿಕ್ಕಬಳ್ಳಾಪುರ ತಾಪಂ ಇಒ ಮಂಜುನಾಥ್, ಗೌರಿಬಿದನೂರು ಇಒ ಹೊನ್ನಯ್ಯ, ಎಇಇಗಳು, ಪಿಡಿಒಗಳು, ಎಎಒ, ನರೇಗಾ ಜಿಲ್ಲಾ ಸಮಾಲೋಚಕರು ಉಪಸ್ಥಿತರಿದ್ದರು.

ಟ್ಯಾಂಕ್ ಹತ್ತಿ ಸ್ವಚ್ಛತೆ ವೀಕ್ಷಿಸಿದ ಸಿಇಒ !

ಚಿಕ್ಕಬಳ್ಳಾಪುರ ತಾಲೂಕಿನ ಪೆರೇಸಂದ್ರ ಗ್ರಾಮ ಪಂಚಾಯಿತಿಯ ತಿಪ್ಪಾರೆಡ್ಡಿ ನಾಗೇನಹಳ್ಳಿಯಲ್ಲಿ ಜಲ್ ಜೀವನ್ ಮಿಷನ್ ಯೋಜನೆಯಡಿ ನಿರ್ಮಾಣ ಮಾಡಲಾದ ಓವರ್ ಹೆಡ್ ಟ್ಯಾಂಕ್ ನ್ನು ಜಿಪಂ ಸಿಇಒ ಹತ್ತಿ ಟ್ಯಾಂಕ್ ನ ಗುಣಮಟ್ಟ ಹಾಗೂ ಶುಚಿತ್ವದ ಬಗ್ಗೆ ಪರಿಶೀಲಿಸಿ ಖಾತ್ರಿ ಪಡಿಸಿಕೊಂಡರು.

ಕಾರ್ಗಿಲ್: ಯೋಧರಿಗೆ ಸನ್ಮಾನಿಸಿದ ಬಿಜೆಪಿ

ಮಧುಗಿರಿ: ನಗರದ ಡೂಮ್ ಲೈಟ್ ಸರ್ಕಲ್ ಬಳಿ ಬಿಜೆಪಿ ಮಂಡಳದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಸೇರಿ ಶನಿವಾರ ಕಾರ್ಗಿಲ್ ವಿಜಯ್ ದಿವಸ ಆಚರಿಸಿದರು. ಬಿಜೆಪಿ ಮಧುಗಿರಿ ಮಂಡಲ ಅಧ್ಯಕ್ಷ ಹಾಗೂ ವಕೀಲರಾದ ಹನುಮಂತರೆಡ್ಡಿ ರವರ ಅಧ್ಯಕ್ಷತೆಯಲ್ಲಿ ಪಕ್ಷದ ಕಚೇರಿಯಲ್ಲಿ ನಿವೃತ್ತ ಯೋಧರುಗಳಾದ ಐ.ಡಿ.ಹಳ್ಳಿ ಚಂದ್ರಶೇಖರರೆಡ್ಡಿ,ಚಿಕಿರಯ್ಯ, ಪ್ರಭಾಕರ್ ಇವರುಗಳಿಗೆ ಸನ್ಮಾನಿಸಿ ಗೌರವಿಸಿದರು. ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜು, ಎಸ್.ಆರ್. ರಮೇಶ್, ಬಿಜೆಪಿ ಮಾಜಿ ಅಧ್ಯಕ್ಷರಾದ ನಾಗೇಂದ್ರಪ್ಪ, ಪಾಂಡುರಂಗರೆಡ್ಡಿ, ಪದಾಧಿಕಾರಿಗಳಾದ, ಚಿ.ಸೂ.ಕೃಷ್ಣ ಮೂರ್ತಿ, ಸುರೇಶ್, ರವಿ ಆರ್, ದೇವರಾಜು, ನರಸೇಗೌಡ, ಮಂಜುನಾಥ್, ವಿವೇಕಾನಂದಪ್ಪ, ಕೃಷ್ಣಮೂರ್ತಿ, ಗಂಗಾಧರ್, ಅನಿಲ್ ಕುಮಾರ್, ರಂಗನಾಥ್, ಅಶೋಕ್ ಹಾಗೂ ಕಾರ್ಯಕರ್ತರು, ಸಾರ್ವಜನಿಕರು ಉಪಸ್ಥಿತರಿದ್ದರು.

ಉತ್ತಮ ಬದುಕು ರೂಪಿಸುವ ಶಿಕ್ಷಣ: ಸಚಿವ ಡಿ.ಸುಧಾಕರ್

ತುಮಕೂರು: ಉತ್ತಮ ವ್ಯಕ್ತಿತ್ವ, ಬದುಕು ರೂಪಿಸಿಕೊಳ್ಳಲು ಶಿಕ್ಷಣ ಬಹಳ ಮುಖ್ಯ. ಪ್ರಸ್ತುತ ಸಂದರ್ಭದಲ್ಲಿ ಮಕ್ಕಳ ಶಿಕ್ಷಣಕ್ಕೆ ಮಹತ್ವ ಕೊಡುವುದು ಅಗತ್ಯ ಎಂದು ಯೋಜನೆ ಮತ್ತು ಸಾಂಖ್ಯಿಕ ಖಾತೆ ಸಚಿವ ಡಿ.ಸುಧಾಕರ್ ಹೇಳಿದರು.

ನಗರದಲ್ಲಿ ಶನಿವಾರ ನಡೆದ ಆರ್‌ಎಂಆರ್ ಹಳ್ಳಿಕಾರ ಫೌಂಡೇಷನ್ ಟ್ರಸ್ಟ್ ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಯ ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಆರ್‌ಎಂಆರ್ ಹಳ್ಳಿಕಾರ ಫೌಂಡೇಷನ್ ಟ್ರಸ್ಟ್ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ವಿಚಾರ. ಹಳ್ಳಿಕಾರ ಸಮಾಜದಿಂದ ಶಿಕ್ಷಣ ಸಂಸ್ಥೆ, ವಿದ್ಯಾರ್ಥಿನಿಲಯ, ಸಮುದಾಯ ಭವನ ನಿರ್ಮಾಣಕ್ಕೆ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಹಿರಿಯೂರು, ಚಳ್ಳಕೆರೆಯಲ್ಲಿ ಮೂರು ಎಕರೆ ಜಮೀನು ಕೇಳಿದ್ದಾರೆ. ಜಮೀನು ಕೊಟ್ಟು ಕಟ್ಟಡಗಳ ನಿರ್ಮಾಣಕ್ಕೆ ಅನುದಾನವನ್ನೂ ನೀಡುವುದಾಗಿ ಭರವಸೆ ನೀಡಿದರು.

ರಾಜ್ಯ ಗ್ಯಾರಂಟಿಗಳ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಮಾತನಾಡಿ, ರಾಜಕೀಯ ಅಧಿಕಾರ ಪಡೆಯುವ ಅವಕಾಶ ಬಂದರೂ ಕೆ.ಎಂ.ನಾಗರಾಜು ಅವರು ತಿರಸ್ಕಾರ ಮಾಡಿ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ. ಅನೇಕ ನಾಯಕರನ್ನು ತಯಾರು ಮಾಡಿರುವ ಇವರು ಅಧಿಕಾರದಿಂದ ಹೊರಗುಳಿದಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಹಾಯ ಮಾಡುವ ಸೇವೆಗೆ ಆದ್ಯತೆ ನೀಡಿರುವುದು ಅಭಿನಂದನೀಯ ಎಂದು ಹೇಳಿದರು.

ಟ್ರಸ್ಟ್ ಅಧ್ಯಕ್ಷ ಕೆ.ಎಂ.ನಾಗರಾಜು ಮಾತನಾಡಿ, ವಿದ್ಯೆಯನ್ನು ಶ್ರದ್ಧೆ, ಆಸಕ್ತಿಯಿಂದ ಕಲಿತು ತಮ್ಮ ಕುಟುಂಬ, ಮನೆತನದ ಗೌರವ ಎತ್ತಿ ಹಿಡಿಯಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಅಗತ್ಯವಿದ್ದವರಿಗೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದರು.

ಈ ವೇಳೆ ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಯ 239 ವಿದ್ಯಾರ್ಥಿಗಳಿಗೆ ತಲಾ ಐದು ಸಾವಿರ ರೂ. ನಂತೆ ಒಟ್ಟು 11.90 ಲಕ್ಷ ರೂ.ಗಳ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಕಾಂಗ್ರೆಸ್ ಮುಖಂಡ ಸಂಜಯ್ ಜಯಚಂದ್ರ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಚಿಕ್ಕನಾಯಕನಹಳ್ಳಿ ಪುರಸಭೆ ಮಾಜಿ ಅಧ್ಯಕ್ಷ ನಾರಾಯಣಮೂರ್ತಿ, ಟ್ರಸ್ಟ್ ಕಾರ್ಯದರ್ಶಿ ಮಹಾಲಿಂಗಯ್ಯ ಇದ್ದರು.

ತುಮಕೂರಿನಲ್ಲಿ ಆರ್‌ಎಂಆರ್ ಹಳ್ಳಿಕಾರ ಫೌಂಡೇಷನ್ ಟ್ರಸ್ಟ್ ನಿಂದ ಚಿತ್ರದುರ್ಗ ಜಿಲ್ಲೆಯ ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ನಡೆಯಿತು.

ಉನ್ನತ ಶಿಕ್ಷಣಕ್ಕಾಗಿ ಟ್ರಸ್ಟ್ ಸಹಾಯ ಹಸ್ತ

ಚಳ್ಳಕೆರೆ ಕ್ಷೇತ್ರದ ಶಾಸಕ ರಘುಮೂರ್ತಿ ಮಾತನಾಡಿ, ಸಮಾಜ ಸುಧಾರಣೆಗೆ ಶಿಕ್ಷಣವೇ ಅಸ್ತ್ರ, ಹಿಂದುಳಿದಿರುವ ಹಳ್ಳಿಕಾರ ಸಮುದಾಯದ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಟ್ರಸ್ಟ್ ಅಧ್ಯಕ್ಷ ನಾಗರಾಜು ಅವರ ಕುಟುಂಬ ಸಹಾಯ ಹಸ್ತ ಚಾಚಿದೆ. ಯಾವುದೇ ಸಮಾಜದಲ್ಲಿ ಮಕ್ಕಳ ಶಿಕ್ಷಣಕ್ಕಾಗಿ ಇಷ್ಟೊಂದು ನೆರವು ದೊರಕಿಲ್ಲ ಎಂದು ಅಭಿನಂದಿಸಿದರು.

ಸಮಾಚಾರ ಸಣ್ಣದಲ್ಲ

ಕಾರ್ ಮೇಲೆ ಲಾರಿ ಪಲ್ಟಿ ಇಬ್ಬರು ಸಾವು

ಬಾಗಲಕೋಟೆ: ಎದುರಿಗೆ ಬಂದ ಬೈಕ್ ತಪ್ಪಿಸಲು ಹೋಗಿ ನಿಯಂತ್ರಣ ಕಳೆದುಕೊಂಡ ಲಾರಿ ಎದುರಿಗೆ ಬರುತ್ತಿದ್ದ ಕಾರು ಹಾಗೂ ಬೈಕ್ ಮೇಲೆ ಬಿದ್ದ ಪರಿಣಾಮ ಸ್ಥಳದಲ್ಲೇ ಇಬ್ಬರು ಮೃತಪಟ್ಟ ಘಟನೆ ಸಮೀಪದ ರಾಷ್ಟ್ರೀಯ ಹೆದ್ದಾರಿ 218ರಲ್ಲಿ ಜರುಗಿದೆ. ಗದ್ದನಕೇರಿಯ ನಿವಾಸಿ ಅಕ್ಬರ್ (35) ಹಾಗೂ ಕೇಸನೂರ ಗ್ರಾಪಂ ಸದಸ್ಯ ರಮೇಶ ಹೂಗಾರ (45) ಮೃತ ದುರ್ದೈವಿಗಳು. ಸಮೀಪದ ಹುಬ್ಬಳ್ಳಿ-ಸೋಲಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ವಿಜಯಪುರದತ್ತ ಹೊರಟಿದ್ದ ಗೂಡ್ಸ್ ಲಾರಿಗೆ ಬೈಕ್ ಗೆ ಅಡ್ಡ ಪರಿಣಾಮ ಅದನ್ನು ತಪ್ಪಿಸಲು ಹೋದ ಲಾರಿ ಚಾಲಕನ ನಿಯಂತ್ರಣ ತಪ್ಪಿ ಹುಬ್ಬಳ್ಳಿ ಕಡೆಗೆ ತೆರಳುತ್ತಿದ್ದ ಕಾರು ಮೇಲೆ ಪಲ್ಟಿಯಾಗಿ ಬೈಕ್‌ಗೂ ಡಿಕ್ಕಿ ಹೊಡೆದಿದೆ. ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಬೈಕ್‌ನಲ್ಲಿದ್ದ ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಲಾದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇಶ ವಿರೋಧಿ ಚಟುವಟಿಕೆ ವಶಕ್ಕೆ

ಕೋಲಾರ: ದೇಶ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ ಹಾಗೂ ಕೆಲವೊಂದು ಉಗ್ರವಾದಿ ಸಂಘಟನೆಗಳ ಕುರಿತ ಪೋಸ್ಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಆರೋಪದಡಿಯಲ್ಲಿ ಅಪ್ರಾಪ್ತ ಬಾಲಕನನ್ನು ಆಂತರಿಕ ಭದ್ರತಾ ಅಧಿಕಾರಿಗಳು ಮತ್ತು ಕೇಂದ್ರ ಗುಪ್ತಚರ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. 15 ವರ್ಷದ ಬಾಲಕನೊಬ್ಬ ಕೆಲವೊಂದು ಉಗ್ರಗಾಮಿ ಸಂಘಟನೆಗೆ ಸಂಬಂಧಿಸಿದಂತೆ ಕೆಲವೊಂದು ಪೋಸ್ಟ್‌ಗಳನ್ನು ಹಂಚಿಕೊಂಡಿದ್ದ. ಅಲ್ಲದೆ ಪದೇ ಪದೇ ಉಗ್ರಗಾಮಿ ಸಂಘಟನೆಯ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಹುಡುಕಾಡುತ್ತಿದ್ದ ಹಿನ್ನೆಲೆ ಅಧಿಕಾರಿಗಳು ಆತನನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಒಂದು ಇಡೀ ದಿನ ಆತನನ್ನು ವಿಚಾರಣೆ ನಡೆಸಿ ನಂತರ ಆತನನ್ನು ಕೋಲಾರ ಜಿಲ್ಲೆಯ ಬೇತಮಂಗಲ ಪೊಲೀಸರ ವಶಕ್ಕೆ ನೀಡಲಾಗಿದೆ. ಬಾಲಕ ಮೂಲತಃ ಆಂಧ್ರ ಮೂಲದವ. ಕಳೆದ ಹಲವು ವರ್ಷಗಳ ಹಿಂದೆಯೇ ಆಂಧ್ರದ ರಾಮಕುಪ್ಪಂ ತೊರೆದು ಬೆಂಗಳೂರಿನ ಮೇಡಹಳ್ಳಿಯಲ್ಲಿ ಕೆಲಸ ಮಾಡಿಕೊಂಡಿದ್ದ. ಇತ್ತೀಚೆಗೆ ಕುಟುಂಬ ಕೋಲಾರ ಜಿಲ್ಲೆ ಕೆಜಿಎಫ್ ತಾಲೂಕು ಬೇತಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.

ಜೋಶಿ ಕಚೇರಿ ಎದುರು ಜು.31ಕ್ಕೆ ಹೋರಾಟ

ಹುಬ್ಬಳ್ಳಿ: ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು, ಮಹದಾಯಿ, ಕಳಸಾ ಬಂಡೂರಿ ಯೋಜನೆಗೆ ಪರಿಸರ ಇಲಾಖೆಯ ಅನುಮತಿ ಕೊಡಿಸಬೇಕು ಎಂದು ಆಗ್ರಹಿಸಿ ಜು. 31 ರಂದು ಸಚಿವರ ಕಚೇರಿ

ಎದುರು ನಿರಂತರ ಹೋರಾಟ ನಡೆಸಲಾಗುವುದು ಕಳಸಾ ಬಂಡೂರಿ ಹಾಗೂ ಮಹದಾಯಿ ಹೋರಾಟ ಸಮಿತಿ ಅಧ್ಯಕ್ಷ ಸಿದ್ದಣ್ಣ ತೇಜಿ ಹೇಳಿದ್ದಾರೆ. ನಗರದಲ್ಲಿ ಮಹದಾಯಿ ಹೋರಾಟದ ಕುರಿತಂತೆ ಸಭೆ ನಡೆಸಿ ಬಳಿಕ ಮಾತನಾಡಿದ ಅವರು, ಮಹದಾಯಿ ನ್ಯಾಯಾಧೀಕರಣ ತೀರ್ಪು ನೀಡಿದೆ. ನೀರಿನ ಹಂಚಿಕೆಯಾಗಿದೆ. ನೀರಿನ ಬಳಕೆಗೆ ಅನುಮತಿ ನಿಟ್ಟಿನಲ್ಲಿ ಎದುರಾಗಿರುವ ಸಮಸ್ಯೆ ಪರಿಹಾರಕ್ಕೆ ಸಂಸದ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕ್ರಮ ವಹಿಸಿಲ್ಲ. ಹೀಗಾಗಿ ಹುಬ್ಬಳ್ಳಿಯ ಚಿಟಗುಪ್ಪಿ ಆಸ್ಪತ್ರೆಯ ಬಳಿ ಇರುವ ಪ್ರಲ್ಹಾದ್ ಜೋಶಿ ಅವರ ಕಚೇರಿ ಎದುರು ನಿರಂತರ ಪ್ರತಿಭಟನೆ ನಡೆಸಲಾಗುವುದು ಎಂದರು. ಉತ್ತರ ಕರ್ನಾಟಕ ಭಾಗದ ಕುಡಿಯುವ ನೀರಿಗಾಗಿ 1965 ರಿಂದ 2025ರ ವರೆಗೆ ನಾಲ್ಕು ಜಿಲ್ಲೆಯ 13 ತಾಲೂಕುಗಳ ಜನ ಹೋರಾಟ ಮಾಡುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಗು ಚೂಟುವುದು, ತೊಟ್ಟಿಲು ತೂಗುವುದು ಮಾಡಿಕೊಂಡು ಬಂದಿದ್ದಾರೆ ಎಂದು ಟೀಕಿಸಿದರು.

ಕಾವೇರಿ ನದಿಯಂತೆ ಕೃಷ್ಣೆಗೂ ಐತೀರ್ಪು ಬರಲಿ

ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ರಜತ ಮಹೋತ್ಸವದಲ್ಲಿ ಕೃಷ್ಣಾ ನ್ಯಾಯಾಧೀಕರಣದ ಕುರಿತು ಎಚ್.ಕೆ.ಪಾಟೀಲ ಹೇಳಿಕೆ

ಬಾಗಲಕೋಟೆ: ಕಾವೇರಿ, ಕೃಷ್ಣೆ ಹಾಗೂ ಮಹದಾಯಿಗೊಂದು ನ್ಯಾಯ ಎಂಬುವುದನ್ನು ಬಿಡಿ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಇದ್ದಾಗಲೇ ಕಾವೇರಿ ವಿಷಯದಲ್ಲಿ ಕೇಂದ್ರ ಸರಕಾರ ಐ-ತೀರ್ಪು ಅಧಿಸೂಚನೆಗೆ ಒಪ್ಪಿಗೆ ನೀಡಿತ್ತು. ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ವಿಷಯದಲ್ಲಿ ಈ ನಿರ್ಧಾರ ಬರಬೇಕಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಜಿಲ್ಲೆಯ ಬೀಳಗಿ ತಾಲೂಕಿನ ಬಾಡಗಂಡಿ ಗ್ರಾಮದಲ್ಲಿ ಎಸ್.ಆರ್.ಪಾಟೀಲ ಸಮೂಹ ಸಂಸ್ಥೆಗಳಡಿ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತದ ರಜತ ಮಹೋತ್ಸವದ ಅಂಗವಾಗಿ ಬ್ಯಾಂಕಿನ ನವೀಕೃತ ಕಟ್ಟಡ, ಶಾಖಾ ನೂತನ ಕಟ್ಟಡ ಮತ್ತು ಎಸ್.ಆರ್.ಪಾಟೀಲ ಶಿಕ್ಷಣ ಪ್ರತಿಷ್ಠಾನದ ವಿವಿಧ ಕಟ್ಟಡಗಳ ಉದ್ಘಾಟನೆ ಹಾಗೂ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯುಕೆಪಿ ಕುರಿತು 2010ರಲ್ಲಿ ಟ್ರಿಬ್ಯುನಲ್ ನೇಮಕ ಮಾಡಲಾಗಿತ್ತು. 2040ರ ಒಳಗಾಗಿ 130 ಟಿಎಂಸಿ ನೀರು ಬಳಸಿಕೊಳ್ಳುವಂತೆ ಕರ್ನಾಟಕಕ್ಕೆ 2014ರಲ್ಲಿ ಐ-ತೀರ್ಪು ಬಂದಿದೆ. ತೀರ್ಪು ಬಂದು 15 ವರ್ಷಗಳಾದರೂ ಇದಕ್ಕೆ ಕೇಂದ್ರ ಸರಕಾರ ಅಧಿಸೂಚನೆಗೆ ಮುಂದಾಗಿಲ್ಲ ಎನ್ನುವುದು ದುರ್ದೈವ. ಮುಂದಿನ ಕೇವಲ 15 ವರ್ಷ ಬಾಕಿ ಉಳಿದಿದ್ದು, ಈ ಬಗ್ಗೆ ಧ್ವನಿ ಎತ್ತಬೇಕಿದೆ. ಈ ಬಗ್ಗೆ ಸಂಸದ ಪಿ.ಸಿ.ಗದ್ದಿಗೌಡರ ಅವರು ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದು ಮನವಿ ಮಾಡಿದರು.

ಕೃಷ್ಣಾ ಮೇಲ್ದಂಡೆ ಯೋಜನೆ ರೈತರ ಕ್ರಾಂತಿಕಾರ ಬದಲಾವಣೆ ತರುವ ರಾಜ್ಯದ ಪ್ರತಿಷ್ಠಿತ ಯೋಜನೆಯಾಗಿದೆ. ಈ ಯೋಜನೆ ಪೂರ್ಣಗೊಳಿಸಲು ರಾಜ್ಯ ಸರಕಾರ ಬದ್ಧವಾಗಿದೆ. ಸರಕಾರದ ಇತಿಮಿತಿಯಲ್ಲಿ ಕನ್ಸಂಟ್ ಅವಾರ್ಡ್ ಮೂಲಕ ಯೋಜನೆ ಪೂರ್ಣಗೊಳಿಸುವ ಬಗ್ಗೆ ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಸಚಿವ ಆರ್.ಬಿ.ತಿಮ್ಮಾಪುರ ಮಾತನಾಡಿ, ಮಾಜಿ ಸಚಿವ ಎಸ್.ಆರ್.ಪಾಟೀಲ ಅವರು ಸದನದಲ್ಲಿ ಸತತ ಮೂರ್ನಾಲ್ಕು ಗಂಟೆ

ಬಾಡಗಂಡಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಎಸ್.ಆರ್.ಪಾಟೀಲ ಸಮೂಹ ಸಂಸ್ಥೆಗಳಡಿ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತದ ರಜತ ಮಹೋತ್ಸವದ ಅಂಗವಾಗಿ ಬ್ಯಾಂಕಿನ ನವೀಕೃತ ಕಟ್ಟಡ, ಶಾಖಾ ನೂತನ ಕಟ್ಟಡ ಮತ್ತು ಎಸ್.ಆರ್.ಪಾಟೀಲ ಶಿಕ್ಷಣ ಪ್ರತಿಷ್ಠಾನದ ವಿವಿಧ ಕಟ್ಟಡಗಳ ಉದ್ಘಾಟನೆ ಹಾಗೂ ಶಿಲಾನ್ಯಾಸ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

> ಮಾಜಿ ಸಚಿವ ಎಸ್.ಆರ್.ಪಾಟೀಲ ಅವರು ವಿಧಾನ ಪರಿಷತ್ ಸದಸ್ಯರಾಗಿದ್ದಾಗ ಯುಕೆಪಿ ಬಗ್ಗೆ 10 ವರ್ಷಗಳವರೆಗೆ ಮಾತನಾಡಿದ್ದಾರೆ. ಅದರ ಫಲವಾಗಿ ಇಂದು ಯೋಜನೆ ಅಂತಿಮ ಘಟ್ಟಕ್ಕೆ ಬಂದು ನಿಂತಿದೆ.
> -**ಸತೀಶ ಜಾರಕಿಹೊಳಿ** ಸಚಿವ

> ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಳಪಡುವ ಭೂಸ್ವಾಧೀನ ಏಕಕಾಲಕ್ಕೆ ತೆಗೆದುಕೊಳ್ಳುವ ನಿರ್ಧಾರಕ್ಕೆ ಸಿಎಂ ಮುಂದಾಗಿದ್ದಾರೆ. ರಾಜ್ಯ ಹಾಗೂ ಕೇಂದ್ರ ಸರಕಾರಗಳು ಸೇರಿ ಪೂರ್ಣಗೊಳಿಸುವ ಕೆಲಸ ಮಾಡಬೇಕು. ಕೇಂದ್ರ ಸರಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸಿದರೆ, ಬಂಜರು ಜಮೀನು ಬಂಗಾರದ ಕಡ್ಡಿಯಾಗಲಿದೆ.
> -**ಶಿವಾನಂದ ಪಾಟೀಲ** ಸಚಿವ

ಯುಕೆಪಿ, ಇದರ ಬಾಧಿತ ಸಂತ್ರಸ್ತರು, ಅವರ ಕಷ್ಟಗಳ ಬಗ್ಗೆ ಮಾತನಾಡುತ್ತಿದ್ದರು. ಯುಕೆಪಿಗೆ ಸಾಧ್ಯ ಇರುವುದನ್ನು ಮಾಡುವ ಬದ್ಧತೆ ನಮ್ಮ ಸರಕಾರಕ್ಕಿದೆ ಎಂದರು.

ಸಚಿವ ಕೆ.ಎಚ್.ಮುನಿಯಪ್ಪ ಹಾಗೂ ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿದರು. ಶಾಸಕರಾದ ಎಚ್.ವೈ.ಮೇಟಿ ಹಾಗೂ ಭೀಮಸೇನ ಚಿಮ್ಮನಕಟ್ಟಿ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ ಹಾಗೂ ಹನುಮಂತ ನಿರಾಣಿ, ಮಾಜಿ ಸಚಿವ ಎಸ್.ಆರ್.ಪಾಟೀಲ ಸೇರಿದಂತೆ ಇತರರಿದ್ದರು.

ಬಿಜೆಪಿಯಿಂದ ರೈತಪರ ಹೋರಾಟ: ವಿಜಯೇಂದ್ರ

ಬೇಡಿಕೆಗಿಂತ ಹೆಚ್ಚು ಕೇಂದ್ರದಿಂದ ರಾಜ್ಯಕ್ಕೆ ಗೊಬ್ಬರ ಪೂರೈಕೆ

ಬೆಂಗಳೂರು: ರಾಜ್ಯ ಸರಕಾರ ರಸಗೊಬ್ಬರ ವಿಚಾರದಲ್ಲಿ ಪೂರ್ವತಯಾರಿ ಮಾಡಿಲ್ಲ. ತೊಗರಿ ಬೆಳೆಯುವ ಕಲಬುರಗಿ, ಬೇರೆ ಬೇರೆ ಬೆಳೆ ಬೆಳೆಯುವ ಗದಗ, ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ರಸಗೊಬ್ಬರ ಬೇಕೆಂಬ ಪೂರ್ವಾಪರ ಲೆಕ್ಕಾಚಾರ ಇಲ್ಲದೇ ರೈತರಿಗೆ ಆತಂಕದ ಸ್ಥಿತಿ ಉಂಟಾಗಿದೆ ಎಂದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

> ಜುಲೈ ಅಂತ್ಯಕ್ಕೆ ಕೇಂದ್ರದಿಂದ 8,73,000 ಮೆಟ್ರಿಕ್ ಟನ್ ರಸಗೊಬ್ಬರ ರಾಜ್ಯಕ್ಕೆ ಬಂದಿದೆ. ನಮ್ಮ ನಿರೀಕ್ಷೆ ಇದ್ದುದು 6,31,000 ಮೆ. ಟನ್. ರಾಜ್ಯ ಸರಕಾರದ ಆಪೇಕ್ಷೆ ಮೀರಿ ರಸಗೊಬ್ಬರ ರಾಜ್ಯಕ್ಕೆ ಬಂದಿದೆ.
> - **ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

ಸುದ್ದಿಗಾರರೊಂದಿಗೆ ಮಾತನಾಡಿ, ದುಪ್ಪಟ್ಟು ದರದಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಮಾರಾಟವಾಗುತ್ತಿದೆ. ಕಳ್ಳದಂಧೆಯೂ ನಡೆಯುತ್ತಿದೆ. ಕಾಂಗ್ರೆಸ್ ಸರಕಾರ ಇದ್ದಲ್ಲೆಲ್ಲ ದಲ್ಲಾಳಿಗಳ ಕಾಟ ಹಿಂದಿನಿಂದಲೂ ನೋಡುತ್ತ ಬಂದಿದ್ದೇವೆ. ರಸಗೊಬ್ಬರದ ವಿಷಯದಲ್ಲಿ ಕೃತಕ ಅಭಾವ ಸೃಷ್ಟಿ ಆಗಿದೆ ಎಂದು ದೂರಿದರು. ರಾಜ್ಯ ಸರಕಾರ ರೈತರಿಗೆ ಅನ್ಯಾಯ ಮಾಡುತ್ತಿದ್ದು, ಇದರ ಸಂಬಂಧ ಬಿಜೆಪಿ ಹೋರಾಟ ಮಾಡಲಿದೆ ಎಂದರು.

ರಸಗೊಬ್ಬರ ದಾಸ್ತಾನಿದೆ, ಕೊರತೆ ಇಲ್ಲ ಎಂದು ಕೃಷಿ ಸಚಿವರು ಹೇಳಿದ್ದಾರೆ. ಹಾಗಿದ್ದೂ ರೈತರ ಹೋರಾಟ ಮುಂದುವರೆದಿದ್ದರೆ, ಇದರ ಹಿಂದೆ ರಾಜ್ಯ ಸರಕಾರದ ವೈಫಲ್ಯ ಎದ್ದು ಕಾಣುತ್ತಿದೆ. ರೈತರಿಗೆ ತೊಂದರೆ ಆಗದ ರೀತಿಯಲ್ಲಿ ರಾಜ್ಯ ಸರಕಾರ ಕ್ರಮ ಕೈಗೊಳ್ಳಬೇಕು. ಮುಖ್ಯಮಂತ್ರಿ ಕೇಂದ್ರ ಸಚಿವ ನಡ್ಡಾ ಅವರಿಗೆ ಪತ್ರ ಬರೆದಿದ್ದಾರೆ. ಈ ಬಾರಿ ಮುಂಗಾರು 20-25 ದಿನಗಳ ಮುಂಚಿತವಾಗಿ ಪ್ರಾರಂಭವಾಗಿದೆ. ಹವಾಮಾನ ಇಲಾಖೆ ಇದರ ಸ್ಪಷ್ಟ ಮುನ್ಸೂಚನೆ ನೀಡಿದ್ದರೂ ರಾಜ್ಯ ಸರಕಾರ, ಕೃಷಿ ಸಚಿವರು ಪೂರ್ವ ತಯಾರಿ ಮಾಡದ ಕಾರಣ ರೈತರು ಬೀದಿಗಿಳಿದು ಹೋರಾಟ ಪ್ರಾರಂಭಿಸಿದ್ದಾರೆ. ಕೇಂದ್ರ ಸರಕಾರ ಸಹಕರಿಸುತ್ತಿಲ್ಲ ಎಂದು ಸಿಎಂ ಹೇಳಿ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಬೆಂಗಳೂರಿನ ಸಮಸ್ಯೆಗಳ ಚರ್ಚೆ

ಬೆಂಗಳೂರು ಮಹಾನಗರದ ಬಿಜೆಪಿಯ ಎಲ್ಲ ಹಿರಿಯ ಶಾಸಕರು ಕುಳಿತು ಈ ನಗರದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದೇವೆ. ರಾಜ್ಯ ಸರಕಾರ, ಮುಖ್ಯಮಂತ್ರಿಗಳು, ಉಸ್ತುವಾರಿ ಸಚಿವ ಡಿ.ಕೆ.ಶಿವಕುಮಾರ್ ಇದ್ದರೂ ನಗರದ ಅಭಿವೃದ್ಧಿ ವಿಚಾರದಲ್ಲಿ ವೈಜ್ಞಾನಿಕವಾಗಿ ಆಲೋಚಿಸಿಲ್ಲ. ಭೂಗತ ಟನೆಲ್ ರಸ್ತೆ, ಬಿಬಿಎಂಪಿಯನ್ನು 5 ವಿಭಾಗವಾಗಿ ಮಾಡುವ ಅವೈಜ್ಞಾನಿಕ ತೀರ್ಮಾನವು ಬೆಂಗಳೂರು ಮಹಾನಗರದ ಅಭಿವೃದ್ಧಿಗೆ ಪೂರಕವಾಗಿಲ್ಲ ಎಂದರು. ಬೆಂಗಳೂರು ಮಹಾನಗರ 5 ವಿಭಾಗವಾಗಿ ಮಾಡುವ ಮೂಲಕ ದೊಡ್ಡ ಅನ್ಯಾಯ ಮಾಡುತ್ತಿದ್ದಾರೆ. ಇದು ನಿಶ್ಚಿತವಾಗಿ ಅಭಿವೃದ್ಧಿಗೆ ಪೂರಕವಲ್ಲ. ಮುಂಬೈ ಮತ್ತಿತರ ಮಹಾನಗರಗಳಲ್ಲಿ ಇಂಥ ಪ್ರಯೋಗ ಮಾಡಿ ಅವೆಲ್ಲವೂ ವಿಫಲವಾಗಿವೆ. ಬಿಜೆಪಿ ಇದನ್ನು ಹಿಂದೆ ವಿರೋಧಿಸಿದ್ದು, ಇಂದು ಮತ್ತು ಮುಂದೆಯೂ ವಿರೋಧಿಸಲಿದೆ. ಬ್ಲ್ಯಾಕ್ ಲಿಸ್ಟ್ ಆದ ಕಂಪೆನಿಗಳನ್ನು ಸೇರಿಸಿಕೊಂಡು ಆತುರದಿಂದ ರಾಜ್ಯ ಸರಕಾರ, ಡಿ.ಕೆ.ಶಿವಕುಮಾರ್ ಹೊರಟಿದ್ದು, ಇದರ ಹಿಂದೆ ಅಭಿವೃದ್ಧಿಯ ಚಿಂತನೆ ಇದೆಯೇ ಅಥವಾ ಬೇರೆ ಆಲೋಚನೆಗಳಿದೆಯೇ ಎಂದು ಪ್ರಶ್ನಿಸಿದರು.

ಗೊಬ್ಬರ ಕೊರತೆ: ಮಣ್ಣು ತಿಂದು ರೈತ ಆಕ್ರೋಶ

ಕೊಪ್ಪಳ: ರಾಜ್ಯದಲ್ಲಿ ರಸಗೊಬ್ಬರ ಕೊರತೆಯಿಂದ ರೈತರು ಕಂಗಾಲಾಗಿದ್ದು, ಜಿಲ್ಲಾ ಕೇಂದ್ರ ಕೊಪ್ಪಳದಲ್ಲಿ ಗೊಬ್ಬರ ಸಿಗದಕ್ಕೆ ರೈತರೊಬ್ಬರು ಮಣ್ಣು ತಿಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೊಪ್ಪಳ ತಾಲೂಕು ಕುಣಿಕೇರಿ ತಾಂಡಾದ ರೈತ ಚಂದ್ರಪ್ಪ ಬಡಿಗಿ ಶನಿವಾರ ಮಣ್ಣು ತಿಂದು ಆಕ್ರೋಶ ಹೊರಹಾಕಿದರು. ಇಲ್ಲಿನ ತಾಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಆವರಣದಲ್ಲಿ ರೈತ ಚಂದ್ರಪ್ಪ, ಬೆಳಗ್ಗೆಯಿಂದ ಮಧ್ಯಾಹ್ನದ ವರೆಗೆ ಕಾದು ಕುಳಿತರೂ ಯೂರಿಯಾ ರಸಗೊಬ್ಬರ ಸಿಕ್ಕಿಲ್ಲ. ಇದರಿಂದ ಬೇಸರಗೊಂಡು ರೈತ ಮಣ್ಣು ತಿಂದಿದ್ದಾರೆ.

ಗೊಬ್ಬರ ಸಿಕ್ಕಿಲ್ಲವೆಂದರೆ ಬೆಳೆ ಬರುವುದಿಲ್ಲ. ಬೆಳೆ ಕೈಕೊಟ್ಟರೆ ಮಣ್ಣು ತಿಂದುಮಣ್ಣು ತಿನ್ನಬೇಕು. ಬಡವರು ಏನು ಮಾಡಬೇಕು ಎಂದು ಮಣ್ಣು ತಿಂದು ಆಕ್ರೋಶ ಹೊರ ಹಾಕಿದ್ದಾರೆ. ಸದ್ಯ ಚೆನ್ನಾಗಿ ಮಳೆಯಾಗಿದೆ. ಗೊಬ್ಬರವಿಲ್ಲವೆಂದರೆ ಹೇಗೆ? ಬೆಳಗಿನ ಜಾವ ನಾಲ್ಕು ಗಂಟೆಗೆ ಬಂದು ಕಾದರೂ ಗೊಬ್ಬರ ಸಿಕ್ಕಿಲ್ಲ. ಮೆಕ್ಕಜೋಳ, ತೊಗರಿ ಬೆಳೆ ಹಾಳಾಗುತ್ತಿವೆ. ಮಹತ್ವದ ಸಮಯದಲ್ಲಿಯೂ ಯೂರಿಯಾ ಸಿಗದಿದ್ದರೆ ಹೇಗೆ ಎಂದು ಪ್ರಶ್ನಿಸಿದ್ದಾರೆ.

ಕೊಪ್ಪಳದಲ್ಲಿ ಗೊಬ್ಬರ ಸಿಗದಿದ್ದಕ್ಕೆ ರೈತರೊಬ್ಬರು ಮಣ್ಣು ತಿಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೊಡಗಿನಲ್ಲಿ ಭಾರೀ ಮಳೆ: ಮಹಿಳೆ ಸಾವು

ಕರಾವಳಿಯಲ್ಲಿ ಮುಂದುವರಿದ ಮಳೆ ಅವಾಂತರ | ನೆಲಕ್ಕಚ್ಚಿದ ನೂರಾರು ಮರಗಳು

ಮಡಿಕೇರಿ: ಕೊಡಗು ಜಿಲ್ಲೆಯಾದ್ಯಂತ ಕಳೆದ ರಾತ್ರಿಯಿಂದ ಭಾರೀ ಗಾಳಿ ಸಹಿತ ಮಳೆ ಸುರಿದಿದ್ದು, ಹಲವೆಡೆ ಮಳೆ ಅವಾಂತರಗಳು ಮುಂದುವರಿದಿವೆ. ಈ ನಡುವೆ ಸೋಮವಾರಪೇಟೆ ತಾಲೂಕಿನ ಹಾನಗಲ್ ಗ್ರಾಮದಲ್ಲಿ ಶನಿವಾರ ಬೆಳಗಿನ ಜಾವ ಮನೆ ಕುಸಿದು ಬಿದ್ದು ಕಾರ್ಮಿಕ ಮಹಿಳೆ ಮೃತಪಟ್ಟಿದ್ದಾರೆ.

ಮೃತ ಮಹಿಳೆಯ ಮಕ್ಕಳು ಹಾಗೂ ಸಹೋದರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಸುಷ್ಮಾ (37) ಮೃತ ದುರ್ದೈವಿ. ಇವರ ಮೂವರು ಮಕ್ಕಳು ಹಾಗೂ ಸಹೋದರ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಅವರು ಕುಟುಂಬವರ್ಗಕ್ಕೆ ಸಾಂತ್ವಾನ ಹೇಳಿದರು. ಅಧಿಕಾರಿಗಳನ್ನು ಸಂಪರ್ಕಿಸಿದ ಅವರು ಅಗತ್ಯ ತುರ್ತು ಕ್ರಮಕೈಗೊಳ್ಳುವಂತೆ ತಿಳಿಸಿದರು.

ಆಟೋದ ಮೇಲೆ ಬಿದ್ದ ಮರ: ಸೋಮವಾರಪೇಟೆ ತಾಲೂಕಿನಲ್ಲಿ ಭಾರೀ ಗಾಳಿ ಸಹಿತ ಧಾರಾಕಾರ ಮಳೆಯಾಗುತ್ತಿದ್ದು, ಕುಂಬೂರು ಗ್ರಾಮದಲ್ಲಿ ಚಲಿಸುತ್ತಿದ್ದ ಆಟೋರಿಕ್ಷಾದ ಮೇಲೆ ಮರ ಬಿದ್ದು ಹಾನಿಯಾಗಿದೆ. ಆಟೋ ಚಾಲಕ ಕುಂಬೂರು ಗ್ರಾಮದ ನಿವಾಸಿ ಪ್ರವೀಣ್ ಹಾಗೂ ಆಟೋದಲ್ಲಿ ಪ್ರಯಾಣಿಸುತ್ತಿದ್ದ ವಿದ್ಯಾರ್ಥಿನಿಗೆ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಇನ್ನೂ ಐದು ಕರಾವಳಿಯಲ್ಲಿ ಭಾರೀ ಮಳೆ : ಕರಾವಳಿ ಮತ್ತು ಮಲೆನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಇನ್ನೂ ಐದು ದಿನಗಳ ಕಾಲ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಭಾರೀ ಮಳೆ ಆಗುತ್ತಿದ್ದು ರೆಡ್ ಅಲರ್ಟ್ ಘೋಷಿಸಲಾಗಿದೆ. ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಬೆಳಗಾವಿಯಲ್ಲಿ ಮುಂದಿನ ಮೂರು ದಿನ ಆರೆಂಜ್ ಅಲರ್ಟ್ ನೀಡಲಾಗಿದೆ. ಧಾರವಾಡ,

ಹಾವೇರಿ, ಕಲಬುರಗಿ, ಬೀದರ್ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಇರಲಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಇಂದು ಸಹ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಕರಾವಳಿ ಭಾಗದಲ್ಲಿ ಮುಂದಿನ ಐದಾರು ದಿನ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಹೇಳಿದೆ.

ಅನುಮತಿ ಇಲ್ಲದೆ ಚಾರಣ: 103 ಮಂದಿ ವಶ

ಚಿಕ್ಕಮಗಳೂರು: ಪಶ್ಚಿಮ ಘಟ್ಟದ ನಿಷೇಧಿತ ಅರಣ್ಯ ಪ್ರದೇಶ ಬಿದಿರು ತಳದಲ್ಲಿ ಅನುಮತಿ ಇಲ್ಲದೆ ಟ್ರೆಕ್ಕಿಂಗ್ ನಡೆಸುತ್ತಿದ್ದ 103 ಪ್ರವಾಸಿಗರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮೂಡಿಗೆರೆ ತಾಲೂಕಿನ ಚಾರ್ಮಾಡಿ ಘಾಟಿಯ ಆಳವಾದ ಕಾಡು ಪ್ರದೇಶದಲ್ಲಿ ಚಾರಣ ಹೊರಟಿದ್ದ 103 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ.ಸಂಭವಿಸಿದೆ. ಕಾನೂನು ಬಾಹಿರವಾಗಿ ಅರಣ್ಯ ಪ್ರದೇಶ ಪ್ರವೇಶಿಸಿ ಟ್ರೆಕ್ಕಿಂಗ್ ನಡೆಸಲಾಗುತ್ತಿದೆ ಎಂಬ ಖಚಿತ ಮಾಹಿತಿಯ ಮೇಲೆ ಬಣಕಲ್ ಹಾಗೂ ಬಾಳೂರು ಪೊಲೀಸ್ ಠಾಣೆಗಳ ಪೊಲೀಸರು ದಾಳಿ ನಡೆಸಿದರು.

ಬಣಕಲ್ ಪಿಎಸ್‌ಐ ರೇಣುಕಾ ಮತ್ತು ಬಾಳೂರು ಪಿಎಸ್‌ಐ ದಿಲೀಪ್ ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಎಲ್ಲಾ 103 ಜನರನ್ನು ವಶಕ್ಕೆ ಪಡೆಯಲಾಗಿದೆ. ಈ ತಂಡದಲ್ಲಿ ಭಾಗವಹಿಸಿದ್ದವರು ಬೆಂಗಳೂರು ಮೂಲದ ಪ್ರಮುಖ ಐಟಿ ಕಂಪನಿಗಳ ಉದ್ಯೋಗಿಗಳು ಎಂದು ಮಾಹಿತಿ ಲಭ್ಯವಾಗಿದೆ. ಪ್ರವಾಸಿಗರ 2 ಬಸ್ಸುಗಳು ಹಾಗೂ 2 ಪಿಕಪ್ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

...ನಿಗೂಢ ಸಾವು ಎಸ್‌ಐಟಿ ತನಿಖೆ ಆರಂಭ

← ಮೊದಲಪುಟದಿಂದ

ಈ ಪ್ರಕರಣದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ದಯಾಮಾ ಅವರನ್ನು ತನಿಖಾ ಅಧಿಕಾರಿಯಾಗಿ ನೇಮಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಮೂಲಗಳ ಪ್ರಕಾರ, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಅಧಿಕಾರಿಗಳನ್ನು ತಂಡಕ್ಕೆ ನಿಯೋಜಿಸಲಾಗಿದೆ. ಇವರಲ್ಲಿ ಧರ್ಮಸ್ಥಳ, ಮೂಲ್ಕಿ ಮತ್ತು ಬೈಂದೂರು ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಮತ್ತು ಸಬ್ ಇನ್ಸ್‌ಪೆಕ್ಟರ್‌ಗಳು ಇದ್ದಾರೆ. ಎಸ್‌ಐಟಿ ಆಂತರಿಕ ಮಾಹಿತಿಗಳನ್ನು ಪಡೆಯುವ ನಿರೀಕ್ಷೆಯಿದ್ದು, ಸಮಾಧಿಗಳ ಬಗ್ಗೆ ಆರಂಭದಲ್ಲಿ ಆರೋಪಗಳನ್ನು ಎತ್ತಿದ್ದ ಅನಾಮಧೇಯ ದೂರುದಾರನನ್ನು ಪ್ರಶ್ನಿಸುವ ಸಾಧ್ಯತೆಯಿದೆ. ಡಿಐಜಿ ಅನುಚೇತ್ ಅವರ ಮೇಲ್ವಿಚಾರಣೆಯಲ್ಲಿ ಮಲ್ಲಿಕಟ್ಟೆಯಲ್ಲಿರುವ ಎಸ್‌ಐಟಿ ಕಚೇರಿಯ ಲ್ಲಿಯೇ ವಿಚಾರಣೆ ನಡೆಯುವ ಸಾಧ್ಯತೆಯಿದೆ. ವಿಚಾರಣೆ ಮತ್ತು ಹೇಳಿಕೆ ದಾಖಲಿಸುವುದಕ್ಕಾಗಿ ವಿಡಿಯೊ ರೆಕಾರ್ಡಿಂಗ್ ಉಪಕರಣಗಳು ಸೇರಿದಂತೆ ಎಲ್ಲ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಹಿಳೆಯರ ಶಕ್ತಿ ತುಂಬಿದ ಉಚಿತ ಸಾರಿಗೆ

← ಮೊದಲಪುಟದಿಂದ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಈ ಮಾಹಿತಿಯನ್ನು ತಮ್ಮ ಸಾಮಾಜಿಕ ಖಾತೆಗಳಲ್ಲಿ ಹಂಚಿಕೊಂಡಿದ್ದು, ಶಕ್ತಿ ಯೋಜನೆಯಡಿ ಮಹಿಳೆಯರು ಬಸ್‌ಗಳಲ್ಲಿ ಉಚಿತವಾಗಿ ಓಡಾಡಲು ಆರಂಭಿಸಿದ ಬಳಿಕ ಬೆಂಗಳೂರು, ಹುಬ್ಬಳ್ಳಿ-ಧಾರಾವಾಡದಲ್ಲಿ ಉದ್ಯೋಗಸ್ಥ ಮಹಿಳೆಯರ ಪ್ರಮಾಣ ಹೆಚ್ಚಾಗಿದೆ ಎಂದು ಸಸ್ಟೈನೇಬಲ್ ಮೊಬಿಲಿಟಿ ನೆಟ್ ವರ್ಕ್ ಸಮೀಕ್ಷಾ ವರದಿ ಹೇಳಿದೆ. ಮಹಿಳೆಯರಿಗೆ ಆರ್ಥಿಕ ಬಲ ತುಂಬಿ, ಅವರನ್ನು ಸ್ವಾವಲಂಬಿಯಾಗಿಸುವ ಉದ್ದೇಶದ ಈ ಯೋಜನೆಯ ಬಗೆಗೆ ಕೇಳಿಬಂದ ಟೀಕೆಗಳು, ವ್ಯವಸ್ಥಿತ ಅಪಪ್ರಚಾರ ಎಲ್ಲವೂ ಸಾಧನೆಯ ಮುಂದೆ ಮಂಡಿಯೂರಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ವ್ಯಾಪಕ ಪ್ರಶಂಸೆಗೆ ಒಳಗಾಗಿರುವ ನಮ್ಮ ಗ್ಯಾರಂಟಿ ಯೋಜನೆಗಳು ಇಂದು ನಾಡಿನ ಜನರ ತಲಾದಾಯ ಹೆಚ್ಚಿಸಿ, ಅವರ ಬದುಕಿಗೆ ಆರ್ಥಿಕ ಭದ್ರತೆ ಕಲ್ಪಿಸಿದೆ. ನಮ್ಮ ಯೋಜನೆಯೊಂದು ನಿರೀಕ್ಷೆಗೂ ಮೀರಿ ಸಾಧನೆ ಮಾಡಿದರೆ ನನಗೆ ಅದಕ್ಕಿಂತ ಹೆಚ್ಚು ಸಂತಸದ ವಿಷಯ ಬೇರೆ ಇಲ್ಲ ಎಂದು ಹೇಳಿಕೊಂಡಿದ್ದಾರೆ.

500 ಕೋಟಿ ಮಹಿಳೆಯರ ಪ್ರಯಾಣ

2023ರ ಕರ್ನಾಟಕ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಸರಕಾರದ ಭರವಸೆಯಂತೆ ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಜಾರಿಯಾಗಿದ್ದು, ಇವುಗಳಲ್ಲಿ ಒಂದಾದ ಶಕ್ತಿ ಯೋಜನೆಗೆ ಮಹಿಳೆಯರಿಂದ ಉತ್ತಮ ಸ್ಪಂದನೆ ದೊರೆತಿತ್ತು. ಈ ಶಕ್ತಿ ಯೋಜನೆಯು ಜಾರಿಯಾದ ಎರಡೇ ವರ್ಷದಲ್ಲಿ 500 ಕೋಟಿ ಮಹಿಳೆಯರು ಸರಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಮೂಲಕ ಹೊಸ ಮೈಲಿಗಲ್ಲನ್ನು ಸೃಷ್ಟಿಸಿದೆ.

ಬೆಳೆ ತೆರವು: ರೈತರಿಂದ ಆಕ್ರೋಶ

ದಾವಣಗೆರೆಯ ಹೊನ್ನೂರಿನ ಕೆರೆ ಜಾಗದಲ್ಲಿ ಬೆಳೆದ ಮಕ್ಕೆಜೋಳ, ಟೊಮೆಟೋ ತೆರವು

ದಾವಣಗೆರೆ: ಸರಕಾರಿ ಜಾಗ ಒತ್ತುವರಿ ಮಾಡಿಕೊಂಡು ಬೆಳೆಯಲಾಗಿದ್ದ ಮಕ್ಕೆಜೋಳ, ಟೊಮೆಟೋ ಗಿಡಗಳನ್ನು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ತೆರವು ಮಾಡಿದ್ದಾರೆ. ತೆರವು ಕ್ರಮ ವಿರೋಧಿಸಿ ರೈತರು, ಮಹಿಳೆಯರು ಹೊಲದಲ್ಲೇ ಉರುಳಾಡಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದಾವಣಗೆರೆಯ ನರಸೀಪುರ ಗ್ರಾಮದ ಸಮೀಪದ ಹೊನ್ನೂರಿನ ಕೆರೆ ನೀರಿಲ್ಲದೇ ಒಣಗಿ ಹೋಗಿದೆ. ಈ ಹಿನ್ನೆಲೆಯಲ್ಲಿ ಕೆರೆಯ ಪಕ್ಕದ ಭಾಗದ ರೈತರು ಅರ್ಧ ಎಕರೆ, ಒಂದು ಎಕರೆ ಭಾಗದಲ್ಲಿ ಮೆಕ್ಕೆಜೋಳ ಬೆಳೆದಿದ್ದರು. ಆದರೆ, ಅದು ಸರಕಾರಿ ಜಾಗವಾದ್ದರಿಂದ ನೀರಾವರಿ ಇಲಾಖೆ ಒತ್ತುವರಿ ತೆರವು ಮಾಡಿದೆ. ಉತ್ತಮವಾಗಿ ಬೆಳೆದಿದ್ದ ಬೆಳೆ ನಾಶಗೊಂಡ ಹಿನ್ನೆಲೆಯಲ್ಲಿ ಬೇಸರಗೊಂಡ ರೈತರು ನಮಗೆ ಒಂದು ಮಾತು ಹೇಳದೆ, ಟ್ರ್ಯಾಕ್ಟರ್ ಮೂಲಕ ಬೆಳೆಯನ್ನು ನಾಶಪಡಿಸಿದ್ದಾರೆ ಎಂದು ಆರೋಪ ಮಾಡಿದ್ದಾರೆ.

ಸಣ್ಣ ನೀರಾವರಿ ಇಲಾಖೆ ಎಇಇ ಸ್ಪಷ್ಟನೆ: ಸ್ಥಳದಲ್ಲಿದ್ದ ಸಣ್ಣ ನೀರಾವರಿ ಇಲಾಖೆಯ ಎಇಇ ಪ್ರವೀಣ್ ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಈ ಮುಂಚೆಯೇ ಇಲ್ಲಿನ ರೈತರಿಗೆ ನೋಟಿಸ್ ನೀಡಿದ್ದೆವು. ಜಾಗೃತಿ ಕೂಡ ಮೂಡಿಸಿದ್ದೆವು. ಕೆರೆ ಜಾಗದಲ್ಲಿ ಒತ್ತುವರಿ ಮಾಡಿ ಬೆಳೆ ಬೆಳೆಯಬೇಡಿ ಎಂದು ಹೇಳಿದ್ದೆವು. ಸರಕಾರಿ ಕೆರೆಯ ಜಾಗವನ್ನು ಒತ್ತುವರಿ ಮಾಡಿದ್ದಾರೆ. ನೋಟಿಸ್ ಕೊಟ್ಟು, ಯಾರೂ ಬೆಳೆ ಬೆಳೆಯದಂತೆ ಗ್ರಾಮಗಳಲ್ಲಿ ಡಂಗೂರ ಸಾರಿದ್ದೆವು. ಆದರೆ, ನಮ್ಮ ಯಾವುದೇ ನೋಟಿಸ್‌ಗೆ ಬೆಲೆ ಕೊಡದೆ, ಬೆಳೆ ಬೆಳೆದಿದ್ದಾರೆ. ಹೀಗಾಗಿ, ಸರಕಾರ ಒತ್ತುವರಿ ಜಾಗದಲ್ಲಿನ ಎಲ್ಲಾ ಬೆಳೆಯನ್ನು ತೆರವುಗೊಳಿಸಿ ಎಂದು ಆದೇಶ ಮಾಡಿದ್ದರಿಂದ, ನಾವು ಈ ಕ್ರಮ ಕೈಗೊಂಡಿದ್ದೇವೆ. ಸರಕಾರದ ಜಾಗವನ್ನು ಯಾರೇ ಒತ್ತುವರಿ ಮಾಡಿಕೊಂಡರೂ ಅದನ್ನು ತೆರವು ಮಾಡುತ್ತೇವೆ. ಇದು ಸರಕಾರದ ಆದೇಶ ಎಂದು ತಿಳಿಸಿದರು.

ನೀರಾವರಿ ಇಲಾಖೆ ಅಧಿಕಾರಿಗಳು ಬೆಳೆ ನಾಶ ಪಡಿಸುತ್ತಿರುವುದನ್ನು ವಿರೋಧಿಸಿ ಹೊಲದಲ್ಲಿ ಬಿದ್ದು ಹೊರಳಾಡಿದ ಮಹಿಳೆಯರು.

> ಬೆಳೆ ಬೆಳೆದುಕೊಳ್ಳಿ ಎಂದು ಹೇಳಿ, ಇಂದು ಬಂದು ಎಲ್ಲಾ ಬೆಳೆ ನಾಶ ಮಾಡಿದ್ದಾರೆ. ನಮಗೆ ಗೊತ್ತಿಲ್ಲದಂತೆ ಈ ಕ್ರಮ ಕೈಗೊಂಡಿದ್ದಾರೆ. ಬೀಜ, ಗೊಬ್ಬರಕ್ಕೆಂದು ಬರೋಬ್ಬರಿ 50 ಸಾವಿರ ರು. ಖರ್ಚಾಗಿದೆ. 50-60 ವರ್ಷಗಳಿಂದ ಉತ್ತಿ ಬಿತ್ತಿ ಬಂದ ಫಸಲಿನಿಂದ ನಾವು ಜೀವನ ಮಾಡುತ್ತಿದ್ದೆವು. ಇದೊಂದು ವರ್ಷ ಬೆಳೆದುಕೊಂಡು ತಿನ್ನಿ ಎಂದ ಅಧಿಕಾರಿಗಳು ಏಕಾಏಕಿ ತೆರವು ಮಾಡಿಸಿದ್ದಾರೆ.
> -**ನೀಲಮ್ಮ** ರೈತ ಮಹಿಳೆ

> ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಏಕಾಏಕಿ ಬಂದು ಬೆಳೆ ನಾಶ ಮಾಡಿದ್ದು, ನಮಗೆ ಹೇಳಿಲ್ಲ. 25 ಎಕರೆ ಪ್ರದೇಶದಲ್ಲಿನ ಬೆಳೆಯನ್ನು ಈ ರೀತಿ ನಾಶ ಮಾಡಿದ್ದಾರೆ. ನಮಗೆ ಒಂದೂವರೆ ತಿಂಗಳು ಕಾಲಾವಕಾಶ ಕೊಟ್ಟಿದ್ದರೆ ಸಾಕಿತ್ತು, ಬೆಳೆ ಕೈಗೆ ಬರುತ್ತಿತ್ತು.
> -**ನಾಗರಾಜ್** ರೈತ

ಸಮಾಚಾರ ಸಣ್ಣದಲ್ಲ

ಶರಣಬಸಪ್ಪಾ ಅಪ್ಪಾ ಆರೋಗ್ಯ ಸ್ಥಿರ

ಕಲಬುರಗಿ: ಇಲ್ಲಿನ ಶ್ರೀ ಶರಣಬಸವೇಶ್ವರ ಸಂಸ್ಥಾನದ ಎಂಟನೇ ಪೀಠಾಧಿಪತಿ, ಮಹಾದಾಸೋಹಿ ವಿದ್ಯಾಭಂಡಾರಿ ಪೂಜ್ಯ ಡಾ. ಶರಣಬಸಪ್ಪಾ ಅಪ್ಪಾ ಆರೋಗ್ಯದಲ್ಲಿ ಏರುಪೇರಾಗಿ

ಶುಕ್ರವಾರ ತಡರಾತ್ರಿ ಆಸ್ಪತ್ರೆ ದಾಖಲಾಗಿದ್ದಾರೆ ಎಂದು ತಿಳಿದು ಬಂದಿದೆ. ತಡರಾತ್ರಿ ಆರೋಗ್ಯದಲ್ಲಿ ಏರುಪೇರು ಉಂಟಾಗಿ ವಾಂತಿ ಹಾಗೂ ನಿಶಕ್ತಿ ಆದ ಹಿನ್ನೆಲೆ ಕಲಬುರಗಿ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಕಳೆದ ಕೆಲ ದಿನಗಳಿಂದ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದು, ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ಅಪ್ಪಾಜಿ ಆರೋಗ್ಯ ಸ್ಥಿರವಾಗಿದೆ. ಭಕ್ತರು ಆತಂಕ ಪಡುವ ಅಗತ್ಯವಿಲ್ಲ ಎಂದು ಶ್ರೀ ಶರಣಬಸವೇಶ್ವರ ಸಂಸ್ಥಾನದ ದಾಸೋಹ ಮಹಾಮನೆ ಪ್ರಕಟಣೆ ಹೊರಡಿಸಿದೆ.

ಶಿವಮೊಗ್ಗದಿಂದ ಮುಂಬೈ ಆಸ್ಪತ್ರೆಗೆ ಏರ್ ಲಿಫ್ಟ್

ಶಿವಮೊಗ್ಗ: ಮೆದುಳು ಜ್ವರದಿಂದ ಬಳಲುತ್ತಿದ್ದ ಯುವತಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದಿಂದ ಮುಂಬೈಗೆ ಏರ್‌ಲಿಫ್ಟ್ ಮಾಡಲಾಯಿತು. ನಗರದ ಗಾಂಧಿ ಬಜಾರ್‌ನ ಮನೋಜ್ ಹಾಗೂ ಮನಿಷಾ ದಂಪತಿಯ ಪುತ್ರಿ ಮಾನ್ಯ (22) ಮೆದುಳು ಜ್ವರದಿಂದ ಬಳಲುತ್ತಿದ್ದಳು. ಆಕೆಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆರೋಗ್ಯದ ಸ್ಥಿತಿ ಗಂಭೀರವಾದ ಹಿನ್ನೆಲೆ ವೈದ್ಯರ ಸಲಹೆಯಂತೆ ಮುಂಬೈನ ರಿಲಯನ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಯುವತಿಯನ್ನು ಆಸ್ಪತ್ರೆಯಿಂದ ವಿಮಾನ ನಿಲ್ದಾಣದವರೆಗೂ ಅಂಬುಲೆನ್ಸ್‌ನಲ್ಲಿ ಕರೆತರಲಾಯಿತು. ಈ ವೇಳೆ ಜೀರೋ ಟ್ರಾಫಿಕ್ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ವಿಮಾನ ನಿಲ್ದಾಣದಿಂದ ಏರ್ ಅಂಬುಲೆನ್ಸ್ ಮೂಲಕ ಮುಂಬೈಗೆ ರವಾನೆ ಮಾಡಲಾಯಿತು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಕೆಂಗೇರಿ, ಬೆಂಗಳೂರು
- **ಸಮಸ್ಯೆಯೇನು..?:** ಕೆಂಗೇರಿ ಉಪನಗರದ ಶಾಲೆಯೊಂದರ ಬಳಿಯ ಬಸ್ ಶೆಲ್ಟರ್ ಸರಿಪಡಿಸಿ, ತ್ಯಾಜ್ಯ ವಿಲೇವಾರಿ ಬಗ್ಗೆ.
- **ಪರಿಹಾರ:** ಬಸ್ ಶೆಲ್ಟರ್ ದುರಸ್ಥಿ ಹಾಗೂ ತ್ಯಾಜ್ಯ ವಿಲೇವಾರಿ ಬಗ್ಗೆ ಸಾರ್ವಜನಿಕರೊಬ್ಬರು ಬಿಬಿಎಂಪಿಗೆ ಫೋಟೊ ಸಮೇತ ಟ್ಯಾಗ್ ಮಾಡಿದ್ದರು. ಅಧಿಕಾರಿಗಳು ಪರಿಶೀಲಿಸಿ, ಬಸ್ ಶೆಲ್ಟರ್ ದುರಸ್ಥಿ ಮಾಡಿಸಿದ್ದಾರೆ. ಅಕ್ಕಪಕ್ಕದಲ್ಲಿ ಗುಡ್ಡೆ ಹಾಕಿದ್ದ ಕಸವನ್ನು ವಿಲೇವಾರಿ ಮಾಡಿಸಿದ್ದಾರೆ. ಸಮಸ್ಯೆ ಪರಿಹರಿಸಿದ ಆ ನಂತರದ ಫೋಟೊ ಹಂಚಿಕೊಂಡಿದ್ದಾರೆ.

2 ವರ್ಷದಲ್ಲಿ ಎತ್ತಿನಹೊಳೆ ಯೋಜನೆ ಪೂರ್ಣ

ಅರಸೀಕೆರೆ ಸಾಧನಾ ಸಮಾವೇಶ | ₹570 ಕೋಟಿ ಮೊತ್ತದ ಕಾಮಗಾರಿಗಳಿಗೆ ಸಿದ್ದರಾಮಯ್ಯ ಶಂಕುಸ್ಥಾಪನೆ

ಹಾಸನ: ಎತ್ತಿನಹೊಳೆ ಯೋಜನೆ ಕುಡಿಯುವ ನೀರಿನ ಯೋಜನೆಯಾಗಿದ್ದು, 24ಟಿಎಂಸಿ ನೀರು ಬೇಕು. 14 ಟಿಎಂಸಿ ಕುಡಿಯುವುದಕ್ಕೆ, 10 ಟಿಎಂಸಿ ಕೆರೆ ತುಂಬಿಸುವುದಕ್ಕೆ ಬೇಕು. ಈ ಯೋಜನೆಯನ್ನು 2 ವರ್ಷದಲ್ಲಿ ಪೂರ್ಣಗೊಳಿಸಿ, ಕುಡಿಯುವ ನೀರು ಮತ್ತು 527 ಕೆರೆಗಳನ್ನು ತುಂಬಿಸುವ ಕೆಲಸವನ್ನು ಮಾಡಿಯೇ ಮಾಡುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ಘೋಷಿಸಿದರು.

ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ₹570 ಕೋಟಿ ಮೊತ್ತದ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎತ್ತಿನಹೊಳೆ ಯೋಜನೆ ಮಾಡಲು ಸಾಧ್ಯವೇ ಇಲ್ಲ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳುತ್ತಿದ್ದರು. ಇದುವರೆಗೆ ₹17 ಸಾವಿರ ಕೋಟಿ ಖರ್ಚು ಮಾಡಿದ್ದು, ಮೊದಲ ಹಂತದ ಕೆಲಸ ಮುಗಿದಿದೆ. ಎರಡನೇ ಹಂತದ ಕೆಲಸ ಆರಂಭವಾಗಿದೆ. ಇನ್ನೂ ₹6 ಸಾವಿರ ಕೋಟಿ ಬೇಕಿದೆ. ಇನ್ನು ಎರಡು ವರ್ಷಗಳಲ್ಲಿ ಯೋಜನೆ ಸಂಪೂರ್ಣವಾಗಿ ಮುಗಿಸಿ, ಏಳು ಜಿಲ್ಲೆಗಳಿಗೆ ಕುಡಿಯುವ ನೀರು ಕೊಡುತ್ತೇವೆ ಎಂದರು.

ತೆಂಗು ಉಳಿಸುವೆವು: ತೆಂಗು ಬೆಳೆಗೆ ರೋಗ ಬಂದಿದೆ ಎಂದು ಶಿವಲಿಂಗೇಗೌಡ ಮನವಿ ಕೊಟ್ಟಿದ್ದಾರೆ. ಎಷ್ಟೇ ಹಣ ಖರ್ಚಾದರೂ ಬೆಳೆ ಉಳಿಸುವ ಕೆಲಸ ಮಾಡುತ್ತೇವೆ. ನಾವು ಬಡವರು, ರೈತರು, ಮಹಿಳೆಯರಿಗೆ ಒತ್ತು ಕೊಟ್ಟು ಕೆಲಸ ಮಾಡುತ್ತಿದ್ದು, ಮುಂದಿನ ಚುನಾವಣೆಯಲ್ಲಿ ಹಾಸನದಲ್ಲಿ ಏಳು ಸ್ಥಾನಗಳನ್ನು ಗೆಲ್ಲಿಸುವ ಕೆಲಸ ಮಾಡಿ ಎಂದು ಮನವಿ ಮಾಡಿದರು.



ಹಾಸನ ಜಿಲ್ಲೆಯ ಅರಸೀಕರೆಯಲ್ಲಿ ನಡೆದ ಸಾಧನಾ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಅವರು ವಸತಿ ಯೋಜನೆ ಫಲಾನುಭವಿಗಳಿಗೆ ಮನೆ ಪ್ರಮಾಣ ಪತ್ರ ವಿತರಣೆ ಮಾಡಿದರು. ಸಚಿವರಾದ ಜಮೀರ್ ಅಹ್ಮದ್, ಕೆ.ಎನ್.ರಾಜಣ್ಣ, ಶಾಸಕ ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಇದ್ದರು.

> ಗ್ಯಾರಂಟಿಗಳಿಂದ ಖಜಾನೆ ಖಾಲಿಯಾಗಿದೆ. ಅಭಿವೃದ್ಧಿ ಕಾಮಗಾರಿಗಳು ಆಗುತ್ತಿಲ್ಲ ಎಂದು ವಿರೋಧ ಪಕ್ಷಗಳು ಟೀಕೆ ಮಾಡುತ್ತವೆ. ನೀವು ಇಲ್ಲಿಗೆ ಬಂದು ಕಣ್ಣಾರೆ ನೋಡಿ, ಅರಸೀಕೆರೆ ಎಷ್ಟು ಅಭಿವೃದ್ಧಿ ಆಗಿದೆ ಎಂಬುದನ್ನು ಗಮನಿಸಿ.
> -ಸಿದ್ದರಾಮಯ್ಯ ಮುಖ್ಯಮಂತ್ರಿ

ಶಿವಲಿಂಗೇಗೌಡರನ್ನು ಮಂತ್ರಿ ಮಾಡಿ: ಸಿಎಂ ಸಿದ್ದು ಬೇಸರ

ಸಿದ್ದರಾಮಯ್ಯ ಭಾಷಣದ ನಡುವೆ ಶಿವಲಿಂಗೇಗೌಡರನ್ನು ಮಂತ್ರಿ ಮಾಡಿ ಎಂದು ಜನರು ಕೂಗಲು ಆರಂಭಿಸಿದರು. ಏಯ್ ಕೂತ್ಕೊಳ್ರಿ ಅಂದ್ರೂ ಕೇಳಲಿಲ್ಲ. ದನಿ ಜೋರಾದಾಗ ಸಿಎಂ ಸಿಟ್ಟಾಗಿ ಮಾತು ನಿಲ್ಲಿಸಿ ಕುಳಿತರು. ಆಗ ಸಚಿವ ರಾಜಣ್ಣ ಮತ್ತು ಶಿವಲಿಂಗೇಗೌಡ ಮನವೊಲಿಸಿ ಕರೆತಂದರು. ಮತ್ತೆ ಮಾತು ಆರಂಭಿಸಿದ ಸಿಎಂ, ಸಚಿವ ಮಾಡೋದು ಹೈಕಮಾಂಡ್ ಹಾಗೂ ಸರಕಾರ, ಶಿವಲಿಂಗೇಗೌಡ ಸಿಎಂ ಆಗುವ ಎಲ್ಲ ಅರ್ಹತೆ ಹೊಂದಿದ್ದಾರೆ. ಈಗಾಗಲೇ 4 ಬಾರಿ ಗೆಲ್ಲಿಸಿರುವ ನೀವು, ಮುಂದೆಯೂ ಗೆಲ್ಲಿಸಿ ಎಂದು ಮನವಿ ಮಾಡಿ, ಶಿವಲಿಂಗೇಗೌಡರ ಕಾರ್ಯವೈಖರಿಯನ್ನು ಸಿಎಂ ಶ್ಲಾಘಿಸಿದರು. ಇದಕ್ಕೂ ಮುನ್ನ ಮಾತನಾಡಿದ ಸಚಿವ ಜಮೀರ್ ಅಹಮದ್ ಖಾನ್ ಹಾಗೂ ಸಂಸದ ಶ್ರೇಯಸ್ ಪಟೇಲ್ ಸಹ ಶಿವಲಿಂಗೇಗೌಡರನ್ನು ಮಂತ್ರಿ ಮಾಡಿ ಎಂಬ ಬೇಡಿಕೆ ಮುಂದಿಟ್ಟರು.

ಶಿವಲಿಂಗೇಗೌಡರ ಗುಣಗಾನಗೈದ ಡಿಕೆಶಿ

ಕನಕಪುರ, ವರುಣ ಕ್ಷೇತ್ರಕ್ಕಿಂತ ಅರಸೀಕೆರೆಯಲ್ಲಿ ಅಭಿವೃದ್ಧಿ ಹೆಚ್ಚು

ಅರಸೀಕೆರೆ ಸಾಧನಾ ಸಮಾವೇಶದಲ್ಲಿ ಡಿಕೆಶಿ, ಶಿವಲಿಂಗೇಗೌಡ ಜತೆ ವೇದಿಕೆಗೆ ನಡೆದು ಬರುತ್ತಿರುವುದು.

ಹಾಸನ: ಅರಸೀಕೆರೆ ತಾಲೂಕಿನ ಜನರು ಶಾಸಕರು ಮತ್ತು ಸಂಸದರನ್ನು ಆಯ್ಕೆ ಮಾಡುವ ಮೂಲಕ ಎರಡು ಕಣ್ಣುಗಳನ್ನು ಕೊಟ್ಟಿದ್ದೀರಿ. ಕನಕಪುರ ಹಾಗೂ ವರುಣ ಕ್ಷೇತ್ರಕ್ಕಿಂತ ಹೆಚ್ಚು ಕೆಲಸಗಳನ್ನು ಅರಸೀಕೆರೆ ಕ್ಷೇತ್ರಕ್ಕೆ ಶಿವಲಿಂಗೇಗೌಡರು ಮಾಡಿಸಿದ್ದಾರೆ. ಕನಕಪುರದಲ್ಲಿ ಎಂಜಿನಿಯರಿಂಗ್, ಡಿಪ್ಲೊಮಾ ಕಾಲೇಜುಗಳಿಲ್ಲ. ಎತ್ತಿನಹೊಳೆ, ಹೇಮಾವತಿ ನೀರು ಕೊಡಲೇಬೇಕು ಎಂದು ಸಚಿವ ಸಂಪುಟದಲ್ಲಿ ಅನುಮೋದನೆ ಕೊಡಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಅರಸೀಕೆರೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭೀಷ್ಮ ಧರ್ಮರಾಯನಿಗೆ ಒಂದು ಮಾತು ಹೇಳುತ್ತಾರೆ. ತಂದೆತಾಯಿ, ಗುರು, ದೇವರು, ಪ್ರಜೆಗಳ ಋಣ ತೀರಿಸಬೇಕು. ಮಲ್ಲಿಕಾರ್ಜುನ ಖರ್ಗೆ ಅವರು 371ಜೆ ಮೂಲಕ ಋಣ ತೀರಿಸಿದಂತೆ, ಶಾಸಕ ಶಿವಲಿಂಗೇಗೌಡರು ಮತದಾರ ಋಣ ತೀರಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಯೋಗಿ ಅನ್ನಿಸಿಕೊಳ್ಳುವ ಮೊದಲು, ಉಪಯೋಗಿ ಅನ್ನಿಸಿಕೊಳ್ಳಬೇಕು. ನಾವು ಮಾಡುವ ಕೆಲಸಗಳಿಂದ ಜನರ ಹೃದಯ ಗೆಲ್ಲುವ ಕೆಲಸ ಮಾಡಬೇಕು. ಕೆರೆಗಳಿಗೆ ನೀರು ತುಂಬಿಸಬೇಕು. ನೀರಾವರಿ ಆಗಬೇಕು ಎಂದು ಪಟ್ಟು ಹಿಡಿದ ಶಿವಲಿಂಗೇಗೌಡರು, ಈ ಎಲ್ಲ ಯೋಜನೆಗಳನ್ನು ಉದ್ಘಾಟಿಸಿದ್ದಾರೆ ಎಂದರು.

ಮರಕ್ಕೆ ಬೇರು ಎಷ್ಟು ಮುಖ್ಯವೋ, ಮನುಷ್ಯನಿಗೆ ನಂಬಿಕೆ ಕೂಡ ಮುಖ್ಯ. ಶಿವಲಿಂಗೇಗೌಡರ ಬಗ್ಗೆ ನಂಬಿಕೆ ವ್ಯಕ್ತಪಡಿಸಿದ್ದೀರಿ. ಇಡೀ ರಾಜ್ಯಕ್ಕೆ ದೊಡ್ಡ ಸಂದೇಶ ಕೊಟ್ಟಿದ್ದೀರಿ. ಜಿಲ್ಲೆಯಲ್ಲಿ ಒಬ್ಬರೇ ಗೆದ್ದಿರಬಹುದು. ಆದರೆ, ಶಿವಲಿಂಗೇಗೌಡ, ಶ್ರೇಯಸ್ ಪಟೇಲ್ ಹಾಗೂ ಕಾಂಗ್ರೆಸ್ ನಾಯಕರ ನೇತೃತ್ವದಲ್ಲಿ ಮುಂದಿನ ಚುನಾವಣೆಯಲ್ಲಿ ಏಳೂ ಕ್ಷೇತ್ರಗಳನ್ನು ಗೆಲ್ಲುವ ಆತ್ಮವಿಶ್ವಾಸವಿದೆ ಎಂದು ಹೇಳಿದರು.

4 ಜತೆ ಚಪ್ಪಲಿ ಸವೆಸಿದ್ದಾರೆ

ಶಾಸಕ ಶಿವಲಿಂಗೇಗೌಡರು ಕನಕಪುರ ಕ್ಷೇತ್ರಕ್ಕಿಂತ ಅರಸೀಕೆರೆಗೆ ಹೆಚ್ಚು ಕೆಲಸ ಮಾಡಿದ್ದಾರೆ. ಅವರ ಕಾಟ ನಮಗೆ ಜಾಸ್ತಿ. ಅಭಿವೃದ್ಧಿ ಕೆಲಸಗಳಿಗಾಗಿ ನಮ್ಮನೆಗೆ, ಸಿಎಂ ಮನೆಗೆ ತಿರುಗಿ 4 ಜತೆ ಚಪ್ಪಲಿ ಸವೆಸಿದ್ದಾರೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್‌ಹೇಳಿದರು. ಹಿಂದೆ ಅರಸೀಕೆರೆಗೆ ಮಲತಾಯಿ ಧೋರಣೆ ಮಾಡಲಾಗಿತ್ತು. ನಾವು ನಾಲ್ಕು ಋಣಗಳನ್ನು ತೀರಿಸಬೇಕು. ತಂದೆ-ತಾಯಿ, ದೇವರ, ಗುರು ಮತ್ತು ಸಮಾಜದ್ದು. ಈಗ ಇಲ್ಲಿ ನೀರಿನ ಬವಣೆಯನ್ನು ಶಿವಲಿಂಗೇಗೌಡರು ನಿವಾರಣೆ ಮಾಡಿದ್ದಾರೆ. ಇಂತಹ ಶಾಸಕರು ಎಲ್ಲಾ ಕ್ಷೇತ್ರಗಳಲ್ಲಿ ಇದ್ದರೆ ಮುಂದಿನ ಚುನಾವಣೆಯಲ್ಲಿ 138 ಕ್ಕಿಂತ ಹೆಚ್ಚು ಸೀಟು ಗೆಲ್ಲುತ್ತೇವೆ ಎಂದರು.

ಸಂಸತ್ ಸದಸ್ಯರಾಗಿದ್ದು, ಅನುಭವ ಪಡೆದುಕೊಳ್ಳಲಿ

ಯದುವೀರ್ ಹೇಳಿಕೆಗೆ ಶಿವಕುಮಾರ್ ತಿರುಗೇಟು

ಅರಸೀಕೆರೆ: ರಾಜ್ಯ ಸರಕಾರಕ್ಕೆ ಜಾತಿಗಣತಿ ಮಾಡುವ ಯೋಗ್ಯತೆ ಇಲ್ಲ ಎಂಬ ಮೈಸೂರು ಸಂಸದ ಯದುವೀರ್ ಹೇಳಿಕೆಗೆ ಡಿಸಿಎಂ ಡಿ.ಕೆ.ಶಿ ಶಿವಕುಮಾರ್ ತಿರುಗೇಟು ನೀಡಿದರು.

ನಗರದ ಹೆಲಿಪ್ಯಾಡ್‌ನಲ್ಲಿ ಮಾತನಾಡಿದ ಅವರು, ಪಾಪ ಅವರಿನ್ನೂ ಹೊಸದಾಗಿ ಎಂಪಿ ಆಗಿದ್ದಾರೆ, ಇನ್ನೂ ಸಂಸತ್ ಸದಸ್ಯರಾಗಿದ್ದು, ಅನುಭವ ಪಡೆದುಕೊಳ್ಳಲಿ ಎಂದು ಟಾಂಗ್ ನೀಡಿದರು. ನಾವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವಿಚಾರದಲ್ಲಿ ಗಣತಿ ಮಾಡುತ್ತಿದ್ದೇವೆ, ಹಿಂದೆ ಕೂಡ ಮಾಡಿದ್ದೆವು. ಆದರೆ ಆ ಬಗ್ಗೆ ಕೆಲವು ಸಂಘ ಸಂಸ್ಥೆಗಳು, ಪ್ರಬಲ ಸಮಾಜಗಳು ಅಪಸ್ವರ ಎತ್ತಿದ್ದರಿಂದ, ಮರುಗಣತಿ ಮಾಡಿ ಎಂದು ಹೇಳಿದ್ದರಿಂದ ಈಗ ಮತ್ತೆ ಅವಕಾಶ ಮಾಡಿಕೊಟ್ಟಿದ್ದೇವೆ ಎಂದರು.

ಯದುವೀರ್ ಅವರು ಇನ್ನೂ ಸ್ವಲ್ಪ ಎಲ್ಲಾ ಕಲಿತುಕೊಳ್ಳಲಿ, ಪಾಪ ಅವರಿಗಿನ್ನೂ ಅನುಭವ ಇಲ್ಲ, ಕೇಂದ್ರ ಸರಕಾರ ನಮ್ಮನ್ನ ನೋಡಿ ಅನೌನ್ಸ್ ಮಾಡಿದೆ ಎಂದು ಕುಟುಕಿದರು. ನಾವು ನಮ್ಮ ಪಕ್ಷದ ಪ್ರಣಾಳಿಕೆಯಲ್ಲೂ ಹೇಳಿದೆ, ರಾಹುಲ್ ಗಾಂಧಿ ಇಡೀ ದೇಶದಲ್ಲಿ ಮುಂದಾಳತ್ವ ತಗೆದುಕೊಂಡಿದ್ದಾರೆ, ತೆಲಂಗಾಣದಲ್ಲಿ ಈಗಾಗಲೇ ಮಾಡಿದ್ದೇವೆ, ಇಲ್ಲೂ ಮಾಡುತ್ತೇವೆ ಎಂದರು. ಹಿಂದೆ ಜಾತಿಗಣತಿ ಮಾಡಿ ಹತ್ತು ವರ್ಷ ಆಗಿದೆ, ಅದಕ್ಕೆ ಹೊಸದಾಗಿ ಮಾಡಬೇಕು ಎಂದು ನಾನೇ ಪಕ್ಷದ ಅಧ್ಯಕ್ಷನಾಗಿ ಜತೆಗೆ ಅನೇಕ ಸಚಿವರು ಸೇರಿ ಮುಖ್ಯಮಂತ್ರಿ ಅವರ ಮನವೊಲಿಸಿ ದೆವು, ನಮ್ಮ ಪಕ್ಷದ ಹೈಕಮಾಂಡ್ ಕೂಡ ಆದೇಶ ನೀಡಿತ್ತು. ಅದರಂತೆ ಹೊಸದಾಗಿ ಗಣತಿ ಆಗುತ್ತಿದೆ ಎಂದು ಹೇಳಿದರು.

ಸಿದ್ದರಾಮಯ್ಯ ಮೈಸೂರಿಗಲ್ಲದೇ ರಾಜ್ಯಕ್ಕೆ ಕೊಡುಗೆ

ವಿಜಯಪುರ: ಯತೀಂದ್ರ ಅವರ ಹೇಳಿಕೆಗೆ ಸಚಿವ ಎಂ.ಬಿ.ಪಾಟೀಲ್ ಅವರು ಸಮರ್ಥನೆ ಮಾಡಿಕೊಂಡರು.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ ಹಳೆ ಮೈಸೂರಿನ ಭಾಗಕ್ಕೆ ಕೊಡುಗೆ ಕೊಟ್ಟಿದ್ದಾರೆ. ಕನ್ನಂಬಾಡಿ ಅಣೆ ಕಟ್ಟೆ ಹಾಗೂ ಇತರೆ ಕೆಲಸಗಳನ್ನು ಒಡೆಯರ್ ಮಾಡಿದ್ದಾರೆ. ಅದೇ ರೀತಿ ಸಿಎಂ ಸಿದ್ದರಾಮಯ್ಯ ಮೈಸೂರು ಭಾಗ ಅಷ್ಟೇ ಅಲ್ಲಾ ಇಡೀ ರಾಜ್ಯಕ್ಕೆ ಕೊಡುಗೆ ಕೊಟ್ಟಿದ್ದಾರೆ ಎಂದು ಸಮರ್ಥಿಸಿಕೊಂಡರು.

ಅನ್ನಭಾಗ್ಯ, ಕ್ಷೀರ ಭಾಗ್ಯ, ಕೃಷಿ ಭಾಗ್ಯ ಸೇರಿದಂತೆ 5 ಗ್ಯಾರಂಟಿ ಯೋಜನೆಗಳನ್ನು ನೀಡಿದ್ದಾರೆ. 3600 ಕೋಟಿ ರು ತುಬಚಿ, ಬಬಲೇಶ್ವರ ಏತ ನೀರಾವರಿ ಯೋಜನೆಗೆ ಹಣ ಕೊಟ್ಟಿದ್ದೇ ಸಾಕ್ಷಿ. ಸಿದ್ದರಾಮಯ್ಯ ಹಾಗೂ ನಾಲ್ವಡಿ ಕೃಷ್ಣರಾಜರು ರಾಜ್ಯಕ್ಕೆ ದೊಡ್ಡ ಸೇವೆ ಮಾಡಿದ್ದಾರೆ ಎಂದರು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೆವಾಲಾ ಕಲೆಕ್ಷನ್ ಸಲುವಾಗಿ ಸಭೆ ಮಾಡುತ್ತಿದ್ದಾರೆ ಎಂದಿರುವ ಯತ್ನಾಳ್ ಹೇಳಿಕೆಗೆ ಟಾಂಗ್ ಕೊಟ್ಟ ಎಂಬಿಪಿ ಅವರು, ಕಲೆಕ್ಷನ್ ಮಾಡಲು ರಾಜ್ಯಕ್ಕೆ ಬಂದಿದ್ದಾರಾ ಎಂದು ಹೇಳಲು ಯತ್ನಾಳ್ ಅವರು ಏನಾದ್ರು ಸುರ್ಜೆವಾಲ ಅವರಿಗೆ ಹಣ ಕೊಟ್ಟಿದ್ದಾರಾ ಎಂದು ಪ್ರಶ್ನಿಸಿದರು.

ಮಹಾರಾಜರ ಜತೆಗೆ ಹೋಲಿಕೆ ಅಸಂಬದ್ಧ

ವಿಜಯಪುರ: ಮೈಸೂರು ಮಹಾರಾಜರಕ್ಕಿಂತ ಸಿಎಂ ಸಿದ್ದರಾಮಯ್ಯ ಕೆಲಸ ಮಾಡಿದ್ದಾರೆ ಎಂದು ಶಾಸಕ ಯತೀಂದ್ರ, ಹೇಳಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಕಿಡಿಕಾರಿದರು.

ಈ ಬಗ್ಗೆ ಸುದ್ದಿಗಾರರ ಜತೆ ಮಾತನಾಡಿದ ಅವರು, ಮೈಸೂರು ಮಹಾರಾಜರು ತಮ್ಮ ಒಡವೆ, ಆಸ್ತಿ ಮಾರಾಟ ಮಾಡಿ ಕೆ.ಆರ್.ಎಸ್. ಡ್ಯಾಂ ಕಟ್ಟಿದ್ದಾರೆ. ಸಿಎಂ ಸಿದ್ದರಾಮಯ್ಯ ಏನಾದ್ರು ಮಾರಿದ್ದಾರಾ? ಮೈಸೂರು ಮುಡಾದಾಗ ಇದ್ದ ಪ್ಲಾಟ್ ಹೊಡೆದುಕೊಂಡು ಹೋಗ್ಯಾರ. ಅವರ ಮಗಾ ಯತೀಂದ್ರ, ತೀರ ಹಾದಿ ಬಿಟ್ಟಿದ್ದಾನೆ. ಏನಾದ್ರು ಶ್ಯಾಣೆ ಅದಾನೇನು ಅಂತ ತಿಳಿಕೊಂಡಿದ್ದೇವು. ದೇವರಾಜ ಅರಸ್. ಮೈಸೂರು ಮಹಾರಾಜರ ಜತೆಗೆ ಹೋಲಿಸುವುದು ಮೂರ್ಖತನ ಅಸಂಬದ್ಧವಾಗಿದೆ. ನಿಮ್ಮ ಅಪ್ಪ ಗ್ಯಾರಂಟಿ ಮ್ಯಾಲ ಕರ್ನಾಟಕ ದಿವಾಳಿ ಮಾಡ್ಯಾನ ಎಂದು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ಸುರ್ಜೆವಾಲಾ ಸಭೆ ಕುರಿತು ಪ್ರತಿಕ್ರಿಯೆ ನೀಡಿದ ಅವರು, ರಾಜ್ಯ ಸರಕಾರ ಗ್ಯಾರಂಟಿಗಳಿಂದ ದಿವಾಳಿಯಾಗಿದೆ. ಕಾಂಗ್ರೆಸ್ ಪಕ್ಷದ ವೀಕ್ಷಕ ಸುರ್ಜೆವಾಲಾ ಮೀಟಿಂಗ್ ಮಾಡಿ ಕಲೆಕ್ಷನ್ ಮಾಡ್ತಿದ್ದಾರೆ. ಮುಂದೆ ಚುನಾವಣೆ ಬರ್ತಿದೆ, ಅವರಿಗೆ ಕರ್ನಾಟಕ ಬಿಟ್ಟು ಬೇರೆ ಸೋರ್ಸ್ ಇಲ್ಲ. ಆದ್ದರಿಂದ ಕಾಂಗ್ರೆಸ್ ಕಾರ್ಯದರ್ಶಿ ಸಭೆ ಮಾಡ್ತಾರೆ. ಕಲೆಕ್ಷನ್ ಮಾಡಿ ಚುನಾವಣೆಗಳಿಗೆ ಖರ್ಚು ಮಾಡುತ್ತಾರೆ ಎಂದು ಆರೋಪಿಸಿದರು.

ಸಂಪುಟ ಪುನರಚನೆಗೆ ಸಿಎಂ, ಡಿಸಿಎಂನ ಕೇಳಿ

ದಿನಾಂಕ ನಿಗದಿ ಮಾಡುವ ಅಧಿಕಾರ ನಮ್ಮ ವ್ಯಾಪ್ತಿಯಲ್ಲಿ ಇಲ್ಲ: ಸಚಿವ ಸತೀಶ ಜಾರಕಿಹೊಳಿ

ಬಾಗಲಕೋಟೆ: ಸಚಿವ ಸಂಪುಟ ಪುನರಚನೆ ಬಗ್ಗೆ ಸಿಎಂ, ಡಿಸಿಎಂ ಅವರನ್ನೇ ಕೇಳಬೇಕು. ಅವರೇ ಅದಕ್ಕೆ ಸರಿಯಾದ ಉತ್ತರ ಕೊಡಬೇಕು ಎಂದು ಸಚಿವ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಬೀಳಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಮಂತ್ರಿಗಳು ಅಷ್ಟೇ. ದಿನಾಂಕ ನಿಗದಿ ಮಾಡುವ ಅಧಿಕಾರ ವ್ಯಾಪ್ತಿಯಲ್ಲ ಎಂದರು.ನಾವು ಇಲ್ಲೆ ಬಾಗಲಕೋಟೆ, ಬೆಳಗಾವಿ ಹಾಗೂ ವಿಜಯಪುರನಲ್ಲಿ ಇರುತ್ತೇವೆ. ಎಲ್ಲಕಡೆ ನಮ್ಮ ಅಭಿಮಾನಿಗಳು ಸಿಎಂ ಆಗ್ಲಿ ಅಂತ ಘೋಷಣೆ ಕೂಗುತ್ತಾರೆ. ಮುಂದಿನ ಸೂಚನೆ ಅಷ್ಟೇ, ಇವತ್ತಿನದಲ್ಲ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ ಪರ ಕೆಲ ಸ್ವಾಮೀಜಿ ಬ್ಯಾಟಿಂಗ್ ಮಾಡ್ತಿರುವ ವಿಚಾರಕ್ಕೆ ಉತ್ತರಿಸಿದ ಅವರು, ಇದ್ದೇ ಇರುತ್ತಾರೆ. ಅವರ ಅಭಿಮಾನಿಗಳು ಅವರ ಪರ ಘೋಷಣೆ, ನಮ್ಮ ಅಭಿಮಾನಿಗಳು ನಮ್ಮ ಪರ ಘೋಷಣೆ ಕೂಗುತ್ತಾರೆ. ಅವರು ಕೂಗಿದರೇ ನಾವು ಸಿಎಂ ಆಗ್ತಿವಾ? ಅಂತಿಮ ತೀರ್ಮಾನ ಯಾರ ಮಾಡುತ್ತಾರೆ ಎಂದು ಪ್ರಶ್ನಿಸಿದರು.

ಎಸ್ಸಿಗೆ ಶೇ.17, ಎಸ್ಟಿಗೆ ಶೇ.7 ಮೀಸಲಾತಿ ಹೆಚ್ಚಳ ಆಗಿಲ್ಲ ಎಂದು ಸಾಬೀತು ಪಡಿಸಿದರೆ ಸಂಸದ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ ಎಂಬ ಸಂಸದ ಗೋವಿಂದ ಕಾರಜೋಳ ಹೇಳಿಕೆಗೆ ಉತ್ತರಿಸಿದ ಅವರು, ಅದನ್ನು ಕುಳಿತು ಚರ್ಚೆ ಮಾಡಬೇಕು. ಅವರ ಅಂಕಿ ಸಂಖ್ಯೆ ನಮ್ಮ ಬಳಿ ಇಲ್ಲ ಎಂದರು.

'ಒಡೆಯರ್‌ಗಿಂತ ಹೆಚ್ಚು ಅಭಿವೃದ್ಧಿ' ಹೇಳಿಕೆಗೆ ಖಂಡನೆ

ಮೈಸೂರಿನಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಎಂಎಲ್‌ಸಿ ಯತೀಂದ್ರ ಅವರು, 'ನಮ್ಮಪ್ಪ (ಸಿದ್ದರಾಮಯ್ಯ) ಅವರು ಒಡೆಯರ್‌ಗಿಂತ ಹೆಚ್ಚು, ಅವರಿಗೆ ಸಮಾನವಾದ ರೀತಿಯಲ್ಲಿ ಮೈಸೂರು ಅಭಿವೃದ್ಧಿ' ಮಾಡಿದ್ದಾರೆ ಎಂದಿರುವ ಹೇಳಿಕೆಯನ್ನು ಬಿಜೆಪಿ ಮತ್ತು ಜೆಡಿಎಸ್ ನಾಯಕರು ತೀವ್ರವಾಗಿ ಖಂಡಿಸಿದ್ದಾರೆ.

ತಲೆಯಲ್ಲಿ ಬುದ್ಧಿ ತುಂಬಿಸಲು ಆಗಲ್ಲ: ಪ್ರತಾಪ್ ಸಿಂಹ

ಮೈಸೂರು: ಮಕ್ಕಳಿಗೆ ಆಸ್ತಿ ಮಾಡಿ ಕೊಡಬಹುದು, ತಲೆಯಲ್ಲಿ ಬುದ್ಧಿ ತುಂಬಿಸಲು ಆಗಲ್ಲ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಡಾ. ಯತೀಂದ್ರ ವಿರುದ್ಧ ಹರಿಹಾಯ್ದರು.

ನಾಲ್ವಡಿಗಿಂತ ಹೆಚ್ಚು ಅಭಿವೃದ್ಧಿ ಮಾಡಿದ್ದು ಸಿದ್ದರಾಮಯ್ಯ ಎಂಬ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಅನಧಿಕೃತ ವರ್ಗಾವಣೆ ಖಾತೆ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ. ಮಕ್ಕಳಿಗೆ ಆಸ್ತಿ ಮಾಡಿ ಕೊಡಬಹುದು, ತಲೆಯಲ್ಲಿ ಬುದ್ಧಿ ತುಂಬಿಸಲು ಆಗಲ್ಲ. ಡಾ. ಯತೀಂದ್ರ ಅವರ ಮಾತಲ್ಲ, ಇದು ಸಿದ್ದರಾಮಯ್ಯ ಅವರ ಅಂತರಾಳದ ಭಾವನೆ ಕೂಡ ಇದು ಎಂದು ಕಟುವಾಗಿ ಟೀಕಿಸಿದರು. ಮಹಾರಾಜರ ಕುಟುಂಬದ ಬಗ್ಗೆ ಸಿದ್ದರಾಮಯ್ಯಗೆ ದ್ವೇಷ ಭಾವನೆ ಇದೆ. ದೇವರಾಜ ಅರಸುಗಿಂತ ದೊಡ್ಡವರು ಸಿದ್ದರಾಮಯ್ಯ ಅಂತ ಹೇಳುತ್ತಿದ್ದರು. ಈಗ ನಾಲ್ವಡಿ ಕೃಷ್ಣರಾಜರಿಗಿಂತ ದೊಡ್ಡವರೆಂದು ಹೇಳಿದ್ದಾರೆ. ಹತ್ತು ವರ್ಷ ಸಿಎಂ ಆಗಿಬಿಟ್ಟರೆ ನಾಡದೇವತೆ ಚಾಮುಂಡಿಗಿಂತ ದೊಡ್ಡವರೆಂದು ಹೇಳಿ ಬಿಡುತ್ತಾರೆ ಎಂದು ಲೇವಡಿ ಮಾಡಿದರು.

ಪ್ರತಾಪ್ ಸಿಂಹ ಪಂಥಾಹ್ವಾನ: ಅಭಿವೃದ್ಧಿ ಬಗ್ಗೆ ಚರ್ಚೆಗೆ ಸಿಎಂ ಪಂಥಾಹ್ವಾನಕ್ಕೆ ಪ್ರತಾಪ್ ಸಿಂಹ, ಸಿಎಂ ಅವರೇ ವೇದಿಕೆ ಸಿದ್ಧ ಮಾಡಿ. ನಾವು ಬರುತ್ತೇವೆ, ಚರ್ಚೆ ಮಾಡಿಯೇ ಬಿಡೋಣ. ಕಲಘಟಗಿ ಲಾಡು, ಮರಿ ಖರ್ಗೆ, ನಿಮ್ಮ ಮಗ ಯತೀಂದ್ರ ಎಲ್ಲರನ್ನೂ ಕರೆದುಕೊಂಡು ಬನ್ನಿ ಎಂದು ಪ್ರತಾಪ್ ಸಿಂಹ ಮಾರ್ಮಿಕವಾಗಿ ನುಡಿದರು.

ವಂಶವಾಹಿಯಲ್ಲೇ ಅಹಂ: ಎಚ್. ವಿಶ್ವನಾಥ್

ಮೈಸೂರು: ನಾನೇ ನಾನೇ ಎನ್ನುವ ಅಹಂ, ದುರಹಂಕಾರ ಸಿದ್ದರಾಮಯ್ಯನವರ ಕುಟುಂಬದಲ್ಲಿ ವಂಶವಾಹಿ ರೀತಿ ಹರಿದುಕೊಂಡು ಬಂದಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಕಟುವಾಗಿ ಟೀಕಿಸಿದರು.



ನಾಲ್ವಡಿ ಒಡೆಯರ್‌ಗಿಂತ ಹೆಚ್ಚು ಅಭಿವೃದ್ಧಿ ಮಾಡಿದ್ದು ಸಿದ್ದರಾಮಯ್ಯ ಎಂಬ ಡಾ. ಯತೀಂದ್ರರ ಹೇಳಿಕೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಇದು ದುರಹಂಕಾರದ ಪರಮಾವಧಿ. ಸಿದ್ದರಾಮಯ್ಯ ಯಾವಾಗಲೂ ನಾನೇ ನಾನೇ ಅಂತಾರೆ. ದೇವರಾಜ ಅರಸುಗಿಂತಾ ನಾನೇ ಒಳ್ಳೆಯ ಆಡಳಿತ ಕೊಟ್ಟಿದ್ದು ಅಂತಾರೆ. ನಾನೇ ಎನ್ನುವ ದುರಹಂಕಾರ ಸಿದ್ದರಾಮಯ್ಯರ ಕುಟುಂಬಕ್ಕೆ ವಂಶವಾಹಿ ಬಂದಿದೆ. ತಂದೆ ಮತ್ತು ಮಗ ಮನುಷ್ಯ ದ್ವೇಷಿಗಳ ತರಹ ಮಾತಾಡುತ್ತಿದ್ದಾರೆ. ನಮ್ಮ ಕಡೆ ಈ ರೀತಿ ಮಾತಾಡುವವರಿಗೆ 'ಹುಚ್ಚು ಮುಂಡೇದು' ಅಂತಾರೆ ಎಂದು ಲೇವಡಿ ಮಾಡಿದರು.

ಮಹಾರಾಜರು ಅವರ ಅಪ್ಪನ ಮನೆಯಿಂದ ಹಣ ತಂದು ಅಭಿವೃದ್ಧಿ ಮಾಡಿದ್ದಾರಾ ಎಂದು ಹಿಂದೆ ಸಿದ್ದರಾಮಯ್ಯ ಕೇಳಿದ್ದರು. ಸಿದ್ದರಾಮಯ್ಯ ಏನು ಈಗ ಅವರ ಅಪ್ಪನ ಮನೆಯಿಂದ ಹಣ ತಂದು ಅಭಿವೃದ್ಧಿ ಮಾಡುತ್ತಿದ್ದಾರಾ ? ಅವರ ಮಗ ಈ ದೌಲತ್ ಗಿರಿ ಮೊದಲು ಬಿಡಲಿ. ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಹೋಲಿಕೆ ಮಾಡುವ ಯಾವ ರಾಜಕಾರಣಿ ಈ ದೇಶದಲ್ಲೇ ಇಲ್ಲ ಎಂದು ಹರಿ ಹಾಯ್ದರು.

ಅಭಿವೃದ್ಧಿ ಬಗ್ಗೆ ಸಿಎಂ ಚರ್ಚೆಗೆ ಬರಲಿ: ಯದುವೀರ್

ಮೈಸೂರು: ರಾಜ್ಯ ಸರಕಾರದಿಂದ ಆಗಿರುವ ಅಭಿವೃದ್ಧಿಯ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ವೇತಪತ್ರ ಹೊರಡಿಸಲಿ, ನಂತರ ನಮ್ಮನ್ನು ಚರ್ಚೆಗೆ ಆಹ್ವಾನಿಸಲಿ

ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸವಾಲು ಹಾಕಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯ ಸರಕಾರಕ್ಕೆ ಜಾತಿ ಜನಗಣತಿ ಮಾಡುವ ಯೋಗ್ಯತೆಯೇ ಇಲ್ಲ. ಈ ಹಿಂದೆ ಕಾಂತರಾಜ್ ಆಯೋಗದಿಂದ ಮಾಡಿಸಿದ ವರದಿಯನ್ನು ಕಸದ ಬುಟ್ಟಿಗೆ ಎಸೆದಿದ್ದು ಇದೇ ಸರಕಾರ. ಈಗ ಅದು ಕಳೆದು ಹೋಗಿದೆ, ಪತ್ತೆ ಇಲ್ಲ ಎಂದು ಹೇಳುತ್ತಿದೆ ಎಂದು ಆರೋಪಿಸಿದರು.

ಕೇಂದ್ರ ಸರಕಾರ ಈಗ ನಿಯಮಬದ್ಧವಾಗಿ ಜಾತಿ ಜನಗಣತಿ ನಡೆಸುತ್ತಿದೆ. ಕೇಂದ್ರದಲ್ಲಿ ಆಡಳಿತ ನಡೆಸಿದ ಕಾಂಗ್ರೆಸ್ ಸರಕಾರ ಏಕೆ ಈ ಕ್ರಮ ಕೈಗೊಂಡಿರಲಿಲ್ಲ. ಈಗ ಕಾಂಗ್ರೆಸ್ ಸುಮ್ಮನೆ ರಾಜಕಾರಣ ಮಾಡುತ್ತಿದೆ. ಕೇಂದ್ರವೇ ಜಾತಿ ಜನಗಣತಿ ಮಾಡುವಾಗ ರಾಜ್ಯ ಸರ್ಕಾರದಿಂದಲೂ ನಡೆಸುವ ಅವಶ್ಯಕತೆ ಇಲ್ಲ . ಮೈಸೂರಿಗೆ ನಾಲ್ವಡಿಗಿಂತಲೂ ಸಿದ್ದರಾಮಯ್ಯ ಕೊಡುಗೆ ಜಾಸ್ತಿ ಎಂಬ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆಗೆ ತಿರುಗೇಟು ನೀಡಿದ ಅವರು, ಯಾರು ಯಾರಿಗೂ ಹೋಲಿಸಿ ಮಾತನಾಡುವುದು ಸರಿಯಲ್ಲ ಎಂದು ಹೇಳಿದರು.

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್ ವಿಸಿಟ್ ಮಾಡಿ
www.pravasiprapancha.com

ರಸ್ತೆಗೆ ಹೆಸರಿಡುವವರು ಗೊತ್ತು, ಆದರೆ ಊರಿಗೆ ಯಾರು ಹೆಸರಿಡುತ್ತಾರೆ?

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com
vveditoped@gmail.com

ರಸ್ತೆ, ಬೀದಿ, ಬಡಾವಣೆಗಳಿಗೆ ಯಾರು ನಾಮಕರಣ ಮಾಡುತ್ತಾರೆ ಎಂಬುದು ನಮಗೆ ಗೊತ್ತು. ಅದೇ ವಿಷಯವಾಗಿ ವಿವಾದ, ರಾದ್ಧಾಂತವಾಗುವುದೂ ಗೊತ್ತು. ಆದರೆ ಊರುಗಳಿಗೆ ಯಾರು ಹೆಸರಿಡುತ್ತಾರೆ ಎಂಬುದು ಯಾರಿಗೂ ಗೊತ್ತಿಲ್ಲ. ಊರುಗಳಿಗೆ ಹೆಸರನ್ನು ಬದಲಿಸುವ ಸಂಪ್ರದಾಯವಿದೆ. ನಮ್ಮ ರಾಜ್ಯದ ಹೆಸರನ್ನು, ರಾಜಧಾನಿಯ ಹೆಸರನ್ನು ಬದಲಿಸಲಾಗಿದೆ. ಹಾಗೆ ಎಷ್ಟೋ ನಗರಗಳ ಹೆಸರುಗಳೂ ಬದಲಾಗಿವೆ. ಆದರೆ ಆ ಹೆಸರನ್ನು ಇಟ್ಟವರಾರು, ಮೊದಲು ಆ ಹೆಸರನ್ನು ಕರೆದವರಾರು ಎಂಬುದು ನಿಗೂಢವೇ.

ಮೈಸೂರಿಗೆ ಮೈಸೂರು, ಧಾರವಾಡಕ್ಕೆ ಧಾರವಾಡ ಎಂದು ನಾಮಕರಣ ಮಾಡಿದವರು ಯಾರು? ಊಹುಂ.. ಗೊತ್ತಿಲ್ಲ. ಇಲ್ಲಿ ತನಕ ಊರಿಗೆ ಇಟ್ಟ ಹೆಸರು ವಿವಾದ, ರಾದ್ಧಾಂತವಾಗಿಲ್ಲ. ಊರಿಗೆ ಏನೇ ಹೆಸರಿಟ್ಟರೂ ಜನ ಅದನ್ನು ತಕರಾರಿಲ್ಲದೇ ಕರೆಯುತ್ತಾರೆ. ದಾವಣಗೆರೆ ಸಮೀಪ 'ಸೂಳೆಕೆರೆ' ಎಂಬ ಊರಿದೆ. ನೂರಾರು ವರ್ಷಗಳ ತನಕ ಅದೇ ಹೆಸರಿನಿಂದಲೇ ಕರೆಯುತ್ತಿರಲಿಲ್ಲವೇ? ನಂತರವೇ ಅದು ಏಕೋ ವಿವಾದವಾಯಿತು. ಆದರೂ, ಈಗ ಸಹ ಅದೇ ಹೆಸರಿನಿಂದ ಕರೆಯುವುದುಂಟು.

ಕೆಲವು ವರ್ಷಗಳ ಹಿಂದೆ ನಾರ್ವೆಗೆ ಹೋಗಿದ್ದೆ. ಅಲ್ಲಿನ ಪ್ರಸಿದ್ಧ ಲೊಫೊಟೆನ್ ದ್ವೀಪ ಸಮೂಹದ ದಕ್ಷಿಣ ತುದಿಯಲ್ಲಿ ಮೋಸ್ಕನೆಸ್ ಹೆಸರಿನ ಪುರಸಭೆ ಇದೆ. ಇದರ ವ್ಯಾಪ್ತಿಯಲ್ಲಿ ಒಂದು ಸಣ್ಣ ಪಟ್ಟಣವಿದೆ. ತನ್ನ ಭೌಗೋಳಿಕ ಸೌಂದರ್ಯದಿಂದಾಗಿ ಇದು ಪ್ರವಾಸಿಗರ ಆಕರ್ಷಣೆಯ ತಾಣವಾಗಿದೆ. ಆ ಪಟ್ಟಣದ ಹೆಸರು–A. ಅದನ್ನು 'ಆಹ್' ಎಂದು ಉಚ್ಚರಿಸುತ್ತಾರೆ. ಇದು ವಿಶ್ವದಲ್ಲಿಯೇ ಅತಿ ಕಡಿಮೆ ಅಕ್ಷರಗಳಿರುವ ಭೌಗೋಳಿಕ ಹೆಸರನ್ನು ಹೊಂದಿರುವ ಸ್ಥಳ ಎಂದೇ ಜನಪ್ರಿಯ. ಈ ಕಾರಣಕ್ಕೆ ಅಸಂಖ್ಯ ಪ್ರವಾಸಿಗರು 'ಆಹ್'ಗೆ ಹೋಗಿ, ಹೆಸರಿನ ಫಲಕದ ಕೆಳಗಡೆ ನಿಂತು ಫೋಟೋ ತೆಗೆಸಿಕೊಂಡು ಬರುತ್ತಾರೆ. ನಾರ್ವೇಜಿಯನ್, ಸ್ವೀಡಿಷ್ ಮತ್ತು ಡ್ಯಾನಿಷ್ ಭಾಷೆಗಳಲ್ಲಿ 'A' ಎಂದರೆ 'ಸಣ್ಣ ನದಿ' ಅಥವಾ 'ಹಳ್ಳ' ಎಂದರ್ಥ. ಈ ಪಟ್ಟಣವು ನಾರ್ವೇಜಿಯನ್ ಭಾಷೆಯ ಹಳೆಯ ರೂಪವಾದ 'ಓಲ್ಡ್ ನಾರ್ಸ್'ನ 'a' ಪದದಿಂದ ಬಂದಿದೆ, ಇದರ ಅರ್ಥವೂ 'ಸಣ್ಣ ನದಿ' ಎಂಬುದಾಗಿದೆ.

ಈ ಪಟ್ಟಣವನ್ನು 1567ರಲ್ಲಿ 'Aa' ಎಂದು ಮೊದಲು ಉಲ್ಲೇಖಿಸಲಾಯಿತು. 1917ರಲ್ಲಿ ನಾರ್ವೇಜಿಯನ್ ಭಾಷಾ ಸುಧಾರಣೆಯ ಸಮಯದಲ್ಲಿ 'aa' ಅಕ್ಷರವನ್ನು 'a'ಗೆ ಬದಲಾಯಿಸಲಾಯಿತು. 'A' ಅಕ್ಷರವನ್ನು ಇಂಗ್ಲಿಷ್‌ನಲ್ಲಿ 'aw' ಅಥವಾ 'oh' ಎಂದು ಉಚ್ಚರಿಸಲಾಗುತ್ತದೆ. ಕನ್ನಡದಲ್ಲಿ ಇದನ್ನು 'ಆಹ್' ಎಂದು ಉಚ್ಚರಿಸಬಹುದು. 1990ರ ದಶಕದವರೆಗೂ A ಒಂದು ಸಣ್ಣ ಮೀನುಗಾರಿಕೆ ಗ್ರಾಮವಾಗಿತ್ತು, ವಿಶೇಷವಾಗಿ ಒಣಗಿಸಿದ ಮೀನು (stockfish) ಉತ್ಪಾದನೆಯಲ್ಲಿ ಪರಿಣತಿ ಹೊಂದಿತ್ತು. ಲೊಫೊಟೆನ್ ದ್ವೀಪಗಳು ಮೀನುಗಾರಿಕೆಗೆ ಹೆಸರುವಾಸಿಯಾಗಿದ್ದು, A ಸಹ ಅದರ ಅವಿಭಾಜ್ಯ ಅಂಗವಾಗಿತ್ತು.

ಇತ್ತೀಚಿನ ದಶಕಗಳಲ್ಲಿ, ಪ್ರವಾಸೋದ್ಯಮವು A ಪಟ್ಟಣದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ಮಾರ್ಪಟ್ಟಿದೆ. ಪ್ರಕೃತಿ ಸೌಂದರ್ಯ, ಸಾಂಪ್ರದಾಯಿಕ ಮೀನುಗಾರಿಕೆ ಅನುಭವ ಮತ್ತು ಗ್ರಾಮದ ಅನನ್ಯ ಹೆಸರಿನ ಕಾರಣದಿಂದಾಗಿ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ. ನಾರ್ವೆಯ ಪ್ರಮುಖ ರಫ್ತು ಉತ್ಪನ್ನಗಳಲ್ಲಿ ಒಂದಾದ ಸ್ಟಾಕ್‌ಫಿಶ್‌ನ ಇತಿಹಾಸ ಮತ್ತು ಉತ್ಪಾದನಾ ಪ್ರಕ್ರಿಯೆಯನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ಯುರೋಪ್‌ನ ಅತಿ ಹಳೆಯ ಮೀನು ಎಣ್ಣೆ ಕಾರ್ಖಾನೆ ಈಗ ಮ್ಯೂಸಿಯಂ ಆಗಿ ಪರಿವರ್ತನೆಗೊಂಡಿದೆ. ಈ ಮ್ಯೂಸಿಯಂ ಹಳೆಯ ಕಾಲದ ಮೀನುಗಾರರ ಜೀವನಶೈಲಿ, ಅವರ ಮನೆಗಳು ಮತ್ತು ದೋಣಿಗಳ ಬಗ್ಗೆ ಮಾಹಿತಿ ನೀಡುತ್ತದೆ.

1800ರ ದಶಕದಲ್ಲಿ ನಿರ್ಮಿಸಲಾದ ಸುಮಾರು 39 ಮನೆಗಳು ಇಲ್ಲಿವೆ. ಇವು ಗ್ರಾಮದ ಶ್ರೀಮಂತ ಪರಂಪರೆಯನ್ನು ಪ್ರತಿಬಿಂಬಿಸುವ ವಿಶಿಷ್ಟ ವಾಸ್ತುಶಿಲ್ಪ ಶೈಲಿಯನ್ನು ಪ್ರದರ್ಶಿಸುತ್ತವೆ. ಈ ಪಟ್ಟಣವು ಯುರೋಪಿಯನ್ ಮಾರ್ಗ E10 ಹೆದ್ದಾರಿಯ ಮೂಲಕ ಉಳಿದ ದ್ವೀಪಸಮೂಹಕ್ಕೆ ಸಂಪರ್ಕ ಹೊಂದಿದೆ. ಈ ಹೆದ್ದಾರಿಯನ್ನು 'ಕಿಂಗ್ ಓಲಾವ್ ರಸ್ತೆ' ಎಂದೂ ಕರೆಯಲಾಗುತ್ತದೆ ಮತ್ತು ಇದು 'A' ನಲ್ಲಿ ಕೊನೆಗೊಳ್ಳುತ್ತದೆ.

ಆ ಪಟ್ಟಣಕ್ಕೆ ಹೋಗಿ ಬಂದ ಬಳಿಕ ನಾನು 'ವಿಶ್ವವಾಣಿ'ಯಲ್ಲಿ, ಸುಮಾರು ಒಂಬತ್ತು ವರ್ಷಗಳ ಹಿಂದೆ, ಒಂದು ಲೇಖನ ಬರೆದಿದ್ದೆ. ಅತಿ ಕಡಿಮೆ ಅಕ್ಷರಗಳಿರುವ ಊರು ಎಂದು ಒತ್ತಿ ಬರೆದಿದ್ದೆ. ಆ ಲೇಖನವನ್ನು ಆನ್‌ಲೈನ್‌ನಲ್ಲಿ ಓದಿದ ಸ್ನೇಹಿತರೊಬ್ಬರು, ''ಅಮೆರಿಕದ ಒರೆಗಾನ್‌ನಲ್ಲಿ ಒಂದು ನದಿಯಿದೆ, ಅದರ ಹೆಸರು 'D' ಅಂತ ಇದೆ'' ಎಂದು ತಿಳಿಸಿದರು. ಇತ್ತೀಚೆಗೆ ನಾನು ಜಪಾನಿಗೆ ಹೋದಾಗ, ಅಲ್ಲಿ 'E' ಹೆಸರಿನ ಒಂದು ಪರ್ವತವಿದೆ ಎಂದು ಗೊತ್ತಾಯಿತು. ಹಾಗೆ ಇಂಗ್ಲೆಂಡಿನಲ್ಲಿ 'O' ಹೆಸರಿನ ನದಿ ಇದೆ ಎಂದೂ ಕೇಳಿದ್ದೇನೆ. ಅಲಾಸ್ಕಾದಲ್ಲಿ 'Y' ಹೆಸರಿನ ಒಂದು ಗ್ರಾಮವಿದೆಯಂತೆ. ಈ ಹೆಸರಿನ ಊರುಗಳನ್ನು ಕರೆಯಲು, ಬರೆಯಲು, ಹೇಳಲು ಸುಲಭವಾಗಬಹುದು. ಆದರೆ ಕೇವಲ ಒಂದಕ್ಷರದ ಊರುಗಳಿವೆ ಎನ್ನುವ ಸಂಗತಿ ಗೊತ್ತಿಲ್ಲದಿದ್ದರೆ ಖಂಡಿತವಾಗಿಯೂ ಗೊಂದಲವಾಗದೇ ಹೋಗುವುದಿಲ್ಲ.

ಸೇನೆಯಿಲ್ಲದಿದ್ದರೂ ಸುರಕ್ಷಿತ

ನಾನು ನೋಡಿದ ದೇಶಗಳಲ್ಲಿಯೇ ಐಸ್‌ಲ್ಯಾಂಡ್ ವಿಶಿಷ್ಟವಾದುದು. ಇದು ವಿಶ್ವದಲ್ಲಿಯೇ ಸ್ಥಾಯಿ ಸೇನೆಯನ್ನು (Standing Army) ಹೊಂದಿರದ ಕೆಲವೇ ಕೆಲವು ರಾಷ್ಟ್ರಗಳಲ್ಲಿ ಒಂದಾಗಿದೆ. ಇದನ್ನು ನಮ್ಮ ದೇಶದ ಪರಿಸ್ಥಿತಿಯಲ್ಲಿ ಒಮ್ಮೆ ಊಹಿಸಿಕೊಳ್ಳಿ.

ಐಸ್‌ಲ್ಯಾಂಡ್ 1944ರಲ್ಲಿ ಡೆನ್ಮಾರ್ಕ್‌ನಿಂದ ಸಂಪೂರ್ಣ ಸ್ವಾತಂತ್ರ್ಯ ಪಡೆಯಿತು. ತನ್ನ ಇತಿಹಾಸದುದ್ದಕ್ಕೂ, ಐಸ್‌ಲ್ಯಾಂಡ್ ದೊಡ್ಡ ಪ್ರಮಾಣದ ಮಿಲಿಟರಿ ಬಲವನ್ನು ಹೊಂದಿರಲಿಲ್ಲ. ಇದಕ್ಕೆ ಮುಖ್ಯ ಕಾರಣ, ಐಸ್‌ಲ್ಯಾಂಡ್‌ನ ಭೌಗೋಳಿಕ ಸ್ಥಾನ ಮತ್ತು ಐತಿಹಾಸಿಕವಾಗಿ ಯುದ್ಧಗಳಲ್ಲಿ ನೇರವಾಗಿ ಭಾಗವಹಿಸದ ನೀತಿ. ಐಸ್‌ಲ್ಯಾಂಡ್‌ಗೆ ಯಾವುದೇ ನಿಶ್ಚಿತವಾದ, ದೊಡ್ಡ ಪ್ರಮಾಣದ ಸೇನೆ ಇಲ್ಲ. ಅಂದರೆ, ಬೇರೆ ದೇಶಗಳಲ್ಲಿರುವಂತೆ ಸೇನೆ, ನೌಕಾಪಡೆ, ವಾಯುಪಡೆ ಎಂಬ ವಿಭಾಗಗಳಿಲ್ಲ.

ಹಾಗಾದರೆ, ಈ ದೇಶದ ರಕ್ಷಣೆ ಹೇಗೆ ನಡೆಯುತ್ತದೆ? ಐಸ್‌ಲ್ಯಾಂಡ್ ತನ್ನ ಕರಾವಳಿ ರಕ್ಷಣೆಗೆ ಆದ್ಯತೆ ನೀಡುತ್ತದೆ. ಇದಕ್ಕಾಗಿ ಇದು ಒಂದು ಉತ್ತಮವಾಗಿ ತರಬೇತಿ ಪಡೆದ ಮತ್ತು ಸುಸಜ್ಜಿತವಾದ ಕರಾವಳಿ ರಕ್ಷಕ ಪಡೆಯನ್ನು ಹೊಂದಿದೆ. ಈ ಪಡೆಯು ಮೀನುಗಾರಿಕೆ ಗಡಿಗಳನ್ನು ರಕ್ಷಿಸುವುದು, ಸಮುದ್ರದಲ್ಲಿ ಹುಡುಕಾಟ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸುವುದು ಮತ್ತು ದೇಶದ ಭದ್ರತೆಗೆ ಸಂಬಂಧಿಸಿದ ಇತರ ಕಾರ್ಯಗಳನ್ನು ನಿರ್ವಹಿಸುತ್ತದೆ. ಈ ಪಡೆಯು ಶಸ್ತ್ರಸಜ್ಜಿತ ಹಡಗುಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಹೊಂದಿದೆ. ದೇಶದ ಆಂತರಿಕ ಭದ್ರತೆ ಮತ್ತು ಕಾನೂನು ಸುವ್ಯವಸ್ಥೆಯನ್ನು ಪೊಲೀಸ್ ಪಡೆ ನಿರ್ವಹಿಸುತ್ತದೆ. ಐಸ್‌ಲ್ಯಾಂಡ್‌ನಲ್ಲಿ ಪೊಲೀಸ್ ಅಧಿಕಾರಿಗಳು ಬಂದೂಕುಗಳನ್ನು ಹೊಂದುವುದು ಅಪರೂಪ. ಇದು ಅಲ್ಲಿನ ಶಾಂತಿಯುತ ಸಮಾಜವನ್ನು ಪ್ರತಿಬಿಂಬಿಸುತ್ತದೆ.

ಐಸ್‌ಲ್ಯಾಂಡ್ ನ್ಯಾಟೋ (North Atlantic Treaty Organization) ದ ಸಂಸ್ಥಾಪಕ ಸದಸ್ಯ ರಾಷ್ಟ್ರಗಳಲ್ಲಿ ಒಂದಾಗಿದೆ. ನ್ಯಾಟೋದ ಸದಸ್ಯತ್ವದ ಮೂಲಕ, ಐಸ್‌ಲ್ಯಾಂಡ್ ಇತರ ಸದಸ್ಯ ರಾಷ್ಟ್ರಗಳಿಂದ ರಕ್ಷಣಾ ಭರವಸೆಯನ್ನು ಪಡೆಯುತ್ತದೆ. ಅಂದರೆ, ಐಸ್‌ಲ್ಯಾಂಡ್‌ಗೆ ಯಾವುದೇ ಬಾಹ್ಯ ಬೆದರಿಕೆ ಎದುರಾದರೆ, ನ್ಯಾಟೋದ ಇತರ ಪ್ರಬಲ ಮಿಲಿಟರಿ ರಾಷ್ಟ್ರಗಳು (ಉದಾಹರಣೆಗೆ, ಅಮೆರಿಕ, ಕೆನಡ, ಯುನೈಟೆಡ್ ಕಿಂಗ್‌ಡಮ್) ಅದರ ನೆರವಿಗೆ ಬರುತ್ತವೆ. ಇದು ಐಸ್‌ಲ್ಯಾಂಡ್‌ಗೆ ಸೇನೆಯ ಅಗತ್ಯವನ್ನು ಕಡಿಮೆ ಮಾಡಿದೆ.

ಐಸ್‌ಲ್ಯಾಂಡ್ ತನ್ನದೇ ಆದ ಸಣ್ಣ ಅಂತಾರಾಷ್ಟ್ರೀಯ ಶಾಂತಿಪಾಲನಾ ಪಡೆ (peacekeeping force)ಯನ್ನು ಹೊಂದಿದೆ. ಇದನ್ನು ಐಸ್‌ಲ್ಯಾಂಡಿಕ್ ಕ್ರೈಸಿಸ್ ರೆಸ್ಪಾನ್ಸ್ ಯುನಿಟ್ (ICRU) ಎಂದು ಕರೆಯಲಾಗುತ್ತದೆ. ಈ ಘಟಕವನ್ನು ವಿವಿಧ ಮಾನವೀಯ ಮತ್ತು ಶಾಂತಿಪಾಲನಾ ಕಾರ್ಯಾಚರಣೆಗಳಿಗಾಗಿ ವಿಶ್ವಸಂಸ್ಥೆ ಅಥವಾ ನ್ಯಾಟೋದ ಅಡಿಯಲ್ಲಿ ನಿಯೋಜಿಸಲಾಗುತ್ತದೆ. ಆದರೆ, ಇದು ನಿಯತ ಸೇನೆಯಲ್ಲ, ಬದಲಿಗೆ ತುರ್ತು ಪರಿಸ್ಥಿತಿಗಳಿಗೆ ಸ್ಪಂದಿಸುವ ಒಂದು ವಿಶೇಷ ಘಟಕವಾಗಿದೆ.

ಐಸ್‌ಲ್ಯಾಂಡ್ ತನ್ನದೇ ಆದ ಯುದ್ಧ ವಿಮಾನಗಳನ್ನು ಹೊಂದಿಲ್ಲ. ಆದರೆ, ನ್ಯಾಟೋ ಸದಸ್ಯ ರಾಷ್ಟ್ರಗಳು ಐಸ್‌ಲ್ಯಾಂಡ್‌ನ ವಾಯುಪ್ರದೇಶದ ಮೇಲೆ ನಿಯತವಾಗಿ ವಾಯು ಕಣ್ಗಾವಲು (Air Policing) ನಡೆಸುತ್ತವೆ. ಇದು ಐಸ್‌ಲ್ಯಾಂಡ್‌ನ ಭದ್ರತೆಯನ್ನು ಖಚಿತಪಡಿಸುತ್ತದೆ. ಸೇನೆಯೇ ಇಲ್ಲದಿರುವುದು ಐಸ್‌ಲ್ಯಾಂಡ್ ಅನ್ನು ವಿಶ್ವದ ಅತ್ಯಂತ ಶಾಂತಿಯುತ ದೇಶಗಳಲ್ಲಿ ಒಂದಾಗಿ ಗುರುತಿಸಲು ಕಾರಣವಾಗಿದೆ. ಗ್ಲೋಬಲ್ ಪೀಸ್ ಇಂಡೆಕ್ಸ್‌ನಲ್ಲಿ ಇದು ಸಾಮಾನ್ಯವಾಗಿ ಅಗ್ರಸ್ಥಾನಗಳಲ್ಲಿ ಇರುತ್ತದೆ.

ಸೇನೆಯನ್ನು ನಿರ್ವಹಿಸುವುದಕ್ಕೆ ದೊಡ್ಡ ಪ್ರಮಾಣದ ವೆಚ್ಚ ತಗಲುತ್ತದೆ. ಸೇನೆಯಿಲ್ಲದಿರುವುದರಿಂದ, ಐಸ್‌ಲ್ಯಾಂಡ್ ಈ ಹಣವನ್ನು ತನ್ನ ನಾಗರಿಕರ ಕಲ್ಯಾಣ, ಶಿಕ್ಷಣ, ಆರೋಗ್ಯ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಬಳಸಿಕೊಳ್ಳುತ್ತದೆ. ಐಸ್‌ಲ್ಯಾಂಡ್ ತನ್ನ ನೈಸರ್ಗಿಕ ಸೌಂದರ್ಯಕ್ಕೆ ಹೆಸರುವಾಸಿ. ಸೇನೆಯ ದೊಡ್ಡ ಪ್ರಮಾಣದ ಕಾರ್ಯಾಚರಣೆಗಳು ಪರಿಸರಕ್ಕೆ ಹಾನಿ ಮಾಡಬಹುದು. ಸೇನೆಯಿಲ್ಲದಿರುವುದು ಪರಿಸರ ಸಂರಕ್ಷಣೆಗೆ ಪೂರಕವಾಗಿದೆ. ಒಟ್ಟಾರೆ, ಐಸ್‌ಲ್ಯಾಂಡ್‌ನ ಸೇನಾರಾಹಿತ್ಯವು ಅದರ ಭೌಗೋಳಿಕ ಸ್ಥಿತಿ, ರಾಜಕೀಯ ಇತಿಹಾಸ, ಮತ್ತು ಪ್ರಮುಖ ಅಂತಾರಾಷ್ಟ್ರೀಯ ಒಕ್ಕೂಟಗಳೊಂದಿಗಿನ ಸಂಬಂಧದ ಫಲಿತಾಂಶವಾಗಿದೆ. ಇದು ಆಧುನಿಕ ಜಗತ್ತಿನಲ್ಲಿ ಸೇನೆಯಿಲ್ಲದೆಯೂ ಒಂದು ದೇಶ ಹೇಗೆ ಸುರಕ್ಷಿತವಾಗಿ ಮತ್ತು ಸಮೃದ್ಧವಾಗಿ ಇರಬಹುದು ಎಂಬುದಕ್ಕೆ ಒಂದು ಉತ್ತಮ ನಿದರ್ಶನ.

ನದಿಯೇ ಇಲ್ಲದ ದೇಶ

ನಮ್ಮ ನಾಗರಿಕತೆ ಹುಟ್ಟಿದ್ದೇ ನದಿಗಳ ಸಮೀಪ ಅಥವಾ ನದಿ ದಂಡೆಯ ಮೇಲೆ. ಜಗತ್ತಿನ ಯಾವ ದೇಶಕ್ಕೆ ಹೋದರೂ ಅಲ್ಲಿ ನದಿಗಳನ್ನು ನೋಡುತ್ತೇವೆ. ಬಹುತೇಕ ದೇಶಗಳ ರಾಜಧಾನಿಗಳಲ್ಲಿ ಮಹತ್ವದ ನದಿ ಹಾದುಹೋಗುತ್ತವೆ. ಉದಾಹರಣೆಗೆ, ಲಂಡನ್‌ನಲ್ಲಿ ಥೇಮ್ಸ್, ಮಾಸ್ಕೋದಲ್ಲಿ ಮಾಸ್ಕೋವಾ... ಆದರೆ ಸೌದಿ ಅರೇಬಿಯಾ ದೇಶದಲ್ಲಿ ಶಾಶ್ವತ ನದಿಗಳೇ ಇಲ್ಲ.

ಸೌದಿ ಅರೇಬಿಯಾ ಅರೇಬಿಯನ್ ಪೆನಿನ್ಸುಲಾದ ಅತಿದೊಡ್ಡ ದೇಶ. ಇದು ವಿಶ್ವದಲ್ಲಿಯೇ ತನ್ನ ಭೂಪ್ರದೇಶದಲ್ಲಿ ಯಾವುದೇ ಶಾಶ್ವತ ನದಿಗಳನ್ನು ಹೊಂದಿರದ ಕೆಲವೇ ಕೆಲವು ದೊಡ್ಡ ದೇಶಗಳಲ್ಲಿ ಒಂದು. ಇದು ಒಂದು ಅಚ್ಚರಿಯ ವಿಷಯವೇ. ಏಕೆಂದರೆ ವಿಶ್ವದ ಹೆಚ್ಚಿನ ದೇಶಗಳು, ವಿಶೇಷವಾಗಿ ದೊಡ್ಡ ದೇಶಗಳು ತಮ್ಮ ನೀರಿನ ಅಗತ್ಯಕ್ಕೆ ನದಿಗಳನ್ನು ಅವಲಂಬಿಸಿವೆ. ಸೌದಿ ಅರೇಬಿಯಾದ ಈ ವಿಶಿಷ್ಟ ಭೌಗೋಳಿಕ ಸ್ಥಿತಿ ಹಲವಾರು ಆಸಕ್ತಿದಾಯಕ ಸಂಗತಿಗಳಿಗೆ ಕಾರಣವಾಗಿದೆ.

ಹಾಗಾದರೆ ಸೌದಿ ಅರೇಬಿಯಾದಲ್ಲಿ ನದಿಗಳಿಲ್ಲದಿರಲು ಕಾರಣವೇನು? ಸೌದಿ ಅರೇಬಿಯಾದ ಹೆಚ್ಚಿನ ಭಾಗವು ತೀವ್ರ ಶುಷ್ಕ ಮರುಭೂಮಿ ಹವಾಮಾನವನ್ನು ಹೊಂದಿದೆ. ಇಲ್ಲಿ ಮಳೆ ತುಂಬಾ ಕಡಿಮೆ ಮತ್ತು ಅನಿಯತ. ಇಷ್ಟು ಕಡಿಮೆ ಮಳೆಯು ನದಿಗಳನ್ನು ನಿರಂತರವಾಗಿ ಹರಿಯುವಂತೆ ಮಾಡಲು ಸಾಕಾಗುವುದಿಲ್ಲ. ಇಲ್ಲಿನ ಭೂಪ್ರದೇಶವು ಹೆಚ್ಚಾಗಿ ಮರಳು ಮತ್ತು ಬಂಡೆಗಳಿಂದ ಕೂಡಿದೆ. ಮಳೆ ಬಂದರೂ, ನೀರು ಬೇಗನೆ ಆವಿಯಾಗುತ್ತದೆ ಅಥವಾ ಮರಳಿನಲ್ಲಿ ಇಂಗಿಹೋಗುತ್ತದೆ. ಅಲ್ಲದೇ, ಇಲ್ಲಿನ ಭೂಮಿ ಸಮತಟ್ಟಾಗಿಲ್ಲ, ಇದರಿಂದ ನೀರು ಹರಿಯಲು ದೊಡ್ಡ ನದಿ ಪಾತ್ರಗಳು ನಿರ್ಮಿತವಾಗುವುದಿಲ್ಲ.

ಹಾಗಾದರೆ ನದಿಗಳಿಲ್ಲದಿದ್ದರೂ ನೀರಿನ ಅಗತ್ಯವನ್ನು ಹೇಗೆ ಪೂರೈಸಲಾಗುತ್ತದೆ? ನದಿಗಳಿಲ್ಲದಿದ್ದರೂ, ಸೌದಿ ಅರೇಬಿಯಾ ತನ್ನ ದೊಡ್ಡ ಜನಸಂಖ್ಯೆ ಮತ್ತು ಕೃಷಿ ಅಗತ್ಯಗಳಿಗಾಗಿ ನೀರನ್ನು ಒದಗಿಸಿಕೊಂಡಿದೆ. ಆ ಪೈಕಿ ಮೊದಲನೆಯದು, ಭೂಗತ ಅಂತರ್ಜಲ (Underground Aquifers). ಸೌದಿ ಅರೇಬಿಯಾ ಅತಿ ದೊಡ್ಡ ಪ್ರಾಚೀನ ಭೂಗತ ನೀರಿನ ಸಂಗ್ರಹಗಳನ್ನು (Fossil Water Aquifers) ಹೊಂದಿದೆ. ಲಕ್ಷಾಂತರ ವರ್ಷಗಳ ಹಿಂದೆ ಭೂಗರ್ಭದಲ್ಲಿ ಸಂಗ್ರಹವಾದ ನೀರು ಇವು. ಈ ನೀರನ್ನು ಆಳವಾದ ಬಾವಿಗಳ ಮೂಲಕ ಹೊರತೆಗೆದು ಬಳಸಲಾಗುತ್ತದೆ. ಆದರೆ, ಇದು ನವೀಕರಿಸಲಾಗದ ಸಂಪನ್ಮೂಲ. ಒಮ್ಮೆ ಬಳಸಿದರೆ ಮತ್ತೆ ತುಂಬಲು ಸಾಧ್ಯವಿಲ್ಲ. ಆದ್ದರಿಂದ ಇದರ ಬಳಕೆ ಬಗ್ಗೆ ಆತಂಕಗಳಿವೆ.

ಎರಡನೆಯದು, ಸಮುದ್ರದ ನೀರನ್ನು ಶುದ್ಧೀಕರಿಸುವುದು (Desalination). ಇದು ಸೌದಿ ಅರೇಬಿಯಾದ ನೀರಿನ ಪೂರೈಕೆಯ ಪ್ರಮುಖ ಮೂಲ. ದೇಶವು ಕೆಂಪು ಸಮುದ್ರ ಮತ್ತು ಪರ್ಷಿಯನ್ ಕೊಲ್ಲಿಯ ಉದ್ದಕ್ಕೂ ದೊಡ್ಡ ಪ್ರಮಾಣದ ಸಮುದ್ರದ ನೀರು ಶುದ್ಧೀಕರಣ ಘಟಕಗಳನ್ನು (Desalination Plants) ಹೊಂದಿದೆ. ಈ ಘಟಕಗಳು ಸಮುದ್ರದ ಉಪ್ಪು ನೀರನ್ನು ಕುಡಿಯುವ ಮತ್ತು ಕೃಷಿಗೆ ಬಳಸುವ ನೀರಾಗಿ ಪರಿವರ್ತಿಸುತ್ತವೆ. ಸೌದಿ ಅರೇಬಿಯಾ ವಿಶ್ವದಲ್ಲಿಯೇ ಅತಿ ಹೆಚ್ಚು ಶುದ್ಧೀಕರಿಸಿದ ನೀರನ್ನು ಉತ್ಪಾದಿಸುವ ದೇಶಗಳಲ್ಲಿ ಒಂದಾಗಿದೆ. ಮೂರನೆಯದು, ವಾಡಿಗಳು. ಸೌದಿ ಅರೇಬಿಯಾದಲ್ಲಿ ಹೆಚ್ಚಾಗಿ 'ವಾಡಿ'ಗಳು ಕಂಡುಬರುತ್ತವೆ. ಇವು ತಾತ್ಕಾಲಿಕ ನದಿಪಾತ್ರಗಳು. ಮಳೆ ಬಂದಾಗ ಮಾತ್ರ ಈ ವಾಡಿಗಳಲ್ಲಿ ನೀರು ಹರಿಯುತ್ತದೆ ಮತ್ತು ಕೆಲವೇ ಗಂಟೆಗಳು ಅಥವಾ ದಿನಗಳ ನಂತರ ಇವು ಒಣಗಿ ಹೋಗುತ್ತವೆ. ಇಲ್ಲಿ ಹರಿಯುವ ನೀರನ್ನು ಸಣ್ಣ ಅಣೆಕಟ್ಟುಗಳಲ್ಲಿ ಸಂಗ್ರಹಿಸಿ ನಂತರ ಬಳಸಲಾಗುತ್ತದೆ.

ನದಿಗಳಿಲ್ಲದ ಸೌದಿ ಅರೇಬಿಯಾ ಆಧುನಿಕ ತಂತ್ರಜ್ಞಾನ (ನಿರ್ಲವಣೀಕರಣ) ಮತ್ತು ಪ್ರಾಚೀನ ಅಂತರ್ಜಲದ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ. ಇದು ನೀರಿನ ಕೊರತೆಯನ್ನು ನಿಭಾಯಿಸುವಲ್ಲಿ ತಂತ್ರಜ್ಞಾನದ ಪಾತ್ರಕ್ಕೆ ಒಂದು ಉತ್ತಮ ಉದಾಹರಣೆ. ನವೀಕರಿಸಲಾಗದ ಅಂತರ್ಜಲ ಮತ್ತು ಶುದ್ಧೀಕರಣ ಘಟಕಗಳ ಹೆಚ್ಚಿನ ಶಕ್ತಿಯ ಅಗತ್ಯ ಸೌದಿ ಅರೇಬಿಯಾಕ್ಕೆ ಭವಿಷ್ಯದಲ್ಲಿ ನೀರಿನ ಭದ್ರತೆಯ ಬಗ್ಗೆ ಸವಾಲುಗಳನ್ನು ಒಡ್ಡುತ್ತವೆ. ಹಾಗಾಗಿ, ನೀರನ್ನು ಸಂರಕ್ಷಿಸಲು ಮತ್ತು ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ದೇಶವು ಹೆಚ್ಚಿನ ಗಮನ ಹರಿಸುತ್ತಿದೆ.

ನೀರಿನ ಅಭಾವವಿದ್ದರೂ, ಸೌದಿ ಅರೇಬಿಯಾ ವಿಶ್ವದ ದೊಡ್ಡ ಒಂಟೆ ಮಾರುಕಟ್ಟೆಗಳಲ್ಲಿ ಒಂದಾಗಿದೆ, ಅಲ್ಲಿ ಲಕ್ಷಾಂತರ ಒಂಟೆಗಳನ್ನು ಮಾರಾಟ ಮಾಡಲಾಗುತ್ತದೆ. ಒಂಟೆಗಳು ಮರುಭೂಮಿಯ ಕಠಿಣ ಪರಿಸ್ಥಿತಿಗಳಲ್ಲಿ ಬದುಕಲು ಹೆಸರುವಾಸಿಯಾಗಿವೆ. ನೀರಿಲ್ಲದಿದ್ದರೂ ಸೌದಿ ಅರೇಬಿಯಾ ಕೃಷಿಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. ವಿಶೇಷವಾಗಿ ಗೋಧಿ ಮತ್ತು ಖರ್ಜೂರಗಳನ್ನು ಬೆಳೆಯಲು ಹೆಚ್ಚಿನ ನೀರು ಬೇಕಾಗಿದ್ದರೂ, ಶುದ್ಧೀಕರಿಸಿದ ನೀರು ಮತ್ತು ಅಂತರ್ಜಲವನ್ನು ಬಳಸಿಕೊಂಡು ಇದನ್ನು ಸಾಧಿಸಿದೆ. ಆದರೆ, ನೀರಿನ ಸಂಪನ್ಮೂಲಗಳ ಸಂರಕ್ಷಣೆಯ ದೃಷ್ಟಿಯಿಂದ ಇತ್ತೀಚೆಗೆ ಕೃಷಿಯ ಗಾತ್ರವನ್ನು ಕಡಿಮೆ ಮಾಡಲಾಗುತ್ತಿದೆ.

ಅತಿ ಹೆಚ್ಚು ಸಮಯ ವಲಯ

ಭೌಗೋಳಿಕವಾಗಿ ವಿಸ್ತಾರವಾಗಿರುವ ದೊಡ್ಡ ದೇಶಗಳು ಎಂದು ಕರೆಯಿಸಿಕೊಂಡಿರುವ ರಷ್ಯಾ, ಅಮೆರಿಕ, ಕೆನಡ, ಅಥವಾ ಚೀನಾ ಹೆಚ್ಚು ಸಮಯ ವಲಯಗಳನ್ನು ಹೊಂದಿರುತ್ತವೆ ಎಂದು ಭಾವಿಸುತ್ತೇವೆ. ಆದರೆ, ಅಚ್ಚರಿ ಎಂದರೆ, ಈ ಪಟ್ಟಿಯಲ್ಲಿ ಫ್ರಾನ್ಸ್ ಅಗ್ರಸ್ಥಾನದಲ್ಲಿದೆ ಎಂದರೆ ಅನೇಕರು ನಂಬಲಿಕ್ಕಿಲ್ಲ. ಇದಕ್ಕೆ ಕಾರಣ ಕೇವಲ ಫ್ರಾನ್ಸ್‌ನ ಭೂಪ್ರದೇಶವೊಂದೇ ಅಲ್ಲ, ಅದರ ವಿವಿಧ ಸಾಗರೋತ್ತರ ಪ್ರಾಂತ್ಯಗಳು (Overseas Territories) ಕೂಡ ಇದಕ್ಕೆ ಕಾರಣ.

ಅಂದ ಹಾಗೆ, ಫ್ರಾನ್ಸ್ ಒಟ್ಟು 12 ಸಮಯ ವಲಯಗಳನ್ನು ಹೊಂದಿದೆ. ಇದು ವಿಶ್ವದ ಯಾವುದೇ ದೇಶಕ್ಕಿಂತ ಹೆಚ್ಚು. ಗೊತ್ತಿರಲಿ, ಅಮೆರಿಕ 11 ಸಮಯ ವಲಯಗಳನ್ನು ಹೊಂದಿದ್ದರೆ, ರಷ್ಯಾ ಸಹ 11 ಸಮಯ ವಲಯಗಳನ್ನು ಹೊಂದಿದೆ (ಆದರೆ ಈ ಸಂಖ್ಯೆ ಇತ್ತೀಚೆಗೆ ಬದಲಾಗಿ 9 ಆಗಿರಬಹುದು ಎಂಬ ವರದಿಗಳೂ ಇವೆ, ಆದರೂ ಫ್ರಾನ್ಸ್‌ನ 12ಕ್ಕಿಂತ ಕಡಿಮೆ).

ಫ್ರಾನ್ಸ್ ಏಕೆ ಇಷ್ಟು ಸಮಯ ವಲಯಗಳನ್ನು ಹೊಂದಿದೆ? ಇದಕ್ಕೆ ಪ್ರಮುಖ ಕಾರಣ ಫ್ರಾನ್ಸ್‌ನ ವಿಸ್ತಾರವಾದ ವಸಾಹತುಶಾಹಿ ಇತಿಹಾಸ. ಐತಿಹಾಸಿಕವಾಗಿ, ಫ್ರಾನ್ಸ್ ವಿಶ್ವದಾದ್ಯಂತ ಅನೇಕ ಪ್ರದೇಶಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿತ್ತು. ಇಂದಿಗೂ ಆ ಪ್ರಾಂತ್ಯಗಳಲ್ಲಿ ಕೆಲವು ಫ್ರಾನ್ಸ್‌ನ ಅವಿಭಾಜ್ಯ ಅಂಗಗಳಾಗಿ ಉಳಿದಿವೆ. ಅವುಗಳನ್ನು 'ಸಾಗರೋತ್ತರ ಪ್ರದೇಶಗಳು' ಅಥವಾ 'ಸಾಗರೋತ್ತರ ಇಲಾಖೆಗಳು/ಸಮುದಾಯಗಳು' (Overseas Departments/Collectivities) ಎಂದು ಕರೆಯಲಾಗುತ್ತದೆ. ಈ ಪ್ರಾಂತ್ಯಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಹರಡಿರುವುದರಿಂದ, ಸಹಜವಾಗಿ ಅವು ವಿಭಿನ್ನ ಸಮಯ ವಲಯಗಳಲ್ಲಿವೆ.

ಆ 12 ಸಮಯ ವಲಯಗಳು ಮತ್ತು ಅವುಗಳ ಪ್ರಾಂತ್ಯಗಳನ್ನು (ಕೆಲವು ಪ್ರಮುಖ ಉದಾಹರಣೆಗಳು) ಹೀಗೆ ಪಟ್ಟಿ ಮಾಡಬಹುದು. ಅವು ಫ್ರಾನ್ಸ್‌ನ ಸಮಯ ವಲಯಗಳು GMT (Greenwich Mean Time) ಗೆ ಹೋಲಿಕೆಯಾಗುತ್ತವೆ. **1.ಫ್ರೆಂಚ್ ಪಾಲಿನೇಷ್ಯಾ–** ಪೆಸಿಫಿಕ್ ಮಹಾಸಾಗರದಲ್ಲಿರುವ ಸುಂದರ ದ್ವೀಪ ಸಮೂಹ. ಉದಾಹರಣೆಗೆ, ತಹಿತಿ. **2.ಮಾರ್ಕ್ವೆಸಾಸ್ ದ್ವೀಪಗಳು–** ಫ್ರೆಂಚ್ ಪಾಲಿನೇಷಿಯಾದ ಭಾಗ. **3.ಗ್ಯಾಂಬಿಯರ್ ದ್ವೀಪಗಳು–** ಫ್ರೆಂಚ್ ಪಾಲಿನೇಷಿಯಾದ ಇನ್ನೊಂದು ಭಾಗ. **4.ಗ್ವಾಡೆಲೋಪ್–** ಕೆರಿಬಿಯನ್ ಸಮುದ್ರ, ಮಾರ್ಟಿನಿಕ್– ಕೆರಿಬಿಯನ್ ಸಮುದ್ರ, ಸೇಂಟ್ ಬಾರ್ತಲೆಮಿ– ಕೆರಿಬಿಯನ್ ಸಮುದ್ರ, ಸೇಂಟ್ ಮಾರ್ಟಿನ್– ಕೆರಿಬಿಯನ್ ಸಮುದ್ರ, ಫ್ರೆಂಚ್ ಗಯಾನಾ– ದಕ್ಷಿಣ ಅಮೆರಿಕದಲ್ಲಿರುವ ಫ್ರಾನ್ಸ್‌ನ ಅತಿದೊಡ್ಡ ಸಾಗರೋತ್ತರ ಪ್ರದೇಶ. **5.ಸೇಂಟ್ ಪಿಯರ್ ಮತ್ತು ಮಿಕೆಲೋನ್–** ಕೆನಡಾದ ಪೂರ್ವ ಕರಾವಳಿಯ ಬಳಿಯಿರುವ ಸಣ್ಣ ದ್ವೀಪಗಳು. **6.ಮೆಟ್ರೋಪಾಲಿಟನ್ ಫ್ರಾನ್ಸ್–** ಯುರೋಪ್‌ನಲ್ಲಿರುವ ಫ್ರಾನ್ಸ್‌ನ ಪ್ರಮುಖ ಭೂಭಾಗ. ಇದು CET (Central European Time) ವಲಯದಲ್ಲಿ ಬರುತ್ತದೆ. **7.ಮಯೋಟ್ಟೆ–** ಹಿಂದೂ ಮಹಾಸಾಗರದಲ್ಲಿ, ಆಫ್ರಿಕಾದ ಪೂರ್ವ ಕರಾವಳಿಯ ಬಳಿ ಹಾಗೂ ಕೊಮೊರೋಸ್ ದ್ವೀಪ ಸಮೂಹದ ಭಾಗ. **8.ರಿಯೂನಿಯನ್–** ಹಿಂದೂ ಮಹಾಸಾಗರದಲ್ಲಿ, ಮಡಗಾಸ್ಕರ್‌ನ ಪೂರ್ವಕ್ಕೆ. **9.ಫ್ರೆಂಚ್ ಸದರ್ನ್ ಆ್ಯಂಡ್ ಅಂಟಾರ್ಕ್ಟಿಕ್ ಲ್ಯಾಂಡ್ಸ್–** ಅಂಟಾರ್ಕ್ಟಿಕಾ ಮತ್ತು ಹಿಂದೂ ಮಹಾಸಾಗರದಲ್ಲಿ ಹರಡಿರುವ ದೂರದ ಪ್ರದೇಶಗಳು. **10. ನ್ಯೂ ಕ್ಯಾಲಿಡೋನಿಯಾ–** ಪೆಸಿಫಿಕ್ ಮಹಾಸಾಗರದಲ್ಲಿರುವ ಒಂದು ದೊಡ್ಡ ದ್ವೀಪ ಸಮೂಹ. **11.ವಾಲ್ಲಿಸ್ ಮತ್ತು ಫುಟುನಾ–** ಪೆಸಿಫಿಕ್ ಮಹಾಸಾಗರದಲ್ಲಿ, ಫಿಜಿ ಸಮೀಪ. 12.ಕ್ಲಿಪ್ಪರ್ಟನ್ ದ್ವೀಪ– ಪೆಸಿಫಿಕ್ ಮಹಾಸಾಗರದಲ್ಲಿರುವ ಜನವಸತಿಯಿಲ್ಲದ ಒಂದು ಸಣ್ಣ ದ್ವೀಪ. (ಕೆಲವು ಮೂಲಗಳು ಇದನ್ನು GMT-08 ವಲಯದಲ್ಲಿ ಇಡುತ್ತವೆ, ಆದರೆ ಫ್ರಾನ್ಸ್‌ನ ಒಟ್ಟು ಸಂಖ್ಯೆಯಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ).

ನೀವು ಫ್ರಾನ್ಸ್‌ನಲ್ಲಿ ಕುಳಿತು ನಿಮ್ಮ ಫ್ರೆಂಚ್ ಸ್ನೇಹಿತರಿಗೆ ದೂರವಾಣಿ ಕರೆ ಮಾಡಲು ಬಯಸಿದರೆ, ಅವರು ಯಾವ ಸಾಗರೋತ್ತರ ಪ್ರಾಂತ್ಯದಲ್ಲಿದ್ದಾರೆ ಎಂಬುದನ್ನು ಆಧರಿಸಿ ನೀವು ಸಮಯದ ವ್ಯತ್ಯಾಸವನ್ನು ಗಮನಿಸಬೇಕಾಗುತ್ತದೆ. ಒಂದೇ ದೇಶದ ನಾಗರಿಕರು ಗಂಟೆಗಳ ವ್ಯತ್ಯಾಸದಲ್ಲಿ ವಾಸಿಸುತ್ತಿದ್ದಾರೆ! ಉದಾಹರಣೆಗೆ, ಫ್ರಾನ್ಸ್‌ನಲ್ಲಿ ಮಧ್ಯಾಹ್ನವಾಗಿದ್ದರೆ, ಫ್ರೆಂಚ್ ಪಾಲಿನೇಷಿಯಾದಲ್ಲಿ ಹಿಂದಿನ ದಿನದ ರಾತ್ರಿ ಇರುತ್ತದೆ. ಈ ವೈವಿಧ್ಯಮಯ ಸಮಯ ವಲಯಗಳು ಫ್ರಾನ್ಸ್‌ನ ಜಾಗತಿಕ ಉಪಸ್ಥಿತಿ ಮತ್ತು ಅದರ ವಿಶಿಷ್ಟ ಸಾಂಸ್ಕೃತಿಕ ಹಾಗೂ ಭೌಗೋಳಿಕ ವ್ಯಾಪ್ತಿಯನ್ನು ಎತ್ತಿ ತೋರಿಸುತ್ತವೆ. ಫ್ರಾನ್ಸ್‌ನ ವ್ಯಾಪಕ ಸಾಗರೋತ್ತರ ಪ್ರಾಂತ್ಯಗಳ ಜಾಲವೇ ಅದನ್ನು ವಿಶ್ವದಲ್ಲಿ ಅತಿ ಹೆಚ್ಚು ಸಮಯ ವಲಯಗಳನ್ನು ಹೊಂದಿರುವ ದೇಶವನ್ನಾಗಿ ಮಾಡಿದೆ. ಇದು ಅದರ ಸಮುದ್ರದಾಚೆಗಿನ ವೈಭವ ಮತ್ತು ವಸಾಹತುಶಾಹಿ ಪರಂಪರೆಯ ಕುತೂಹಲಕಾರಿ ಸಂಕೇತ.

ಅಂತರ ಕಾಯ್ದುಕೊಳ್ಳಿ

ಸ್ನೇಹಿತರೊಬ್ಬರು ಕಳಿಸಿದ ಒಂದು ವಾಟ್ಸಾಪ್ ಸಂದೇಶ. ಅದು ಜಪಾನಿನ ಫ್ಯಾಕ್ಟರಿಯಲ್ಲಿ ಮಹಿಳಾ ಸಿಬ್ಬಂದಿಯನ್ನುದ್ದೇಶಿಸಿ ಬರೆದ ಫಲಕ. ಅದರ ಮೇಲೆ ಹೀಗೆ ಬರೆದಿತ್ತು– 'ನಿಮ್ಮ ಸ್ಕರ್ಟ್ ತೀರಾ ಉದ್ದವಿದ್ದರೆ, ಎಂಜಿನ್‌ನಿಂದ ಅಂತರ ಕಾಯ್ದುಕೊಳ್ಳಿ, ಒಂದು ವೇಳೆ ಅದು ತೀರಾ ಚಿಕ್ಕದಿದ್ದರೆ, ಎಂಜಿನಿಯರುಗಳಿಂದ ಅಂತರ ಕಾಯ್ದುಕೊಳ್ಳಿ'.

ಸುವರ್ಚಲೆಯ ಒಗಟಿಗೆ ಉತ್ತರವಾಗಿ ಬಂದು ವರಿಸಿದ ಶ್ವೇತಕೇತು

ತಿಳಿರು ತೋರಣ
ಶ್ರೀವತ್ಸ ಜೋಶಿ
vveditoped@gmail.com
srivathsajoshi@yahoo.com

ಅಸಿತೋ ದೇವಲೋ ವ್ಯಾಸಃ ಸ್ವಯಂ ಚೈವ ಬ್ರವೀಷಿ ಮೇ...' ಎಂದು ಭಗವದ್ಗೀತೆಯ ಶ್ಲೋಕವೊಂದರಲ್ಲಿ ಓದಿದಾಗಿಂದ ನನ್ನಲ್ಲೊಂದು ವಿಶೇಷ ಕುತೂಹಲ ಹುಟ್ಟಿತ್ತು. ಗೀತೆಯ ಹತ್ತನೆಯ ಅಧ್ಯಾಯದ ಅಂದರೆ ವಿಭೂತಿ ಯೋಗದ ಹದಿಮೂರನೆಯ ಶ್ಲೋಕವದು. ಅರ್ಜುನನು ಶ್ರೀಕೃಷ್ಣನನ್ನು ಕುರಿತು ''ನೀನು ಪರಬ್ರಹ್ಮ, ಪರಂಧಾಮ, ಪರಮಪವಿತ್ರ. ನಿನ್ನನ್ನು ಸನಾತನ ದಿವ್ಯಪುರುಷ, ದೇವತೆಗಳಿಗೂ ಆದಿದೇವ, ಜನ್ಮರಹಿತ, ಸರ್ವವ್ಯಾಪಿ, ಆದಿ–ಅಂತ್ಯಗಳಿಲ್ಲದವನು ಎಂದೆಲ್ಲ ಬಣ್ಣಿಸುತ್ತಾರೆ. ದೇವಋಷಿಗಳಾದ ನಾರದ, ಅಸಿತ, ದೇವಲ ಮತ್ತು ವ್ಯಾಸ ಮಹರ್ಷಿಗಳೂ ನಿನ್ನ ವಿಷಯದಲ್ಲಿ ಈ ಸತ್ಯವನ್ನು ದೃಢಪಡಿಸಿದ್ದಾರೆ. ಈಗ ನೀನೇ ನನಗಿದನ್ನು ಹೇಳುತ್ತಿದ್ದೀಯೆ. ಆದರೆ ಯಾವ ದೈವಿಕ ಸಂಪತ್ತುಗಳಿಂದ ನೀನು ಈ ಎಲ್ಲ ಲೋಕಗಳನ್ನು ವ್ಯಾಪಿಸಿರುವೆಯೋ ಅದನ್ನು ನನಗೆ ವಿವರವಾಗಿ ತಿಳಿಸುವೆಯಾ?'' ಎಂದು ಕೇಳುವ ಸಂದರ್ಭದಲ್ಲಿ ಬರುವುದು. ಇಲ್ಲಿ ಅರ್ಜುನನು ಪ್ರಸ್ತಾವಿಸಿದ ನಾಲ್ಕು ಋಷಿಗಳ ಪೈಕಿ ನಾರದ ಮತ್ತು ವ್ಯಾಸರ ಬಗ್ಗೆ ನಾವೆಲ್ಲ ಹೆಚ್ಚು ಕೇಳಿದ್ದೇವೆ, ಓದಿದ್ದೇವೆ. ಆದರೆ ಈ ಅಸಿತ ಮತ್ತು ದೇವಲ ಯಾರು? ಎನ್ನುವುದೇ ನನ್ನ ಕುತೂಹಲ ಅಥವಾ ಜಿಜ್ಞಾಸೆ.

ಅದಕ್ಕೆ ಇನ್ನೊಂದು ಕಾರಣವೂ ಇದೆ. ಶಾಂಡಿಲ್ಯ ಗೋತ್ರದ ನಾವು ಸಂಧ್ಯಾವಂದನೆಯ ಅಭಿವಾದನ ಭಾಗದಲ್ಲಿ ''ಶಾಂಡಿಲಾಸಿತ ದೇವಲೇತಿ ತ್ರಿಪ್ರವರಾನ್ವಿತ ಶಾಂಡಿಲ್ಯ ಗೋತ್ರೋತ್ಪನ್ನೋಽಹಂ...'' ಎಂದು ನಮ್ಮ ಪರಿಚಯ ಹೇಳಿಕೊಳ್ಳುತ್ತೇವೆ. ಅಂದರೆ ಶಾಂಡಿಲ, ಅಸಿತ ಮತ್ತು ದೇವಲ ಎಂಬ ಮೂವರು ಋಷಿಗಳ ಪ್ರವರ ಅಥವಾ ಪರಂಪರೆ ಇರುವುದು ನಮ್ಮ ಗೋತ್ರಕ್ಕೆ. ಅಂದಹಾಗೆ ಅಗ್ನಿಯು ವೈಶ್ವಾನರನೆಂಬ ಹೆಸರಿನಿಂದ ಉತ್ಪನ್ನನಾದದ್ದೂ ಈ ಗೋತ್ರದಲ್ಲೇ ಅಂತೆ. ಇರಲಿ, ನನ್ನ ಜಿಜ್ಞಾಸೆಯನ್ನು ಸದ್ಯಕ್ಕೆ ಅಸಿತ ಮತ್ತು ದೇವಲ ಇವರಿಬ್ಬರ ವಿಷಯಕ್ಕಷ್ಟೇ ಸೀಮಿತಗೊಳಿಸುತ್ತೇನೆ. ಯಾರಿವರು? ಅರ್ಜುನ ಪ್ರಸ್ತಾವಿಸಿದ ಅಸಿತ ಮತ್ತು ದೇವಲ ಹಾಗೂ ಶಾಂಡಿಲ್ಯ ಗೋತ್ರದ ಅಸಿತ ಮತ್ತು ದೇವಲ ಅವರವರೇ ಇರಬಹುದೆಂದೇ ನಾನಂದುಕೊಳ್ಳುತ್ತೇನೆ. ಏಕೆಂದರೆ ಪುರಾಣಗಳಲ್ಲಿ ಕೆಲವೊಮ್ಮೆ ಒಂದೇ ಹೆಸರಿನ ಬೇರೆಬೇರೆ ವ್ಯಕ್ತಿ/ಪಾತ್ರಗಳು ಇರುತ್ತವೆ. ಸಪ್ತ ಚಿರಂಜೀವಿಗಳ ಪಟ್ಟಿಯಲ್ಲಿಲ್ಲದವರೂ ಕೆಲವರು ತ್ರೇತಾಯುಗದ ಕಥೆಗಳಲ್ಲೂ ದ್ವಾಪರ ಯುಗದ ಕಥಾನಕಗಳಲ್ಲೂ ಕಾಣಿಸಿಕೊಳ್ಳುವುದಿದೆ. ದ್ವಾಪರಯುಗದ ಪಾತ್ರಗಳೆರಡು ತ್ರೇತಾಯುಗದಲ್ಲಿ ನಡೆಯಿತೆನ್ನಲಾದ ಕಥೆ/ಘಟನೆಯನ್ನು ಸಂಭಾಷಣೆಯಲ್ಲಿ ತರುವುದಿದೆ. ಶಾಪ–ವರಗಳಿಂದಾಗಿ ಒಂದು ಪಾತ್ರವೇ ಇನ್ನೊಂದು ರೂಪದಿಂದ, ಹೆಸರಿನಿಂದ ಮುಂದುವರಿಯುವುದು ಇದೆ. ಹೀಗೆ ಪುರಾಣಕಥೆಗಳನ್ನು ಓದುವಾಗ ಮನಸ್ಸಿನಲ್ಲಿ ಗೊಂದಲವಾಗುವ ಸಾಧ್ಯತೆಗಳಿರುತ್ತವೆ. ಉದಾಹರಣೆಗೆ, ಇಲ್ಲಿ ನಾನು ತಿಳಿದುಕೊಳ್ಳಲು ಹೊರಟ ಅಸಿತ ಋಷಿಗೇ ದೇವಲ ಅಂತ ಇನ್ನೊಂದು ಹೆಸರು ಎಂದು ಕೆಲವೆಡೆ ಗಮನಿಸಿದೆ. ಆದರೆ ಮೇಲೆ ಹೇಳಿದಂತೆ ನಮ್ಮ ಗೋತ್ರದ್ದು ಶಾಂಡಿಲ, ಅಸಿತ, ದೇವಲ = ತ್ರಿಪ್ರವರ ಅಂತಂದಮೇಲೆ ಅಸಿತ ಬೇರೆ, ದೇವಲ ಬೇರೆ ಎಂದು ನನ್ನ ದೃಢ ನಂಬಿಕೆ.

ಅಸಿತ ಮಹರ್ಷಿಯ ಬಗ್ಗೆ ನನ್ನಲ್ಲಿರುವ ಪುರಾಣನಾಮ ಚೂಡಾಮಣಿ ಗ್ರಂಥದಲ್ಲಿ ''ಒಬ್ಬ ಪುರಾತನ ಮಹರ್ಷಿ. ಮರೀಚಿ ಮುನಿಯ ವಂಶದಲ್ಲಿ ಜನಿಸಿದವನು. ಈತನು ಹಿಮವಂತನ ಮಗಳಾದ ಏಕಪರ್ಣೆಯನ್ನು ಮದುವೆಯಾಗಿದ್ದನು. ಈತನ ಸ್ಮರಣೆಯಿಂದ ಸರ್ಪಭೀತಿ ತೊಲಗುವುದು'' ಎಂದಷ್ಟೇ ಕೊಟ್ಟಿದ್ದಾರೆ. ಬೇರೆ ಕೆಲವು ಆಕರಗಳಲ್ಲಿ ಅಸಿತ ಮಹರ್ಷಿಯು ಭೀಷ್ಮಾಚಾರ್ಯರ ಸಮಕಾಲೀನ. ಶರಶಯ್ಯೆಯಲ್ಲಿದ್ದ ಭೀಷ್ಮರೊಡನೆ ಸಂಭಾಷಿಸಿದ್ದನು. ಯುಧಿಷ್ಠಿರನು ಏರ್ಪಡಿಸಿದ್ದ ರಾಜಸೂಯ ಯಾಗದಲ್ಲಿ ಭಾಗವಹಿಸಿದ್ದನು ಅಂತೆಲ್ಲ ವಿವರಗಳು ಸಿಗುತ್ತವೆ. ಅಸಿತ ಮಹರ್ಷಿ ಯಮುನೋತ್ರಿಯಲ್ಲಿ ಬಾಳಿದ್ದನು, ಯಮುನಾ ನದಿಯನ್ನು ಮೊತ್ತಮೊದಲಿಗೆ ಗುರುತಿಸಿದನು, ಆದ್ದರಿಂದಲೇ ಯಮುನೆಗೆ ಅಸಿತಾ ಎಂಬ ಹೆಸರು; ದೇವಕಿಯ ಗರ್ಭದಲ್ಲಿ ಕೃಷ್ಣನು ಹುಟ್ಟಿದಾಗ ''ಈ ಮಗು ಬೆಳೆದು ದೇವನಾಗುತ್ತಾನೆ'' ಎಂದು ಅಸಿತ ಮಹರ್ಷಿಯೇ ಮೊದಲಿಗೆ ಭವಿಷ್ಯ ನುಡಿದಿದ್ದನಂತೆ... ಎಂದು ಮುಂತಾಗಿ ಹತ್ತುಹಲವು ಪ್ರತೀತಿಗಳೂ ಇವೆ. ಅಸಿತ–ಏಕಪರ್ಣೆಯರ ಹಿರಿಮಗನೇ ದೇವಲ, ಎರಡನೆಯವನು ಧೌಮ್ಯ ಎಂದು ಕೂಡ ಹೇಳುತ್ತವೆ ಕೆಲವು ಪುರಾಣಗಳು. ಒಟ್ಟಿನಲ್ಲಿ ಅಸಿತನ ಬಗೆಗಿನ ಮಾಹಿತಿ ಗೋಜಲುಗೋಜಲಾಗಿದೆ ಎಂದು ನನಗನಿಸಿತು. ಇದಕ್ಕೇ ಇರಬಹುದು ಋಷಿಮೂಲ ನದೀಮೂಲ ಇತ್ಯಾದಿಯನ್ನು ಹುಡುಕಬಾರದೆನ್ನುವುದು. ಆದರೂ ಮೂಲ ಸಿಗಬಹುದೇನೋ ಎಂದು ನನಗೊಂದು ಆಸೆ.

ದೇವಲ ಋಷಿಯ ಬಗೆಗಿರುವ ಮಾಹಿತಿಯೂ ಅಷ್ಟೇ. ಇದಮಿತ್ಥಂ ಎನ್ನುವ ಹಾಗಿಲ್ಲ. ''ಅಷ್ಟವಸುಗಳಲ್ಲಿ ಒಬ್ಬನಾದ ಪ್ರತ್ಯೂಷನೆಂಬ ವಸುವಿನ ಮಗ. ಮಹಾಜ್ಞಾನಿ. ಪಾಂಡವರ ಪುರೋಹಿತನಾದ ಧೌಮ್ಯ ಮುನಿ ಈತನ ಒಡಹುಟ್ಟಿದವನು. ದೇವಲನು ಜನಮೇಜಯನ ಸರ್ಪಯಾಗದಲ್ಲಿ ಒಬ್ಬ ಸದಸ್ಯನಾಗಿದ್ದನು. ಜೈಗೀಷವ್ಯ ಮುನಿಯ ತಪಃಪ್ರಭಾವವನ್ನು ಕಂಡು ಆಶ್ಚರ್ಯಪಟ್ಟನು. ಹೂಹೂ ಎಂಬ ಗಂಧರ್ವನಿಗೆ ಮೊಸಳೆಯಾಗಿ ಹುಟ್ಟುವಂತೆ ಶಾಪವಿತ್ತನು...'' ಎಂದು ಮುಂತಾದ ವಿವರಗಳು ಸಿಗುತ್ತವೆ ನನ್ನಲ್ಲಿರುವ ಇನ್ನೊಂದು ಗ್ರಂಥ ಪುರಾಣಭಾರತ ಕೋಶದಲ್ಲಿ. ಅಂತೂ ದೇವಲ–ಧೌಮ್ಯ ಸೋದರರು ಎಂಬ ಮಾಹಿತಿಯಲ್ಲಿ ಏಕರೂಪತೆ ಇದೆ.

ದೇವಲನ ವಿಚಾರವನ್ನು ಸದ್ಯಕ್ಕೊಮ್ಮೆ ಬದಿಗಿಟ್ಟು ಅವನ ಸೋದರ ಧೌಮ್ಯನ ವಿವರಗಳನ್ನು ನೋಡೋಣ. ಧೌಮ್ಯನು ಅಷ್ಟವಸುಗಳಲ್ಲಿ ಒಬ್ಬನಾದ ಪ್ರತ್ಯೂಷನ ಮಗ. ಬ್ರಹ್ಮರ್ಷಿಯಾದ ದೇವಲನ ಸೋದರ. ಈತನೇ ಪಾಂಡವರ ಪುರೋಹಿತ. ಈತನು ಊಚಕತೀರ್ಥದ ಬಳಿ ತಪಸ್ಸು ಮಾಡುತ್ತಿದ್ದನು. ಅಂಗಾರಪರ್ಣನು ಅರ್ಜುನನಿಗೆ ಧೌಮ್ಯರನ್ನು ಪುರೋಹಿತರನ್ನಾಗಿ ಮಾಡಿಕೊಳ್ಳುವಂತೆ ಸೂಚನೆಯಿತ್ತನು. ಪಾಂಡವರಲ್ಲಿ ಯುಧಿಷ್ಠಿರನಿಗೆ ಈತನೇ ಸೂರ್ಯಾಷ್ಟೋತ್ತರವನ್ನು ಉಪದೇಶಿಸಿ ಸೂರ್ಯನಿಂದ ಅಕ್ಷಯಪಾತ್ರೆಯನ್ನು ಕೊಡಿಸಿದನು. ಅರಣ್ಯವಾಸ ಕಾಲದಲ್ಲಿ ಪಾಂಡವರ ಜತೆಗಿದ್ದು ಅವರಿಗೆ ಅನೇಕ ಸತ್ಕಥೆಗಳನ್ನು ಹೇಳಿದುದಲ್ಲದೆ ಅನೇಕ ತೀರ್ಥಗಳ ಮಹಿಮೆಯನ್ನು ವಿವರಿಸಿದನು. ಅಜ್ಞಾತವಾಸ ಕಾಲದಲ್ಲಿ ಪಾಂಡವರ ಅಗ್ನಿಹೋತ್ರಗಳನ್ನು ಕಾಪಾಡಿಕೊಂಡು ಅರಣ್ಯದಲ್ಲೇ ಇದ್ದನು. ಈತನಿಗೆ ಆಪೋದ ಎಂಬ ಇನ್ನೊಂದು ನಾಮಧೇಯವೂ ಇದೆ.

ಧೌಮ್ಯನಿಗೆ ಉಪಮನ್ಯು, ಆರುಣಿ ಮತ್ತು ಬೈದರೆಂಬ ಮೂವರು ಶಿಷ್ಯರಿದ್ದರು. ಒಮ್ಮೆ ಏನಾಯ್ತೆಂದರೆ ಪ್ರವಾಹದಿಂದಾಗಿ ಧೌಮ್ಯನ ಆಶ್ರಮದ ಹತ್ತಿರವಿದ್ದ ಗದ್ದೆಯೊಳಕ್ಕೆ ನೀರು ನುಗ್ಗಿತು. ಅದನ್ನು ತಡೆಯುವುದಕ್ಕೆ ಏನಾದರೂ ಉಪಾಯ ಮಾಡುವಂತೆ ಧೌಮ್ಯನು ಆರುಣಿಯನ್ನು ಕಳುಹಿಸಿದನು. ಆತ ಕಲ್ಲುಬಂಡೆ, ಮರದ ರೆಂಬೆ–ಕೊಂಬೆಗಳನ್ನೆಲ್ಲ ಅಡ್ಡ ಇಟ್ಟರೂ ನೀರು ಹರಿಯುತ್ತಲೇ ಇತ್ತು. ಎಷ್ಟು ಪಾಡು ಪಟ್ಟರೂ ನೀರು ನಿಲ್ಲದಿರಲು ಕೊನೆಗೆ ನೀರಿನ ಪ್ರವಾಹಕ್ಕೆ ಅಡ್ಡವಾಗಿ ತಾನೇ ಮಲಗಿದನು. ಬಹಳ ಹೊತ್ತಿನವರೆಗೂ ಆರುಣಿಯು ಬಾರದಿರಲಾಗಿ ಧೌಮ್ಯನು ಇತರ ಶಿಷ್ಯರೊಡನೆ ಗದ್ದೆಯ ಬಳಿ ಹೋಗಿ ಕರೆದನು. ಆಗ ಆರುಣಿಯು ನೀರನ್ನು ಭೇದಿಸಿಕೊಂಡು ಎದ್ದುಬಂದುದರಿಂದ ಅವನಿಗೆ ಉದ್ದಾಲಕ ಎಂಬ ಹೆಸರು ಬಂತು. ಉದ್ದಾಲಕನು ಕುಶಿಕ ಪುತ್ರಿಯನ್ನು ಮದುವೆಯಾಗಿ ಶ್ವೇತಕೇತು, ನಚಿಕೇತರೆಂಬ ಪುತ್ರರನ್ನೂ, ಸುಜಾತೆಯೆಂಬ ಕನ್ಯೆಯನ್ನೂ ಪಡೆದನು. ಆ ಕಾಲದ ಕ್ರಮದಂತೆ ಒಮ್ಮೆ ಅಪುತ್ರನಾದ ಒಬ್ಬ ಬ್ರಾಹ್ಮಣನು ಸಂತಾನಾರ್ಥವಾಗಿ ಉದ್ದಾಲಕನ ಮಡದಿಯನ್ನು ತನಗೆ ಕೊಡುವಂತೆ ಕೇಳಿದನು. ಅದನ್ನು ಕೇಳಿ ಸಿಟ್ಟುಗೊಂಡ ಶ್ವೇತಕೇತುವು ಸ್ತ್ರೀಯರು ಸಂತಾನಕ್ಕಾಗಿ ಪರಪುರುಷರನ್ನು ಆಶ್ರಯಿಸುವ ಕ್ರಮವನ್ನು ನಿಲ್ಲಿಸಿದನು. ಸ್ತ್ರೀ–ಪುರುಷರ ನಡವಳಿಗಳು, ಮರ್ಯಾದೆಯ ಜೀವನಕ್ರಮ ಹೇಗಿರಬೇಕೆಂದು ಒಂದು ಸಂವಿಧಾನ ಬರೆದನು.

ಉದ್ದಾಲಕನಿಗೆ ಸುಜಾತೆ ಎಂಬ ಮಗಳಿದ್ದಳಷ್ಟೆ? ಅವಳನ್ನು ಕಹೋಳಮುನಿಗೆ ಲಗ್ನ ಮಾಡಿ ಕೊಡಲಾಗಿತ್ತು. ಸುಜಾತೆ ಗರ್ಭವತಿಯಾಗಿದ್ದ ಸಮಯದಲ್ಲಿ ಒಮ್ಮೆ ಕಹೋಳಮುನಿಯು ವೇದಪಠನ ಮಾಡುತ್ತಿದ್ದಾಗ ಏಳೆಂಟು ಕಡೆ ತಪ್ಪು ಉಚ್ಚಾರಗಳಿಂದಾಗಿ ಅಪಸ್ವರವಾಯಿತು. ಸುಜಾತೆಯ ಗರ್ಭದಲ್ಲಿದ್ದ ಶಿಶು ಅದನ್ನು ಕೇಳಿ ನಕ್ಕಿತು. ಇದರಿಂದ ಕಹೋಳನು ಸಿಟ್ಟುಗೊಂಡು ಗರ್ಭಸ್ಥ ಶಿಶುವಿಗೆ ಅಷ್ಟಾವಕ್ರನಾಗುವಂತೆ ಶಾಪವಿತ್ತನು. ಕಹೋಳನು ಜನಕರಾಜನ ಯಜ್ಞದಲ್ಲಿ ವಾದ ಮಾಡಿ ಸೋತು ಜಲಾಧಿವಾಸವನ್ನು ಅನುಭವಿಸುತ್ತಿರಲಾಗಿ, ಅಷ್ಟಾವಕ್ರನು ತನ್ನ ತಾಯಿಯಿಂದ ಆ ಸುದ್ದಿಯನ್ನು ತಿಳಿದು ಜನಕರಾಜನಲ್ಲಿಗೆ ಹೋಗಿ ಆತನನ್ನೂ ವರುಣಪುತ್ರನಾದ ಬಂದಿಯನ್ನೂ ವಾದದಲ್ಲಿ ಸೋಲಿಸಿ, ತನ್ನ ತಂದೆಯನ್ನು ಬಿಡಿಸಿ ತಂದನು. ಮುಂದೆ ತನ್ನ ತಂದೆಯ ಸೂಚನೆಯಂತೆ ಮಧುವಿಲಾ ನದಿಯಲ್ಲಿ ಸ್ನಾನ ಮಾಡಿದನು. ಅವನ ಶರೀರದ ವಕ್ರತೆಯೆಲ್ಲ ಮಾಯವಾಯಿತು. ಅಂದಿನಿಂದ ಮಧುವಿಲಾ ನದಿಗೆ ಸಮಂಗಾ ಎಂಬ ಹೆಸರಾಯಿತು. ಅಷ್ಟಾವಕ್ರನ ಮನೋನಿಗ್ರಹ ಶಕ್ತಿಗೆ ಬೆರಗಾದ ವದಾನ್ಯ ಮುನಿಯು ತನ್ನ ಮಗಳಾದ ಸುಪ್ರಭೆಯನ್ನು ಅವನಿಗೆ ಮದುವೆ ಮಾಡಿಕೊಟ್ಟನು. ಮುಂದೆ ಅಷ್ಟಾವಕ್ರನೂ ಪ್ರಖರ ವರ್ಚಸ್ಸುಳ್ಳ ಋಷಿಯಾಗಿ ಬೆಳೆದನು.

ಇದೆಲ್ಲವೂ ನಡೆಯುತ್ತಿರುವಾಗ ಶ್ವೇತಕೇತುವು ತಂದೆ ಉದ್ದಾಲಕನಿಂದ ಅಧ್ಯಾತ್ಮ ತತ್ತ್ವಜ್ಞಾನ ಪಾಠಗಳನ್ನು ಪ್ರಶ್ನೋತ್ತರ ಸಂವಾದಗಳ ಮೂಲಕ ಕಲಿಯುತ್ತಿದ್ದನು. ಆರಂಭದಲ್ಲಿ ಒಂದು ತೆರನಾದ ಅಹಂಕಾರ ಅವನಲ್ಲಿತ್ತು, ತಾನು ಎಲ್ಲವನ್ನೂ ಕಲಿತಿದ್ದೇನೆ, ತನಗೆ ಎಲ್ಲವೂ ಗೊತ್ತಿದೆ ಎಂದು. ಆದರೆ ಪ್ರತಿಸಲವೂ ಉದ್ದಾಲಕ ನೀಡುತ್ತಿದ್ದ ಸವಾಲುಗಳು, ಅವುಗಳಿಗೆ ಉತ್ತರಿಸಲಿಕ್ಕೆ ಶ್ವೇತಕೇತು ತಿಣುಕಾಡುತ್ತಿದ್ದುದು, ಆಮೇಲೆ ಉದ್ದಾಲಕನು ಆ ಸವಾಲುಗಳ ಉತ್ತರವನ್ನು ಅಧ್ಯಾತ್ಮದ ನೆಲೆಯಲ್ಲಿ ವಿಶದೀಕರಿಸುತ್ತಿದ್ದುದು, ಆಗ ಅದು ಶ್ವೇತಕೇತುವಿಗೆ ಚೆನ್ನಾಗಿ ಮನದಟ್ಟು ಆಗುತ್ತಿದ್ದುದು... ನಡೆದೇ ಇತ್ತಾದ್ದರಿಂದ ಕ್ರಮೇಣ ಶ್ವೇತಕೇತು ದಿವ್ಯಜ್ಞಾನವನ್ನು ಹೊಂದಿದವನಾದನು. ಛಾಂದೋಗ್ಯ ಉಪನಿಷತ್ತಿನಲ್ಲಿ ಉದ್ದಾಲಕ–ಶ್ವೇತಕೇತು ನಡುವಿನ ಸಂವಾದದ ವಿವರಗಳು ಬರುತ್ತವೆ.

ಈಗ ಮತ್ತೆ ದೇವಲ ಋಷಿಯ ವಿಚಾರಕ್ಕೆ ಬರೋಣ. ಅವರು ವೇದೋಕ್ತ ವಿಧಿಯಲ್ಲಿ ಕರ್ಮಾಚರಣೆ ಮಾಡುತ್ತಿದ್ದ, ಧರ್ಮದ ನಿಜ ಪ್ರತಿರೂಪವಾಗಿದ್ದ ಋಷಿ. ಅವರಿಗೆ ಸುವರ್ಚಲೆ ಎಂಬ ಹೆಸರಿನ ಪುತ್ರಿಯಿದ್ದಳು. ಅತ್ಯಂತ ಸುಂದರಿ ಮತ್ತು ನಡವಳಿಕೆಯಲ್ಲೂ ಶ್ರೇಷ್ಠಳು. ಆಕೆ ಯೋಗ್ಯ ವಯಸ್ಸಿಗೆ ಬಂದಾಗ, ದೇವಲರು ಆಕೆಗೊಬ್ಬ ತಕ್ಕ ವರನನ್ನು ಹುಡುಕುವ ವಿಚಾರದಲ್ಲಿ ಚಿಂತಾಕ್ರಾಂತರಾದರು. ಹೇಗೆ ಅವಳಿಗೆ ಒಬ್ಬ ವೇದಪಾಠಿ, ಬ್ರಹ್ಮಚಾರಿ, ಮೃದುಭಾಷಿ, ತಪಸ್ವಿಯಾಗಿರುವ ಪತಿಯನ್ನು ಹುಡುಕಬಹುದೆಂದು ಯೋಚಿಸತೊಡಗಿದರು. ತಂದೆಯ ಉದ್ದೇಶವನ್ನು ಅರ್ಥಮಾಡಿಕೊಂಡ ಸುವರ್ಚಲೆ, ಇಂತೆಂದಳು: ''ನನ್ನ ಕೈಹಿಡಿಯುವವನು ಕಣ್ಣಿಲ್ಲದವನು ಆಗಿರಬೇಕು ಆದರೆ ಕುರುಡನಾಗಿರಬಾರದು! ಅಂಥ ವ್ಯಕ್ತಿಯು ಎಲ್ಲವನ್ನೂ ತಿಳಿದವನು ಎಂದು ನಾನು ಪರಿಗಣಿಸುತ್ತೇನೆ'' ಹೀಗೆ ತನ್ನದೊಂದು ಷರತ್ತನ್ನು ನಿಗದಿಪಡಿಸಿದಳು. ದೇವಲರು ಆಕೆಯ ಮಾತುಗಳನ್ನು ಕೇಳಿ ಬೆಚ್ಚಿಬಿದ್ದರು. ಕಣ್ಣಿಲ್ಲದವನಾಗಿರಬೇಕು ಮತ್ತು ಕುರುಡನಾಗಿರಬಾರದು. ಇದು ಹೇಗೆ ಸಾಧ್ಯ? ಪ್ರಪಂಚದಲ್ಲಿ ಯಾರಾದರೂ ಅಂಥ ವ್ಯಕ್ತಿ ಇದ್ದಾರೆಯೆ? ಅದೊಂದು ಬಿಡಿಸಲಾಗದ ಒಗಟಿನಂತೆಯೇ ಅನಿಸಿತು ಅವರಿಗೆ.

ಆದರೆ ಸುವರ್ಚಲೆ ಸ್ಪಷ್ಟವಾಗಿಯೇ ತಿಳಿಸಿದ್ದಳು. ತಾನು ಸರಿಯಾಗಿ ಯೋಚಿಸಿಯೇ ಹೇಳಿದ್ದೇನೆಂದೂ, ವೇದಾಧ್ಯಯನ ಮಾಡಿಕೊಂಡಿರುವ ಬುದ್ಧಿವಂತರನ್ನು ಕರೆತಂದರೆ ಅವರ ಪರೀಕ್ಷೆ ಮಾಡುತ್ತೇನೆಂದೂ, ಒಗಟಿನ ಉತ್ತರ ಬಿಡಿಸಿದವನನ್ನು ಮದುವೆಯಾಗುತ್ತೇನೆಂದೂ, ತನ್ನ ತಂದೆಗೆ ತಿಳಿಸಿದಳು.

ದೇವಲರು ತನ್ನ ಶಿಷ್ಯರನ್ನು ಕರೆದು, ಸುತ್ತಲಿನ ದೇಶಗಳಲ್ಲಿರುವ ಸದಾಚಾರಿ, ಸದ್ಗುಣಸಂಪನ್ನ, ಸುಂದರವಾದ, ವಿವಾಹಯೋಗ್ಯ ತರುಣರನ್ನು ಕರೆತರುವಂತೆ ಸೂಚಿಸಿದರು. ಹಲವಾರು ಋಷಿಕುಮಾರರು ದೇವಲರ ಆಶ್ರಮಕ್ಕೆ ಸುವರ್ಚಲೆಯ ವರನಾಗುವ ಆಶಯದಿಂದ ಆಗಮಿಸಿದರು. ದೇವಲರು ಅವರನ್ನು ತನ್ನ ಪುತ್ರಿಗೆ ಪರಿಚಯಿಸಿ, ಇವರಲ್ಲಿ ಯಾರನ್ನಾದರೂ ವರನಾಗಿ ಆರಿಸು ಎಂದು ಹೇಳಿದರು. ಆದರೆ ಸುವರ್ಚಲೆ ಮೃದುಮಾತಿನಿಂದಲೇ, ''ನನ್ನ ಪತಿ ಆಗುವವನು ಕಣ್ಣಿಲ್ಲದವನಾಗಿರಬೇಕು ಆದರೆ ಕುರುಡನಾಗಿರಬಾರದು!'' ಎಂದಳು. ಆಕೆಯ ಮಾತುಗಳಿಂದ ಗೊಂದಲಕ್ಕೊಳಗಾದ ಋಷಿಕುಮಾರರು ನಿರಾಶೆಗೊಂಡು ಅಲ್ಲಿಂದ ಹೊರಟುಬಿಟ್ಟರು. ಕೆಲವರಿಗೆ ಕೋಪವೂ ಬಂತು. ''ಇದೊಂದು ಮಂಕು ಹೆಣ್ಣು... ಭಾರಿ ಜಂಭಗಾತಿ... ಇವಳು ಯಾವ ಸೀಮೆಯ ಅಪ್ಸರೆ?...'' ಅಂತೆಲ್ಲ ಬಾಯಿಗೆ ಬಂದಂತೆ ತೆಗಳಿ ಹೊರಟುಹೋದರು. ದೇವಲರಿಗೆ ಬಹಳ ಬೇಸರವಾಯಿತು. ಆದರೆ ಸುವರ್ಚಲೆ ತಾಳ್ಮೆಯಿಂದಿದ್ದಳು. ತನ್ನ ಪಾಠ ಮತ್ತು ಸ್ವಾಧ್ಯಾಯಗಳ ಕಡೆಗೆ ಗಮನಹರಿಸಿದ್ದಳು.

ಹೀಗಿರುವಾಗ ಒಂದು ದಿನ ಬ್ರಹ್ಮತೇಜಸ್ಸು ಕಂಗೊಳಿಸುತ್ತಿದ್ದ ಋಷಿಕುಮಾರನೊಬ್ಬನು ದೇವಲರ ಆಶ್ರಮಕ್ಕೆ ಬಂದು ತನ್ನ ಪರಿಚಯ ಹೇಳಿಕೊಂಡನು. ಹೆಸರು ಶ್ವೇತಕೇತು. ತಂದೆಯ ಹೆಸರು ಉದ್ದಾಲಕ ಋಷಿ. ನ್ಯಾಯವಿಶಾರದನೂ ಸರ್ವಶಾಸ್ತ್ರಪಾರಂಗತನೂ ಆದ ಶ್ವೇತಕೇತುವಿಗೆ ಒಗಟುಗಳೆಂದರೆ ಬಹಳ ಇಷ್ಟ. ತನ್ನ ತಂದೆಯವರಿಂದ ತತ್ತ್ವಮಸಿ ಜ್ಞಾನದ ಬೋಧನೆಯನ್ನೂ ಪಡೆದಿದ್ದನು. ಶ್ವೇತಕೇತುವಿನ ಬಗ್ಗೆ ಈ ಮೊದಲೇ ಕೇಳಿತಿಳಿದಿದ್ದ ದೇವಲರಿಗೆ ಅತ್ಯಂತ ಸಂತೋಷವಾಯಿತು. ಸುವರ್ಚಲೆಯನ್ನು ಕರೆದು ಹೀಗೆಂದರು ''ಮಗಳೇ, ಇವನೇ ಶ್ವೇತಕೇತು. ಮಹಾಪ್ರಾಜ್ಞನಾದ ಇವನನ್ನು ನೀನು ವರಿಸಬಹುದು!'' ತಂದೆಯ ಅತಿ ಉತ್ಸಾಹದ ಮಾತುಗಳನ್ನು ಕೇಳಿದ ಸುವರ್ಚಲೆಗೆ ನಗುವಿನ ಜತೆಗೆ ಸ್ವಲ್ಪ ಕೋಪವೂ ಬಂತು. ಶ್ವೇತಕೇತುವಿನ ಬಗ್ಗೆ ಅವಳಿಗೆ ತಿಳಿದಿಲ್ಲವೆಂದೇನಲ್ಲ. ಆದರೆ ತನ್ನ ಒಗಟಿನ ಪ್ರಸ್ತಾವವನ್ನೇ ಮಾಡದೆ ಈ ತರುಣನನ್ನೇ ತಾನು ವರಿಸಬಹುದು ಎಂದು ತಂದೆ ಅದಾವ ತರ್ಕದಿಂದ ನಿರ್ಧರಿಸಿದರು ಎಂಬ ಆಶ್ಚರ್ಯ ಅವಳಿಗೆ. ಜತೆಯಲ್ಲೇ ಸ್ವಲ್ಪ ನಾಚಿಕೆ, ಸ್ವಲ್ಪ ಸಿಟ್ಟು. ಸುವರ್ಚಲೆಯ ಗಂಟಿಕ್ಕಿದ ಹುಬ್ಬುಗಳನ್ನು ಗಮನಿಸಿದ ಶ್ವೇತಕೇತು, ''ಸುಂದರಿ, ನನಗೆ ಕಣ್ಣುಗಳಿಲ್ಲ ಆದರೆ ನಾನು ಕುರುಡನಲ್ಲ!'' ಎಂದುಬಿಟ್ಟನು. ಈ ಮಾತುಗಳನ್ನು ಕೇಳಿದ ಸುವರ್ಚಲೆಗೆ ನಾಚಿಕೆಯ ಜತೆಗೆ ಸಂತೋಷವೂ ಆಯಿತು. ಆದರೂ ತನ್ನ ಭಾವನೆಗಳನ್ನು ತೋರಗೊಡದೆ, ''ಸುಂದರ ವಿಶಾಲನೇತ್ರನಾದ ನೀನು ನನ್ನನ್ನು ಸುಂದರಿ ಎಂದು ಕರೆಯುತ್ತಿದ್ದೀಯೆ. ಅದು ಹೇಗೆ ನೀನು ಕಣ್ಣಿಲ್ಲದವನು ಎಂದು ಹೇಳಿಬಿಟ್ಟೆ? ವಿವರವಾಗಿ ತಿಳಿಸುವೆಯಾ?'' ಎಂದು ಕೇಳಿದಳು.

ಶ್ವೇತಕೇತು ಮುಗುಳ್ನಕ್ಕು ಹೀಗೆಂದನು: ''ರೂಪ, ರಸ, ಗಂಧ, ಶಬ್ದ, ಸ್ಪರ್ಶ ಎಂಬ ಪಂಚ ತನ್ಮಾತ್ರಗಳಿಂದ ಕೂಡಿದ ಜೀವಾತ್ಮವು ಆ ಪರಮಾತ್ಮನ ಕಾರಣದಿಂದಲೇ ಅಸ್ತಿತ್ವದಲ್ಲಿದೆ. ಪರಮಾತ್ಮನ ಕಾರಣದಿಂದಲೇ ನನ್ನ ಪಂಚೇಂದ್ರಿಯಗಳು ಕಾರ್ಯವೆಸಗುತ್ತಿವೆ. ನನಗೆ ಎಲ್ಲವೂ ಕಾಣಿಸುತ್ತದೆ, ಕೇಳಿಸುತ್ತದೆ, ರುಚಿ–ವಾಸನೆ–ಸ್ಪರ್ಶ ಎಲ್ಲವೂ ಅನುಭವಕ್ಕೆ ಬರುತ್ತದೆ. ಆದರೆ ಈ ಇಂದ್ರಿಯಗಳಾವುವೂ ನನ್ನವಲ್ಲ. ಆದ್ದರಿಂದಲೇ ನನ್ನ ಕಣ್ಣುಗಳು ನನ್ನವಲ್ಲ. ಎಲ್ಲವನ್ನೂ ಆ ಜೀವಾತ್ಮನೇ ನೋಡುತ್ತಾನೆಯೇ ಹೊರತು ನಾನಲ್ಲ. ಹಾಗಾಗಿ ಈ ಕಣ್ಣುಗಳು ನನ್ನವಲ್ಲ. ಆದ್ದರಿಂದಲೇ ನನಗೆ ಕಣ್ಣುಗಳಿಲ್ಲ ಎಂದು ಹೇಳಿದೆ''. ಅವನ ಸತ್ತ್ವಯುತ ಮಾತುಗಳನ್ನು ಕೇಳಿ ಸುವರ್ಚಲೆ ಮತ್ತು ದೇವಲರು ಬೆರಗಾದರು. ಶಾಂತಚಿತ್ತನಾಗಿ ಶ್ವೇತಕೇತು ತನ್ನ ವಿವರಣೆಯನ್ನು ಮುಂದುವರಿಸಿದನು– ''ಪರಮಾತ್ಮನ ಕಾರಣದಿಂದಲೇ ನನ್ನ ಸುತ್ತಲಿನ ಜಗತ್ತಿನ ಅನುಭೂತಿ ನನಗೆ ಸಾಧ್ಯ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ ಮತ್ತು ಈ ವಿಷಯವು ನನಗೆ ಸ್ಫುಟವಾಗಿ ಕಾಣುತ್ತದೆ. ಹಾಗಾಗಿ ನಾನು ಕುರುಡನಲ್ಲ!''. ಶ್ವೇತಕೇತುವಿನ ಮಾತುಗಳನ್ನು ಕೇಳಿದ ಸುವರ್ಚಲೆ ಅತ್ಯಂತ ಸಂತುಷ್ಟಳಾದಳು. ಬಹಳ ಕಾಲದಿಂದ ಮಾಯವಾಗಿದ್ದ ದೇವಲರ ಮುಗುಳ್ನಗೆ ಅವರ ಮುಖದಲ್ಲಿ ಮತ್ತೆ ಅರಳಿತು. ದೇವಲರು ಸಂತೋಷದಿಂದ ಶ್ವೇತಕೇತುವಿನ ತಂದೆ ಉದ್ದಾಲಕನನ್ನು ಆಹ್ವಾನಿಸಿ, ಋಷಿಮುನಿಗಳ ಸಮ್ಮುಖದಲ್ಲಿ ಸುವರ್ಚಲೆಯ ಮದುವೆಯನ್ನು ನೆರವೇರಿಸಿದರು. ಶ್ವೇತಕೇತು ಮತ್ತು ಸುವರ್ಚಲೆ ಪರಸ್ಪರ ಸಹಕಾರದಿಂದ, ಸಮನ್ವಯದಿಂದ, ಧರ್ಮಪಥದಲ್ಲಿ ಬದುಕುತ್ತ ದೀರ್ಘಕಾಲ ಸುಖಸಂತೋಷಗಳಿಂದ ದಾಂಪತ್ಯಜೀವನ ನಡೆಸಿದರು.

ಇಂತು, ಶ್ರಾವಣ ಮಾಸದ ಮೊದಲ ಭಾನುವಾರದಲ್ಲೊಂದು ಪುರಾಣಕಥನ/ವಾಚನ/ಶ್ರವಣ ಸಮಾಪ್ತವಾದುದು.

ಶತಮಾನ ಕಳೆದರೂ ತಗ್ಗದ ಅಮೃತಾಂಜನದ ಘಮ

ಮದುವೆಯಾದ ಹೊಸತರಲ್ಲಿ ಮಲಗುವ ಕೋಣೆ ಸುಗಂಧ ದ್ರವ್ಯಗಳಿಂದ ಸುವಾಸಿತವಾಗಿ ಆಹ್ಲಾದಕರವಾಗಿರುತ್ತದೆ, ಒಂದೆರಡು ವರ್ಷಗಳು ಕಳೆದಮೇಲೆ, ಬೇಬಿ ಪೌಡರ್ ಮತ್ತು ಶಿಶುತೈಲಗಳ ಸುವಾಸನೆಯಿಂದ ಘಮ್ಮೆನ್ನುತ್ತದೆ. ಐವತ್ತು ದಾಟುತ್ತಿದ್ದಂತೆ, ಅಮೃತಾಂಜನ ಮಲಾಮಿನ ಘಮ, ಪ್ಯಾರಾಸಿಟಮೋಲ್ ಮುಂತಾದ ಗುಳಿಗೆಗಳಿಂದ, ಮಲಗುವ ಕೋಣೆ ಬೇರೆಯದೇ ಆಯಾಮವನ್ನು ಪಡೆದುಬಿಡುತ್ತದೆ. ಅಂತೂ ಸುಗಂಧ ದ್ರವ್ಯಗಳಿಂದ ಆರಂಭವಾಗುವ ಜೀವನ, ಮಧ್ಯದಲ್ಲಿ ಬೇಬಿ ಪೌಡರ್‌ನಿಂದ ಶೃಂಗಾರಗೊಂಡು, ಅಮೃತಾಂಜನದಲ್ಲಿ ಮುಕ್ತಾಯವನ್ನು ಕಾಣುತ್ತದೆ ಎನ್ನಬಹುದು. ಆಗೆಲ್ಲಾ ಮನೆ ಎಂದಮೇಲೆ ಅಮೃತಾಂಜನ, ಸುಟ್ಟಗಾಯಕ್ಕೆ ಹಚ್ಚುವ ಬರ್ನಾಲ್ ಮಲಾಮು ಇರಲೇಬೇಕು. ಇವಷ್ಟಿದ್ದರೆ, ಆ ಮನೆಗೆ ಯಾವ ವೈದ್ಯರ ಅಗತ್ಯವೂ ಇರುತ್ತಿರಲಿಲ್ಲ. ಪ್ರತಿ ಮನೆಯಲ್ಲಿ ಅದರಲ್ಲೂ ಹಳ್ಳಿಯ ಮನೆಗಳಲ್ಲಿ ಔಷಧಿ ಇಡುವುದಕ್ಕಾಗಿಯೇ ಒಂದು ಸಣ್ಣ ನಿರ್ದಿಷ್ಟ ಕಪಾಟು ಇರುತ್ತಿತ್ತು.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

ಈಗೇನೋ ತಲೆನೋವು ಅಂದ್ರೆ, ಇಂಗ್ಲಿಷ್ ಮಾತ್ರೆಗಳು, ಬೇರೆ ಬೇರೆ ಬಾಮ್‌ಗಳು ಎಲ್ಲಾ ಬಂದಿವೆ. ಆದ್ರೆ, ಅದೊಂದು ಕಾಲ ಇತ್ತು. ಯಾರಿಗಾದ್ರೂ ತಲೆನೋವು ಬಂದ್ರೆ, ಅಮೃತಾಂಜನ ಹಚ್ಕೊಂಡರೆ ಸಾಕಾಗುತ್ತಿತ್ತು. ಯಾರಾದ್ರೂ ಸುಮ್ಮನೆ ತಲೆ ತಿನ್ನುವವರಿಗೆ 'ಅಮೃತಾಂಜನ' ಅಥವಾ 'ಸಾರಿಡಾನ್' ಅನ್ನೋ ಅಡ್ಡ ಹೆಸರೇ ಬಂದುಬಿಡ್ತಿತ್ತು. ಅಮೃತಾಂಜನ ನೋವು ನಿವಾರಕ ಮಲಾಮು ಎನ್ನುವಷ್ಟರಮಟ್ಟಿಗೆ ದೇಶಾದ್ಯಂತ ಜನರ ನೆಚ್ಚಿನ ಔಷಧಿಯಾಗಿತ್ತು. ಈಗಲೂ ಹೌದು ಎನ್ನಿ. ಇಂದಿನ ಕಾಲದಲ್ಲೂ ಅಮೃತಾಂಜನಕ್ಕೆ ಸಾಟಿಯಾಗಬಲ್ಲ ಸರ್ವೋಪಯೋಗಿ ಮಲಾಮು ಇನ್ನೊಂದಿಲ್ಲ ಎನ್ನಬಹುದು. ಸರ್ವರೋಗಕ್ಕೂ ಒಂದೇ ಮದ್ದು ಎಂಬಂತಿದ್ದ ಅಮೃತಾಂಜನ, ತನ್ನ ಗುಣಪೂರ್ಣತೆಯಿಂದ ಇಂದಿಗೂ ತನ್ನ ಅಸ್ತಿತ್ವವನ್ನು ಹಾಗೂ ಪ್ರಸ್ತುತತೆಯನ್ನು ಭಾರತದ ಮನೆಮನೆಗಳಲ್ಲಿ ಉಳಿಸಿಕೊಂಡಿದೆ ಎನ್ನಬಹುದು. ಚಿಕ್ಕ ಮಕ್ಕಳಿಂದ ಹಿಡಿದು ಮುದುಕರವರೆಗೆ ತಲೆನೋವು, ಕೆಮ್ಮು, ಶೀತ ಬಂದ್ರೆ ಗಂಟಲು, ಎದೆ ಹಾಗೂ ಹಣೆಯ ಮೇಲೆ ಅಮೃತಾಂಜನವನ್ನು ನವಿರಾಗಿ ಸವರಿ, ಲೈಟಾಗಿ ಮಸಾಜ್ ಮಾಡಿದ್ರೆ, ಎಲ್ಲಾ ನೋವುಗಳೂ ಥಟ್ ಅಂತ ಮಾಯ. ಇನ್ನು, ಕುದಿಯುವ ನೀರಿಗೆ ಅಮೃತಾಂಜನವನ್ನು ಹಾಕಿ ಉಗಿ ತೆಗೆದುಕೊಳ್ಳುವುದು, ಹಲ್ಲು ನೋವು ಹಾಗು ಕಿವಿ ನೋವು ಬಂದಾಗಲೂ ಹತ್ತಿಯಲ್ಲಿ ಹಾಕಿ ಬಳಸುವುದೂ ಸೇರಿದಂತೆ, ಈ ಮುಲಾಮನ್ನು ಜನ ತಮಗೆ ಕಂಡ ಹಾಗೆಲ್ಲಾ ದುರ್ಬಳಕೆ ಮಾಡಿರುವುದೂ ಇದೆ.

ಭಾರತದಲ್ಲಷ್ಟೇ ಅಲ್ಲ, ವಿದೇಶದಲ್ಲೂ ಈ ಜಾದೂಗಾರಿ ನೋವು ನಿವಾರಕ ಮಲಾಮಿನ ಖ್ಯಾತಿಗೇನೂ ಕಡಿಮೆಯಿಲ್ಲ. ಚೆಸ್ ದಂತಕಥೆ ಬಾಬಿ ಫಿಷರ್, 'ನಮ್ಮಲ್ಲಿ ಈ ಅಮೃತಾಂಜನ ಸಿಗುತ್ತಿಲ್ಲ, ನೀವು ಭಾರತದಿಂದ ಬರುವಾಗ ನನಗೆ ತಂದುಕೊಡಿ' ಎಂದು ವಿಶ್ವನಾಥನ್ ಆನಂದ್ ಅವರಿಂದ ಅಮೃತಾಂಜನ ನೋವು ನಿವಾರಕ ಮುಲಾಮನ್ನು ತರಿಸಿಕೊಂಡಿದ್ದರಂತೆ. ಹಾಗಾದರೆ ಅಮೃತಾಂಜನ ಎನ್ನುವ ಈ ಬಹೂಪಯೋಗಿ ಮಾಂತ್ರಿಕ ನೋವುನಿವಾರಕ ಮುಲಾಮಿನ ತಂದೆ-ತಾಯಿ ಯಾರು? ಇದರ ಹುಟ್ಟಿನ ಹಿಂದಿನ ಕಥೆ ಏನು? ಬೆಳೆದದ್ದು ಮತ್ತು ಜನಮಾನಸದಲ್ಲಿ ಇನ್ನೂ ಉಳಿದಿದ್ದು ಹೇಗೆ ಮುಂತಾದ ಎಲ್ಲಾ ಕುತೂಹಲಗಳಿಗೆ ಈ ಅಂಕಣ ಬರಹ ಉತ್ತರವನ್ನು ನೀಡಲಿದೆ.

ಸೆಕೆಂಡ್‌ಗಳಲ್ಲಿ ತಲೆನೋವು ಮಾಯ ಮಾಡೋ ಅಮೃತಾಂಜನದ ಮೂಲ ನಮ್ಮ ಭಾರತವೇ. ಭಾರತದಲ್ಲೇ ಸ್ಥಾಪನೆಯಾದ ಸಂಸ್ಥೆ ಈ ಉತ್ಪನ್ನವನ್ನು ತಯಾರಿಸುತ್ತದೆ. ಈ ಸಂಸ್ಥೆಯನ್ನು ಸ್ಥಾಪಿಸಿದವರು ನಮ್ಮ ದಕ್ಷಿಣ ಭಾರತದವರು ಅನ್ನೋದು ಇನ್ನೊಂದು ಹೆಮ್ಮೆ. ಇಂದಿನ ಆಂಧ್ರಪ್ರದೇಶ ಮೂಲದವರಾದ ಕಾಸಿನಾಥುನಿ ನಾಗೇಶ್ವರ ರಾವ್ ಪಂತುಲು ಅಮೃತಾಂಜನ ಸಂಸ್ಥೆಯ ಸಂಸ್ಥಾಪಕರು. ಹಾಗಂತ, ಇವರು ಕೇವಲ ಅಮೃತಾಂಜನ ಸಂಸ್ಥೆಯನ್ನು ಹುಟ್ಟುಹಾಕಿ ಫೇಮಸ್ ಆದವರಲ್ಲ. ಈ ಆಸಾಮಿ ಸ್ವಾತಂತ್ರ್ಯ ಹೋರಾಟಗಾರರೂ ಹೌದು, ಪತ್ರಕರ್ತರಾಗಿಯೂ ಸಮಾಜಸೇವಕರಾಗಿಯೂ ದೇಶಕ್ಕೆ ತಮ್ಮ ಸೇವೆಯನ್ನು ನೀಡಿದ್ದಾರೆ. ಭಾರತಕ್ಕೆ ತನ್ನ ನೆಚ್ಚಿನ ನೋವು ನಿವಾರಕ ಮುಲಾಮುವನ್ನು ನೀಡಿದ ಈ ಸ್ವಾತಂತ್ರ್ಯ ಹೋರಾಟಗಾರನ ಬಗ್ಗೆ ಸ್ವಲ್ಪ ತಿಳಿಯೋಣ.

ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ಭಾಗವಾಗಿದ್ದ ಕೃಷ್ಣಾ ಜಿಲ್ಲೆಯ ಪೆಸರಮಿಲ್ಲಿ ಅನ್ನೋ ಗ್ರಾಮದಲ್ಲಿ 1867ರಲ್ಲಿ ಜನಿಸಿದ ನಾಗೇಶ್ವರ ರಾವ್, ಅಲ್ಲೇ ಪ್ರಾಥಮಿಕ ಶಿಕ್ಷಣ ಪಡೆದು, ನಂತರದ ಶಿಕ್ಷಣವನ್ನ ಮಚಿಲಿಪಟ್ನಂನಲ್ಲಿ ಪಡೆದರು. ಅವರು 1891ರಲ್ಲಿ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಪದವಿ ಮುಗಿಸುತ್ತಾರೆ. ಮದ್ರಾಸ್‌ನಲ್ಲಿರುವಾಗಲೇ ಸ್ವಂತ ಬ್ಯುಸಿನೆಸ್‌ನಲ್ಲಿ ಆಸಕ್ತಿ ಬೆಳೆಸಿಕೊಂಡ ನಾಗೇಶ್ವರ್ ರಾವ್, ಅಲ್ಲೇ ಸಣ್ಣಪುಟ್ಟ ಉದ್ಯೋಗಮಾಡಿಕೊಂಡಿದ್ದರು. ಔಷಧಿ ಉದ್ಯಮದಲ್ಲಿ ಕೆಲಸಮಯ ಕೆಲಸ ನಿರ್ವಹಿಸಿದ ನಂತರ, ದೂರದ ಕಲ್ಕತ್ತಾಗೆ ಹೋಗಿ ಅಲ್ಲಿ ಔಷಧಿ ಉದ್ಯಮದಲ್ಲಿ ಕೆಲಸ ಮಾಡುತ್ತಾರೆ. ನಂತರ ಯುರೋಪಿಯನ್ ಸಂಸ್ಥೆಯಾದ ವಿಲಿಯಂ ಆ್ಯಂಡ್ ಕಂಪನಿಯಲ್ಲಿ ಕೆಲಸ ಮಾಡಲು ಮುಂಬೈಗೆ ಶಿಫ್ಟ್ ಆಗ್ತಾರೆ. ಆದರೆ, ತಾವೇ ಸ್ವಂತವಾಗಿ ಏನಾದ್ರೂ ಮಾಡಬೇಕು ಅನ್ನೋ ತುಡಿತ ಅವರನ್ನ ಕಾಡುತ್ತಲೇ ಇರುತ್ತೆ. ಬಹುಶಃ ಇವರ ರಾಷ್ಟ್ರೀಯತಾವಾದಿ ನಂಬಿಕೆಗಳು ಅದಕ್ಕೆ ಕಾರಣವಾಗಿರಬಹುದು.

ಹೀಗೆ 1893ರಲ್ಲಿ ಹುಟ್ಟಿದ್ದೇ 'ಅಮೃತಾಂಜನ ಲಿಮಿಟೆಡ್' ಎನ್ನುವ ಸಂಸ್ಥೆ. ಇದರ ಮೂಲಕವೇ ಅವರು ಅಮೃತಾಂಜನ ಪೇನ್ ಬಾಮ್ ಅನ್ನು ಸಂಶೋಧಿಸಿ, ಮಾರುಕಟ್ಟೆಗೂ ತರ್ತಾರೆ. ಕಲ್ಕತ್ತಾದ ಔಷಧಿ ಉದ್ಯಮದಲ್ಲಿ ಕೆಲಸಮಾಡಿ ಪಡೆದ ಅನುಭವವನ್ನು ಬಳಸಿಕೊಂಡು, ರಾವ್ ಅವರು ಸುವಾಸನಾಯುಕ್ತ, ತಿಳಿ ಹಳದಿ ಬಣ್ಣದ ನೋವು ನಿವಾರಕ ಮುಲಾಮುವನ್ನು, ಪುದಿನಾ, ಕರ್ಪೂರ ಹಾಗೂ ಗಂಧಾಪುರ ಪತ್ರ ತೈಲ ಮುಂತಾದ ನೈಸರ್ಗಿಕ ವಸ್ತುಗಳನ್ನು ಬಳಸಿ ರೂಪಿಸಿದರು. 1893ರಲ್ಲಿ ಮುಂಬೈನಲ್ಲಿ ದೊಡ್ಡ ಪ್ರಮಾಣದಲ್ಲಿ ಅದನ್ನು ತಯಾರಿಸಲು ಕಂಪನಿಯನ್ನು ಸ್ಥಾಪಿಸಿದರು. ಪ್ರತಿಯೊಂದು ವ್ಯವಹಾರದ ಆರಂಭಿಕ ಹಂತಗಳು ಹೂವಿನ ಹಾಸಿಗೆಯಾಗಿರುವುದಿಲ್ಲ, ತುಂಬಾ ಕಠಿಣವಾಗಿಯೇ ಇರುತ್ತವೆ. ಹಾಗೆ, ಪ್ರಾರಂಭದಲ್ಲಿ ಕಷ್ಟಪಟ್ಟರೂ, ನಿಧಾನವಾಗಿ ನಾಗೇಶ್ವರ ರಾವ್ ಅವರ ಮುಲಾಮಿನ ವ್ಯವಹಾರವು ಚೇತರಿಸಿಕೊಂಡಿತು. ಆರಂಭಿಕ ದಿನಗಳಲ್ಲಿ ಈ ಮುಲಾಮಿನ ಬೆಲೆ ಕೇವಲ ಹತ್ತು ಆಣೆಗಳಾಗಿತ್ತು. (ಹದಿನಾರು ಆಣೆಗಳಿಗೆ ಇಂದಿನ ಒಂದು ರೂಪಾಯಿ ಆಗುತ್ತದೆ). ಕೇವಲ ಹತ್ತು ಆಣೆಯ ಈ ಅಮೃತಾಂಜನ್, ಮುಂದೆ ಆಂಧ್ರದ ಉದ್ಯಮಿಯನ್ನು ಸಾವಿರಾರು ಕೋಟಿಗೆ ಅಧಿಪತಿಯನ್ನಾಗಿ ಮಾಡಿತು.

ತಮ್ಮ ಪ್ರಾಡಕ್ಟ್ ಜನರಿಗೆ ತಲುಪಬೇಕು ಅನ್ನೋ ಉದ್ದೇಶದಿಂದ, ಮದ್ರಾಸಿನಲ್ಲಿ ನಡೆಯುತ್ತಿದ್ದ ಸಂಗೀತ ಕಛೇರಿಗಳಲ್ಲಿ ಸೇರುವ ಜನರಿಗೆ ನಾಗೇಶ್ವರ ರಾವ್ ಅಮೃತಾಂಜನವನ್ನು ಪುಕ್ಕಟೆಯಾಗಿ ಹಂಚುತ್ತಿದ್ದರಂತೆ. ಜನರಿಗೆ ಪರಿಚಯಿಸಲೋಸುಗವಾಗಿ ಅಂದು ಫ್ರೀಯಾಗಿ ಹಂಚಿದಲ್ಲಿಂದ, ಅಮೃತಾಂಜನ ಪೇನ್ ಬಾಮ್ ಉತ್ಪಾದಿಸುವ ಸಂಸ್ಥೆಯ ಇವತ್ತಿನ ಒಟ್ಟು ಮೌಲ್ಯ ಎರಡುಸಾವಿರ ಕೋಟಿಯವರೆಗೆ ತಲುಪಿದೆ. ಹಾಗಾಗಿ, ನಾಗೇಶ್ವರ ರಾವ್ ಅವರನ್ನು, 'ಫ್ರೀಯಾಗಿ ಹಂಚಿ, ಗ್ರಾಹಕರ ಮನೆಮನೆಗಳನ್ನು ತಲುಪುವ ಮಾರ್ಕೆಟಿಂಗ್ ಕೌಶಲದ ಪಿತಾಮಹ' ಎನ್ನಬಹುದೇನೋ.

ಪತ್ರಿಕೋದ್ಯಮದಲ್ಲೂ ಹೆಚ್ಚಿನ ಆಸಕ್ತಿ ಹೊಂದಿದ್ದ ನಾಗೇಶ್ವರ ರಾವ್, 'ಆಂಧ್ರ ಪತ್ರಿಕಾ' ಅನ್ನೋ ತೆಲುಗು ವಾರಪತ್ರಿಕೆಯನ್ನ ಬಾಂಬೆಯಲ್ಲೇ 1,909ರಲ್ಲಿ ಸ್ಥಾಪಿಸುತ್ತಾರೆ. ಇದು ಹಂತ ಹಂತವಾಗಿ ಬೆಳೆದು ದಿನಪತ್ರಿಕೆಯಾಗಿ ರೂಪುಗೊಳ್ಳುತ್ತದೆ. ಅಮೃತಾಂಜನ ಲಿಮಿಟೆಡ್ ಸೇರಿದಂತೆ, ತಮ್ಮ ಎಲ್ಲಾ ವ್ಯವಹಾರಗಳನ್ನು 1914ರಲ್ಲಿ ನಾಗೇಶ್ವರ ರಾವ್ ಮದ್ರಾಸ್‌ಗೆ ವರ್ಗಾಯಿಸುತ್ತಾರೆ.

ಸ್ವಾತಂತ್ರ್ಯ ಹೋರಾಟದಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ನಾಗೇಶ್ವರ ರಾವ್, ಪ್ರಖರ ಗಾಂಧಿವಾದಿಯಾಗಿದ್ದವರು. ಐತಿಹಾಸಿಕ ಉಪ್ಪಿನ ಸತ್ಯಾಗ್ರಹ ಸೇರಿದಂತೆ, ಹಲವು ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದವರು. ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಕ್ರಮಗಳಿಗೂ ಆರ್ಥಿಕ ನೆರವನ್ನ ನಾಗೇಶ್ವರ ರಾವ್ ನೀಡುತ್ತಿದ್ದರು. ಹತ್ತು ವರ್ಷಗಳ ಕಾಲ ರಾವ್ ಅವರು ಆಂಧ್ರ ರಾಜ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ.

ತೆಲುಗು ನವೋದಯ ಚಳವಳಿಯ ಪಿತಾಮಹ, ಕಂದುಕುರಿ ವೀರೇಶಲಿಂಗಂ ಪಂತುಲು ಅವರಿಂದ ಪ್ರಭಾವಿತರಾಗಿದ್ದ ರಾವ್, ತಮ್ಮ ಭಾಷಿಕರ ಪರವಾಗಿ ಅನೇಕ ಹೋರಾಟಗಳಲ್ಲಿ ಭಾಗವಹಿಸಿದ್ದರು. ಹೀಗೆ, ತಮ್ಮ ಔಷಧಿಯ ವ್ಯವಹಾರವು ಪ್ರವರ್ಧಮಾನಕ್ಕೆ ಬರುತ್ತಿರುವಾಗ, ರಾವ್ ಅವರು ತಮ್ಮ ವ್ಯಾಪ್ತಿಯನ್ನು ಸಾಮಾಜಿಕ ಸುಧಾರಣೆಗಳನ್ನು ಕೈಗೊಳ್ಳಲು ಬೆಳೆಸಿಕೊಂಡರು. ತೆಲುಗು ಜನರಿಗೆ ಪ್ರತ್ಯೇಕ ರಾಜ್ಯದ ಅಗತ್ಯವನ್ನು ಅವರು ದೃಢವಾಗಿ ನಂಬಿದ್ದರು. ಹೀಗಾಗಿ, ಅಮೃತಾಂಜನ್ ಲಿಮಿಟೆಡ್ ನೆಲೆಗೊಂಡಿದ್ದ ಮುಂಬೈನಲ್ಲಿ ತೆಲುಗು ಮಾತನಾಡುವ ಜನರನ್ನು ಸಂಘಟಿಸಲು ಪ್ರಾರಂಭಿಸಿದರು. ರಾವ್ ಅವರು ಆಂಧ್ರಪ್ರದೇಶ ರಾಜ್ಯದ ರಚನೆಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದರಿಂದ, ಆ ಕಾಲದ ಆಂಧ್ರದ ಜನರು, ಅವರನ್ನು 'ದೇಶಬಂಧು' ಅಂತ ಕರೆಯುತ್ತಿದ್ದರು. ಜತೆಗೆ, 1935ರಲ್ಲಿ ಆಂಧ್ರ ವಿಶ್ವವಿದ್ಯಾಲಯವು 'ಕಲಾಪ್ರಪೂರ್ಣ' ಅನ್ನೋ ಗೌರವವನ್ನ ನೀಡಿ ಸನ್ಮಾನಿಸಿದೆ. ನಾಗೇಶ್ವರ ರಾವ್ ಅವರ ಭಾವಚಿತ್ರವಿರುವ ಅಂಚೆ ಸ್ಟಾಂಪ್‌ಗಳನ್ನ ಮುದ್ರಿಸಿ, ಭಾರತ ಸರಕಾರವೂ ಇವರನ್ನು ಗೌರವಿಸಿದೆ. 2007ರ ನವೆಂಬರ್ 13ರಿಂದ ಅಮೃತಾಂಜನ ಲಿಮಿಟೆಡ್ ಸಂಸ್ಥೆ ಅಮೃತಾಂಜನ ಹೆಲ್ತ್ ಕೇರ್ ಲಿಮಿಟೆಡ್ ಆಗಿ ಬದಲಾಗಿದ್ದು, ಇದನ್ನ ನಾಗೇಶ್ವರ ರಾವ್ ಅವರ ಮೊಮ್ಮಗ ಎಸ್.ಶಂಭು ಪ್ರಸಾದ್ ಅವರು, ಸಂಸ್ಥೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.

ಅಮೃತಾಂಜನ ಉತ್ಪಾದಿಸುವ ಸಂಸ್ಥೆ, ಇಂದು ಕೇವಲ ಪೇನ್ ಬಾಮ್‌ಗೆ ಸೀಮಿತವಾಗಿ ಉಳಿದಿಲ್ಲ. 2002ರಲ್ಲಿ ಡಯಾಬಿಟಿಕ್ ಔಷಧಿಯಾದ 'ಡಯಾಕ್ಯೂರ್' ಅನ್ನು ಸಂಸ್ಥೆ ಮಾರುಕಟ್ಟೆಗೆ ಪರಿಚಯಿಸಿದೆ. 2004ರಲ್ಲಿ 'ಅಫೇರ್' ಹೆಸರಿನ ಹರ್ಬಲ್ ಮೌತ್ ಫ್ರೆಶ್ನರ್ ಅನ್ನು ಕೂಡ ಪರಿಚಯಿಸಿದೆ. ಇಷ್ಟೇ ಅಲ್ಲದೆ, 2001ರಲ್ಲಿ ಸಂಸ್ಥೆ ಸಾಫ್ಟ್‌ವೇರ್ ದುನಿಯಾಕ್ಕೂ ಕಾಲಿಟಿದ್ದು, ಅಮೃತಾಂಜನ ಇನ್ಫೋಟೆಕ್ ಮೂಲಕ ಚೆನ್ನೈನಲ್ಲಿ ಕಾಲ್ ಸೆಂಟರ್‌ಗಳನ್ನೂ ನಡೆಸುತ್ತಿದೆ. 2011ರಲ್ಲಿ ಫುಡ್ ಸೆಕ್ಟರ್‌ನಲ್ಲೂ ತನ್ನ ಛಾಪು ಒತ್ತಲು ಮುಂದಾದ ಅಮೃತಾಂಜನ ಸಂಸ್ಥೆ, ಚೆನ್ನೈ ಮೂಲದ ಶಿವಾ ಸಾಫ್ಟ್ ಡ್ರಿಂಕ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯನ್ನ 26 ಕೋಟಿ ರುಪಾಯಿಗೆ ಖರೀದಿಸಿದೆ. ಭಾರತದ ನೋವುನಿವಾರಕ ಮುಲಾಮಿನ ಮಾರುಕಟ್ಟೆಯಲ್ಲಿ ಅನೇಕ ಬಹುರಾಷ್ಟ್ರೀಯ ಸಂಸ್ಥೆಗಳು ಪ್ರವೇಶಮಾಡಿದರೂ, ಅಮೃತಾಂಜನವನ್ನು ಹಿಂದಿಕ್ಕಲು ಅವುಗಳಿಗೆ ಸಾಧ್ಯವಾಗಲೇ ಇಲ್ಲ. ಈ ಎಲ್ಲ ಸ್ಪರ್ಧೆಗಳ ನಡುವೆ, ಅಮೃತಾಂಜನ ಭಾರತದಲ್ಲಿ ತನ್ನ ಪಾರಮ್ಯವನ್ನು ಉಳಿಸಿಕೊಂಡಿರುವುದಲ್ಲದೇ, 2022ರಲ್ಲಿ ಅಮೃತಾಂಜನ ಹೆಲ್ತ್‌ಕೇರ್ ಲಿಮಿಟೆಡ್, ಅಮೇರಿಕ ಮಾರುಕಟ್ಟೆಗೂ ಲಗ್ಗೆ ಇಟ್ಟಿದ್ದು, ತನ್ನ ಉತ್ಪನ್ನಗಳನ್ನು ಬೇರೆ ಬೇರೆ ದೇಶಗಳಿಗೆ ರಫ್ತು ಮಾಡುವುದರ ಮೂಲಕ, 2 ಸಾವಿರ ಕೋಟಿಯ ಸಾಮ್ರಾಜ್ಯವನ್ನು ಇನ್ನಷ್ಟು ವಿಸ್ತಾರಮಾಡಲು ಹೊರಟಿದೆ.

18ನೇ ಶತಮಾನದ ಅಂತ್ಯದಲ್ಲಿ ಸ್ಥಾಪನೆಯಾದ ಅಮೃತಾಂಜನ್ ಉತ್ಪಾದನಾ ಸಂಸ್ಥೆ, ಇಂದು ನಂಬಿಕೆ ಮತ್ತು ಪರಂಪರೆಯನ್ನು ಆನುವಂಶಿಕವಾಗಿ ಪಡೆದ, ಒಂದು ಶತಮಾನಕ್ಕೂ ಹೆಚ್ಚು ಹಳೆಯ, ಹೆಮ್ಮೆಯ ಭಾರತೀಯ ಬ್ರ್ಯಾಂಡ್ ಆಗಿ ಬೆಳೆದು ನಿಂತಿದೆ. ನೋವು ನಿವಾರಕ ಉದ್ಯಮದಲ್ಲಿ ಇರುವ ಒಂದು ಶತಮಾನಕ್ಕೂ ಹೆಚ್ಚಿನದಾದ ಅನುಭವದೊಂದಿಗೆ, ಇಂದು ಅಮೃತಾಂಜನ್ ಬಹುಕೋಟಿ ಮೌಲ್ಯದ ಸಂಘಟನೆಯಾಗಿ ಬೆಳೆದಿದೆ. ನೋವಿನ ಉಪಚಾರಗಳ ಉತ್ಪನ್ನಗಳ ಹೊರತಾಗಿ, ಕೆಮ್ಮು ಮತ್ತು ಶೀತ ಆರೈಕೆ, ಸಾಮಾನ್ಯ ಆರೋಗ್ಯ ಮತ್ತು ಗೃಹ ಆರೈಕೆ ಸೇರಿದಂತೆ ಇತರ ವಿಭಾಗಗಳನ್ನೂ ಈ ಸಂಸ್ಥೆ ಹೊಂದಿದೆ. ಈ ಸಂಸ್ಥೆಯ ಉತ್ಪನ್ನಗಳು ಗಲ್ಫ್, ಆಫ್ರಿಕನ್, ಆಗ್ನೇಯ ಏಷ್ಯಾದ ದೇಶಗಳಲ್ಲಿಯೂ ಲಭ್ಯವಿವೆ. ಅಮೇರಿಕ ಮತ್ತು ಯುರೋಪಿಯನ್ ಮಾರುಕಟ್ಟೆಗಳಲ್ಲಿ ಇನ್ನೂ ದೊಡ್ಡ ಪ್ರಮಾಣದಲ್ಲಿ ಯಶಸ್ಸುಗಳಿಸಲು ಯೋಜನೆಗಳು ಸಿದ್ಧವಾಗಿವೆ. ಆಯುರ್ವೇದ ಅಥವಾ ಪಾರಂಪರಿಕ ಪದ್ಧತಿ ಆಧಾರಿತ ಪರಿಹಾರಗಳಿಂದ ತಂತ್ರಜ್ಞಾನಾಧಾರಿತ ಆಧುನಿಕ ಪರಿಹಾರಗಳವರೆಗೆ, ಇಡೀ ಕುಟುಂಬಕ್ಕೆ ಗುಣಮಟ್ಟದ ಮತ್ತು ಹೊಸ ಹೊಸ ಆರೋಗ್ಯ ರಕ್ಷಣಾ ಉತ್ಪನ್ನಗಳನ್ನು ನೀಡುತ್ತ ಸಾಗಿದೆ.

ಪ್ರತ್ಯೇಕ ಅಂಧ್ರ ರಾಜ್ಯದ ಕುರಿತಾದ ಚಳವಳಿಯಲ್ಲಿನ ನಾಗೇಶ್ವರ ರಾವ್ ಅವರ ನಿರಂತರ ಪ್ರಯತ್ನಗಳು, ಸ್ವಾತಂತ್ರ್ಯ ಹೋರಾಟದಲ್ಲಿನ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ರಾಷ್ಟ್ರೀಯತಾವಾದಿ ಆಲೋಚನೆಗಳ ಲೇಖನಗಳು, ಅವರಿಗೆ ಕೇವಲ ಉದ್ಯೋಗಪತಿ ಎನಿಸಿಕೊಳ್ಳುವುದಕ್ಕಿಂತ ಹೆಚ್ಚಿನದಾದ, ದೇಶೋದ್ಧಾರಕ ಎನ್ನುವ ಸ್ಥಾನವನ್ನು ತಂದುಕೊಟ್ಟವು. ಅವರ ಸ್ವತಂತ್ರ ಭಾರತದ ಕನಸು ಮತ್ತು ಮದ್ರಾಸ್ ಪ್ರೆಸಿಡೆನ್ಸಿಯಿಂದ ಪ್ರತ್ಯೇಕವಾದ ಆಂಧ್ರಪ್ರದೇಶದ ಕನಸುಗಳು ನನಸಾಗುವುದಕ್ಕಿಂತ ಮೊದಲೇ, ಅಂದರೆ 1938ರಲ್ಲಿ ಅವರು ನಿಧನರಾದರು (ಆಂಧ್ರಪ್ರದೇಶ ರಾಜ್ಯವಾಗಿ ರೂಪುಗೊಂಡಿದ್ದು 1956ರಲ್ಲಿ). ಆದರೆ 'ದೇಶಹಿತ ಮೊದಲು' ಎನ್ನುವ ಅವರ ಆಲೋಚನೆ, ಅವರ ಪ್ರಕಾಶನ ಸಂಸ್ಥೆ (ಆಂಧ್ರ ಗ್ರಂಥ ಮಾಲಾ), ಅದು ರಚಿಸಿದ ಅನೇಕ ಗ್ರಂಥಾಲಯಗಳು ಮತ್ತು ಭಾರತದ ನೆಚ್ಚಿನ ನೋವು ನಿವಾರಕ ಔಷಧ ಎಂದು ಗುರುತಿಸಲಾಗುವ ಅಮೃತಾಂಜನ್ ಮುಂತಾದ ಗುಣಮಟ್ಟದ ಉತ್ಪನ್ನಗಳು, ಅವರ ಮೌಲ್ಯಯುತ ಪರಂಪರೆಯ ಗುರುತಾಗಿ ಇಂದಿಗೂ ಜೀವಂತವಾಗಿವೆ.

ಸ್ಪಷ್ಟೀಕರಣ: ಈ ಅಂಕಣ ಬರಹ, ಅಮೃತಾಂಜನ್ ಮುಲಾಮಿನ ಪ್ರಚಾರದ ಉದ್ದೇಶದಿಂದ ಬರೆದದ್ದಲ್ಲ. ಕಾರಣ, ಅಮೃತಾಂಜನ್ ಮುಲಾಮಿಗೆ ಇಂದು ಪ್ರಚಾರದ ಅಗತ್ಯವಿಲ್ಲ.

ಕಳ್ಳಬೆಕ್ಕಿನ ಬೇಟೆಯ ಪಂದ್ಯದಲ್ಲಿ ಬಿತ್ತು ಮೊದಲ ವಿಕೆಟ್..!

ಹೊಳೆದಂಡೆಗೆ ತೆರಳಿದ್ದ ಅವಧೂತರು ತಮ್ಮ ಶಿಷ್ಯಗಣದೊಂದಿಗೆ ಮನೆಗೆ ಮರಳುವ ಹೊತ್ತಿಗೆ ಮಧ್ಯಾಹ್ನದ ಬಿಸಿಲೇರಿತ್ತು. ಮನೆಯ ಬೀದಿಬಾಗಿಲ ಬಳಿಯೇ ಶತಪಥ ಹಾಕುತ್ತಿದ್ದರು ಗುರುಮಾತೆ. ಅವರ ಮುಖಚರ್ಯೆ ನೋಡಿದರೆ, ಎಲ್ಲರಿಗೂ ಊಟಕ್ಕೆ ಬಡಿಸಲೆಂದೇ ಕಾಯುತ್ತಿರುವಂತಿತ್ತು. ಎಲ್ಲರೂ ಕೈಕಾಲು ತೊಳೆದುಕೊಂಡು, ವಾಡಿಕೆಯಂತೆ ದೇವರಿಗೆ ಒಮ್ಮೆ ಪ್ರಾರ್ಥನೆ ಸಲ್ಲಿಸಿ, ನಿಗದಿತ ಪೂಜಾನುಷ್ಠಾನಗಳನ್ನು ಮುಗಿಸಿದ ನಂತರವಷ್ಟೇ ಗುರುಮಾತೆಯ ಮುಖ ಅರಳಿದ್ದು. ಕಾರಣ, ಸಾಕಷ್ಟು ದೂರವಿರುವ ಹೊಳೆದಂಡೆಯಿಂದ ಬಿರುಬಿಸಿಲಿನಲ್ಲೇ ನಡೆದುಕೊಂಡು ಬಂದಿರುವ ಈ ಜೀವಗಳ ಹೊಟ್ಟೆಯನ್ನು ಇನ್ನಾದರೂ ತಂಪಾಗಿಸಬಹುದಲ್ಲಾ ಎಂಬ ಆಕೆಯ ವಾತ್ಸಲ್ಯಮಯ ಎಣಿಕೆ!

ರಸದೌತಣ
ಯಗಟಿ ರಘು ನಾಡಿಗ್
vveditoped@gmail.com
naadigru@gmail.com

ಸಾಲಾಗಿ ಹಾಕಿರುವ ಬಾಳೆಎಲೆಗಳ ಮುಂದೆ ರಂಗೋಲಿಯಿಟ್ಟು ಅದಾಗಲೇ ಸಜ್ಜುಗೊಳಿಸಿದ್ದ ಗುರುಮಾತೆ, ''ಎಲ್ರೂ ಬನ್ನೀ ಮಕ್ಕಳಾ ಊಟಕ್ಕೆ...'' ಎಂದು ಕರೆದರು. ಆ ಕರೆಯಲ್ಲಿ ಕೆನೆಗಟ್ಟಿದ್ದ ಮಾತೃವಾತ್ಸಲ್ಯವನ್ನು ಕಣ್ತುಂಬಿಕೊಂಡ ಶಿಷ್ಯರು, ಇವರನ್ನು 'ಗುರುಮಾತೆ' ಎಂದರೆ ಸಾಕೋ ಅಥವಾ 'ಹೊರನಾಡಿನ ಸಾಕ್ಷಾತ್ ಶ್ರೀ ಅನ್ನಪೂರ್ಣೇಶ್ವರಿ' ಎನ್ನಬೇಕೋ ಎಂಬ ಲೆಕ್ಕಾಚಾರದಲ್ಲಿ ಇದ್ದಂತಿತ್ತು. ಆ ಶಿಷ್ಯರಾರೂ ಅವಧೂತರ ಊರಿನವರೇ ಆಗಿರಲಿಲ್ಲ. ಒಂದು ಹಂತದ ಸಾಂಪ್ರದಾಯಿಕ ಶಿಕ್ಷಣವನ್ನು ಮುಗಿಸಿದ ನಂತರ ವೇದಪಾಠಗಳ ಕಲಿಕೆ, ಸನಾತನ ಧರ್ಮದ ಮೌಲ್ಯ ಹಾಗೂ ಪರಂಪರೆಗಳನ್ನು ಅರಿಯುವಿಕೆ ಸೇರಿದಂತೆ ಅಧ್ಯಾತ್ಮ ಜಗತ್ತು ಒಳಗೊಂಡಿರುವ ವಿವಿಧ ಸ್ತರದ ಸಾಧನಾ ಪ್ರಪಂಚಕ್ಕೆ ಒಡ್ಡಿಕೊಳ್ಳಲೆಂದು ಅವಧೂತರಲ್ಲಿಗೆ ಬಂದಿದ್ದ ಕಲಿಕಾರ್ಥಿಗಳಾಗಿದ್ದರು ಅವರೆಲ್ಲರೂ. ''ವೇದ-ಉಪನಿಷತ್ತು ಇತ್ಯಾದಿಗಳು ಸಮಾಜದ ಯಾವುದೋ ನಿರ್ದಿಷ್ಟ ವರ್ಗದ ಸ್ವತ್ತಲ್ಲ, ಅವನ್ನು ಕಲಿಯುವ ಶ್ರದ್ಧೆ ಮತ್ತು ಅನುಷ್ಠಾನದ ಆಸಕ್ತಿ ಇರುವ ಎಲ್ಲರಿಗೂ ಅವು ಮುಕ್ತವಾಗಿವೆ; ಅಧ್ಯಾತ್ಮವೆಂಬ ಆಗಸವನ್ನು ನೋಡಲು ಯಾರೂ ಹಿಂಜರಿಯುವ ಅಗತ್ಯವಿಲ್ಲ. ಆ ಆಗಸದೆಡೆಗೆ ಕತ್ತೆತ್ತಿ ನೋಡಿ ಅಲ್ಲಿ ಬೆಳಗುತ್ತಿರುವ ದಿವ್ಯ ಸೂರ್ಯನ ಕಿರಣಗಳನ್ನು ಮೈಗೂಡಿಸಿಕೊಳ್ಳಲು ಬಯಸುವ ಯಾರು ಬೇಕಿದ್ದರೂ ಇಲ್ಲಿ ಅನುಸಂಧಾನ ಮಾಡಲು ಸ್ವತಂತ್ರರು'' ಎಂದೇ ಘಂಟಾಘೋಷವಾಗಿ ಹೇಳುತ್ತಿದ್ದರು ಅವಧೂತರು. ತಮ್ಮ ಈ ಸದಾಶಯವನ್ನು ಅರಿತು ಕಲಿಕೆಗೆಂದು ಬಂದಿದ್ದ, ಸಮಾಜದ ವಿವಿಧ ಜಾತಿ-ಸ್ತರಗಳಿಗೆ ಸೇರಿದ್ದ ಆ ಶಿಷ್ಯರನ್ನು 'ಅನ್ನ-ಅಕ್ಷರ-ಆಶ್ರಯ'ದ ಪರಿಕಲ್ಪನೆಯಡಿ ತಮ್ಮ ಮನೆಯಲ್ಲೇ ಇಟ್ಟುಕೊಂಡು, ಅವರನ್ನು ತಿದ್ದಿ ತೀಡಿ ಅಪರಂಜಿಯ ತುಂಡುಗಳನ್ನಾಗಿಸುತ್ತಿದ್ದರು ಅವಧೂತರು. ಶಿಕ್ಷಣ/ಕಲಿಕೆ ಎಂಬುದು 'ವಾಣಿಜ್ಯ ಸರಕು' ಎಂಬಂತಾಗಿಬಿಟ್ಟಿರುವ ಈ ದಿನಮಾನದಲ್ಲಿ ಅವಧೂತರು ತಮ್ಮನ್ನೆಲ್ಲಾ ಹೀಗೆ ತೆಕ್ಕೆಗೆ ತೆಗೆದುಕೊಂಡು ಪೊರೆಯುತ್ತಿದ್ದ ರೀತಿಯನ್ನೂ, ಸ್ವಂತ ಮಕ್ಕಳನ್ನು ನೋಡಿಕೊಳ್ಳುವಂತೆ ಗುರುಮಾತೆ ಕಾಲಾನುಕಾಲಕ್ಕೆ ತಮ್ಮನ್ನು ಪೋಷಿಸುತ್ತಿದ್ದ ಪರಿಯನ್ನೂ ನೆನೆದು ಶಿಷ್ಯರು ಕೃತಜ್ಞತಾಪೂರ್ವಕ ಭಾವದಲ್ಲೇ ವಿಹರಿಸುತ್ತಿದ್ದರು.

''ಎಲೆಯ ಮೇಲೆ ಬಡಿಸಿರೋ ಅನ್ನವನ್ನು ಹಾಗೆಲ್ಲಾ ಕಾಯಿಸ್ತಾರೇನ್ರಯ್ಯಾ....?'' ಎಂಬ ಅವಧೂತರ ದನಿ ಕೇಳಿದಾಗಲೇ ಶಿಷ್ಯರು ತಮ್ಮ ಭಾವಯಾನದಿಂದ ಹೊರಬಂದಿದ್ದು. ಎಲೆಯನ್ನೊಮ್ಮೆ ಕಣ್ಣಿಗೊತ್ತಿಕೊಂಡು ಎಲ್ಲರೂ ಊಟಕ್ಕೆ ಶುರುಹಚ್ಚಿಕೊಂಡರು. ಆ ಅಡುಗೆಯಲ್ಲಿ ಇದ್ದುದು 'ಸವಿರುಚಿ' ಮಾತ್ರವಲ್ಲ, 'ದಿವ್ಯರುಚಿ'ಯೂ. ಅದನ್ನು ಆಸ್ವಾದಿಸುತ್ತಲೇ ಶಿಷ್ಯರೊಬ್ಬರು, ''ಅಡುಗೆ ಎಷ್ಟೊಂದು ರುಚಿಯಾಗಿದೆ ಗುರುಗಳೇ..'' ಎಂದಾಗ, ''ಶ್ರೀಮಂತನ ಮನೆಯ ನೋಟ ಚಂದ, ಬಡವನ ಮನೆಯ ಊಟ ಚಂದ ಅನ್ನೋದು ಅದಕ್ಕೇ ಕಣ್ರಯ್ಯಾ...'' ಎಂದರು ಅವಧೂತರು. ತಮ್ಮ ಒಗಟಿನ ಮಾತು ಶಿಷ್ಯರಿಗೆ ಅರ್ಥವಾಗಲಿಲ್ಲ ಎಂಬುದನ್ನು ಗ್ರಹಿಸಿ ಮಾತು ಮುಂದುವರಿಸಿದ ಅವಧೂತರು, ''ನೀವೀಗ ಉಣ್ಣುತ್ತಿದ್ದೀರಲ್ಲಾ ಎಳೆಯ ಹಲಸಿನ ಕಾಯಿಯ ಹುಳಿ, ಆ ಹಲಸಿನ ಕಾಯಿ ಎಲ್ಲಿಯದು ಗೊತ್ತೇ? ಇದುವರೆಗೂ ನೀವು ಆಲಿಸಿಕೊಂಡೇ ಬಂದ ಕಥನದ ನಾಯಕಿಯ ಮನೆಯದ್ದು..! ನಾವೆಲ್ಲರೂ ಶಿವರಾತ್ರಿಯ ಜಾಗರಣೆ ಮುಗಿಸಿಕೊಂಡು ಬರುವಾಗ ಮಾರ್ಗಮಧ್ಯದಲ್ಲಿ ಶಾರದೆಯ ಹೆತ್ತವರು ನಮಗೆ ಜೇನುಹಲಸಿನ ಆತಿಥ್ಯ ನೀಡಿದ್ದು ನಿಮಗೆ ನೆನಪಿರಬೇಕಲ್ಲವಾ? ದುಡ್ಡು-ಕಾಸಿನ ವಿಷಯದಲ್ಲಿ ಬಡವರಾಗಿದ್ದರೂ ಅಪಾರ ಹೃದಯಶ್ರೀಮಂತಿಕೆಯಿರುವ ಆ ಸಹೃದಯಿಗಳು, ನಾವೆಲ್ಲರೂ ಇತ್ತ ಹಲಸಿನ ಹಣ್ಣನ್ನು ಮೆಲ್ಲುತ್ತಿದ್ದರೆ ಅತ್ತ ಕಾರಿನ ಡಿಕ್ಕಿಯಲ್ಲಿ ಮಣಗಟ್ಟಲೆ ಎಳೆಹಲಸಿನ ಕಾಯಿಯನ್ನು ತುಂಬಿಸಿಬಿಟ್ಟರು. ಅದೆಂಥಾ ನಿರ್ವ್ಯಾಜ ಪ್ರೇಮವೆಂದರೆ, ಹಾಗೆ ನೀಡಿದ್ದನ್ನು ಕೂಡ ಅವರು ನಮ್ಮೆಲ್ಲರ ಸಮ್ಮುಖದಲ್ಲಿ ಹೇಳಿಕೊಳ್ಳಲಿಲ್ಲ. ಗುರುವಿಗೆ ಮತ್ತು ದೇವರಿಗೆ ಬೇಕಿರುವುದು ಇಂಥ ನಿರ್ಮಲ ಪ್ರೀತಿ ಮತ್ತು ಭಕ್ತಿಯೇ ವಿನಾ, 'ಪ್ರದರ್ಶನ'ದ ಅಥವಾ 'ಆಡಂಬರ'ದ ಪೂಜೆಯಲ್ಲ. ನೀವೆಲ್ಲರೂ 'ಗುರುಮಾತೆ' ಎಂದು ಪ್ರೀತಿಯಿಂದ ಕರೆಯುವ ನಮ್ಮಮ್ಮನ ಕೈರುಚಿಯ ಕಾರಣದಿಂದಾಗಿ ನೀವೀಗ ಉಣ್ಣುತ್ತಿರುವ ಅನ್ನ-ಹುಳಿ ರುಚಿರುಚಿಯಾಗಿರುವುದು ಎಷ್ಟು ನಿಜವೋ, ಶಾರದೆಯ ಹೆತ್ತವರು ಕಾರಿನಲ್ಲಿ ತುಂಬಿಸಿದ ಹಲಸಿನಕಾಯಿಯಲ್ಲಿ ಅಡಗಿದ್ದ, ಯಾವುದೇ ಕೃತಜ್ಞತೆ ಅಥವಾ ಪ್ರತಿಫಲದ ಅಪೇಕ್ಷೆಯಿಲ್ಲದ ಭಾವವೂ ಈ ದಿವ್ಯರುಚಿಗೆ ಅಷ್ಟೇ ಕಾರಣ. ಪರಿಶ್ರಮದ ದುಡಿಮೆಯಿಂದ ದಕ್ಕಿದ ಅನ್ನ, ನಿಷ್ಕಲ್ಮಷ ಭಕ್ತಿಗೆ ಪ್ರತಿಯಾಗಿ ದಕ್ಕುವ ಗುರು-ದೇವರ ಪ್ರಸಾದ ಯಾವತ್ತಿಗೂ ಹೀಗೆ ಸ್ವಾದಿಷ್ಟವಾಗಿರುತ್ತವೆ ಎಂಬುದನ್ನು ನಿಮಗೆ ಮನವರಿಕೆ ಮಾಡಿಕೊಡುವುದೇ ನನ್ನ ಉದ್ದೇಶವಾಗಿತ್ತು'' ಎಂದರು.

ಈ ಮಾತು ಕೇಳಿದ ಶಿಷ್ಯರಿಗೆ, ''ಅಪರಿಚಿತ ಊರಿನಲ್ಲಿ ಹೆಜ್ಜೆಹಾಕುತ್ತಿರುವ ಮನುಷ್ಯ ತನಗೆ ತೀವ್ರ ಹಸಿವಾದಾಗಲೇ ಹೋಟೆಲ್‌ನ ಬೋರ್ಡು ಓದೋದು; ತೀವ್ರದಾಹ ಆದಾಗಲೇ ಬೀದಿನಲ್ಲಿಯನ್ನು ತಿರುಗಿಸೋದು'' ಎಂಬ ನಾಟಕವೊಂದರ ಸಂಭಾಷಣೆ ನೆನಪಾಗಿ, ವಿಶ್ವವಿದ್ಯಾಲಯಗಳಲ್ಲೂ ಸಿಗದ ಜೀವನಪಾಠವನ್ನು ಹೀಗೆ ಬದುಕಿನ ಒಂದೊಂದು ಘಟನೆಯನ್ನೂ ಸಾಕ್ಷಿಯಾಗಿರಿಸಿಕೊಂಡು ತಮಗೆ ಉಣಬಡಿಸುತ್ತಿರುವ ಅವಧೂತರ ಬಗ್ಗೆ ಪ್ರೀತಿ-ಭಕ್ತಿ-ಅಭಿಮಾನಗಳು ಮತ್ತಷ್ಟು ಹೆಚ್ಚಿ, ''ಅಧ್ಯಾತ್ಮದ ಸಾಧನೆಯ ಹಾದಿಯಲ್ಲಿ ಯಶಸ್ಸು ದಕ್ಕಿಸಿಕೊಳ್ಳುವುದು ಕೊಂಚ ವಿಳಂಬವಾದರೂ ಪರವಾಗಿಲ್ಲ, ಆ ಗುರಿಯಿಂದ ವಿಮುಖರಾಗುವುದಿಲ್ಲ; ಕ್ಷಿಪ್ರವಾಗಿ ಸಂಪತ್ತು ದಕ್ಕಿಸಿಕೊಳ್ಳುವ ಹುಕಿಗೆ ಬಿದ್ದು ಭ್ರಷ್ಟರಾಗುವುದಿಲ್ಲ'' ಎಂದು ಮನದಲ್ಲೇ ಸಂಕಲ್ಪಿಸಿದರು. ಆ ವೇಳೆ ಅವರೆಲ್ಲಾ ಕೈ ಇರಿಸಿದ್ದ ಎಲೆಯ ಮೇಲಿದ್ದ 'ಅನ್ನಬ್ರಹ್ಮ'ನೇ ಈ ಸಂಕಲ್ಪಕ್ಕೆ ಸಾಕ್ಷಿಯಾಗಿಬಿಟ್ಟ...!

ಜೀವನಪಾಠವನ್ನು ಕಲಿಯಲು ಒಬ್ಬೊಬ್ಬರಿಗೂ ಒಂದೊಂದು ಮಾರ್ಗವಿರಬಹುದು, ಅವರದೇ ಆದ ನಿಮಿತ್ತಗಳಿರಬಹುದು. ಆದರೆ ತಮಗೆ ಶಾರದೆಯ ಕಥಾನಕವೇ ಬಗೆಬಗೆಯ ನೆಲೆಗಟ್ಟಿನ ಪಾಠಗಳನ್ನು ಹೇಳಿಕೊಡುತ್ತಿದೆಯಲ್ಲಾ? ಅದಕ್ಕೆ ಪೂರಕವಾಗಿ ಒಂದಷ್ಟು ಪ್ರತ್ಯಕ್ಷ ನಿದರ್ಶನಗಳೂ ಜರುಗುತ್ತಿವೆಯಲ್ಲಾ? ಶಾಲಾ-ಕಾಲೇಜುಗಳ ಸಾಂಪ್ರದಾಯಿಕ ಶಿಕ್ಷಣದಲ್ಲಿ ಒದಗಿಸಲಾಗುವ 'ಥಿಯರಿ ಮತ್ತು ಪ್ರಾಕ್ಟಿಕಲ್' ಪರಿಕಲ್ಪನೆಯ ಪಾಠವನ್ನು ಹೋಲುವ 'ಜೀವನಪಾಠ' ಎಂದರೆ ಇದೇನಾ? ಎಂಬೆಲ್ಲಾ ಪ್ರಶ್ನೆಗಳನ್ನು ತಮಗೇ ಹಾಕಿಕೊಳ್ಳುವ ಮೂಲಕ ಶಿಷ್ಯರು ಊಟದ ನಡುನಡುವೆ ಆತ್ಮಾವಲೋಕನವನ್ನೂ ನಡೆಸುತ್ತಿದ್ದರು.

''ಊಟವಾದ ನಂತರ ನೀವೆಲ್ಲರೂ ಕೊಂಚ ವಿಶ್ರಮಿಸಿ. ದೇವರಿಗೆ ಸಂಜೆಯ ಆರತಿ ಮಾಡಿದ ನಂತರ ಕಥೆಯನ್ನು ಮುಂದುವರಿಸೋಣ'' ಎಂಬ ಅವಧೂತರ ದನಿ ಎರಡನೇ ಬಾರಿಗೆ ಎಚ್ಚರಿಸಿದ ನಂತರವೇ ಶಿಷ್ಯರೆಲ್ಲರೂ ಊಟದಿಂದ ಎದ್ದಿದ್ದು...

ಭಾಗ-11

★ ★★

ವಿಶ್ರಮಿಸುವಂತೆ ಅವಧೂತರು ಸೂಚಿಸಿದ್ದರೂ ಶಿಷ್ಯರಿಗೆ ಆ ಕಡೆಗೆ ಮನಸ್ಸೇ ಇರಲಿಲ್ಲ, ಅವರ ತವಕವಿದ್ದುದು ಯಾವಾಗ ಸಂಜೆಯಾಗಿ ಆರತಿ ಮುಗಿಯುವುದೋ ಎಂಬುದರ ಕಡೆಗೇ! ಏಕೆಂದರೆ, ಅವಧೂತರು ಶಾರದೆಯ ಕಥಾನಕವನ್ನು ಮುಂದುವರಿಸುವುದಿತ್ತು. ಪಟ್ಟಣದ ಸಮಾಜಸೇವಾ ಸಂಸ್ಥೆಯ ಆವರಣದಲ್ಲಿ ನಕಾರಾತ್ಮಕ ಛಾಯೆಯು ಆವರಿಸಿಕೊಳ್ಳುವುದಕ್ಕೆ ಕಾರಣವಾದ 'ಕಳ್ಳಬೆಕ್ಕು' ಯಾವುದು? ಸಂಸ್ಥೆಯ ಮ್ಯಾನೇಜರ್, ಆಶ್ರಮದ ಸ್ವಾಮೀಜಿ, ಆ ಪಟ್ಟಣದ ಪ್ರತಿಷ್ಠಿತ ರಾಜಕಾರಣಿ ಮತ್ತು ಸರ್ಕಲ್ ಇನ್‌ಸ್ಪೆಕ್ಟರ್ ಇವರ ಪೈಕಿ ಯಾರು ಆ 'ಕಳ್ಳಬೆಕ್ಕು'? ಎಂಬುದನ್ನು ಅವಧೂತರು ಸಂಜೆ ಹರವಿಡಲಿದ್ದಾರೆ ಎಂಬ ಕುತೂಹಲಭರಿತ ತವಕವೇ ಅದಕ್ಕೆ ಕಾರಣ.

ನಿರೀಕ್ಷಿಸಿದಂತೆಯೇ ಸಂಜೆಯಾಯಿತು, ದೇವರಿಗೆ ಆರತಿಯೂ ಆಯಿತು. ವಾಡಿಕೆಯಂತೆ ಮನೆಯ ಹಿತ್ತಲಲ್ಲಿ ಜಮಖಾನವನ್ನು ಹಾಸಿ ಸಜ್ಜುಗೊಳಿಸಿದ ಶಿಷ್ಯರು, ಅವಧೂತರು ಅಲ್ಲಿಗೆ ಬರುವುದನ್ನೇ ಎದುರುನೋಡುತ್ತಿದ್ದರು. ಆದರೆ ಅವಧೂತರೋ ಹಾಗೆಲ್ಲಾ ಬಡಪೆಟ್ಟಿಗೆ ಮಣಿಯುವ ಆಸಾಮಿಯಲ್ಲ. ಸಸ್ಪೆನ್ಸ್ ಅನ್ನು ಅಷ್ಟು ಸುಲಭಕ್ಕೆ ಬಿಟ್ಟುಕೊಡದೆ ಶಿಷ್ಯರನ್ನು ಗೋಳುಹೊಯ್ದುಕೊಳ್ಳುವುದೆಂದರೆ ಅವಧೂತರಿಗೆ ಅದೇನೋ ಆನಂದ! ಅದಕ್ಕೊಂದು ಕಾರಣವೂ ಇತ್ತು. ಆ ಶಿಷ್ಯರೆಲ್ಲಾ ದೂರದ ಊರುಗಳನ್ನು ಬಿಟ್ಟು ಬಂದವರಾಗಿದ್ದರಿಂದ, ತಂತಮ್ಮ ಮನೆಗಳಲ್ಲಿ ಅವರು ಕಾಣಬಹುದಾಗಿದ್ದ ತರಲೆ-ತುಂಟಾಟ-ತಮಾಷೆ, ಕೀಟಲೆ-ಕಿಚಾಯಿಸುವಿಕೆ, ಹುಸಿಮುನಿಸು-ಹಾಸ್ಯ ಮುಂತಾದ ಬದುಕಿನ ಯಾವುದೇ ಸಹಜ ರಸನಿಮಿಷಗಳಿಂದ ಶಿಷ್ಯರು ವಂಚಿತರಾಗಬಾರದು ಎಂಬುದು ಅವಧೂತರ ಆಶಯವಾಗಿತ್ತು. ಹೀಗಾಗಿ ಬೋಧನೆ/ಕಲಿಕೆಯ ರಸಘಟ್ಟದ ಜತೆಜತೆಗೇ ಅಂಥ ರಸಪ್ರಸಂಗಗಳನ್ನು ಶಿಷ್ಯರಿಗೆ ಕಟ್ಟಿಕೊಡುವ ಕಡೆಗೆ ಅವಧೂತರು ಗಮನಹರಿಸುತ್ತಿದ್ದರು. 'ಕಳ್ಳಬೆಕ್ಕಿನ ಸಸ್ಪೆನ್ಸ್ ಕಥಾನಕ'ವು ಅವಧೂತರ ಈ ಆಶಯಕ್ಕೆ ಇನ್ನಿಲ್ಲದಂತೆ ಅನುವುಮಾಡಿಕೊಟ್ಟಿತ್ತು ಮತ್ತು ಅವಧೂತರು ಕೂಡ ಆ ಅವಕಾಶವನ್ನು ಯಥೋಚಿತವಾಗಿ ಬಳಸಿಕೊಳ್ಳುತ್ತಿದ್ದರು..!

ಚಿತ್ರಮಂದಿರದೊಳಗೆ ಕೂತಿರುವ ಅಭಿಮಾನಿಗಳು, ಸಿನಿಮಾ ಯಾವಾಗ ಶುರುವಾಗುತ್ತದೋ ಎಂಬ ತವಕದಲ್ಲಿ ಬೆಳ್ಳಿತೆರೆಯ ಕಡೆಗೇ ದಿಟ್ಟಿಸಿ ಕೂರುವಂತೆ, ಜಮಖಾನದ ಮೇಲೆ ಕೂತಿದ್ದ ಶಿಷ್ಯರೆಲ್ಲರೂ ಹಿತ್ತಲಿನ ಬಾಗಿಲಿನ ಕಡೆಗೇ ಕಣ್ಣು ನೆಟ್ಟಿದ್ದರು. ಅವರ ನಿರೀಕ್ಷೆಯಂತೆಯೇ 'ಅಧ್ಯಾತ್ಮ ಸಾಮ್ರಾಜ್ಯ'ದ ಹೀರೋ ಆಗಿದ್ದ ಅವಧೂತರು ಆ ಬಾಗಿಲಿನಿಂದ ತೂರಿಕೊಂಡು ಹಿತ್ತಲಿಗೆ ಬಂದೇಬಿಟ್ಟರು. ಮುಖದಲ್ಲಿ ಮತ್ತದೇ ತುಂಟನಗು. ಅರ್ಧವೃತ್ತಾಕಾರದಲ್ಲಿ ಕೂತಿದ್ದ ಶಿಷ್ಯರ ಎದುರು ಆಸೀನರಾದ ಅವಧೂತರು ಗಂಟಲು ಸರಿಮಾಡಿಕೊಂಡು ಶಾರದೆಯ ಕಥಾನಕವನ್ನು ಮುಂದುವರಿಸಲು ಸನ್ನದ್ಧರಾದರು....

ಅಷ್ಟರೊಳಗೆ ಅವಧೂತರ ಆಪ್ತಸಹಾಯಕರು ಓಡಿಬಂದು, ''ಗುರುಗಳೇ, ನಿನ್ನೆ ನೀವು ಸೂಚಿಸಿದಂತೆ, ಸಂಸ್ಥೆಯ ವಿದ್ಯಾರ್ಥಿನಿಲಯದ ಅಡುಗೆಭಟ್ಟ 'ನಳಪಾಕ' ನಿಮಗೆ ಕರೆಮಾಡಿದ್ದಾನೆ'' ಎಂದರು. ಅದಕ್ಕೆ ಅವಧೂತರು ಮೊಬೈಲ್ ಫೋನಿನ ಸ್ಪೀಕರ್ ಆನ್ ಮಾಡುವಂತೆ ಸೂಚಿಸಿ ''ಹಲೋ...'' ಎಂದರು.

ಅತ್ತಕಡೆಯಿಂದ ಅಡುಗೆಭಟ್ಟನ ಅದಿರುದನಿ ಕೇಳಿಬಂತು. ''ಬುದ್ಧೀ... ನಾ ಮಾಡಿದ ತಪ್ಪನ್ನ ಹೊಟ್ಟೆಗೆ ಹಾಕ್ಕೊಳ್ಳಿ ಬುದ್ಧೀ'' ಎಂದು ನಳಪಾಕ ಅಲವತ್ತುಕೊಂಡ.

ಅವಧೂತರು ಏನೂ ಗೊತ್ತಿಲ್ಲದವರಂತೆ, ''ಯಾಕಯ್ಯಾ... ಏನಾಯ್ತು?'' ಎಂದಷ್ಟೇ ಕೇಳಿದರು.

''ನನ್ನನ್ನ ಕೆಲಸದಿಂದ ತೆಗೆದುಬಿಟ್ಟಿದ್ದಾರೆ ಬುದ್ಧೀ... ನೀವೇ ಕಾಪಾಡಬೇಕು'' ಎಂದ 'ನಳಪಾಕ' ನಡುಗುವ ದನಿಯಲ್ಲೇ.

ಈ ಮಾತಿಗೆ ಕೆರಳಿದ ಅವಧೂತರು, ''ಅಲ್ಲಯ್ಯಾ, ಅಡುಗೆ ಚೆನ್ನಾಗಿಲ್ಲ ಅಂತ ವಿದ್ಯಾರ್ಥಿನಿಲಯದ ಮಕ್ಕಳು ಹೇಳಿದಾಗೆಲ್ಲಾ, 'ಮಾಡಿದ್ದುಣ್ಣೋ ಮಹಾರಾಯಾ' ಅಂತ ನೀನು ಹಂಗಿಸುತ್ತಿದ್ದೆಯಲ್ಲವೇ? 'ಮಾಡಿದ್ದುಣ್ಣೋ ಮಹಾರಾಯಾ' ಎಂಬ ಅದೇ ಡೈಲಾಗನ್ನು ನಿನಗೂ ಹೇಳಬೇಕಾದ ಕಾಲ ಬಂದಿದೆಯಪ್ಪಾ'' ಎಂದಷ್ಟೇ ಹೇಳಿ, ಕರೆಯನ್ನು ತುಂಡರಿಸುವಂತೆ ಆಪ್ತಸಹಾಯಕರಿಗೆ ಸೂಚಿಸಿದರು. ನಂತರ ಶಿಷ್ಯರೆಡೆಗೆ ನೋಡುತ್ತಾ, ''ಕಳ್ಳಬೆಕ್ಕಿನ ಬೇಟೆ ಎಂಬ ಲೀಗ್ ಮ್ಯಾಚ್‌ನಲ್ಲಿ ಮೊದಲ ವಿಕೆಟ್ ಬಿತ್ತು...'' ಎನ್ನುತ್ತಾ ಕಣ್ಣು ಮಿಟುಕಿಸಿದರು.

''ಅಂದ್ರೆ, ಅಡುಗೆಭಟ್ಟ 'ನಳಪಾಕ'ನೇ ಸಂಸ್ಥೆಯೊಳಗೆ ತೂರಿಕೊಂಡಿದ್ದ ಕಳ್ಳಬೆಕ್ಕೇ ಗುರುಗಳೇ?'' ಎಂದು ಶಿಷ್ಯರು ಅಪ್ರತಿಭರಾಗಿ ಪ್ರಶ್ನಿಸಿದರು.

ಅವಧೂತರು ಗಡ್ಡವನ್ನು ನೀವಿಕೊಂಡು ಎಂದಿನ ನಿಗೂಢ ನಗೆಯನ್ನು ನಕ್ಕರು....

(ಮುಂದುವರಿಯುವುದು)

ಅಕ್ವೇರಿಯಂನಲ್ಲಿ ಮೀನು ಸಾಕುವವನು: ವೆಜಿಟೇರಿಯನ್

ಸಿನಿಗನ್ನಡ

ನಮ್ಮ ಕನ್ನಡದ ಹೆಮ್ಮೆ ಹೊಂಬಾಳೆ ಫಿಲ್ಮ್ಸ್ ಈಗ 'ಅಸ್ತ್ರಸ್ಟುಡಿಯೋಸ್' ಎಂಬ ಕಂಪನಿಯೊಂದಿಗೆ ಕೈ ಜೋಡಿಸಿ 'ಎಐ'ನಲ್ಲೂ ಹೊಸ ಭಾಷ್ಯ ಬರೆಯಲು ಮುನ್ನುಡಿ ಹಾಕಿದೆ. ಇದರ ಮೂಲಕ ಸಿನಿಮಾ ತಂತ್ರಜ್ಞಾನವನ್ನು ಇನ್ನೊಂದು ಹಂತಕ್ಕೆ ಕೊಂಡೊಯ್ಯುವ ಬಯಕೆ ಹೊಂಬಾಳೆಯದ್ದು. ಹೊಂಬಾಳೆ ಫಿಲ್ಮ್ಸ್ ಈಗ ಕನ್ನಡ ಚಿತ್ರರಂಗದಲ್ಲಿ ಮಾತ್ರವಲ್ಲ ಇಡೀ ಭಾರತದಾದ್ಯಂತ ಸದ್ದು ಮಾಡುತ್ತಿದೆ. ಹೌದು, ಹೊಂಬಾಳೆ ಫಿಲ್ಮ್ಸ್ ಈಗ 'ಬಾಳೆ ಬಂಗಾರ' ಎಂದು ಹಾಡುವಂಥ ಕಾಲ. ಯಾಕಂದ್ರೆ, ಸ್ಯಾಂಡಲ್‌ವುಡ್‌ನಲ್ಲೇ ಇದ್ದು ಬಾವಿಕಪ್ಪೆ ಥರ ಆಗೋದು ಬೇಡ ಅಂತ ಬಾಲಿವುಡ್‌ಗೂ ಕಾಲಿಟ್ಟಿದೆ ಈ ಬ್ಯಾನರ್. ಅಲ್ಲೂ ಒಳ್ಳೆಯ ಬೆಳೆ ತೆಗೆಯುವ ಆಶಯ ಹೊಂಬಾಳೆಯದ್ದು. ವಿಜಯ್ ಕಿರಗಂದೂರು ಅವರು ಈ ಬ್ಯಾನರ್‌ನ ಅಡಿಯಲ್ಲಿ ಪುನೀತ್ ರಾಜ್‌ಕುಮಾರ್ ಅವರ 'ನಿನ್ನಿಂದಲೇ' ಸಿನಿಮಾ ಮಾಡಿ ಸೋತಾಗ, 'ನಿನ್ನಿಂದಲೇ ಸೋತೆ ಒಪ್ಪಿಕೋ' ಎಂದು ಆಡಿಕೊಂಡವರು ಈ ಹೊಂಬಾಳೆ ಇಷ್ಟರ ಮಟ್ಟಕ್ಕೆ ಬೆಳೆಯುತ್ತೆ ಅಂತ ಅಂದುಕೊಂಡಿರಲಿಲ್ಲ. ಈಗ ಈ ಹೊಂಬಾಳೆಯ ಗೊನೆ, ಕೊನೆ ಇಲ್ಲ ಎಂಬಂತೆ ಬೆಳೆಯುತ್ತಿದೆ. ಅದಕ್ಕೆ ಕಾರಣ 'ಕೆಜಿಎಫ್' ಎಂದರೆ ತಪ್ಪಿಲ್ಲ. ಇದರ ನಂತರ 'ಕೆಜಿಎಫ್ 2' ಮತ್ತು 'ಸಲಾರ್' ಮೂಲಕ ಸದ್ದು ಮಾಡಿತ್ತು ಈ ಬ್ಯಾನರ್. ಇದರ ಜತೆಗೆ ಪುನೀತ್ ನಾಯಕತ್ವದ 'ರಾಜಕುಮಾರ' ಸಿನಿಮಾ ಮಾಡಿ ಗೆದ್ದಿತ್ತು. ಮತ್ತೆ ಪುನೀತ್ ಜತೆ 'ದ್ವಿತ್ವ' ಸಿನಿಮಾ ಕೂಡ ಅನೌನ್ಸ್ ಮಾಡಿತ್ತು. ಆದರೆ ಅದಾದ ನಂತರ ತಾನು ಯಶ್, ಪುನೀತ್ ಮತ್ತು ಪ್ರಶಾಂತ್ ನೀಲ್ ಅವರಿಗೆ ಮಾತ್ರ ಸೀಮಿತ ಅಲ್ಲ ಎನ್ನುವಂತೆ ಈಗೀಗ ಕನ್ನಡದ ಎಲ್ಲ ನಟರನ್ನೂ ಟಚ್ ಮಾಡಿತ್ತು ಹೊಂಬಾಳೆ. ಶ್ರೀಮುರಳಿ ಅವರ ಜತೆ 'ಭಗೀರಾ', ರಕ್ಷಿತ್ ಶೆಟ್ಟಿ ನಿರ್ದೇಶನದ 'ರಿಚರ್ಡ್ ಆಂಟನಿ' ಹೀಗೆ ಹೊಂಬಾಳೆ ಬ್ಯಾನರ್‌ನ ಅಂಬಾರಿ ಹೊರಟಿದೆ. ನಂತರ ರಿಷಭ್ ಶೆಟ್ಟಿ ಅವರ ಜತೆಗೂ 'ಕಾಂತಾರ' ಮಾಡಿದೆ. ಇದನ್ನೆಲ್ಲಾ ನೋಡಿ, ಹಿಂದೊಮ್ಮೆ, 'ಹೊಂಬಾಳೆ, ಹೊಂಬಾಳೆ' ಅಂತ ತಮ್ಮ ಸಿನಿಮಾದಲ್ಲಿ ಹಾಡಿದ್ದ ನಮ್ಮ ನವರಸ ನಾಯಕ ಜಗ್ಗೇಶ್, ''ನಿಮ್ ಬ್ಯಾನರ್‌ನಲ್ಲಿ 'ನನ್ನಾಸೆಯ ಹೂವೇ ಪಾರ್ಟ್ 2' ಮಾಡೋಣ್ವೇ?'' ಅಂತ ಕೇಳಿದ್ರು ಅನ್ನೋದು ಮಾತ್ರ ಶುದ್ಧ ಸುಳ್ಳು.

ತುಂಟರಗಾಳಿ
ಹರಿ ಪರಾಕ್
vveditoped@gmail.com

ಲೂಸ್ ಟಾಕ್ ▶▶ ವಿಶ್ವೇಶ್ವರ ಭಟ್

- **ಎನ್ ಸರ್, ಬರೀತಾ ಬರೀತಾ 100 ಪುಸ್ತಕ ಮುಗಿಸಿಬಿಟ್ರಲ್ಲ?**
- ಮತ್ತೆ? ಬರೀ ಹಿಸ್ಟರಿ ಕ್ರಿಯೇಟ್ ಮಾಡುವಂಥದ್ದು ಬರೆದ್ರೆ ಹೆಂಗೆ, ಬರೆದು ಹಿಸ್ಟರಿ ಕ್ರಿಯೇಟ್ ಮಾಡೋ ಕೆಲಸನೂ ಆಗಬೇಕಲ್ಲ.
- **ಈಗ ಪ್ರವಾಸದ ಬಗ್ಗೆನೂ ಬರೆಯೋಕೆ ಶುರು ಮಾಡಿದ್ದೀರ?**
- ಹೌದು, ಎಲ್ಲರೂ ಸ್ನೇಹಿತರ ಜತೆ ಬೆರೆಯೋಕೆ ಅಂತ ಪ್ರವಾಸ ಹೋದ್ರೆ, ನಾನು ನನ್ನ ಓದುಗರಿಗೋಸ್ಕರ ಬರೆಯೋಕೆ ಅಂತನೇ ಪ್ರವಾಸ ಹೋಗ್ತೀನಿ.
- **ಆದ್ರೂ ನೀವು ವಿದೇಶ ಪ್ರವಾಸ ಹೋಗೋದೇ ಜಾಸ್ತಿ ಅಲ್ವಾ?**
- ಹೋಮ್ ಪಿಚ್ಚಲ್ಲಿ ಯಾರ್ ಬೇಕಾದ್ರೂ ಆಡ್ತಾರೆ, ಫಾರಿನ್ ಪಿಚ್ಚಲ್ಲಿ ಆಡಿ ತೋರಿಸ್ಬೇಕು
- **ಯಾವಾಗಲೂ ವಿದೇಶ ಪ್ರವಾಸ ಮಾಡುವ ನಿಮ್ಮ ಪಾಲಿಸಿ ಏನು?**
- ಪ್ರಪಂಚ ಇದ್ದಷ್ಟು ಕಾಲು ಚಾಚು. 'ಕಾಲಾ'ಯ ತಸ್ಮೈ ನಮಃ
- **ಸರಿ, ನಿಮ್ಮ ಮುಂದಿನ ಗುರಿ?**
- ಪ್ರಪಂಚದ ಎಲ್ಲ ದೇಶಗಳಿಗೂ ಭೇಟಿ ಕೊಟ್ಟು ಕುವೆಂಪು ಹೇಳಿದ ರೀತಿಯಲ್ಲಿ 'ವಿಶ್ವ'-ಮಾನವ ಆಗೋದು

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಮತ್ತು ಖೇಮುಶ್ರೀ ಒಂದು ದಿನ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಹೋದ್ರು. ಅಲ್ಲಿ ಒಂದು ಜಯಂಟ್ ವೀಲ್ ನೋಡಿ ಖೇಮುಗೆ ಅದರಲ್ಲಿ ಕೂರಬೇಕು ಅಂತ ಆಸೆ ಆಯ್ತು. ಹಾಗಂತ ಖೇಮುಶ್ರೀಗೆ ಹೇಳಿದ. ಅದಕ್ಕೆ ಖೇಮುಶ್ರೀ, ''ಅಲ್ಲಿ ಹಾಕಿರೋ ಬೋರ್ಡ್ ನೋಡಿ, ಒಂದ್ ರೈಡ್‌ಗೆ 500 ರುಪಾಯಿ. 500 ರುಪಾಯಿ ಏನು ಸುಮ್ನೆ ಬರುತ್ತಾ?'' ಅಂದ್ಳು. ಸರಿ ಅಂತ ಖೇಮು ಸುಮ್ಮನೆ ಆದ. ಮುಂದಿನ ವರ್ಷ ಅದೇ ಸಮಯಕ್ಕೆ ಅಲ್ಲಿಗೆ ಹೋದ್ರು. ಖೇಮುಗೆ ಮತ್ತೆ ಜಯಂಟ್ ವೀಲ್‌ನಲ್ಲಿ ಕೂತ್ಕೊಳ್ಳೋ ಆಸೆ ಆಯ್ತು. ಹೆಂಡತಿಗೆ ಹೇಳಿದ. ಖೇಮುಶ್ರೀಯಿಂದ ಅದೇ ಉತ್ತರ ಬಂತು, ''500 ರುಪಾಯಿ ಏನು ಸುಮ್ನೆ ಬರುತ್ತಾ?'' ಅಂತ. ಸರಿ ಹೀಗೇ ವರುಷಗಳು ಕಳೆದು ಖೇಮು ಮುದುಕ ಆದ, ಮತ್ತೆ ಇಬ್ಬರೂ ಅಲ್ಲಿಗೆ ಹೋದ್ರು. ''ನಂಗೆ ವಯಸ್ಸು 70 ಆಯ್ತು, ಈ ಸಲನಾದ್ರೂ ಅದರಲ್ಲಿ ಕೂತ್ಕೊತೀನಿ ಕಣೇ. ಇಲ್ಲಾಂದ್ರೆ ನನ್ನ ಆಸೆ ಯಾವತ್ತೂ ಈಡೇರಲ್ಲ'' ಅಂದ ಖೇಮು. ಅದಕ್ಕೆ ಖೇಮುಶ್ರೀ ಮತ್ತೆ ಅದೇ ಮಾತು ಹೇಳಿದ್ಳು– ''500 ರುಪಾಯಿ ಏನು ಸುಮ್ನೆ ಬರುತ್ತಾ?''. ಆಗ ಇದನ್ನ ಆ ಜಯಂಟ್ ವೀಲ್ ರೈಡರ್ ಕೇಳಿಸಿಕೊಂಡ. ''ನೋಡಿ, ನಾನು ನಿಮ್ಮನ್ನ ಫ್ರೀ ಆಗಿ ಜಯಂಟ್ ವೀಲ್‌ನಲ್ಲಿ ಕರ್ಕೊಂಡ್ ಹೋಗ್ತೀನಿ. ಆದ್ರೆ, ಒಂದ್ ಕಂಡೀಷನ್. ನಾನು ರೈಡ್ ಮಾಡುವಾಗ, ನೀವು ಹೆದರಿಕೊಂಡು ಬಾಯಲ್ಲಿ ಒಂದ್ ಪದ ಉಚ್ಚರಿಸಿದರೂ ನಿಮ್ಗೆ 500 ರುಪಾಯಿ ಫೈನ್ ಆಗುತ್ತೆ'' ಅಂತ ಖೇಮು ದಂಪತಿಗೆ ಹೇಳಿದ. ಸರಿ ಅಂತ ಇಬ್ಬರೂ ಒಪ್ಪಿಕೊಂಡು ವೀಲ್ ಹತ್ತಿದರು. ಆ ರೈಡರ್ ಇವರನ್ನು ಹೆದರಿಸೋಕೆ ಅಂತ ಏನೆಲ್ಲಾ ಸರ್ಕಸ್, ಗಿಮಿಕ್ ಮಾಡಿದ, ಪಲ್ಟಿ ಹೊಡೆಸಿದ. ಆದರೆ ಇಬ್ಬರೂ ಕಮಕ್-ಕಿಮಕ್ ಅನ್ನಲಿಲ್ಲ. ಕೊನೆಗೆ, ಸಾಕಾಗಿ ಕೆಳಗೆ ಇಳಿಸುತ್ತಾ ರೈಡರ್ ಹೇಳಿದ, ''ಮೆಚ್ಚಬೇಕು ಕಣ್ರೀ, ನಾನು ಏನೇ ಸರ್ಕಸ್ ಮಾಡಿದ್ರೂ ನಿಮ್ಮನ್ನ ಹೆದರಿಸೋಕೆ ಆಗ್ಲಿಲ್ಲ. ಗುಡ್ ಜಾಬ್''. ಅದಕ್ಕೆ ಹಿಂದೆ ಕೂತಿದ್ದ ಖೇಮು ಮೆಲ್ಲಗೆ ಹೇಳಿದ ''ಹಂಗೇನಿಲ್ಲ ಸರ್, ನೀವು ಮೊದಲ ಸಲ ಪಲ್ಟಿ ಹೊಡೆಸಿದಾಗಲೇ, ನನ್ನ ಹೆಂಡ್ತಿ ಕೆಳಗೆ ಬಿದ್ದುಹೋದಳು. ಆದ್ರೂ ಸುಮ್ಮನೆ ಕೂತಿದ್ದೆ, ಯಾಕಂದ್ರೆ 500 ರುಪಾಯಿ ಏನು ಸುಮ್ನೆ ಬರುತ್ತಾ?''.

ಲೈನ್‌ಮ್ಯಾನ್

- **ಭೂಮಿ ಬಗ್ಗೆ ಸಾಕಷ್ಟು ತಿಳಿದುಕೊಂಡವನು**
- Earth ಶಾಸ್ತ್ರಜ್ಞ
- **ಅಕ್ವೇರಿಯಂನಲ್ಲಿ ಮೀನು ಸಾಕುವವರನ್ನು ಏನಂತಾರೆ?**
- ವೆಜಿಟೇರಿಯನ್
- **'ದತ್ತು' ಪುತ್ರ ಮದುವೆ ಆದಮೇಲೆ ಮೂರ್ನಾಲ್ಕು ಮಕ್ಕಳನ್ನ ಹುಟ್ಟಿಸಿದ್ರೆ, ಅವರಪ್ಪ ಅಮ್ಮ ಏನು ಹೇಳ್ತಾರೆ?**
- 'ಸಾಕು' ಮಗ
- **ಕಲಿಯುಗ ಅಂದ್ರೆ, ಯಾವುದು?**
- ಜನ ಪ್ರೀತಿ ವಾಪಸ್ ಕೊಟ್ಟಷ್ಟೇ ನಿಯತ್ತಾಗಿ ಸಾಲನೂ ವಾಪಸ್ ಕೊಡೋ ಕಾಲ
- **ಶಾಲಾ ಕಾಲೇಜು ದಿನಗಳನ್ನು ಏನೆನ್ನಬಹುದು?**
- 'ಕಲಿ'ಯುಗ
- **ಭಯಾನಕವಾಗಿ ಗೊರಕೆ ಹೊಡೆಯುವವನು**
- 'ಖರ್‍ರಾಟೆ' ಕಿಂಗ್
- **ಎಂಬಿಎ ಮಾಡಿದವರು ಬುಕ್ ಮಾಡೋ ಫ್ಲೈಟ್ ಟಿಕೆಟ್**
- ಬ್ಯುಸಿನೆಸ್ ಕ್ಲಾಸ್
- **ಬುದ್ಧನಂತೆ ಆಗೋಕೆ ಇರಬೇಕಾದ ಅರ್ಹತೆ ಏನು?**
- ಎಲ್ಲವನ್ನೂ ಬಿಟ್ಟು ಹೋಗೋಕೆ, ಏನಾದ್ರೂ ಇರಬೇಕು
- **ಕೈ ನಡುಗುವ ಕಾಯಿಲೆ ಇರೋನ ಸಮಸ್ಯೆ**
- ಯಾರ ಜತೆಗಾದ್ರೂ 'ಹ್ಯಾಂಡ್ ಶೇಕ್' ಮಾಡೋದು ಸುಲಭ
- **ಕತ್ತಲಲ್ಲಿ ಮಾಡೋ ಮೋಸ**
- ಇರುಳು ಮರುಳು

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:194

ಸಮಾಚಾರ ಸಣ್ಣದಲ್ಲ

ಮಡದಿ ತವರಿಗೆ: ನಾಲ್ವರ ಆತ್ಮಹತ್ಯೆ

ಭೋಪಾಲ್: ಮಧ್ಯಪ್ರದೇಶ ರಾಜ್ಯದ ಸಾಗರ್ ಜಿಲ್ಲೆಯ ತೆಹಾರ್ ಗ್ರಾಮದಲ್ಲಿ ಒಂದೇ ಕುಟುಂಬದ ನಾಲ್ವರು ಸಲ್ಫಾ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತ್ನಿ ಮುನಿದು ತವರಿಗೆ ಹೋದಳೆಂದು ಹತಾಶನಾದ ಪತಿ, ವೃದ್ಧ ತಾಯಿ ಹಾಗೂ ಹರೆಯದ ಮಕ್ಕಳಿಬ್ಬರ ಜತೆಗೂಡಿ ಜೀವ ಕಳೆದುಕೊಂಡಿದ್ದಾನೆ. ತೆಹಾರ್ ಗ್ರಾಮದ ಮನೋಹರ್ ಲೋಧಿ(45), ಪುತ್ರಿ ಶಿವಾನಿ(18), ಪುತ್ರ ಅಂಕಿತ್(16) ಮತ್ತು ತಾಯಿ ಫೂಲ್ರಾಣಿ ಲೋಧಿ(70) ಶುಕ್ರವಾರ ರಾತ್ರಿಯೇ ಆತ್ಮಹತ್ಯೆಗೆ ನಿರ್ಧರಿಸಿ ಮಾತ್ರೆ ಸೇವಿಸಿದ್ದಾರೆ. ಶನಿವಾರ ಮುಂಜಾನೆ ನೆರೆ ಹೊರೆಯವರ ಗಮನಕ್ಕೆ ಬಂದಿದೆ. ವೃದ್ಧೆ ಫೂಲ್ರಾಣಿ ಲೋಧಿ ಮತ್ತು ಮೊಮ್ಮಗ ಅಂಕಿತ್ ಅದಾಗಲೇ ಅಸುನೀಗಿದ್ದರು. ಅಸ್ವಸ್ಥರಾಗಿದ್ದ ತಂದೆ ಮಗಳನ್ನು ಆಸ್ಪತ್ರೆಗೆ ಕರೆದೊಯ್ಯಲೆತ್ನಿಸಿದಾಗ ಮನೋಹರ್ ಮಾರ್ಗಮಧ್ಯೆ ಕೊನೆಯುಸಿರೆಳೆದ. ಪುತ್ರಿ ಶಿವಾನಿ ಚಿಕಿತ್ಸೆಯ ಸಮಯದಲ್ಲಿ ಸಾವನ್ನಪ್ಪಿದಳು. ಆತ್ಮ ಹತ್ಯೆ ಗೆ ಕೌಟುಂಬಿಕ ಸಂಘರ್ಷ, ಅದರಿಂದ ಉಂಟಾದ ಖಿನ್ನತೆ ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ.

ಗೋವಾ ರಾಜ್ಯಪಾಲ ಗಜಪತಿ ಪ್ರಮಾಣ

ಪಣಜಿ: ಗೋವಾ ರಾಜ್ಯಪಾಲರಾಗಿ ಮಾಜಿ ಕೇಂದ್ರ ಸಚಿವ ಅಶೋಕ್ ಗಜಪತಿ ರಾಜು(74) ಶನಿವಾರ ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ

ಪ್ರಮಾಣ ವಚನ ಸ್ವೀಕರಿಸಿದರು. ಬಾಂಬೆ ಹೈ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಪ್ರಮಾಣ ವಚನ ಬೋಧಿಸಿ ದರು. ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಇತರ ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಭಾರತದ ಸಂವಿಧಾನ ಅನುಸರಿಸುವುದಾಗಿ, ಸ್ಥಳೀಯ ಭಾಷೆ ಅರ್ಥವಾಗದಿದ್ದರೂ ರಾಜ್ಯದ ಜನರ ಸೇವೆ ಮಾಡುವುದಾಗಿ ಅವಿಭಜಿತ ಆಂಧ್ರಪ್ರದೇಶದಲ್ಲಿ 7 ಬಾರಿ ಶಾಸಕರಾಗಿದ್ದ ತೆಲುಗು ದೇಶಂ ಪಕ್ಷದ(ಟಿಡಿಪಿ) ಹಿರಿಯ ನಾಯಕ ಗಜಪತಿ ರಾಜು ಹೇಳಿದರು. ರಾಜು 2014-18ರ ಅವಧಿಯಲ್ಲಿ ನಾಗರಿಕ ವಿಮಾನಯಾನ ಸಚಿವರೂ ಆಗಿದ್ದರು.

ಕೇದಾರನಾಥ ಯಾತ್ರೆ ಭೂಕುಸಿತದಿಂದ ಸ್ಥಗಿತ

ಡೆಹರಾಡೂನ್: ಉತ್ತರಾಖಂಡದ ಸೋನ್ ಪ್ರಯಾಗ್ ಬಳಿ ಭೂಕುಸಿತವಾಗಿದ್ದು, ಕೇದಾರನಾಥ ಯಾತ್ರೆಯನ್ನು ಗೌರಿಕುಂಡ್ ಮಾರ್ಗದಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮಾರ್ಗಮಧ್ಯೆ ಸಂಕಷ್ಟಕ್ಕೆ ಸಿಲುಕಿದ್ದ 100 ಯಾತ್ರಿಕರನ್ನು ರಕ್ಷಿಸಲಾಗಿದೆ. ರಾಜ್ಯ ಲೋಕೋಪಯೋಗಿ ಇಲಾಖೆ ಪರ್ಯಾಯ ಮಾರ್ಗ ರಚನೆ ಯತ್ನದಲ್ಲಿದ್ದಾರೆ ಎಂದು ಎಸ್‌ಡಿಆರ್‌ಎಫ್ ಹಿರಿಯ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಈ ಮಧ್ಯೆ, ರುದ್ರಪ್ರಯಾಗ ಜಿಲ್ಲೆಯಲ್ಲಿ ಮಳೆಯಿಂದ ಭಾರೀ ನಷ್ಟವಾಗಿದೆ. ಕೇದಾರಘಾಟಿ ರುಮ್ಸಿ ಗ್ರಾಮದಲ್ಲಿ ಬಹಳಷ್ಟು ಹಾನಿಯಾಗಿದೆ. 5-6 ಮನೆಗಳಿಗೆ ನೀರು ನುಗ್ಗಿದೆ. ಹಲವು ವಾಹನಗಳು ನೀರಿನಲ್ಲಿ ಕೊಚ್ಚಿಹೋಗಿವೆ. ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಜು.31ರವರೆಗೂ ಡೆಹರಾಡೂನ್, ಚಂಪಾವತ್ ಮತ್ತು ನೈನಿತಾಲ್ ಜಿಲ್ಲೆಗಳಲ್ಲಿ ಮಿಂಚುಗುಡುಗು ಸಹಿತ ವಾದ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಸಿಜೆಐ ನಿವೃತ್ತಿ ನಂತರ ಸಮಾಲೋಚನೆ ಸೇವೆ

ಅಮರಾವತಿ: ನಿವೃತ್ತಿ ನಂತರ ಸರಕಾರದ ಯಾವುದೇ ಹುದ್ದೆ ಅಲಂಕರಿಸುವುದಿಲ್ಲ, ಅದಕ್ಕೆ ಬದಲಾಗಿ ಸಮಾಲೋಚನೆ ಮತ್ತು ಮಧ್ಯಸ್ಥಿಕೆ

ಕ್ಷೇತ್ರದಲ್ಲಿ ಕೆಲಸ ಮಾಡುವೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯ ಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಘೋಷಿಸಿದರು. ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯಲ್ಲಿ ಹುಟ್ಟೂರು ದಾರಾಪುರದಲ್ಲಿ ನಡೆದ ದಿವಂಗತ ಟಿ.ಆರ್.ಗಿಲ್ಡಾ ಸ್ಮಾರಕ ಇ-ಗ್ರಂಥಾಲಯ ಉದ್ಘಾಟನಾ ಕಾರ್ಯಾಕ್ರಮದಲ್ಲಿ ಭಾಗವಹಿಸಿದ್ದ ನ್ಯಾ.ಗವಾಯಿ ಅವರು ಈ ಹೇಳಿಕೆ ನೀಡಿದ್ದಾರೆ. ಮುಂಬರುವ ನವೆಂಬರ್ 23ರಂದು ಅವರು ನಿವೃತ್ತರಾಗಲಿದ್ದಾರೆ. ನ.24ರ ನಂತರ ನಾನು ಸಮಾಲೋಚನೆ ಮತ್ತು ಮಧ್ಯಸ್ಥಿಕೆ ಕೆಲಸದಲ್ಲಿ ತೊಡಗಿಸಿಕೊಳ್ಳುವೆ. ನಿವೃತ್ತಿ ನಂತರ ಹೆಚ್ಚಿನ ಸಮಯವನ್ನು ದಾರಾಪುರ, ಅಮರಾವತಿ ಮತ್ತು ನಾಗಪುರದಲ್ಲಿ ಕಳೆಯಲು ಯೋಜಿಸಿರುವೆ ಎಂದರು. ನ್ಯಾಯಾಂಗ ಸೇವೆಯಲ್ಲಿದ್ದವರು ನಿವೃತ್ತಿ ನಂತರ ಸರಕಾರದ ಹುದ್ದೆ ಸ್ವೀಕರಿಸುವುದು ಅಥವಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದು ನೈತಿಕವಾಗಿ ಕಳವಳ ಹುಟ್ಟುಹಾಕುತ್ತದೆ ಎಂದರು.

{ ಹಿಮಂತ ಬಿಸ್ವ ಶರ್ಮಾ } ಅಸ್ಸಾಂ ಸಿಎಂ

ಭಾರತಕ್ಕೆ ಒಳನುಸುಳುವಿಕೆ ಹೆಚ್ಚುತ್ತಿದೆ. ಅಸ್ಸಾಂನಲ್ಲಿರುವ ಎಲ್ಲಾ ಬಾಂಗ್ಲಾದೇಶಿ ನುಸುಳುಕೋರರ ಹೊರಹಾಕಲು ನಾನು ಆಜೀವ ಸಿಎಂ ಆದರೂ ಸಾಲದು. ಅಕ್ರಮ ಬಾಂಗ್ಲಾ ವಲಸಿಗರನ್ನು ಹೊರಹಾಕಲೇಬೇಕಿದೆ. ಸ್ಥಳೀಯ ಸಂಸ್ಥೆ ಪ್ರತಿನಿಧಿಗಳು, ಅಧಿಕಾರಿಗಳು, ಪ್ರತಿ ಜಾಗರೂಕ ನಾಗರಿಕರಲ್ಲಿ ಮನವಿ ಮಾಡುವೆ, ನಿಮ್ಮ ನೆರೆಹೊರೆಯಲ್ಲಿ ಒಬ್ಬ ಅಕ್ರಮ ಬಾಂಗ್ಲಾದೇಶಿಗೂ ನೆಲೆಸಲು ಬಿಡಬೇಡಿ.

ದೇಶಾದ್ಯಂತ 26ನೇ ಕಾರ್ಗಿಲ್ ವಿಜಯ ದಿವಸ್ ಆಚರಣೆ

ದೆಹಲಿ: 1999ರಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಶತ್ರುದೇಶ ಪಾಕಿಸ್ತಾನವನ್ನು ಬಗ್ಗುಬಡಿದ ಭಾರತದ ಸೇನಾಪಡೆಗಳು ಶೌರ್ಯ-ಸಾಹಸವನ್ನು ಸ್ಮರಿಸುತ್ತಾ, ಹುತಾತ್ಮರಾದ ಯೋಧರಿಗೆ ಗೌರವ ನಮನ ಸಲ್ಲಿಸುತ್ತಾ ದೇಶಾದ್ಯಂತ ಶನಿವಾರ 'ಕಾರ್ಗಿಲ್ ವಿಜಯ ದಿವಸ್' ಆಚರಿಸಲಾಗಿದೆ.

ಕಾರ್ಗಿಲ್ ವಿಜಯ ದಿವಸ ದೇಶದ ಯೋಧರ ಅಸಾಧಾರಣ ಶೌರ್ಯ ಮತ್ತು ದೃಢ ನಿಶ್ಚಯವನ್ನು ಸಂಕೇತಿಸುತ್ತದೆ. 1999 ರ ಕಾರ್ಗಿಲ್ ಸಂಘರ್ಷದಲ್ಲಿ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸೈನಿಕರಿಗೆ ಗೌರವ ನಮನಗಳು ಎಂದು ರಾಷ್ಟ್ರಪತಿ ಹೇಳಿದ್ದಾರೆ. ದೇಶದ ಹೆಮ್ಮೆ ರಕ್ಷಿಸಲು ಪ್ರಾಣತ್ಯಾಗ ಮಾಡಿದ ಸೈನಿಕರ ಅಪ್ರತಿಮ ಧೈರ್ಯ ಮತ್ತು ಶೌರ್ಯವನ್ನು ದೇಶದ ಜನತೆ ಸದಾ ನೆನಪಿಸಿಕೊಳ್ಳುತ್ತಾರೆ. ಹುತಾತ್ಮ ಯೋಧರು ಪ್ರತಿ ಪೀಳಿಗೆಗೂ ಸ್ಫೂರ್ತಿ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹುತಾತ್ಮ ಯೋಧರ ತ್ಯಾಗ ಬಲಿದಾನವನ್ನು ಸ್ಮರಿಸಿ ಗೌರವ ನಮನ ಸಲ್ಲಿಸಿದ್ದಾರೆ. ಭಾರತದ ಉತ್ತರದ ತುದಿಯ ಕಾರ್ಗಿಲ್ ಪರ್ವತವನ್ನು ಆಕ್ರಮಿಸಿಕೊಂಡಿದ್ದ ಪಾಕ್ ಸೈನಿಕರನ್ನು ಹೊಡೆದೋಡಿಸಿ ಜು.26ರಂದು ಭಾರತದ ಸೇನಾಪಡೆಗಳು ಕಾರ್ಗಿಲ್ ಪರ್ವತದ ತುದಿಯಲ್ಲೇ 'ವಿಜಯ ದಿವಸ್' ಆಚರಿಸಿದ್ದವು. ಆ ದಿನದ ಸ್ಮರಣಾರ್ಥ ಶನಿವಾರ 26ನೇ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮವನ್ನು ಭಾರತೀಯ ಸೇನಾಪಡೆಗಳು ಹಮ್ಮಿಕೊಂಡಿದ್ದವು.

ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಸೇನೆಯ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಮತ್ತು ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ವೀರ ಯೋಧರ ಶೌರ್ಯ,-ಸಾಹಸವನ್ನು ಶ್ಲಾಘಿಸಿದರು.

ವಿಜಯ್ ದಿವಸ್ ಹಿನ್ನೆಲೆ ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಜನರಲ್ ಉಪೇಂದ್ರ ದ್ವಿವೇದಿ, ಏರ್‌ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಮತ್ತು ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ಸೈನಿಕರ ಸ್ಮಾರಕಕ್ಕೆ ಗೌರವ ನಮನ ಸಲ್ಲಿಸಿದರು.

ಕಾರ್ಗಿಲ್ ಯುದ್ಧ 1999

ಭಾರತದ ಕಾರ್ಗಿಲ್ ಪರ್ವತವನ್ನು ಉಗ್ರರ ವೇಷದಲ್ಲಿ ಬಂದ ಪಾಕ್ ಸೈನಿಕರು 1999ರ ಮೇ 3ರಂದು ಆಕ್ರಮಿಸಿಕೊಂಡರು. ಭಾರತೀಯ ಸೇನೆ 'ಆಪರೇಷನ್ ವಿಜಯ್' ಹೆಸರಲ್ಲಿ ಕಾರ್ಯಾಚರಣೆ ಆರಂಭಿಸಿತು. ಎರಡೂ ದೇಶಗಳ ನಡುವೆ ಎರಡೂ ಮುಕ್ಕಾಲು ತಿಂಗಳ ಕಾಲ ಭಾರೀ ಯುದ್ಧ ನಡೆಯಿತು. ಭಾರತದ ಸೇನಾಪಡೆ, ವಾಯುಪಡೆ ಕಠಿಣ ಪರಿಶ್ರಮದಿಂದ ಯುದ್ಧದಲ್ಲಿ ವಿಜಯ ಸಾಧಿಸಿ ಜು.26ರಂದು ಕಾರ್ಗಿಲ್ ಪರ್ವತವನ್ನು ಮರು ವಶಪಡಿಸಿಕೊಂಡು ಪರ್ವತದ ತುತ್ತ ತುದಿಯಲ್ಲಿ ವಿಜಯೋತ್ಸವ ಆಚರಿಸಿದವು. ಈ ಯುದ್ಧದಲ್ಲಿ ಭಾರತದ 527 ಧೈರ್ಯಶಾಲಿ ಸೈನಿಕರು ಹುತಾತ್ಮರಾದರು, 1363 ಯೋಧರು ಗಾಯಗೊಂಡರು. ಪಾಕ್ ಕಡೆ 453 ಯೋಧರು ಹತರಾದರು ಎಂದು ಅಲ್ಲಿನ ಸೇನೆ ಹೇಳಿಕೊಂಡರೆ, ಮಾಜಿ ಪ್ರಧಾನಿ ನವಾಜ್ ಷರೀಫ್ ಅವರೇ 4 ಸಾವಿರಕ್ಕೂ ಅಧಿಕ ಪಾಕ್ ಸೈನಿಕರು ಸಾವಿಗೀಡಾದರು ಎಂದು ಹೇಳಿದ್ದಾರೆ. ಅಮೆರಿಕ ಸರಕಾರ, ಕಾರ್ಗಿಲ್ ಯುದ್ಧದಲ್ಲಿ ಪಾಕ್ 700ಕ್ಕೂ ಅಧಿಕ ಯೋಧರು, ಸೇನಾಧಿಕಾರಿಗಳನ್ನು ಕಳೆದುಕೊಂಡಿದೆ ಎಂಬ ಅಂಕಿ ಅಂಶ ಪ್ರಕಟಿಸಿತ್ತು.

ಸೇನಾಪಡೆ ಮತ್ತಷ್ಟು ಬಲಿಷ್ಠಗೊಳಿಸಲು 'ರುದ್ರ ಕಂಪ್ಲೀಟ್ ಬ್ರಿಗೇಡ್' ಸ್ಥಾಪನೆ

ಭಾರತೀಯ ಸೇನೆ ವಿಶ್ವದಲ್ಲೇ ಬಲಿಷ್ಠವಾಗಲಿದೆ: ಜ.ದ್ವಿವೇದಿ

ಕಾರ್ಗಿಲ್: ಭಾರತೀಯ ಸೇನಾಪಡೆಗಳು ವಿಶ್ವದಲ್ಲೇ ಪ್ರಬಲ ಶಕ್ತಿಯಾಗುವತ್ತ ಸಾಗುತ್ತಿವೆ. ಈ ದಿಸೆಯಲ್ಲಿ ಸೇನಾಪಡೆಯನ್ನು ಮತ್ತಷ್ಟು ಬಲಿಷ್ಠಗೊಳಿಸಲು 'ರುದ್ರ ಕಂಪ್ಲೀಟ್ ಬ್ರಿಗೇಡ್' ಸ್ಥಾಪಿಸಲಾಗುತ್ತಿದೆ ಎಂದು ಭಾರತೀಯ ಸೇನೆಯ ಮುಖ್ಯಸ್ಥರಾದ ಜನರಲ್ ಉಪೇಂದ್ರ ದ್ವಿವೇದಿ ಹೇಳಿದರು.

ಕಾರ್ಗಿಲ್ ಯುದ್ಧ ಸ್ಮಾರಕದಲ್ಲಿ 'ಕಾರ್ಗಿಲ್ ವಿಜಯ್ ದಿವಸ್' 26ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಜನರಲ್ ಉಪೇಂದ್ರ ದ್ವಿವೇದಿ, ರುದ್ರ ಕಂಪ್ಲೀಟ್ ಬ್ರಿಗೇಡ್ ಸ್ಥಾಪನೆ ಪ್ರಸ್ತಾವನೆಗೆ ಶುಕ್ರವಾರ ಅನುಮೋದನೆ ನೀಡಲಾಗಿದೆ ಎಂದರು. ರುದ್ರ ಕಂಪ್ಲೀಟ್ ಬ್ರಿಗೇಡ್‌ನಡಿ ಒಂದೇ ಸ್ಥಳದಲ್ಲಿ ಯುದ್ಧ ಸಾಮಗ್ರಿಗಳ ಸಂಗ್ರಹ, ಯುದ್ಧಕ್ಕೆ ಅತ್ಯಗತ್ಯವಾದ ಸಲಕರಣೆಗಳ ಲಭ್ಯತೆ, ಯುದ್ಧ ಸಾಮಗ್ರಿ ಸಾಗಣೆ ವ್ಯವಸ್ಥೆ ಇರುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ಅಲ್ಲದೇ, ಇದೇ ಸ್ಥಳದಲ್ಲಿ ಪದಾತಿದಳ, ಯಂತ್ರಸಮೇತ ಪದಾತಿ ದಳ, ಶಸ್ತ್ರಸಜ್ಜಿತ ಘಟಕಗಳು, ಫಿರಂಗಿ ಪಡೆ ಮತ್ತು ವಿಶೇಷ ಪಡೆಗಳು ಇರಲಿವೆ. ಅಲ್ಲದೇ, ಶಕ್ತಿಶಾಲಿ ಡ್ರೋನ್‌ಗಳು ಸೇರಿದಂತೆ ಮಾನವರಹಿತ ವೈಮಾನಿಕ ಸಾಧನಗಳನ್ನೂ ಒಂದೆಡೆಯೇ ಸುಲಭಕ್ಕೆ ನಿಲುಕುವಂತೆ ರುದ್ರ ಕಂಪ್ಲೀಟ್ ಬ್ರಿಗೇಡ್‌ನಡಿ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ವಾಸ್ತವದಲ್ಲಿ ಭಾರತ ಶಾಂತಿಪ್ರಿಯ ದೇಶ. ಹಾಗೆಂದು ನೆರೆಹೊರೆಯವರು ಗಡಿಯಾಚೆಗಿನ ಭಯೋತ್ಪಾದನೆ ಹೆಸರಿನಲ್ಲಿ ನಿರಂತರ ತಂಟೆ ಮಾಡುತ್ತಿದ್ದರೆ ಭಾರತ ಸುಮ್ಮನೆ ಇರುವುದಿಲ್ಲ. ಈ ಅಂಶವನ್ನು 'ಪಹಲ್ಗಾಮ್ ಭಯೋತ್ಪಾದಕ ದಾಳಿ' ನಡೆಸಿದವರಿಗೆ, ದಾಳಿಗೆ ಬೆಂಬಲ ನೀಡಿದವರಿಗೆ ಸರಿಯಾದ ಪಾಠದ ಮೂಲಕ ಸ್ಪಷ್ಟವಾಗಿ ತಿಳಿಸಿಕೊಡಲಾಗಿದೆ ಎಂದು ಜನರಲ್ ದ್ವಿವೇದಿ ಗುಡುಗಿದರು.

ಪಾಕಿಸ್ತಾನದ ವಿರುದ್ಧ ನಮ್ಮ ಸೇನಾಪಡೆಗಳು ಕೈಗೊಂಡ 'ಆಪರೇಷನ್ ಸಿಂದೂರ್' ಕಾರ್ಯಾಚರಣೆಯು ನಾಲ್ಕೇ ದಿನದಲ್ಲಿ ಭಾರತದ ಶಕ್ತಿ ಎಷ್ಟಿದೆ ಎಂಬುದನ್ನು ತೋರಿಸಿಕೊಟ್ಟಿದೆ. ಭಯೋತ್ಪಾದನೆ ನಡೆಸುವವರಿಗೆ, ಬೆಂಬಲ ವ್ಯಕ್ತಪಡಿಸಿದವರಿಗೆ ಭಾರತದ ಸೇನಾಪಡೆಗಳಿಂದ 'ಸರ್ಜಿಕಲ್ ಸ್ಟ್ರೈಕ್' ಉತ್ತರ ಸಿಗುತ್ತದೆ ಎಂಬುದು ಈಗ ಸ್ಪಷ್ಟವಾಗಿದೆ. ಅಂಥದೊಂದು ಸಂದೇಶವನ್ನು ಆಪರೇಷನ್ ಸಿಂದೂರ್ ರವಾನಿಸಿದೆ ಎಂದು ಉಪೇಂದ್ರ ದ್ವಿವೇದಿ ಹೇಳಿದರು.

ಸರ್ವಾಂತರ್ಯಾಮಿ ಡ್ರೋನ್

ಆಧುನಿಕ ಸೇನಾ ವ್ಯವಸ್ಥೆಯಲ್ಲಿ ಎಲ್ಲಾ ವಿಭಾಗಗಳೂ ಡ್ರೋನ್‌ಗಳನ್ನು ಹೊಂದುತ್ತಿವೆ. ಪದಾತಿ ದಳದಲ್ಲೂ ಡ್ರೋನ್ ತುಕಡಿಗಳಿವೆ. ಫಿರಂಗಿ ದಳವೂ ಶಕ್ತಿಬನ್ ರೆಜಿಮೆಂಟ್ ಒಳಗೊಂಡಿದೆ. ಇದು ಡ್ರೋನ್‌ಗಳನ್ನು, ಶತ್ರುಪಡೆಯ ಡ್ರೋನ್‌ಗಳನ್ನು ನಾಶಪಡಿಸುವ ವ್ಯವಸ್ಥೆಯನ್ನು ಹೊಂದಿದೆ. ಈ ರೆಜಿಮೆಂಟ್‌ನಲ್ಲಿ ಲೋಯಿಟರ್ ಶಸ್ತ್ರಾಸ್ತ್ರಗಳಿರಲಿವೆ. ಅಲ್ಲದೇ, ಡ್ರೋನ್‌ಗಳನ್ನು ಹೊಂದಿರುವ ಪ್ರತಿ ತುಕಡಿಗಳೂ, ದಳಗಳೂ ಅದರ ಜತೆಗೇ ಡ್ರೋನ್‌ಗಳಿಗೆ ಬೇಕಾಗುವ ಬ್ಯಾಟರಿ ಸಂಗ್ರಹವನ್ನೂ ಒಳಗೊಂಡಿರುತ್ತವೆ ಎಂದು ಜನರಲ್ ಉಪೇಂದ್ರ ದ್ವಿವೇದಿ ವಿವರಿಸಿದರು.

ಶತ್ರುಗಳಿಗೆ ಭೈರವ್ ಆಘಾತ

ಇನ್ನೊಂದೆಡೆ, ಸೇನೆಯ ವಿಶೇಷ ಆಕ್ರಮಣ ದಳ 'ಭೈರವ್' ಹೆಸರಿನ ಲೈಟ್ ಕಮಾಂಡೊ ಘಟಕ ರಚಿಸಲಾಗಿದೆ. ಇದು ಗಡಿ ಭಾಗದಲ್ಲಿ ತಂಟೆ ಮಾಡಲು ಬರುವ ಶತ್ರುಗಳಿಗೆ ಆಘಾತ ನೀಡಲು ಸಜ್ಜಾಗಿರುತ್ತದೆ ಎಂದು ಜನರಲ್ ಉಪೇಂದ್ರ ದ್ವಿವೇದಿ ಹೇಳಿದರು.

50 ವಾಯು ಅಸ್ತ್ರಗಳಿಗೇ ಥರಗುಟ್ಟಿದ ಪಾಕಿಸ್ತಾನ

ದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿ ನಡೆಸಿ ನಗುತ್ತಿದ್ದ ಪಾಕಿಸ್ತಾನಕ್ಕೆ ಭಾರತ ಕೇವಲ ನಾಲ್ಕೇ ದಿನದಲ್ಲಿ ಪತರಗುಟ್ಟುವಂತೆ ಮಾಡಿತು. ಭಾರತ ಪ್ರಯೋಗಿಸಿದ ಕೇವಲ 50 ವಾಯು ಅಸ್ತ್ರಗಳಿಗೇ

ವೈಸ್‌ಚೀಫ್ ಏರ್ ಮಾರ್ಷಲ್ ನರ್ಮದೇಶ್ವರ್ ತಿವಾರಿ

ಪಾಕ್ ಸರಕಾರ ನಡುಗಿ ಭಾರತದ ಮುಂದೆ ಶರಣಾಯಿತು ಎಂದು ಭಾರತೀಯ ವಾಯುಪಡೆಯ ವೈಸ್ ಚೀಫ್ ನರ್ಮದೇಶ್ವರ್ ತಿವಾರಿ ಹೇಳಿದ್ದಾರೆ. ಭಾರತೀಯ ವಾಯುಪಡೆ ನಿಯೋಜಿಸಿದ ಸುಖೋಯ್-30ಎಂಕೆ ಐ, ರಫೇಲ್ ಮತ್ತು ಮಿರೇಜ್-2000 ಯುದ್ಧ ವಿಮಾನಗಳು ಪಾಕ್ ಆಕಾಶದಲ್ಲಿ ಗರ್ಜಿಸಿದವು. ಅಲ್ಲದೇ, ಮುಖ್ಯವಾಗಿ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಗಳು, ಕ್ರಿಸ್ಟಲ್ ಮೇಜ್-2, ರ್‍ಯಾಂಪೇಜ್ ಮತ್ತು ಸ್ಕಾಲ್ಪ್ ಕ್ಷಿಪಣಿಗಳನ್ನು ಕೆಲವೇ ಸಂಖ್ಯೆಗಳಲ್ಲಿ ಪ್ರಯೋಗಿಸಿದ್ದಷ್ಟೆ. ಪರಿಣಾಮ, ಪಾಕಿಸ್ತಾನದ ರಾಡಾರ್ ವ್ಯವಸ್ಥೆ ಛಿದ್ರವಾಯಿತು, ಪ್ರಮುಖ ವಾಯುನೆಲೆಗಳು ಹಾನಿಗೊಂಡವು, ಪರಮಾಣು ಶಸ್ತ್ರಗಳಿದ್ದ ಪ್ರದೇಶದ ಸಮೀಪವೇ ನಮ್ಮ ಕ್ಷಿಪಣಿಗಳ ದಾಳಿಯಾಯಿತು. ಅಷ್ಟಕ್ಕೇ ಪಾಕಿಸ್ತಾನದ ಸರಕಾರ, ಸೇನಾಪಡೆಯ ಜಂಘಾಬಲವೇ ಉಡುಗಿತು. ಭಾರತದೆದುರು ಮಂಡಿಯೂರಿ ಶಾಂತಿ ಕೋರಿತು ಎಂದು ತಿವಾರಿ ಸಂದರ್ಶನವೊಂದರಲ್ಲಿ ನೆನಪಿಸಿಕೊಂಡಿದ್ದಾರೆ.

ಕನ್ನಡದ ರಾಣಿ ಚೆನ್ನಭೈರಾದೇವಿ ಅಂಚೆ ಚೀಟಿ ಬಿಡುಗಡೆ

ದೆಹಲಿ: 'ಭಾರತದ ಕಾಳು ಮೆಣಸಿನ ರಾಣಿ' ಎಂದೇ ಖ್ಯಾತಿ ಪಡೆದಿದ್ದ ಕರ್ನಾಟಕದ ಗೇರು ಸೊಪ್ಪೆಯ ರಾಣಿ ಚೆನ್ನಭೈರಾದೇವಿ ಅವರ ಸ್ಮರಣಾರ್ಥ ಭಾರತೀಯ ಅಂಚೆ ಇಲಾಖೆ ರೂಪಿಸಿದ ಅಂಚೆ ಚೀಟಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಬಿಡುಗಡೆ ಮಾಡಿದ್ದಾರೆ.

1552ರಿಂದ 1606ರವರೆಗೆ, ಅಂದರೆ 54 ವರ್ಷಗಳಷ್ಟು ಸುದೀರ್ಘ ಕಾಲ ರಾಜ್ಯಭಾರ ಮಾಡಿದ ರಾಣಿ ಚೆನ್ನಭೈರಾದೇವಿ ಅವರು ಅತಿ ದೀರ್ಘ ಆಳ್ವಿಕೆ ಭಾರತೀಯ ರಾಣಿ ಎಂದೇ ಹೆಸರಾಗಿದ್ದಾರೆ. 'ರೈನಾ ಡಾ ಪಿಮೆಂಟಾ' ಎಂದು ಪೋರ್ಚುಗೀಸರಿಂದ ಕರೆಸಿಕೊಳ್ಳುತ್ತಿದ್ದರು. ರಾಣಿ ಚೆನ್ನಭೈರಾದೇವಿ ಅವರ ಧೈರ್ಯ, ದೃಢನಿಶ್ಚಯ ಮತ್ತು ಸಾಧನೆ ಗಳನ್ನು ಸುವರ್ಣಾಕ್ಷರಗಳಲ್ಲಿ ಮಾತ್ರವಲ್ಲ, ವಜ್ರದಲ್ಲಿ ಕೆತ್ತಿ ಜಗತ್ತಿಗೆ ತೋರಿಸಬೇಕಿದೆ. ಶತ್ರುಗಳಿಂದ ರಾಜ್ಯವನ್ನು ರಕ್ಷಿಸಲು ರಾಣಿ ಚೆನ್ನಭೈರಾದೇವಿ ಅವರು ನಡೆಸಿದ ಹೋರಾ ಟ, ಅವರ ಜಾತ್ಯತೀತ ಮೌಲ್ಯಗಳು, ಆಳವಾದ ಸಾಮಾಜಿಕ ಜವಾಬ್ದಾರಿ ಮತ್ತು ಬಡತನದಲ್ಲಿದ್ದವರನ್ನು ಮೇಲಕ್ಕೆತ್ತುವ ಕಾರ್ಯ ಪ್ರಗತಿಪರ ಆಡಳಿತ ನೀತಿಗಳು ಶ್ಲಾಘನೀಯ ಎಂದರು. ರಾಷ್ಟ್ರಪತಿ ಭವನದಲ್ಲಿ ಚೆನ್ನಭೈರಾದೇವಿ ರಾಣಿ ಅವರ ಅಂಚೆ ಚೀಟಿ ಬಿಡುಗಡೆ ಕಾರ್ಯಕ್ರಮವನ್ನು ರಾಷ್ಟ್ರಪತಿ ಭವನದಲ್ಲಿ ಆಯೋಜಿಸಿದ್ದಕ್ಕಾಗಿ ಮೂಡಬಿದರೆ ಅಂಚೆ ಮತ್ತು ಅತ್ಯುತ್ತಮ ಶಿಕ್ಷಣ ಸಂಸ್ಥೆಗಳ ಇಲಾಖೆಯನ್ನು ರಾಷ್ಟ್ರಪತಿ ಅಭಿನಂದಿಸಿದರು. ಈ ಕಾರ್ಯಕ್ರಮದಲ್ಲಿದ್ದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಣಿ ಚೆನ್ನಭೈರಾದೇವಿ ಕರ್ನಾಟಕದ ಶಕ್ತಿಯ ಸಂಕೇತ. ಅವರ ಪರಂಪರೆ ಇಂದಿಗೂ ನಾಡಿನ ಜನತೆಗೆ ಸ್ಫೂರ್ತಿದಾಯಕ ಎಂದಿದ್ದಾರೆ. ರಾಜ್ಯಸಭೆ ಸದಸ್ಯ, ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಉಪಸ್ಥಿತರಿದ್ದರು.

ಗುಜರಾತ್‌ನಲ್ಲೇ ಬಿಜೆಪಿ ಸೋಲಿಸಿ: ರಾಹುಲ್

ಅಹಮದಾಬಾದ್: ಬಿಜೆಪಿಯನ್ನು ಅದರ ಭದ್ರಕೋಟೆ ಗುಜರಾತ್ ರಾಜ್ಯದಲ್ಲಿಯೇ ಸೋಲಿ ಸುವುದು ಮುಖ್ಯ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. 'ಸಂಘಟನ್ ಸುಜನ್ ಅಭಿಯಾನ್'(ಪಕ್ಷ ಸಂಘಟನೆ ಬಲಪಡಿಸುವ ಅಭಿಯಾನ) ಕಾರ್ಯಕ್ರಮದಂಗವಾಗಿ ಆನಂದ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಜಿಲ್ಲಾಧ್ಯಕ್ಷರುಗಳ ತರಬೇತಿ ಶಿಬಿರದಲ್ಲಿ ಲೋಕಸಭೆ ಪ್ರತಿಪಕ್ಷ ನಾಯಕ ಮಾತನಾಡಿದರು. ಕಾಂಗ್ರೆಸ್‌ನ ಗುಜರಾತ್ ಘಟಕದ ನಾಯಕರು 2027ರ ರಾಜ್ಯ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಹೆಚ್ಚು ಶ್ರಮವಹಿಸಿ ಕೆಲಸ ಮಾಡಬೇಕು ಎಂದು ಉತ್ತೇಜಿಸಿದರು. ಚುನಾವಣಾ ಆಯೋಗ ಪ್ರತಿಪ ಕ್ಷಗಳ ವಿಚಾರದಲ್ಲಿ ತಾರತಮ್ಯದಿಂದ ವರ್ತಿಸುತ್ತಿದೆ. ಈ ವಿಚಾರದಲ್ಲಿ ಬೂತ್ ಮಟ್ಟದ ಕಾರ್ಯ ಕರ್ತರನ್ನು ಜಾಗೃತಿಗೊಳಿಸಬೇಕಿದೆ ಎಂದು ಗಮನ ಸೆಳೆದರು.

ಮಾಲ್ಡೀವ್ಸ್ 60ನೇ ಸ್ವಾತಂತ್ರ್ಯ ದಿನ ಆಚರಣೆ: ಪ್ರಧಾನಿ ಮೋದಿ ಭಾಗಿ

ಮಾಲೆ: ದ್ವೀಪ ರಾಷ್ಟ್ರ ಮಾಲ್ಡೀವ್ಸ್‌ನ 60ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿ ಶನಿವಾರ ಭಾಗವಹಿಸಿದ್ದರು. ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರ ಆಹ್ವಾನದ ಮೇರೆಗೆ ಮೋದಿ 2 ದಿನಗಳ ಪ್ರವಾಸ ಹಮ್ಮಿಕೊಂಡಿದ್ದರು. ಬ್ರಿಟನ್ ಪ್ರವಾಸದ ಬಳಿಕ ಪ್ರಧಾನಿ ಮೋದಿ ನೇರ ಮಾಲ್ಡೀವ್ಸ್‌ಗೆ ತೆರಳಿದರು. ಮುಯಿಝು ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿ, ಉಭಯ ದೇಶಗಳ ನಡುವಿನ ವ್ಯಾಪಾರ ಮತ್ತು ರಕ್ಷಣಾ ವಲಯ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಿದರು. ಶನಿವಾರ ಸಂಜೆ ಮಾಲೆಯಿಂದ ವಿಶೇಷ ವಿಮಾನದಲ್ಲಿ ದೆಹಲಿಗೆ ಹೊರಟರು. ದ್ವೀಪ ರಾಷ್ಟ್ರದ ಸ್ವಾತಂತ್ರ್ಯ ದಿನದ 60ನೇ ವಾರ್ಷಿಕೋತ್ಸವದಲ್ಲಿ ಪ್ರಧಾನಿ ಮೋದಿ ಪಾಲ್ಗೊಳ್ಳುವ ಮೂಲಕ ರಾಜತಾಂತ್ರಿಕ ಉದ್ವಿಗ್ನತೆ ಶಮನಕ್ಕೆ ಮತ್ತು ಎರಡೂ ದೇಶಗಳ ಸಂಬಂಧ ವೃದ್ಧಿಗೆ ಸಕಾರಾತ್ಮಕ ತಿರುವು ನೀಡಿದಂತಾಗಿದೆ.

ಸೈನಿಕರ ಕುಟುಂಬಕ್ಕೆ ಕಾನೂನು ನೆರವು | ಕೋರ್ಟ್ ವ್ಯಾಜ್ಯಗಳಲ್ಲಿಯೂ ಸಹಾಯ

ಗಡಿಯ ಯೋಧರ ಕುಟುಂಬಕ್ಕೆ ನಲ್ಸಾ ರಕ್ಷೆ

ಶ್ರೀನಗರ: ದೇಶದ ಗಡಿಯಲ್ಲಿ ಕಾವಲು ಕಾಯುವ ಭಾರತದ ಯೋಧರಿಗೆ, ಸೇನೆಯ ವಿವಿಧ ವಿಭಾಗಗಳ ಸಿಬ್ಬಂದಿಗಳಿಗೆ ಒಂದೇ ಚಿಂತೆ. ದೂರದ

ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಕ್ರಮ

ಊರಿನಲ್ಲಿರುವ ಕುಟುಂಬ ಹೇಗಿದೆಯೋ? ಅಪ್ಪ-ಅಮ್ಮ, ಮಡದಿ-ಮಕ್ಕಳು ಹೇಗಿದ್ದಾರೆಯೋ? ಎಂಬ ಚಿಂತೆ ಸದಾ ಕಾಡುತ್ತಿರುತ್ತದೆ.

ಶತ್ರುಗಳಿಂದ ದೇಶವನ್ನು ರಕ್ಷಿಸುವ, ಗಡಿಯಂಚಿನಲ್ಲಿ ಹ'ಗ'ಲ೦ - ಇ ರ'ಳ'೧ ಶ್ರಮಿಸುವ ಸೈನಿಕರಿಗೆ ಅವರ ಕುಟುಂಬದ ಚಿಂತೆ ದೂರವಾಗುವಂತೆ ಮಾಡಲು 'ನ್ಯಾಷನಲ್ ಲೀಗಲ್ ಸರ್ವಿಸಸ್ ಅಥಾರಿಟಿ'(ಎನ್‌ಎಲ್‌ಎಸ್‌ಎ-ನಲ್ಸಾ) ಮುಂದಾಗಿದೆ.

ದೇಶದ ಗಡಿಯಲ್ಲಿ ಕರ್ತವ್ಯನಿರತ ಸೈನಿಕರ ಕುಟುಂಬಗಳು ಕಾನೂನು ಸಂಘರ್ಷಕ್ಕೆ ಒಳಗಾದಾಗ, ಕಾನೂನು ಸಮಸ್ಯೆಗಳನ್ನು ಎದುರಿಸುವಾಗ ಉಚಿತವಾಗಿ ಪೂರ್ಣ ಪ್ರಮಾಣದಲ್ಲಿ ನೆರವಾಗಲೆಂದೇ 'ನಲ್ಸಾ ವೀರ್ ಪರಿವಾರ್ ಸಹಾಯತಾ ಯೋಜನಾ-2025' ಎಂಬ ಹೊಸ ಯೋಜನೆಗೆ 'ಎನ್‌ಎಲ್‌ಎಸ್‌ಎ' ಕಾರ್ಯನಿರ್ವಾಹಕ ಅಧ್ಯಕ್ಷರಾದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಶ್ರೀನಗರದಲ್ಲಿ ಶನಿವಾರ ಚಾಲನೆ ನೀಡಿದ್ದಾರೆ. ಆ ಮೂಲಕ ದೇಶದ ಗಡಿಯಲ್ಲಿನ ಯೋಧರು ಕುಟುಂಬದವರ ಕಾನೂನು ಸಮಸ್ಯೆಗಳ ವಿಚಾರದಲ್ಲಿ ತಲೆಕೆಡಿಸಿಕೊಳ್ಳದೇ ನೆಮ್ಮದಿ ಯಿಂದ ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳಬ ಹುದಾಗಿದೆ ಎಂದೂ ಭರವಸೆ ನೀಡಿದ್ದಾರೆ.

'ನಲ್ಸಾ ವೀರ್ ಪರಿವಾರ್ ಸಹಾಯತಾ ಯೋಜನಾ-2025' ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಕೇಂದ್ರದ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್, ಜಮ್ಮು-ಕಾಶ್ಮೀರ ಲೆ.ಗವರ್ನರ್ ಮನೋಜ್ ಸಿನ್ಹಾ, ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಉಪಸ್ಥಿತರಿದ್ದರು. ಗಡಿ ಭಾಗದ ಸೈನಿಕರಿಗೆ ನೆಮ್ಮದಿ ತರುವ ಈ ಯೋಜನೆ ಆರಂಭಿಸಿದ ನ್ಯಾ. ಸೂರ್ಯಕಾಂತ್ ಅವರೇ ಸುಪ್ರೀಂಕೋರ್ಟ್‌ನ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಲಿದ್ದಾರೆ ಎನ್ನಲಾಗಿದೆ.

ಯಾರಿಗೆಲ್ಲಾ ಪ್ರಯೋಜನ?

ದೇಶದ ವಿವಿಧೆಡೆಯ ನ್ಯಾಯಾಲಯಗಳಲ್ಲಿ ಗಡಿ ಭಾಗದ ಯೋಧರ ಕುಟುಂಬದವರು ಎದುರಿಸುತ್ತಿರುವ ದಾವೆಗಳು, ಕಾನೂನು ಸಮಸ್ಯೆಗಳು, ವ್ಯಾಜ್ಯಗಳಲ್ಲಿ 'ನಲ್ಸಾ'ದ ಈ ಯೋಜನೆಗೆ ನೆರವಾಗಲಿದೆ. ಗಡಿ ಭದ್ರತಾ ಪಡೆ(ಬಿಎಸ್‌ಎಫ್), ಕೇಂದ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್), ಇಂಡೊ-ಟಿಬೆಟನ್ ಬಾರ್ಡರ್ ಪೊಲೀಸ್(ಐಟಿಬಿಪಿ) ಸೇರಿದಂತೆ ಸೇವೆ ಸಲ್ಲಿಸುವ ಸೈನಿಕರು ಮತ್ತು ಸೇನಾ ಸಿಬ್ಬಂದಿ ಈ ಯೋಜನೆಯ ಪ್ರಯೋಜನ ಪಡೆಯಲಿದ್ದಾರೆ.

ಜಾರ್ಖಂಡ್‌ನಲ್ಲಿ ಮೂರು ನಕ್ಸಲರು ಹತ

ರಾಂಚಿ: ಜಾರ್ಖಂಡ್ ರಾಜ್ಯದ ಗುಮ್ಲಾ ಜಿಲ್ಲೆಯಲ್ಲಿ ಶನಿವಾರ ಮುಂಜಾನೆ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಮೂರು ನಕ್ಸಲರು ಹತರಾಗಿದ್ದಾರೆ. ಸಿಪಿಐ-ಮಾವೋವಾದಿ

ಸಂಘಟನೆಯಿಂದ ವಿಭಜನೆಗೊಂಡ 'ಜಾರ್ಖಂಡ್ ಜನ ಮುಕ್ತಿ ಪರಿಷತ್'(ಜೆಜೆಎಂಪಿ) ನಕ್ಸಲ್ ಸಂಘಟನೆ ಸದಸ್ಯರು ಗುಮ್ಲಾ ಜಿಲ್ಲೆಯ ಘಾಗ್ರಾ ಅರಣ್ಯದಲ್ಲಿ ಸಭೆ ಸೇರಿರುವುದು ಗುಪ್ತಚರ ಮಾಹಿತಿಯಿಂದ ತಿಳಿದ ಬಳಿಕ ಜಂಟಿ ಭದ್ರತಾ ಪಡೆಗಳು ದಾಳಿ ಸಂಘಟಿಸಿದವು. ಜಾರ್ಖಂಡ್ ಪೊಲೀಸ್ ಇಲಾಖೆಯ 'ಜಾಗ್ವಾರ್' ತಂಡ ಮತ್ತು ಗುಮ್ಲಾ ಜಿಲ್ಲಾ ಪೊಲೀಸ್ ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಮೂವರು ನಕ್ಸಲರು ಸಾವನ್ನಪ್ಪಿದರು. ನಕ್ಸಲರ ಮೃತದೇಹಗಳ ಬಳಿ ಒಂದು ಎಕೆ-47 ಬಂದೂಕು ಮತ್ತು 2 ಐಎನ್‌ಎಸ್‌ಎಎಸ್ ರೈಫಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ನಕ್ಸಲ್ ದಮನ ಕಾರ್ಯಾಚರಣೆ ಮುಂದುವರೆದಿದೆ ಎಂದು ಜಾರ್ಖಂಡ್ ಪೊಲೀಸ್ ಐಜಿ ಮೈಕೆಲ್ ಎಸ್.ರಾಜ್ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ನಾವು ಹಾಳಾದೆವು: ಅಜಿತ್ ಪವಾರ್ ಹತಾಶೆ

ಪುಣೆ: 'ನನ್ನ ಕ್ಷೇತ್ರ ಪುಣೆಯ ಹಿಂಜೆವಾಡಿ ಮಾಹಿತಿ ತಂತ್ರಜ್ಞಾನ ಉದ್ಯಮ ವಲಯ'(ಐಟಿ ಪಾರ್ಕ್) ಬೆಂಗಳೂರು ಮತ್ತು ಹೈದರಾಬಾದ್‌ಗೆ ಹೊರಟುಹೋಗುತ್ತಿದೆ. ನಾವು ಹಾಳಾದೆವು'

ಎಂದು ಭಾವುಕರಾದ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್, ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ಮಹಾರಾಷ್ಟ್ರದ ಪಿಂಪ್ರಿ ಚಿಂಚ್ವಾಡ್‌ನಲ್ಲಿ ಅಭಿವೃದ್ಧಿ ಯೋಜನೆಗಳ ಕಾಮಗಾರಿ ಪರಿಶೀಲನೆ ವೇಳೆಯ ಇದರ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ. ಸ್ಥಳೀಯ ಸರಪಂಚ್ ಗಣೇಶ್ ಜಂಭೂಲ್ಕರ್ ಜತೆ ಮಾತನಾಡುವಾಗ ಸಿಟ್ಟಿಗೆದ್ದ ಅಜಿತ್ ಪವಾರ್, ಹಿಂಜೆವಾಡಿ ಐಟಿ ಪಾರ್ಕ್ ಬೇರೆ ರಾಜ್ಯಕ್ಕೆ ಹೊರಟು ಹೋಗುತ್ತಿದೆ. ಈ ಬಗ್ಗೆ ನಿಮಗೆ ಸ್ವಲ್ಪವೂ ಕಾಳಜಿ ಇಲ್ಲವೇ? ಎಂದು ತರಾಟೆಗೆ ತೆಗೆದುಕೊಂಡರು. ಬೆಳಗ್ಗೆ 6ಕ್ಕೆ ನಾನೇಕೆ ಇಲ್ಲಿಗೆ ಬರಬೇಕು? ಅರ್ಥವಾಗುತ್ತಿಲ್ಲ ಎಂದು ಬೇಸರ ಹೊರಹಾಕಿದರು. 2,800 ಎಕರೆಗಳಷ್ಟು ವಿಸ್ತಾರ ಪ್ರದೇಶದಲ್ಲಿರುವ ಹಿಂಜೆವಾಡಿ ಐಟಿ ಪಾರ್ಕ್‌ನಲ್ಲಿ 800 ಐಟಿ ಕಂಪನಿಗಳಿವೆ.

ಕಿರುಕುಳದಿಂದ ವೈದ್ಯ ವಿದ್ಯಾರ್ಥಿನಿ ಆತ್ಮಹತ್ಯೆ

ಜೈಪುರ: ರಾಜಸ್ಥಾನದ ಉದಯಪುರದಲ್ಲಿ ಖಾಸಗಿ ವೈದ್ಯ ಕಾಲೇಜು ಹಾಸ್ಟೆಲ್‌ನಲ್ಲಿದ್ದ ಅಂತಿಮ ವರ್ಷದ ಬಿಡಿಎಸ್ ವಿದ್ಯಾರ್ಥಿನಿ, ಜಮ್ಮು-ಕಾಶ್ಮೀರ ಮೂಲದ ಶ್ವೇತಾ ಸಿಂಗ್ ಗುರುವಾರ ರಾತ್ರಿ

ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿ ದ್ದಾಳೆ. ಆಕೆಯ ರೂಮ್ ಮೇಟ್ ಹಾಸ್ಟೆಲ್ ಅಧಿಕಾರಿಗಳಿಗೆ ತಿಳಿಸಿದ್ದು, ಬಳಿಕ ಪೊಲೀಸರಿಗೆ ಮಾಹಿತಿ ನೀಡಲಾಗಿದೆ.

ಹಾಸ್ಟೆಲ್ ರೂಂನಲ್ಲಿ ಶ್ವೇತಾ ಬರೆದ ಡೆತ್ ನೋಟ್ ಪತ್ತೆಯಾಗಿದ್ದು, ಅಧ್ಯಾಪಕರು ವಿದ್ಯಾರ್ಥಿಗಳಿಂದ ನಿರಂತರ ಮಾನಸಿಕ ಕಿರುಕುಳವಾಗುತ್ತಿದ್ದುರಿಂದ ನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಬರೆದಿದ್ದಾಳೆ. ಶ್ವೇತಾ ಆತ್ಮಹತ್ಯೆ ಸುದ್ದಿ ತಿಳಿದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಕಿರುಕುಳ ನೀಡಿದ ಉಪನ್ಯಾಸಕ ಮತ್ತು ವಿದ್ಯಾರ್ಥಿಗಳ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಒತ್ತಾಯಿಸಿ ರಸ್ತೆ ತಡೆ ನಡೆಸಿದ್ದಾರೆ. ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿರುವ ಉಪನ್ಯಾಸಕರನ್ನು ಕೆಲಸದಿಂದ ತೆಗೆದುಹಾಕಲಾಗುವುದು ಎಂದು ಕಾಲೇಜು ನಿರ್ದೇಶಕರು ತಿಳಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ತೆಲಂಗಾಣ ಅಪಘಾತ: 2 ಡಿವೈಎಸ್‌ಪಿ ಸಾವು

ಹೈದರಾಬಾದ್: ತೆಲಂಗಾಣದ ಹೈದರಾಬಾದ್ ಬಳಿಯ ಚೌಟುಪ್ಪಲ್‌ನಲ್ಲಿ ಶನಿವಾರ ನಡೆದ ರಸ್ತೆ ಅಪಘಾತದಲ್ಲಿ ಆಂಧ್ರಪ್ರದೇಶ ಪೊಲೀಸ್ ಇಲಾಖೆಯ ಇಬ್ಬರು ಡಿವೈಎಸ್

ಪಿಗಳು ಸಾವನ್ನಪ್ಪಿದ್ದಾರೆ. ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ. ಕಚೇರಿ ಕೆಲಸ ನಿಮಿತ್ತ ಪೊಲೀಸ್ ಅಧಿಕಾರಿಗಳ ತಂಡ ವಿಜಯವಾಡದಿಂದ ಹೈದರಾಬಾದ್‌ಗೆ ಕಾರಿನಲ್ಲಿ ತೆರಳುತ್ತಿದ್ದಾಗ ಅಪಘಾತವಾಗಿದೆ. ಮುಂದೆ ಸಾಗಿದ್ದ ವಾಹನಕ್ಕೆ ಡಿಕ್ಕಿಯಾಗುವುದನ್ನು ತಪ್ಪಿಸಲು ಪೊಲೀಸ್ ವಾಹನದ ಚಾಲಕ ಹಠಾತ್ ಬ್ರೇಕ್ ಹಾಕಿದಾಗ ಕಾರು ರಸ್ತೆ ವಿಭಜಕಕ್ಕೆ ರಭಸದಿಂದ ಡಿಕ್ಕಿ ಹೊಡೆದು, ರಸ್ತೆಯ ಇನ್ನೊಂದು ಬದಿಗೆ ಬಿದ್ದಿತು. ಅದೇ ವೇಳೆ, ಎದುರಿಗಡೆಯಿಂದ ಬರುತ್ತಿದ್ದ ವಾಹನ ಡಿಕ್ಕಿ ಹೊಡೆದಿದ್ದರಿಂದ ಆಂಧ್ರ ಪೊಲೀಸ್ ಗುಪ್ತಚರ ಭದ್ರತಾ ವಿಭಾಗದ ಇಬ್ಬರು ಡಿವೈಎಸ್‌ಪಿಗಳು ಸ್ಥಳದಲ್ಲೇ ಸಾವಿಗೀಡಾದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಚಾಲಕ ಗಾಯಗೊಂಡರು. ಗಾಯಾಳುಗಳನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ವಚನ ಶ್ರಾವಣ ಉದ್ಘಾಟನೆ

ವಚನಜ್ಯೋತಿ ಬಳಗ ಆಯೋಜಿಸಿದ್ದ ವಚನ ಶ್ರಾವಣ ಕಾರ್ಯಕ್ರಮವನ್ನು ನಾಡೋಜ ಎಸ್.ಷಡಕ್ಷರಿ ಉದ್ಘಾಟಿಸಿದರು.

ಬೆಂಗಳೂರು: ದೇವರಿದ್ದಾನೋ ಇಲ್ಲವೋ ಎಂಬ ಚಿಂತೆಯೂ ಸೇರಿದಂತೆ ಹತ್ತಾರು ಚಿಂತೆಗಳೆಂಬ ಚಿತೆಗಳಿಗೆ ವಚನಗಳು ಪರಿಹಾರ ಎಂದು ಸಂಸ್ಕೃತಿ ಚಿಂತಕ ನಾಡೋಜ ಎಸ್. ಷಡಕ್ಷರಿ ಹೇಳಿದರು.

ವಿಜಯನಗರದ ಡಾ. ಮುನಿರಾಜಪ್ಪ ಅವರ ಹೊಂಬೆಳಕುವಿನಲ್ಲಿ ನಡೆದ ವಚನಜ್ಯೋತಿ ಬಳಗದ ವಚನ ಶ್ರಾವಣ ಉದ್ಘಾಟಿಸಿ ಮಾತನಾಡಿದ ಅವರು, ದೇವರಿದ್ದಾನೋ ಇಲ್ಲವೋ ಎಂಬ ಚಿಂತೆಯೂ ಸೇರಿದಂತೆ ಜೀವನದಲ್ಲಿ ಹುಟ್ಟುವ ಹತ್ತಾರು ಚಿಂತೆಗಳೆಂಬ ಚಿತೆಗಳಿಗೆ ವಚನಗಳು ಪರಿಹಾರವಾಗಿದೆ. ಮೂವತ್ತು ದಿನಗಳು ಮೂವತ್ತಾರು ಅಂಗಳಗಳಲ್ಲಿ ನಡೆಯುವ ವಚನ ಶ್ರಾವಣವು ಯಶಸ್ವಿಯಾಗಲಿ ಎಂದು ಹಾರೈಸಿದರು. ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, ಹೆಚ್ಚುತ್ತಿರುವ ಮೌಢ್ಯಾಚರಣೆಗಳ ಕುರಿತು ಅರಿವು ಮೂಡಿಸಿ ಸರಳ ಶುದ್ಧ ಬದುಕು ರೂಢಿಸಿಕೊಳ್ಳಬೇಕೆಂಬ ಬಸವಾದಿ ಪ್ರಥಮರ ಸಂದೇಶವನ್ನು ಜನಸಾಮಾನ್ಯರಿಗೆ, ವಿಶೇಷವಾಗಿ ವಿದ್ಯಾರ್ಥಿಗಳಿಗೆ ತಲುಪಿಸಲು ವಚನ ಶ್ರಾವಣ ಆಯೋಜಿಸಲಾಗಿದೆ ಎಂದರು

ಕಾರ್ಯಕ್ರಮದಲ್ಲಿ ಪಂ.ದೇವೇಂದ್ರಕುಮಾರ ಪತ್ತಾರ್, ಸರಸ್ವತಿ ಹೆಗಡೆ, ಮೀನಾಕ್ಷಿ ಮೇಟಿ, ಟಿ.ಎಂ.ಜಾನಕಿ, ಈರಯ್ಯ ಚಿಕ್ಕಮಠ್, ಸವಿತಾ ಅಮರೇಶ್, ಚೇತನಾ ಮುಧೋಳ್, ಸಿದ್ದರಾಮ ಕೇಸಾಪುರ, ಚಂದ್ರಮತಿ ಗಿರೀಶ್, ಪೂರ್ಣಿಕ ಆರಾಧ್ಯ ವಚನಗಳನ್ನು ಮನದುಂಬಿ ಹಾಡುವುದರ ಮೂಲಕ ವಚನ ಶ್ರಾವಣಕ್ಕೆ ಮೆರಗು ನೀಡಿದರು. ಮಾಜಿ ಬಿಬಿಎಂಪಿ ಸದಸ್ಯ ಡಾ.ರಾಜು, ಬಳಗದ ಪ್ರಭು, ರಾಜಾ ಗುರುಪ್ರಸಾದ, ಗಂಗಾಂಬಿಕೆ ಮುನಿರಾಜಪ್ಪ, ಡಾ.ಶಿವದೇವ್, ಎಲೆ ಶಶಿಧರ್, ವಚನ ಕಲಿಕಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಗರದಲ್ಲಿ ದೇಶದ ಮೊದಲ ಕ್ವಾಂಟಮ್ ಕಂಪ್ಯೂಟರ್

ಬೆಂಗಳೂರು: ದೇಶದ ಮೊದಲ ಕ್ವಾಂಟಮ್ ಕಂಪ್ಯೂಟರ್ ಈಗಾಗಲೇ ಬೆಂಗಳೂರಿನಲ್ಲಿದ್ದು, ಕರ್ನಾಟಕ ರಾಜ್ಯ ಕ್ವಾಂಟಮ್ ನಾವೀನ್ಯತೆಯಲ್ಲಿ ದೇಶವನ್ನು ಮುನ್ನಡೆಸುತ್ತಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ತಿಳಿಸಿದ್ದಾರೆ. ಆಂಧ್ರಪ್ರದೇಶದ ಸಿಎಂ ಚಂದ್ರಬಾಬು ನಾಯ್ಡು ಅವರ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಸಚಿವರು, ಕರ್ನಾಟಕ ರಾಜ್ಯ, ಅದರಲ್ಲೂ ಬೆಂಗಳೂರು ನಗರ ಭಾರತ ದೇಶದ ಕ್ವಾಂಟಮ್ ಕ್ಷೇತ್ರದ ಕೇಂದ್ರಬಿಂದುವಾಗಿ ಈಗಾಗಲೇ ಸಾಕಷ್ಟು ಪ್ರಗತಿ ಸಾಧಿಸಿದೆ. ಕ್ಯೂಪೈಎಐ ಸಂಸ್ಥೆ ನಗರದಲ್ಲಿ ದೇಶೀಯವಾಗಿ ನಿರ್ಮಿಸಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ 25 ಕ್ಯೂಬಿಟ್ ಕ್ವಾಂಟಮ್ ಕಂಪ್ಯೂಟರ್ ಇಂಡಸ್ ಉತ್ತಮ ಉದಾಹರಣೆ. ದೇಶದಲ್ಲೇ ಪ್ರಥಮವಾಗಿ ವಿಶ್ವದ ಪ್ರತಿಷ್ಠಿತ ವೈಜ್ಞಾನಿಕ ಸಂಶೋಧನಾ ಸಂಸ್ಥೆಯಾಗಿರುವ ಐಐಎಸ್‌ಸಿಯಲ್ಲಿ ಕ್ವಾಂಟಮ್ ರಿಸರ್ಚ್ ಪಾರ್ಕ್ ಸ್ಥಾಪಿಸಲಾಗಿದೆ. ಅದರ ಎರಡನೇ ಹಂತದ ಅಭಿವೃದ್ಧಿಗಾಗಿ 48 ಕೋಟಿ ನೀಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಕರ್ನಾಟಕ ರಾಜ್ಯವನ್ನು ಕ್ವಾಂಟಮ್ ಜಾಗತಿಕ ಶಕ್ತಿ ಕೇಂದ್ರವಾಗಿಸುವ ನಿಟ್ಟಿನಲ್ಲಿ ರೋಡ್‌ಮ್ಯಾಪ್ ಸಿದ್ಧಪಡಿಸಲಾಗುತ್ತಿದೆ. ಜು.31ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅನಾವರಣಗೊಳಿಸಲಿದ್ದಾರೆ. ಪ್ರಗತಿಯನ್ನು ಸಂಭ್ರಮಿಸುವಾಗ ನಾವು ಸತ್ಯ ಹಾಗೂ ಅಂಕಿಗಳಲ್ಲಿ ಪರಿಗಣಿಸುವ ಪರಿಪಾಠ ಬೆಳೆಸಿಕೊಳ್ಳಬೇಕು ಎಂದು ಪ್ರತಿಕ್ರಿಯಿಸಿದ್ದಾರೆ.

ರಾಜ್ಯಕ್ಕೆ ಅನ್ಯಾಯ: ಡಿಕೆಸು

ಬೆಂಗಳೂರು: ಕೇಂದ್ರದಲ್ಲಿ ಬಿಜೆಪಿ ಮೂರು ಬಾರಿ ಅಧಿಕಾರಕ್ಕೆ ಬರುವಲ್ಲಿ ಕರ್ನಾಟಕದ ಪಾತ್ರ ಮಹತ್ತರವಾಗಿದ್ದು, ರಾಜ್ಯಕ್ಕಾಗುತ್ತಿರುವ ಅನ್ಯಾಯದ ವಿರುದ್ಧ ಕೇಂದ್ರ ಸಚಿವರು ಹಾಗೂ ಸಂಸದರು ಹೋರಾಟ ಮಾಡಬೇಕು ಎಂದು ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಆಗ್ರಹಿಸಿದರು.

ಸದಾಶಿವನಗರ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಗೋವಾ ಹಾಗೂ ಕರ್ನಾಟಕ ಅನ್ಯೋನ್ಯವಾಗಿರುವ ರಾಜ್ಯಗಳಾಗಿವೆ. ಮಹದಾಯಿ ಕುಡಿಯುವ ನೀರಿನ ಯೋಜನೆ ವಿಚಾರದಲ್ಲಿ ಹಲವು ವರ್ಷದಿಂದ ಸಲ್ಲದ ಕ್ಯಾತೆ ತೆಗೆದುಕೊಂಡು ಉತ್ತರ ಕರ್ನಾಟಕ ಭಾಗದ ಕುಡಿಯುವ ನೀರಿನ ಯೋಜನೆಗೆ ತೊಂದರೆ ನೀಡಲಾಗುತ್ತಿದೆ. ಸುಪ್ರೀಂಕೋರ್ಟ್ ತೀರ್ಪಿನ ಹೊರತಾಗಿಯೂ ಗೋವಾ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರಕಾರ ಬಳಸಿಕೊಂಡು ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿರುವುದು ಎದ್ದು ಕಾಣುತ್ತಿದೆ ಎಂದರು.

{ ಎಚ್.ಕೆ. ಪಾಟೀಲ } ಕಾನೂನು ಸಚಿವ

ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಕುರಿತು ಸುಪ್ರೀಂ ಕೋರ್ಟಿನಲ್ಲಿ ನಡೆಯುತ್ತಿರುವ ಪ್ರಕರಣದ ಬಗ್ಗೆ ಕನ್ನಡಿಗರು ಆತಂಕ ಪಡುವ ಅಗತ್ಯವಿಲ್ಲ. ಒಪ್ಪಿದರೆ ಮಹಾಜನ ವರದಿ ಒಪ್ಪಬೇಕು, ಇಲ್ಲದಿದ್ದರೆ ಯಥಾಸ್ಥಿತಿ ಮುಂದುವರೆಯಬೇಕು ಎಂಬುದು ರಾಜ್ಯದ ದೃಢ ನಿರ್ಧಾರವಾಗಿದೆ.

ದೇಶದ ಒಕ್ಕೂಟ ವ್ಯವಸ್ಥೆಯನ್ನು ಗೌರವಿಸಿ ಮಹಾಜನ ಆಯೋಗ ರಚನೆಗೆ ನಮ್ಮ ಸರಕಾರ ಒಪ್ಪಿಕೊಂಡಿದೆ.



ಪರಿಸರವಾದಿಗಳಿಂದ ಆಕ್ಷೇಪ | ಮೂರು ದಿನಗಳ ಕಾಲ ಯೋಜನೆಯ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆ | ಕಡಿದ ಮರಗಳಿಗೆ ಪರಿಹಾರ

ಮೆಟ್ರೋ 3ನೇ ಹಂತಕ್ಕಾಗಿ 11,000 ಮರಗಳಿಗೆ ಕೊಡಲಿಯೇಟು?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ಮೆಟ್ರೋದ 44.65ಕಿ.ಮೀನ ಮೂರನೇ ಹಂತದ ಯೋಜನೆಗಾಗಿ 11,000 ಮರಗಳಿಗೆ ಕೊಡಲಿಯೇಟು ಬೀಳುವ ಸಾಧ್ಯತೆಯಿದ್ದು, ಪರಿಸರವಾದಿಗಳಿಂದ ಭಾರಿ ಆಕ್ಷೇಪ ವ್ಯಕ್ತವಾಗಿದೆ.

ನಮ್ಮ ಮೆಟ್ರೋ ಯೋಜನೆಗೆ ಕಡಿಯಲಾಗುವ ಮರಗಳ ಸಂಖ್ಯೆ ಕಡಿಮೆ ಮಾಡಬೇಕು ಮತ್ತು ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಆಗ್ರಹಿಸಲಾಗುತ್ತಿದ್ದು, ಪರಿಸರವಾದಿಗಳ ಈ ಒತ್ತಡಕ್ಕೆ ನಮ್ಮ ಮೆಟ್ರೋವು ಮರಗಳ ಸಂಖ್ಯೆಯನ್ನು ಕಡಿಮೆ ಮಾಡುವ ಭರವಸೆ ನೀಡಿದೆ. ಮೂರನೇ ಹಂತದ ಯೋಜನೆಯನ್ನು ಸುಮಾರು 15,611 ಕೋಟಿ ರು. ವೆಚ್ಚದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಜೆ.ಪಿ ನಗರದ 4ನೇ ಹಂತ-ಕೆಂಪಾಪುರ ಮತ್ತು ಹೊಸಹಳ್ಳಿ-ಕಡಬಗೆರೆ ಎರಡೂ ಕಾರಿಡಾರ್‌ಗಳ 3ನೇ ಹಂತದ ಮೆಟ್ರೋ ಮತ್ತು ಡಬಲ್ ಡೆಕ್ಕರ್ ಯೋಜನೆ ಆರಂಭಿಸಲು ತಯಾರಿ ನಡೆಯುತ್ತಿರುವುದರಿಂದ ಪರಿಸರಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಶುರುವಾಗಿದೆ.

ಡಿಪಿಆರ್ ಪ್ರಕಾರ, ಯೋಜನೆಯಿಂದಾಗಿ 44.65 ಕಿ.ಮೀ. ಉದ್ದದಲ್ಲಿ 11,137 ಮರಗಳ ಮೇಲೆ

ಪರಿಣಾಮ ಬೀರಬಹುದಾಗಿದ್ದು, ಈ ಸಂಖ್ಯೆಯು ಕತ್ತರಿಸಬಹುದಾದ ಮತ್ತು ಸ್ಥಳಾಂತರಿಸಬಹುದಾದ ಮರಗಳ ಸಂಖ್ಯೆಯನ್ನೂ ಒಳಗೊಂಡಿದೆ. ಮರಗಳ ಸಂಖ್ಯೆಯನ್ನು ಅಂತಿಮಗೊಳಿಸಲು ಸಾರ್ವಜನಿಕರೊಂದಿಗೆ ಸಮಾಲೋಚನೆ ಕೂಡ ನಡೆಸಿದೆ ಎಂದು ನಮ್ಮ ಮೆಟ್ರೋ ಹೇಳಿದೆ.

ಈ ಎರಡೂ ಕಾರಿಡಾರ್‌ಗಳನ್ನು ಕೇಂದ್ರೀಕರಿಸಿ ನಮ್ಮ ಮೆಟ್ರೋವು ಜುಲೈ 21, 22 ಮತ್ತು 23ರಂದು ಮೂರು ದಿನಗಳ ಕಾಲ ಯೋಜನೆಯ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸುವ ಮೂಲಕ ನಾಗರಿಕರ ಹಾಗೂ ಪರಿಸರವಾದಿಗಳಿಂದ ಸಲಹೆಗಳನ್ನು ಪಡೆದಿದ್ದು, ಈ ವೇಳೆ ಇಷ್ಟೊಂದು ಮರಗಳನ್ನು ಕಡಿಯುವ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಮೆಟ್ರೋದಂತಹ ಸಾರ್ವಜನಿಕ ಸಾರಿಗೆಯು ಪರಿಸರಕ್ಕೆ ಅನುಕೂಲಕರವಾಗುವಂತೆ ಸುಸ್ಥಿರ ಅಭಿವೃದ್ಧಿಗೆ ಅನುವು ಮಾಡಿಕೊಡಬೇಕು ಎಂದು ಒತ್ತಾಯಿಸಿದ್ದಾರೆ.

ಮರಗಳ ನಿಖರ ಸಂಖ್ಯೆ ಮಾಹಿತಿಗೆ ಒತ್ತಾಯ: ಮೂರನೇ ಹಂತದ ಮಾರ್ಗದಲ್ಲಿ 11 ಸಾವಿರ ಮರಗಳೆಂದರೆ 250 ಮರಗಳನ್ನು ಪ್ರತಿ ಕಿ.ಮೀಗೆ ಕತ್ತರಿಸಬೇಕಾಗಿದ್ದು, ಈ ಮಾರ್ಗದಲ್ಲಿ ಅಷ್ಟು ಮರಗಳಿದ್ದಾವೆಯೇ ಎಂದು ಒಂದು ಬಾರಿ ಗಮನಿಸಬೇಕಾಗಿದೆ. ಈ ಹಿನ್ನೆಲೆ ನಮ್ಮ ಮೆಟ್ರೋವು ಮರಗಳ ನಿಖರವಾದ ಸಂಖ್ಯೆ ತಿಳಿಸಬೇಕು ಹಾಗೂ ಕಡಿಯಬಹುದಾದ ಮರಗಳ ಸಂಖ್ಯೆಯನ್ನು ಸಾಧ್ಯವಾದಷ್ಟು ಕಡಿಮೆಗೊಳಿಸಬೇಕು. ಯೋಜನೆಗೂ ಮುನ್ನ ಮರಗಳನ್ನು ಕಡಿಯಲು ಸಲಹೆ ಪಡೆಯುವುದಕ್ಕಾಗಿ ಸಭೆ ಕರೆಯುವಂತೆ, ಕಡಿದ ಮರಗಳಿಗೆ ಪರಿಹಾರವಾಗಿ 1:10ರ ಆಧಾರದಲ್ಲಿ ರೀಪ್ಲಾಂಟೇಷನ್ ಸಮಯದಲ್ಲಿಯೂ ಸಭೆ ಕರೆಯಬೇಕು. ಅವುಗಳ ಬೆಳವಣಿಗೆಯ ಪ್ರಗತಿಯನ್ನೂ ತಿಳಿಸಬೇಕು ಎಂಬ ಸಲಹೆಗಳು ಬಂದಿವೆ.

ನಮ್ಮ ಯಾತ್ರಿಯಿಂದ ನಮ್ಮ ಟ್ರಾನ್ಸಿಟ್

ನಮ್ಮ ಮೆಟ್ರೋ ಪ್ರಯಾಣಿಕರ ಅನುಕೂಲಕ್ಕಾಗಿ ಅಪ್‌ಗ್ರೇಡೆಡ್ ಆಟೋ ಸೇವೆ ನೀಡಲು ನಮ್ಮ ಯಾತ್ರಿ ಮುಂದಾಗಿದ್ದು, ಈ ನಿಟ್ಟಿನಲ್ಲಿ ಹೊಸ ವೈಶಿಷ್ಟ್ಯ 'ನಮ್ಮ ಟ್ರಾನ್ಸಿಟ್' ಸೇವೆಯನ್ನು ಪರಿಚಯಿಸಿದೆ. ನಮ್ಮ ಮೆಟ್ರೋದ ಹಲವು ಮಾರ್ಗಗಳಲ್ಲಿ ಶೀಘ್ರದಲ್ಲೇ ಸಂಚಾರ ಆರಂಭಿಸಲಿದ್ದು, ಇದರೊಂದಿಗೆ ಮೆಟ್ರೋ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗಲಿದೆ.

ಈ ನಿಟ್ಟಿನಲ್ಲಿ ನಮ್ಮ ಟ್ರಾನ್ಸಿಟ್ ಸೇವೆಯನ್ನು ಪರಿಚಯಿಸಿದ್ದು, ಪ್ರಯಾಣಿಕರಿಗೆ ನೈಜ ಸಮಯದಲ್ಲಿ ಸಹಾಯ ಮಾಡುವ ಫೀಚರ್ ಇದಾಗಿರಲಿದೆ ಎಂದು ನಮ್ಮ ಯಾತ್ರಿ ಕಂಪನಿ ಹೇಳಿದೆ. ನಮ್ಮ ಯಾತ್ರಿ ಹಾಗೂ ಮೆಟ್ರೋ, ಆಟೋ ಮತ್ತು ಕ್ಯಾಬ್ ಪ್ರಯಾಣವನ್ನು ಒಂದೇ ಅಪ್ಲಿಕೇಷನ್‌ಗೆ ತರುತ್ತದೆ. ಒಂದೇ ಅಪ್ಲಿಕೇಷನ್‌ನಲ್ಲಿ ಎಲ್ಲ ಸೇವೆಯನ್ನು ನೀಡಲಿದೆ ಎಂದು ನಮ್ಮ ಯಾತ್ರಿ ಕಂಪನಿಯು ಹೇಳಿದೆ. ಬೆಂಗಳೂರು ನಮ್ಮ ಮೆಟ್ರೋ ಹಳದಿ ಮಾರ್ಗ, ನೀಲಿ ಮಾರ್ಗ, ಗುಲಾಬಿ ಮಾರ್ಗ ಮುಂದಿನ ದಿನಗಳಲ್ಲಿ ಕಾರ್ಯಾಚರಣೆ ಮಾಡಲಿದ್ದು, ಅದರಲ್ಲಿ ಆರ್.ವಿ.ರಸ್ತೆ- ಬೊಮ್ಮಸಂದ್ರ ಇದೇ ವರ್ಷದಲ್ಲಿ ಸಂಚಾರವನ್ನು ಆರಂಭಿಸುವ ಸಾಧ್ಯತೆಯಿದ್ದು, ನಮ್ಮ ಟ್ರಾನ್ಸಿಟ್ ಸೇವೆಯು ಸಾರ್ವಜನಿಕರಿಗೆ ಮತ್ತಷ್ಟು ಅನುಕೂಲಕರವಾಗಿರಲಿದೆ ಎಂದು ಹೇಳಲಾಗುತ್ತಿದೆ. ನಮ್ಮ ಟ್ರಾನ್ಸಿಟ್ ಸಾರ್ವಜನಿಕ ಸಾರಿಗೆಗಳನ್ನು ಬಳಸುವವರಿಗೆ ಪ್ರತೀ ಹಂತಗಳಲ್ಲೂ ಲೈವ್ ಅಪ್‌ಡೇಟ್‌ಗಳನ್ನು ನೀಡುತ್ತದೆ ಹಾಗೂ ಯಾವ ಮೆಟ್ರೋ ನಿಲ್ದಾಣಕ್ಕೆ ಹೋಗಬೇಕು, ಯಾವ ಗೇಟ್‌ನ್ನು ಬಳಸಬೇಕು ಎಂದು ಮಾಹಿತಿ ನೀಡುವ ಜತೆಗೆ ಯಾವ ಸಾರ್ವಜನಿಕ ಸಾರಿಗೆಯು ಪ್ರಯಾಣಕ್ಕೆ ಉತ್ತಮ ಎನ್ನುವ ಮಾಹಿತಿಯನ್ನೂ ಪ್ರಯಾಣಿಕರಿಗೆ ನೀಡಲಿದೆ. ಸಂಪೂರ್ಣ ಪ್ರಯಾಣವು ಪ್ರಯಾಣಿಕರ ನಿಯಂತ್ರಣದಲ್ಲಿ ಇರಲಿದೆ. ಪ್ರಯಾಣದ ಒಟ್ಟು ಸಮಯವನ್ನು ನಮ್ಮ ಟ್ರಾನ್ಸಿಟ್ ಮೂಲಕ ಮೊದಲೇ ಅಂದಾಜಿಸಬಹುದು ಎಂದು ನಮ್ಮ ಯಾತ್ರಿ ಸಂಸ್ಥೆಯ ಎಂದು ಸಂಸ್ಥಾಪಕರಾದ ಮಾಗಿರ್ಝುನ್ ಸೆಲ್ವನ್, ಶಾನ್ ಎಂಎಸ್ ಹೇಳಿದ್ದಾರೆ.

ಪ್ರತಿಭಾ ಪುರಸ್ಕಾರ ಸಮಾರಂಭ ನಾಳೆ

ಬೆಂಗಳೂರು: ಕೆಯುಡಬ್ಲ್ಯುಜೆ ಅಂಗಸಂಸ್ಥೆಯಾಗಿರುವ ಬೆಂಗಳೂರು ನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿರುವ ಪತ್ರಿಕಾ ದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಸೋಮವಾರ ಬೆಳಗ್ಗೆ 11 ಗಂಟೆಗೆ ಕೆಂಗೇರಿಯ ಹೋಟೆಲ್ ಕದಂಬ ಗೆಸ್ಟ್‌ಲೈನ್ ಸಭಾಂಗಣದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಉದ್ಘಾಟಿಸುವರು. ಶಾಸಕ ಎಸ್.ಟಿ.ಸೋಮಶೇಖರ್ ಸುರಕ್ಷಿತಾ ಅಭಿಯಾನಕ್ಕೆ ಚಾಲನೆ ನೀಡುವರು. ಕೆಯುಡಬ್ಲ್ಯುಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್ ಅವರು ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಿದ್ದಾರೆ. ವಿಜಯ ಕರ್ನಾಟಕ ದಿನಪತ್ರಿಕೆ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ.ಮಲ್ಲಿಕಾರ್ಜುನಯ್ಯ ಮತ್ತು ಕೆಯುಡಬ್ಲ್ಯುಜೆ ಖಜಾಂಚಿ ವಾಸುದೇವ ಹೊಳ್ಳರವರು ಹಿರಿಯ ಪತ್ರಕರ್ತರನ್ನು ಸನ್ಮಾನಿಸಲಿದ್ದಾರೆ. ಸಭಾ ಕಾರ್ಯಕ್ರಮಕ್ಕೂ ಮುನ್ನ ಸ್ವರ ಚಿರಂತನ ಮ್ಯೂಸಿಕ್ ಇವೆಂಟ್ಸ್‌ನ ವೀರೇಶ್ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ. ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಕೆ. ಸತ್ಯನಾರಾಯಣ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸ್ಕಾರ ಭಾರತೀ ಕರ್ನಾಟಕ-ದಕ್ಷಿಣ ಪ್ರಾಂತ ಆಯೋಜಿಸಿದ್ದ ಪ್ರಾಂತ ಮಾತೃಶಕ್ತಿ ಸಮ್ಮೇಳನ

ಸ್ವಾಸ್ಥ್ಯ ಉಳಿಯಲು ಮಾತೃಶಕ್ತಿ ಕೊಡುಗೆ ಅಪಾರ: ದೇಶಮಾನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಾತೃ ಶಕ್ತಿಯಿಂದಲೇ ಸಮಾಜದ ಸ್ವಾಸ್ಥ್ಯ ಉಳಿದಿದ್ದು, ಕಲ್ಪನಾ ಚಾವ್ಲಾ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮರಂತಹ ಸಾವಿರಾರು ಮೇಲ್ಪಂಕ್ತಿಯ ನಾರಿಯರು ತಮ್ಮದೇ ಕೊಡುಗೆ ನೀಡಿದ್ದಾರೆ ಎಂದು ಪದ್ಮಶ್ರೀ ಪುರಸ್ಕೃತೆ ವಿಜಯಲಕ್ಷ್ಮಿ ದೇಶಮಾನೆ ತಿಳಿಸಿದರು.

ಬಸವನಗುಡಿಯ ಬುಲ್ ಟೆಂಪಲ್ ರಸ್ತೆಯ ಅಮೃತ ಶಿಶು ನಿವಾಸದಲ್ಲಿ ಸಂಸ್ಕಾರ ಭಾರತೀ ಕರ್ನಾಟಕ-ದಕ್ಷಿಣ ಪ್ರಾಂತ ಆಯೋಜಿಸಿದ್ದ ಪ್ರಾಂತ ಮಾತೃಶಕ್ತಿ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮಾಜವನ್ನು ಸುಸ್ಥಿಯಲ್ಲಿ ಇಡಲು ಕಲ್ಪನಾ ಚಾವ್ಲಾ, ಝಾನ್ಸಿ ರಾಣಿ ಲಕ್ಷ್ಮಿ ಬಾಯಿ, ಕಿತ್ತೂರು ರಾಣಿ ಚೆನ್ನಮ್ಮ ರಂತಹ ಸಾವಿರಾರು ನಾರಿಯರು ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಸಮಾಜದಲ್ಲಿ ಸ್ವಾಸ್ಥ್ಯ, ಸೌಹಾರ್ದತೆಯನ್ನು ಕಾಪಾಡಲು ಇವರ ಕೊಡುಗೆ ಅಪಾರ. ಈ ನಿಟ್ಟಿನಲ್ಲಿ ಸಂಸ್ಕಾರ ಭಾರತೀ ಹಲವು ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಹೇಳಿದರು.

ನಗರದ ಬುಲ್ ಟೆಂಪಲ್ ರಸ್ತೆಯ ಅಮೃತ ಶಿಶು ನಿವಾಸದಲ್ಲಿ ಸಂಸ್ಕಾರ ಭಾರತೀ ಕರ್ನಾಟಕ-ದಕ್ಷಿಣ ಪ್ರಾಂತ ಆಯೋಜಿಸಿದ್ದ ಪ್ರಾಂತ ಮಾತೃಶಕ್ತಿ ಸಮ್ಮೇಳನ ನಡೆಯಿತು.

ನನ್ನ ಜೀವನದಲ್ಲಿ ಕೂಡ ಮಾತೃಶಕ್ತಿಯ ಪ್ರಭಾವ ಸಾಕಷ್ಟಿದೆ. ಅವರು ಬೀದಿ ಬದಿಯಲ್ಲಿ ಹಣ್ಣು-ತರಕಾರಿಗಳನ್ನು ಮಾರಿ ಎಂಟು ಜನ ಮಕ್ಕಳನ್ನು ಓದಿಸಿದರು. ಅವರ ಜತೆಯಲ್ಲಿಯೇ ವ್ಯಾಪಾರ ಮಾಡಿದ ನೆನಪುಗಳೂ ಸಹ ಸಾಕಷ್ಟಿವೆ. ಸದ್ಯ ಒಂದೇ ಕುಟುಂಬದ ಐದು ಜನರು ಪಿಎಚ್‌ಡಿ ಮಾಡಿರುವ ವಿಶ್ವ ದಾಖಲೆ ಕೂಡ ನಮ್ಮ ಕುಟುಂಬಕ್ಕಿದ್ದು, ಇದರ ಹಿಂದಿನ ಶ್ರಮ ತಾಯಿಯದ್ದಾಗಿದೆ ಎಂದು ನೆನಪಿಸಿಕೊಂಡರು.

ನಾನು ಸ್ಲಂನಲ್ಲಿ ಬೆಳೆದು ಸರಕಾರಿ ಶಾಲೆಯಲ್ಲಿ ಓದಿ ಪದ್ಮಶ್ರೀ ಪಡೆದಿರುವ ಶ್ರೇಯ ನನ್ನ ತಾಯಿಗೆ ಸಲ್ಲುತ್ತದೆ. ಆದರೆ ಈಗಿನ ಸಮಯದಲ್ಲಿ ಹೆಣ್ಣು ಮಕ್ಕಳು ಅದರಲ್ಲೂ ವಿಶೇಷವಾಗಿ ತಾಯಂದಿರು ಗಂಡಿನ ಸರಿಸಮಾನವಾದ ಕೆಲಸಗಳಲ್ಲಿ ತೊಡಗಿದ್ದು, ತಮ್ಮ ಮಕ್ಕಳ ಪಾಲನೆ ಪೋಷಣೆಯ ಕಡೆ ಹೆಚ್ಚಿನ ಗಮನವನ್ನು ಕೊಡುತ್ತಿಲ್ಲ. ಇದರಿಂದ ಯುವ ಪೀಳಿಗೆಯು ದಾರಿ ತಪ್ಪುವ ಸಂಭವ ಹೆಚ್ಚಿದ್ದು, ಈ ನಿಟ್ಟಿನಲ್ಲಿ ಕೂಡ ನಾರಿಯರು ಜವಾಬ್ದಾರಿಯನ್ನು ಅರಿತು ಕೆಲಸ ಮತ್ತು ಸಂಬಂಧಗಳನ್ನು ತೂಗಿಸಿಕೊಂಡು ಹೋಗುವ ಕೆಲಸಕ್ಕೆ ಮುಂದಾಗಬೇಕಿದೆ ಎಂದು ಕಿವಿಮಾತು ಹೇಳಿದರು.

ಬೆಂಗಳೂರು ಉತ್ತರದ ಸಂಸ್ಕಾರ ಭಾರತಿ ಅಧ್ಯಕ್ಷೆ ವೀಣಾ ಮೂರ್ತಿ ವಿಜಯ್ ಮಾತನಾಡಿ, ನೃತ್ಯ, ಸಂಗೀತ ಇತ್ಯಾದಿ ಪ್ರದರ್ಶನ ಕಲೆಗಳನ್ನು ಮಹಿಳೆಯರು ಕಲಿತರೆ ಅಪಚಾರ ಎನ್ನುವ ಪ್ರತೀತಿ ಹಿಂದಿನ ಕಾಲದಲ್ಲಿ ಸಂಪ್ರದಾಯಸ್ಥ ಕುಟುಂಬಗಳಲ್ಲಿ ಇತ್ತು, ಆದರೆ 60ರ ದಶಕದಲ್ಲಿಯೇ ತಂದೆ-ತಾಯಿಯ ಪ್ರೋತ್ಸಾಹದಿಂದ ನೃತ್ಯಕಲೆಯನ್ನು ಕಲಿಯುವ ಅವಕಾಶ ನನಗೆ ಒದಗಿ ಬಂದಿತು. ಆಗಿನ ಕಾಲದಲ್ಲಿಯೇ ಕೆಲಸದಲ್ಲಿ ಇದ್ದ ನನ್ನ ತಾಯಿ ಕೂಡು ಕುಟುಂಬ, ನೆಂಟರಿಷ್ಟರನ್ನು ಮತ್ತು ದೂರದ ಊರಿನಿಂದ ಬರುವ ಸಂಬಂಧಿಕರ ಮಕ್ಕಳನ್ನು ನೋಡಿಕೊಳ್ಳುವ ಪರಿ ಈಗಲೂ ಕಣ್ಣು ಮುಂದೆ ಬಂದಾಗ ಆಶ್ಚರ್ಯ ಉಂಟಾಗುತ್ತದೆ ಎಂದು ನೆನಪಿನ ಬುತ್ತಿಯನ್ನು ತೆರೆದಿಟ್ಟರು.

ಉರುಳಿಗೆ ಸಿಲುಕಿ ಚಿರತೆ ಸಾವು

ಆನೇಕಲ್: ದುರುಳರು ಹಾಕಿದ್ದ ಉರುಳಿಗೆ ಸಿಲುಕಿ 5 ವರ್ಷ ಪ್ರಾಯದ ಚಿರತೆಯೊಂದು ಸಾವನ್ನಪ್ಪಿದ ದಾರುಣ ಘಟನೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಆನೇಕಲ್ ತಾಲೂಕಿನ ತಮ್ಮನಾಯಕನಹಳ್ಳಿಯಲ್ಲಿ ನಡೆದಿದೆ. ಮಳೆಗಾಲ ಪ್ರಾರಂಭವಾದರೆ ಕಾಡು ಹಂದಿಗಳು ಬಿದಿರು ಕಡಲೆ ಮೇಯಲು ಪೊದೆಗೆ ಬರುತ್ತವೆ. ಅವುಗಳನ್ನು ಹಿಡಿಯಲು ಕಾಡಿಗೆ ಅತಿಕ್ರಮ ಪ್ರವೇಶ ಮಾಡುವ ಕೆಲ ವೃತ್ತಿ ಪರ ಕಳ್ಳರು ಬಿದಿರು ಪೊದೆಗೆ ಬಲೆ ನಿರ್ಮಿಸಿ ಉರುಳನ್ನು ಸಿದ್ದಪಡಿಸುತ್ತಾರೆ. ಇದರ ಅರಿವು ಇರದ ಮಾಂಸಹಾರಿ ಪ್ರಾಣಿಗಳು ಉರುಳಿಗೆ ಸಿಕ್ಕು ಪ್ರಾಣ ಕಳೆದುಕೊಳ್ಳುವ ಸಂಭವ ಇದೆ. ಈ ರೀತಿ ದುರುಳರು ಹಾಕಿದ್ದ ಉರುಳಿಗೆ ಸಿಲುಕಿ 5 ವರ್ಷ ಪ್ರಾಯದ ಚಿರತೆ ಸಾವನ್ನಪ್ಪಿದೆ. ಬೀಟ್ ವಲಯದ ಸಿಬ್ಬಂದಿ ಚಿರತೆ ಸಾವಿನ ಬಗ್ಗೆ ಮಾಹಿತಿ ನೀಡಿದ್ದು ಸ್ಥಳ ಮಹಜರು ಮಾಡಿ ಎಫ್ಐಆರ್ ದಾಖಲಾಗಿದೆ. ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಉಪ ವಲಯ ಸಂರಕ್ಷಣಾಧಿಕಾರಿ ಗಣೇಶ್ ಮಾಹಿತಿ ನೀಡಿದ್ದಾರೆ.

ಲಾಲ್‌ಬಾಗ್‌ನಲ್ಲಿ ವೀಲ್‌ಚೇರ್ ಸ್ನೇಹಿ ಶೌಚಾಲಯ ಉದ್ಘಾಟನೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ನೂತನವಾಗಿ ನಿರ್ಮಿಸಿರುವ ವೀಲ್‌ಚೇರ್ ಸ್ನೇಹಿ ಶೌಚಾಲಯವನ್ನು ಸಂಸದ ತೇಜಸ್ವಿ ಸೂರ್ಯ ಉದ್ಘಾಟಿಸಿದರು. ಉದ್ಘಾಟನೆ ಬಳಿಕ ಮಾತನಾಡಿ, ವೀಲ್‌ಚೇರ್ ಸ್ನೇಹಿ ಶೌಚಾಲಯ ಸೌಲಭ್ಯ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲರಿಗೂ ಲಭ್ಯವಾಗುವಂತೆ ಮಾಡುವ ನಿಟ್ಟಿನಲ್ಲಿ ಒಂದು ಹೆಜ್ಜೆಯಾಗಿದೆ. ಇಂತಹ ಶೌಚಾಲಯಗಳು ವಿಕಲಚೇತನರಿಗೆ ಅವಶ್ಯಕ ಲಭ್ಯವಾಗಬೇಕಿರುವ ಘನತೆ ಮತ್ತು ಸ್ವಾತಂತ್ರ್ಯ ನೀಡುತ್ತದೆ. ನಗರ ಪ್ರದೇಶಗಳಲ್ಲಿ ವಿಕಲಚೇತನರಿಗೆ ಹೆಚ್ಚು ಸುಲಭವಾಗಿ ಪ್ರವೇಶಿಸಲು ಕೆಲಸ ಮಾಡುತ್ತಿರುವ ರಾಂಪ್ ಮೈ ಸಿಟಿಯೊಂದಿಗೆ ಮತ್ತೊಮ್ಮೆ ಕೆಲಸ ಮಾಡಲು ನಾವು ಹೆಮ್ಮೆ ಪಡುತ್ತೇವೆ. ಸರಕಾರ ಮತ್ತು ನಾಗರಿಕ ಸಮಾಜದ ನಡುವಿನ ಇಂತಹ ಸಹಭಾಗಿತ್ವಗಳು ಅತಿ ಮುಖ್ಯವಾಗಿದ್ದು, ಸಾರ್ವಜನಿಕ ಮೂಲಸೌಕರ್ಯದಲ್ಲಿ ಎಲ್ಲರನ್ನೂ ಒಳಗೊಳ್ಳುವುದು ಮುಖ್ಯವಾಗಿದೆ ಎಂದರು.

ಲಾಲ್‌ಬಾಗ್‌ನಲ್ಲಿ ನಿರ್ಮಿಸಿರುವ ವೀಲ್‌ಚೇರ್ ಸ್ನೇಹಿ ಶೌಚಾಲಯವನ್ನು ಸಂಸದ ತೇಜಸ್ವಿ ಸೂರ್ಯ ಉದ್ಘಾಟಿಸಿದರು.

ಗುರುವಂದನ ಕಾರ್ಯಕ್ರಮ

ಬೆಂಗಳೂರು: ಗುರುಗಳು ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಯಾವಾಗಲೂ ಪ್ರೇರಣಾದಾಯಕವಾಗಿದ್ದರು ಎಂದು ಭಾರತೀಯ ಶಿಕ್ಷಣ ಮಂಡಳಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಆರ್. ಶಂಕರಾನಂದ್ ಹೇಳಿದರು. ವ್ಯಾಸ ಪೂರ್ಣಿಮೆ ಹಿನ್ನೆಲೆ ಸೌಂದರ್ಯ ಶೈಕ್ಷಣಿಕ ಸಂಸ್ಥೆ ಹಾಗೂ ಭಾರತೀಯ ಶಿಕ್ಷಣ ಮಂಡಳಿಯ ಕರ್ನಾಟಕ ದಕ್ಷಿಣ ಶಾಖೆ ವತಿಯಿಂದ ಆಯೋಜಿಸಲಾದ ಗುರು ವಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ಗುರುಗಳು ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಯಾವಾಗಲೂ ಪ್ರೇರಣಾದಾಯಕರಾಗಿದ್ದು, ಮಹತ್ವದ ಸುಧಾರಣೆಗೆ ಕಾರಣರಾಗಿದ್ದಾರೆ. ಗುರು ಪರಂಪರೆ ಇಲ್ಲವಾಗಿದ್ದಲ್ಲಿ ಜ್ಞಾನದ ಕೋಶ ಖಾಲಿ ಇರುತ್ತಿತ್ತು. ಪ್ರತಿಯೊಂದು ಬೆಳವಣಿಗೆಗೆ ಗುರುಗಳ ಕೊಡುಗೆ ಅನನ್ಯ ಎಂದರು. ಬೆಂಗಳೂರು ಉತ್ತರ ವಿವಿ ಉಪಕುಲಪತಿ ಪ್ರೊ. ನಿರಂಜನ ವಾನಳ್ಳಿ, ಮೈಸೂರಿನ ಕೆಎಸ್‌ಒಯು ಉಪಕುಲಪತಿ ಪ್ರೊ. ಶರಣಪ್ಪ ವಿ ಹಾಲ್ಸೆ ಹಾಜರಿದ್ದರು.

ಕುಂದಾಪ್ರ ಕನ್ನಡ ಹಬ್ಬದಲ್ಲಿ ಮಾಜಿ ಸಂಸದ ಕೆ.ಜಯಪ್ರಕಾಶ್ ಹೆಗ್ಡೆ ಆಶಯ | ರವಿ ಬಸ್ರೂರು ಆ್ಯಪ್ ಬಿಡುಗಡೆ

ಕುಂದಾಪ್ರ ಕನ್ನಡ ಅಧ್ಯಯನ ಪೀಠ ಇನ್ನಷ್ಟು ಬಲವಾಗಲಿ

ಕುಂದಾಪ್ರ ಕನ್ನಡ ಪ್ರತಿಷ್ಠಾನ ನಂದಿನಿ ಲಿಂಕ್ ಗ್ರೌಂಡ್‌ನಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಕುಂದಾಪ್ರ ಕನ್ನಡ ಹಬ್ಬ ಕಾರ್ಯಕ್ರಮದಲ್ಲಿ ಕೆ.ಜಯಪ್ರಕಾಶ್ ಮಾತನಾಡಿದರು.

ಬೆಂಗಳೂರು: ಕುಂದಾಪ್ರ ಕನ್ನಡ ಕುರಿತು ಇನ್ನಷ್ಟು ಮಾಹಿತಿ ಸಂಗ್ರಹಿಸುವ ಮೂಲಕ ಕುಂದಾಪ್ರ ಕನ್ನಡ ಅಧ್ಯಯನ



ಪೀಠವನ್ನು ಮತ್ತಷ್ಟು ಬಲಗೊಳಿಸುವ ಪ್ರಯತ್ನ ನಡೆಯಬೇಕು ಎಂದು ಮಾಜಿ ಸಂಸದ ಕೆ. ಜಯಪ್ರಕಾಶ್ ಹೆಗ್ಡೆ ಹೇಳಿದರು.

ಕುಂದಾಪ್ರ ಕನ್ನಡ ಪ್ರತಿಷ್ಠಾನ ನಂದಿನಿ ಲಿಂಕ್ ಗ್ರೌಂಡ್‌ನಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಕುಂದಾಪ್ರ ಕನ್ನಡ ಹಬ್ಬ-2025 ಕಾರ್ಯಕ್ರಮದಲ್ಲಿ ಕುಂದಾಪ್ರ ಕನ್ನಡ ಅಧ್ಯಯನ ಪೀಠ ಲೋಕಾರ್ಪಣೆಗೊಳಿಸಿ ಮಾತನಾಡಿ, ಕುಂದಾಪ್ರ ಕನ್ನಡ ಬಗ್ಗೆ ಹಳ್ಳಿಯ ಮಹಿಳೆಯರು ಹಾಗೂ ಹಿರಿಯರು ಮಾತನಾಡುತ್ತಿರುವ ಪದಗಳನ್ನು ಸಂಗ್ರಹಿಸಿ ಅಧ್ಯಯನ ಮುಂದುವರಿಸಿದರೆ ಪೀಠ ಇನ್ನಷ್ಟು ಬಲಗೊಳ್ಳುತ್ತದೆ. ಕುಂದಾಪ್ರ ಕನ್ನಡ ಬಗ್ಗೆ ಸಂಗೀತ ನಿರ್ದೇಶಕ ರವಿ ಬಸ್ರೂರು ಒಂದು ಆ್ಯಪ್ ಮಾಡಿದ್ದು, ಪಂಜು ಗಂಗೊಳ್ಳಿ ಅವರು ಕುಂದಗನ್ನಡ ನಿಘಂಟು ಮಾಡಿದ್ದಾರೆ. ಅದೇ ರೀತಿ ಕುಂದಾಪುರ ಕನ್ನಡ ಕುರಿತು ಯಾವುದೇ ಮಹತ್ವದ ವಸ್ತು, ವಿಷಯ ಇದ್ದರೆ ಪೀಠಕ್ಕೆ ನೀಡಿ. ಅಲ್ಲದೆ ಹಿರಿಯರು ತಮ್ಮ ಮಕ್ಕಳು-ಮೊಮ್ಮಕ್ಕಳು ಕುಂದಾಪ್ರ ಕನ್ನಡ ಮಾತನಾಡುವಂತೆ, ಭಾಷೆಯ ಬಳಕೆ ಮುಂದುವರಿಯುವಂತೆ ಮಾಡಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕ ರವಿ ಬಸ್ರೂರು ರೂಪಿಸಿರುವ ಕುಂದಗನ್ನಡದ ಸುಮಾರು 9 ಸಾವಿರ ಪದಗಳನ್ನು ಒಳಗೊಂಡ ಡಿಜಿಟಲ್ ಶಬ್ದಕೋಶ ಆ್ಯಪ್ ಬಿಡುಗಡೆ ಮಾಡಲಾಯಿತು.

ಮಣಿಪಾಲ ಗ್ರೂಪ್ ಆಫ್ ಹಾಸ್ಪಿಟಲ್ಸ್ ಅಧ್ಯಕ್ಷ ಡಾ.ಎಚ್.ಸುದರ್ಶನ ಬಲ್ಲಾಳ್ ಅವರಿಗೆ ಊರ ಗೌರವ ಪುರಸ್ಕಾರ ನೀಡಲಾಯಿತು. ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್, ಶಾಸಕರಾದ ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ, ಗುರ್ಮೆ ಸುರೇಶ್ ಶೆಟ್ಟಿ, ಕರ್ನಾಟಕ ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ, ವಿಎಲ್ ಗ್ರೂಪ್ ಮ್ಯಾನೇಜಿಂಗ್ ಡೈರೆಕ್ಟರ್ ಅಂಜಲಿ ವಿಜಯ್, ಎಎಸ್ ಗ್ರೂಪ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ಸತೀಶ್ ಶೆಟ್ಟಿ, ಮಂಗಳೂರು ವಿವಿ ರಿಜಿಸ್ಟ್ರಾರ್ ರಾಜು ಮೊಗವೀರ, ಲೈಫ್‌ಲೈನ್ ಟೆಂಡರ್ ಚಿಕನ್ ಮ್ಯಾನೇಜಿಂಗ್ ಡೈರೆಕ್ಟರ್ ಕಿಶೋರ್ ಹೆಗ್ಡೆ, ಕುಂದಾಪ್ರ ಕನ್ನಡ ಪ್ರತಿಷ್ಠಾನದ ಗೌರವಾಧ್ಯಕ್ಷ ಉದಯ ಹೆಗ್ಡೆ, ಅಧ್ಯಕ್ಷ ಡಾ.ದೀಪಕ್ ಶೆಟ್ಟಿ ಬಾರ್ಕೂರು, ಉಪಾಧ್ಯಕ್ಷ ನರಸಿಂಹ ಬೀಜಾಡಿ, ಕಾರ್ಯದರ್ಶಿಗಳಾದ ರಾಘವೇಂದ್ರ ಕಾಂಚನ್, ಅಜಿತ್ ಶೆಟ್ಟಿ ಉಳ್ತೂರು, ಕೋಶಾಧಿಕಾರಿ ವಿಜಯ್ ಶೆಟ್ಟಿ ಹಾಲಾಡಿ ಉಪಸ್ಥಿತರಿದ್ದರು.

ರೆಸ್ಟೋರೆಂಟ್‌ಗೆ ನೋಟಿಸ್ ಜಾರಿ

ಬೆಂಗಳೂರು: ಗಾಂಧಿನಗರದ ಪ್ರಸಿದ್ಧ ಎಂಪೈರ್ ರೆಸ್ಟೋರೆಂಟ್‌ನ ಚಿಕನ್ ಕಬಾಬ್‌ನ್ನು ಆಹಾರ ಸುರಕ್ಷತಾ ಇಲಾಖೆ ಪರೀಕ್ಷೆಗೊಳಪಡಿಸಿದ್ದು, ಮಾನವ ಬಳಕೆಗೆ ಅಸುರಕ್ಷಿತ ಎಂದು ವರದಿ ನೀಡಿದೆ. ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿರುವ ನೀರು ಮತ್ತು ಆಹಾರ ಪ್ರಯೋಗಾಲಯ ಈ ವಿಚಾರ ಘೋಷಿಸಿದ್ದು, ರೆಸ್ಟೋರೆಂಟ್ ಸಂಕಷ್ಟಕ್ಕೆ ಸಿಲುಕಿದೆ. ಬಿಬಿಎಂಪಿಯ ಉತ್ತರ ವಲಯದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತವು ರೆಸ್ಟೋರೆಂಟ್‌ಗೆ ನೋಟಿಸ್ ಜಾರಿ ಮಾಡಿದೆ.

ಸ್ವಾಸ್ಥ್ಯ ಉಳಿಯಲು ಮಾತೃಶಕ್ತಿ ಕೊಡುಗೆ ಅಪಾರ: ದೇಶಮಾನೆ

ಬೆಂಗಳೂರು: ಮಾತೃ ಶಕ್ತಿಯಿಂದಲೇ ಸಮಾಜದ ಸ್ವಾಸ್ಥ್ಯ ಉಳಿದಿದ್ದು, ಕಲ್ಪನಾ ಚಾವ್ಲಾ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮರಂತಹ ಸಾವಿರಾರು ಮೇಲ್ಪಂಕ್ತಿಯ ನಾರಿಯರು ತಮ್ಮದೇ ಕೊಡುಗೆ ನೀಡಿದ್ದಾರೆ ಎಂದು ಪದ್ಮಶ್ರೀ ಪುರಸ್ಕೃತೆ ವಿಜಯಲಕ್ಷ್ಮಿ ದೇಶಮಾನೆ ತಿಳಿಸಿದರು.

ಬಸವನಗುಡಿಯ ಬುಲ್ ಟೆಂಪಲ್ ರಸ್ತೆಯ ಅಮೃತ ಶಿಶು ನಿವಾಸದಲ್ಲಿ ಸಂಸ್ಕಾರ ಭಾರತೀ ಕರ್ನಾಟಕ-ದಕ್ಷಿಣ ಪ್ರಾಂತ ಆಯೋಜಿಸಿದ್ದ ಪ್ರಾಂತ ಮಾತೃಶಕ್ತಿ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮಾಜವನ್ನು ಸುಸ್ಥಿಯಲ್ಲಿ ಇಡಲು ಕಲ್ಪನಾ ಚಾವ್ಲಾ, ಝಾನ್ಸಿ ರಾಣಿ ಲಕ್ಷ್ಮಿ ಬಾಯಿ, ಕಿತ್ತೂರು ರಾಣಿ ಚೆನ್ನಮ್ಮ ರಂತಹ ಸಾವಿರಾರು ನಾರಿಯರು ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಸಮಾಜದಲ್ಲಿ ಸ್ವಾಸ್ಥ್ಯ, ಸೌಹಾರ್ದತೆಯನ್ನು ಕಾಪಾಡಲು ಇವರ ಕೊಡುಗೆ ಅಪಾರ. ಈ ನಿಟ್ಟಿನಲ್ಲಿ ಸಂಸ್ಕಾರ ಭಾರತೀ ಹಲವು ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಹೇಳಿದರು.

ನನ್ನ ಜೀವನದಲ್ಲಿ ಕೂಡ ಮಾತೃಶಕ್ತಿಯ ಪ್ರಭಾವ ಸಾಕಷ್ಟಿದೆ. ಅವರು ಬೀದಿ ಬದಿಯಲ್ಲಿ ಹಣ್ಣು-ತರಕಾರಿಗಳನ್ನು ಮಾರಿ ಎಂಟು ಜನ ಮಕ್ಕಳನ್ನು ಓದಿಸಿದರು. ಅವರ ಜತೆಯಲ್ಲಿಯೇ ವ್ಯಾಪಾರ ಮಾಡಿದ ನೆನಪುಗಳೂ ಸಹ ಸಾಕಷ್ಟಿವೆ. ಸದ್ಯ ಒಂದೇ ಕುಟುಂಬದ ಐದು ಜನರು ಪಿಎಚ್‌ಡಿ ಮಾಡಿರುವ ವಿಶ್ವ ದಾಖಲೆ ಕೂಡ ನಮ್ಮ ಕುಟುಂಬಕ್ಕಿದ್ದು, ಇದರ ಹಿಂದಿನ ಶ್ರಮ ತಾಯಿಯದ್ದಾಗಿದೆ ಎಂದು ನೆನಪಿಸಿಕೊಂಡರು.

ಬೆಂಗಳೂರು ಉತ್ತರದ ಸಂಸ್ಕಾರ ಭಾರತಿ ಅಧ್ಯಕ್ಷೆ ವೀಣಾ ಮೂರ್ತಿ ವಿಜಯ್ ಮಾತನಾಡಿ, ನೃತ್ಯ, ಸಂಗೀತ ಇತ್ಯಾದಿ ಪ್ರದರ್ಶನ ಕಲೆಗಳನ್ನು ಮಹಿಳೆಯರು ಕಲಿತರೆ ಅಪಚಾರ ಎನ್ನುವ ಪ್ರತೀತಿ ಹಿಂದಿನ ಕಾಲದಲ್ಲಿ ಸಂಪ್ರದಾಯಸ್ಥ ಕುಟುಂಬಗಳಲ್ಲಿ ಇತ್ತು ಎಂದು ನೆನಪಿನ ಬುತ್ತಿಯನ್ನು ತೆರೆದಿಟ್ಟರು.

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್ ನಂ. 500/2025

ಅರ್ಜಿದಾರರು: ಶ್ರೀಮತಿ ವಿಜಯಲಕ್ಷ್ಮಿ ಕೋಂ ಸ್ವಾಮಿ.ಟಿ ಬಿನ್ ಲೇಟ್ ರಾಮಕೃಷ್ಣ ವಯಸ್ಸು 41 ವರ್ಷ ವಾಸ: ವಾರ್ಡ್ ನಂ.10 ನೀಲಕಂಠೇಶ್ವರ ಶಾಲೆ ಹತ್ತಿರ, ಹನುಮಂತ ನಗರ, ಕನಕಪುರ ಟೌನ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಬೆಂಗಳೂರು ದಕ್ಷಿಣ ಜಿಲ್ಲೆ,

ವಿರುದ್ಧ

ಎದುರುದಾರರು: ನಗರಸಭೆ ಆಯುಕ್ತರು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಬೆಂಗಳೂರು ದಕ್ಷಿಣ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದ ಅರ್ಜಿದಾರರ ತಂದೆಯಾದ ಶ್ರೀ ರಾಮಕೃಷ್ಣ ಬಿನ್ ಲೇಟ್. ಯಳವಯ್ಯ ರವರು ಕನಕಪುರ ಟೌನ್, ಹನುಮಂತ ನಗರ, ನೀಲಕಂಠೇಶ್ವರ ಶಾಲೆ ಹತ್ತಿರ, ವಾರ್ಡ್ ನಂ. 10 ರಲ್ಲಿ ದಿನಾಂಕ : 15-06-1985 ರಂದು ಮರಣ ಹೊಂದಿದ್ದು, ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣದ ದಿನಾಂಕ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 04/09/2025 ರ ಬೆಳಿಗ್ಗೆ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು.

ದಿನಾಂಕ 21/07/2025 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಶ್ರೀಮತಿ ಪ್ರಮೀಳ.ಎಂ.ವಿ.
ವಕೀಲರು,
ದಿನಾಂಕ: 21/7/2025
ಸ್ಥಳ: ಕನಕಪುರ.

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್ ನಂ. 499/2025

ಅರ್ಜಿದಾರರು: ಶ್ರೀಮತಿ ವಿಜಯಲಕ್ಷ್ಮಿ ಕೋಂ ಸ್ವಾಮಿ.ಟಿ ಬಿನ್ ಲೇಟ್ ರಾಮಕೃಷ್ಣ ವಯಸ್ಸು 41 ವರ್ಷ ವಾಸ: ವಾರ್ಡ್ ನಂ.10 ನೀಲಕಂಠೇಶ್ವರ ಶಾಲೆ ಹತ್ತಿರ, ಹನುಮಂತ ನಗರ, ಕನಕಪುರ ಟೌನ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಬೆಂಗಳೂರು ದಕ್ಷಿಣ ಜಿಲ್ಲೆ,

ವಿರುದ್ಧ

ಎದುರುದಾರರು: ನಗರಸಭೆ ಆಯುಕ್ತರು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಬೆಂಗಳೂರು ದಕ್ಷಿಣ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದ ಅರ್ಜಿದಾರರ ತಾಯಿಯಾದ ಶ್ರೀಮತಿ ಕೆಂಪಮ್ಮ ಕೋಂ ಲೇಟ್ ರಾಮಕೃಷ್ಣ ರವರು ಕನಕಪುರ ಟೌನ್, ಹನುಮಂತ ನಗರ, ನೀಲಕಂಠೇಶ್ವರ ಶಾಲೆ ಹತ್ತಿರ, ವಾರ್ಡ್ ನಂ. 10 ರಲ್ಲಿ ದಿನಾಂಕ : 24-02-2023 ರಂದು ಮರಣ ಹೊಂದಿದ್ದು, ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣದ ದಿನಾಂಕ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 04/09/2025 ರ ಬೆಳಿಗ್ಗೆ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು.

ದಿನಾಂಕ 21/07/2025 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಶ್ರೀಮತಿ ಪ್ರಮೀಳ.ಎಂ.ವಿ.
ವಕೀಲರು,
ದಿನಾಂಕ: 21/7/2025
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್ ನಂ. 364/2025

ಅರ್ಜಿದಾರರು: ಶ್ರೀ. ಮಹದೇವಯ್ಯ ಉ॥ ಮಾದೇವಯ್ಯ ಬಿನ್ ಲೇಟ್ ಪುಟ್ಟಮಾದ ಉ॥ ಆರುಬೆಳ್ಳಯ್ಯ ವಯಸ್ಸು 75 ವರ್ಷ ವಾಸ: ದಿಂಬದಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ. ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. 2. ಗ್ರಾಮ ಲೆಕ್ಕಾಧಿಕಾರಿಗಳು, ಆಲನತ್ತ ವೃತ್ತ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ,

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1 ರಿಂದ 5ನೇ ಅರ್ಜಿದಾರರ ತಂದೆಯವರಾದ ಪುಟ್ಟಮಾದ ಉ॥ ಆರುಬೆಳ್ಳಯ್ಯ ಬಿನ್ ಲೇಟ್ ಮಾದ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ದಿಂಬದಹಳ್ಳಿ ಗ್ರಾಮದಲ್ಲಿ ದಿನಾಂಕ:20.06.1958 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು. ಅಂದರೆ, 30/08/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

24ನೇ ಜುಲೈ 2025ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಅಭಿಷೇಕ್. ಜೆ
ವಕೀಲರು, ಕನಕಪುರ

ಸಾರ್ವಜನಿಕ ಪ್ರಕಟಣೆ

ನೀರಿನಲ್ಲಿ ಸಂಪೂರ್ಣ ಕರಗುವ ರಸ ಗೊಬ್ಬರಗಳನ್ನು ಮಾರಾಟ ಮತ್ತು ಮಾರುಕಟ್ಟೆಯ ಬಗ್ಗೆ ಮಾಹಿತಿ ಉಲ್ಲೇಖ: ಎಫ್ ಸಿ ಓ 1985 ಅಧಿಸೂಚನೆಯ ಆದೇಶದ ಸಂಖ್ಯೆ 1909(E) ದಿನಾಂಕ ಜುಲೈ 2014 ಆಧಾರದ ಮೇಲೆ ಪ್ರಸಿದ್ಧ ಅಗ್ರಿ ಸೈನ್ಸಸ್ ಪ್ರೈವೇಟ್ ಲಿಮಿಟೆಡ್, ರವರು ಜುಲೈ 28, 2014ರ ಅಧಿಸೂಚನೆಯ ಆದೇಶದ ನಂಬರ್ 1990 ಈ ಮೇರೆಗೆ ನೀರಿನಲ್ಲಿ ಸಂಪೂರ್ಣವಾಗಿ ಕರಗುವ ರಸಗೊಬ್ಬರಗಳ ಮಾರಾಟ ಮತ್ತು ಮಾರುಕಟ್ಟೆಯನ್ನು ಪ್ರಾರಂಭಿಸುತಿದೆ ಎಂದು ಸಾರ್ವಜನಿಕರಿಗೆ ತಿಳಿಸಲು ನಾವು ಸಂತೋಷಪಟ್ಟಿದ್ದೇವೆ. ಉತ್ಪನ್ನದ ವಿವರಗಳು ಈ ಕೆಳಗಿನಂತಿವೆ

1) 19:19:19 ಒಟ್ಟು ಸಾರಜನಕ (19%) ಒಟ್ಟು ರಂಜಕ P2O5 (19%) ಒಟ್ಟು ಪೊಟಾಷ್ K2O (19%), 2) NPK (20:20:20), ಒಟ್ಟು ಸಾರಜನಕ (20%) ಒಟ್ಟು ರಂಜಕ P2O5 (20%) ಒಟ್ಟು ಪೊಟಾಷ್ K2O (20%), 3)MAP (12:61:00)- ಒಟ್ಟು ಸಾರಜನಕ (12%) ಒಟ್ಟು ರಂಜಕ P2O5 (61%), 4) MKP (00:52:34)- ಒಟ್ಟು ರಂಜಕ P2O5 (52%) ಒಟ್ಟು ಪೊಟಾಷ್ K2O (34%), 5) ಪೊಟ್ಯಾಶಿಯಂ ನೈಟ್ರೇಟ್ (13:00:45)-ಒಟ್ಟು ಸಾರಜನಕ 13%, ಒಟ್ಟು ಪೊಟಾಷ್ K2O (45%), 6) SOP - (00:00:50)- ಒಟ್ಟು ಪೊಟಾಷ್ K2O) (50%) 7) NPK (15:15:30) - ಒಟ್ಟು ಸಾರಜನಕ (15%) ಒಟ್ಟು ರಂಜಕ P2O5 (15%) ಒಟ್ಟು ಪೊಟಾಷ್ K2O (30%) 8) NPK (12:32:16) - ಒಟ್ಟು ಸಾರಜನಕ (12%) ಒಟ್ಟು ರಂಜಕ P2O5 (32%) ಒಟ್ಟು ಪೊಟಾಷ್ K2O (16%) 9) NPK (13:40:13) - ಒಟ್ಟು ಸಾರಜನಕ (13%) ಒಟ್ಟು ರಂಜಕ P2O5 (40%) ಒಟ್ಟು ಪೊಟಾಷ್ K2O (13%) 10) ಕ್ಯಾಲ್ಸಿಯಂ ನೈಟ್ರೇಟ್ - ಒಟ್ಟು ಸಾರಜನಕ (15.5%) ಒಟ್ಟು ಕ್ಯಾಲ್ಸಿಯಂ Ca (18%), 11). ಬೋರೋನಟೆಡ್ ಕ್ಯಾಲ್ಸಿಯಂ ನೈಟ್ರೇಟ್ - ಒಟ್ಟು ಸಾರಜನಕ (17.1%) ಒಟ್ಟು ಕ್ಯಾಲ್ಸಿಯಂ Ca (17.1%) ಒಟ್ಟು ಬೋರಾನ್ (0.3%). ಹಾಗೂ ಮೇಲ್ಕಂಡ ಎಲ್ಲ ರಸಗೊಬ್ಬರಗಳಲ್ಲಿ ತೇವಾಂಶ (0.5%), ಒಟ್ಟು ಸೀಸ Pb (0.003%), ಒಟ್ಟು ಕ್ಯಾಡ್ಮಿಯಂ Cd (0.002%), ಒಟ್ಟು ಆರ್ಸಿನಿಕ್ As (0.01%) ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಹಾಗೂ ಉತ್ಪನ್ನಗಳು ಬೆಳೆಯ ಮೇಲೆ ಬೀರುವ ಪರಿಣಾಮದ ಮಾಹಿತಿಗಾಗಿ ಪ್ರಸಿದ್ಧ ಅಗ್ರಿ ಸೈನ್ಸಸ್ ಪ್ರೈವೇಟ್ ಲಿಮಿಟೆಡ್, ರವರ ಮಾರಾಟಗಾರರನ್ನು ಸಂಪರ್ಕಿಸಿ

ಇವರಿಂದ
ಪ್ರಸಿದ್ಧ ಅಗ್ರಿ ಸೈನ್ಸಸ್ ಪ್ರೈವೇಟ್ ಲಿಮಿಟೆಡ್,
3A, III-3A, ಶೇಷಾದ್ರಿ ನಗರ ಕ್ಯಾಂಪ್,
ಸಿಂಧನೂರು ಮೇನ್ ರೋಡ್, ಬಾಗೇವಾಡಿ ಪೋಸ್ಟ್, ಸಿರುಗುಪ್ಪ, ಬಳ್ಳಾರಿ ಕರ್ನಾಟಕ, 583121.
(Contact No. 040-35251862; mobile: 8099930702; E-mail: prasidhasales@gmail.com

ಸಮಾಚಾರ ಸಣ್ಣದಲ್ಲ

ಸೆ.9ರಿಂದ ಏಷ್ಯಾ ಕಪ್

ಢಾಕಾ: ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಅಧ್ಯಕ್ಷ ಮೊಹ್ಸಿನ್ ನಖ್ವಿ ಅವರು 2025ರ ಏಷ್ಯಾ ಕಪ್ ಟೂರ್ನಿಯನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಲಾಗುವುದು ಎಂದಿದ್ದು, ಸೆಪ್ಟೆಂಬರ್ 9ರಿಂದ 28 ರವರೆಗೆ

ನಡೆಯಲಿದೆ ಎಂದು ದೃಢಪಡಿಸಿದ್ದಾರೆ. ಯುಎಇ ಈ ಟೂರ್ನಿಯನ್ನು ಆಯೋಜಿಸಲಿದ್ದು, ಜುಲೈ 24ರಂದು ಢಾಕಾದಲ್ಲಿ ನಡೆದ ಎಸಿಸಿ ಸಭೆಯ ನಂತರ ಈ ಪ್ರಕಟಣೆ ಹೊರಬಿದ್ದಿದೆ. ಭಾರತ ಮತ್ತು ಪಾಕಿಸ್ತಾನ ಸೇರಿದಂತೆ ಎಂಟು ತಂಡಗಳು ಈ ಟೂರ್ನಿಯಲ್ಲಿ ಭಾಗವಹಿಸುತ್ತವೆ. ಮುಂದಿನ ವರ್ಷ ಟಿ20 ವಿಶ್ವಕಪ್ ಟೂರ್ನಿ ನಡೆಯಲಿದೆ, ಹಾಗಾಗಿ ಈ ಬಾರಿ ಟೂರ್ನಿಯು ಟಿ20 ಸ್ವರೂಪದಲ್ಲಿ ನಡೆಯಲಿದೆ. ಭಾರತ ತಂಡ 2023ರಲ್ಲಿ ಶ್ರೀಲಂಕಾವನ್ನು ಸೋಲಿಸುವ ಮೂಲಕ ಕೊನೆಯ ಏಷ್ಯಾ ಕಪ್ ಅನ್ನು ಗೆದ್ದುಕೊಂಡಿತ್ತು. ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯದ ಬಗ್ಗೆ ಇನ್ನೂ ಅನಿಶ್ಚಿತತೆ ಇದ್ದು, ಎರಡೂ ದೇಶಗಳ ಕ್ರಿಕೆಟ್ ಸಂಬಂಧಗಳ ಬಗ್ಗೆ ಪ್ರಶ್ನೆಗಳು ಎದ್ದಿವೆ. ಆದರೆ ಎರಡೂ ತಂಡಗಳು ಕನಿಷ್ಠ 2 ಬಾರಿ ಮುಖಾಮುಖಿಯಾಗಲಿವೆ ಎಂದು ನಿರೀಕ್ಷಿಸಲಾಗಿದೆ.

ಹಾಕಿ: ಆಸ್ಟ್ರೇಲಿಯಾ ವಿರುದ್ಧ ನಾಲ್ಕು ಸೌಹಾರ್ದ ಪಂದ್ಯ

ದೆಹಲಿ: ಮುಂಬರುವ ಏಷ್ಯಾಕಪ್‌ಗೆ ಸಿದ್ಧತೆಯ

ಭಾಗವಾಗಿ ಭಾರತ ಪುರುಷರ ಹಾಕಿ ತಂಡವು ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದೆ. ಆಗಸ್ಟ್ 15ರಿಂದ 21ರ ವರೆಗೆ ಸೌಹಾರ್ದ ಸರಣಿಯಲ್ಲಿ ನಾಲ್ಕು ಪಂದ್ಯಗಳನ್ನು ಆಡಲಿದೆ. ವಿಶ್ವ ಕ್ರಮಾಂಕದಲ್ಲಿ ಎಂಟನೇ ಸ್ಥಾನದಲ್ಲಿರುವ ಭಾರತ ತಂಡವು ತನಗಿಂತ ಎರಡು ಸ್ಥಾನ ಮೇಲಿರುವ ಆಸ್ಟ್ರೇಲಿಯಾ ವಿರುದ್ಧ ಆಗಸ್ಟ್ 15, 16, 19 ಮತ್ತು 21ರಂದು ಸೆಣಸಲಿದೆ. ಎಲ್ಲಾ ನಾಲ್ಕು ಪಂದ್ಯಗಳು ಪರ್ತ್‌ನಲ್ಲಿ ನಡೆಯಲಿವೆ. ಏಷ್ಯಾಕಪ್ ಟೂರ್ನಿಯು ಬಿಹಾರದ ರಾಜ್‌ಗಿರ್‌ನಲ್ಲಿ ಆಗಸ್ಟ್ 29ರಿಂದ ಸೆಪ್ಟೆಂಬರ್ 7ರ ವರೆಗೆ ನಡೆಯಲಿದೆ. ಈ ಟೂರ್ನಿಯ ವಿಜೇತ ತಂಡವು ಮುಂದಿನ ವರ್ಷದ ಎಫ್‌ಐಎಚ್ ವಿಶ್ವಕಪ್‌ಗೆ ನೇರ ಅರ್ಹತೆ ಪಡೆಯಲಿದೆ. ಇತ್ತೀಚೆಗೆ ಯುರೋಪ್‌ನಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಭಾರತ ಮತ್ತು ಆಸ್ಟ್ರೇ ಲಿಯಾ ತಂಡಗಳು ಎರಡು ಬಾರಿ ಮುಖಾಮುಖಿ ಯಾಗಿದ್ದವು. ಆಸ್ಟ್ರೇಲಿಯಾ ಎರಡೂ ಪಂದ್ಯವನ್ನು ತಲಾ 3-2 ಅಂತರದಿಂದ ಗೆದ್ದಿತ್ತು. ಕಳೆದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತವು 3-2ರಿಂದ ಆಸ್ಟ್ರೇಲಿಯಾ ವಿರುದ್ಧ ಚಾರಿತ್ರಿಕ ಜಯ ಸಾಧಿಸಿತ್ತು. ಮುಂಬರುವ ಏಷ್ಯಾಕಪ್‌ಗೆ ಸಿದ್ಧತೆಯ ಭಾಗವಾಗಿ ಭಾರತ ಪುರುಷರ ಹಾಕಿ ತಂಡವು ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದೆ. ಆಗಸ್ಟ್ 15ರಿಂದ 21ರವರೆಗೆ ಸೌಹಾರ್ದ ಸರಣಿಯಲ್ಲಿ ನಾಲ್ಕು ಪಂದ್ಯಗಳನ್ನು ಆಡಲಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಇಂಗ್ಲೆಂಡ್ ಮೊದಲ ಇನ್ನಿಂಗ್ಸ್ 669 ರನ್ ಆಲೌಟ್ | ಟೀಮ್ ಇಂಡಿಯಾಕ್ಕೆ ಗಿಲ್, ರಾಹುಲ್ ಆಸರೆ

ಡ್ರಾ ಸಾಧಿಸಲು ಭಾರತದ ಹೆಣಗಾಟ

ಮ್ಯಾಂಚೆಸ್ಟರ್: ಇಲ್ಲಿ ನಡೆಯುತ್ತಿರುವ ಇಂಗ್ಲೆಂಡ್-ಭಾರತ ನಡುವಿನ 4ನೇ ಟೆಸ್ಟ್‌ನ ನಾಲ್ಕನೇ ದಿನದಂದು ಆಂಗ್ಲರು ಪಂದ್ಯದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದು, ಟೀಮ್ ಇಂಡಿಯಾ ಕೊನೆಯ ದಿನವಾದ ಭಾನುವಾರ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ಆಲೌಟ್ ಆಗದೆ ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ಹೆಣಗಾಟ ನಡೆಸಬೇಕಿದೆ.

ಶನಿವಾರದ ದಿನದಾಂತ್ಯಕ್ಕೆ ಭಾರತವು ತನ್ನ ದ್ವಿತೀಯ ಇನ್ನಿಂಗ್ಸ್‌ನಲ್ಲಿ 2 ವಿಕೆಟ್ ನಷ್ಟಕ್ಕೆ 174 ರನ್ ಗಳಿಸಿದೆ. ಟೀಮ್ ಇಂಡಿಯಾ ಪರ ನಾಯಕ ಶುಭ್‌ಮನ್ ಗಿಲ್ 78 ರನ್ ಹಾಗೂ ಕನ್ನಡಿಗ ಕೆ.ಎಲ್. ರಾಹುಲ್ 87 ರನ್ ಗಳಿಸಿ ಅಜೇಯರಾಗಿ ಕ್ರೀಸ್‌ನಲ್ಲಿ ಇದ್ದಾರೆ.

311 ರನ್‌ಗಳ ಹಿನ್ನಡೆಯೊಂದಿಗೆ ಎರಡನೇ ಇನ್ನಿಂಗ್ಸ್ ಆರಂಭಿಸಿದ ಭಾರತಕ್ಕೆ ಆರಂಭದಲ್ಲಿ ಭಾರೀ ಆಘಾತ ಎದುರಾಯಿತು. ಮೊದಲ ಓವರ್ ಎಸೆದ ಕ್ರಿಸ್ ವೋಕ್ಸ್ ಭಾರತಕ್ಕೆ ಆರಂಭಿಕ ಆಘಾತ ನೀಡಿದರು. ಮೊದಲ ಓವರ್‌ನ 4ನೇ ಬಾಲ್‌ನಲ್ಲಿ ಅವರು ಜೈಸ್ವಾಲ್ ವಿಕೆಟ್ ಪಡೆದರೆ, ಆ ನಂತರದ ಬಾಲ್‌ನಲ್ಲಿ ಸಾಯಿ ಸುದರ್ಶನ್ ವಿಕೆಟ್ ಪಡೆದು ಮಿಂಚಿದರು. ಆ ನಂತರ ಟೀಮ್ ಇಂಡಿಯಾ ನಾಯಕ ಶುಭ್‌ಮನ್ ಗಿಲ್ ಮತ್ತು ಕೆ.ಎಲ್. ರಾಹುಲ್ ಭಾರತದ ಇನ್ನಿಂಗ್ಸ್ ಆಧರಿಸಿದರು.

ಎರಡನೇ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್ ಪ್ರಥಮ ಇನಿಂಗ್ಸ್‌ನಲ್ಲಿ ಭಾನುವಾರದಂದು 669 ರನ್ ಗಳಿಗೆ ಆಲ್‌ಔಟ್ ಆಯಿತು. ಇದು ಟೆಸ್ಟ್ ಇತಿಹಾಸದಲ್ಲಿ ಇಂಗ್ಲೆಂಡ್ ತನ್ನ ತವರು ನೆಲದಲ್ಲಿ ದಾಖಲಿಸಿದ ಮೂರನೇ ಅತ್ಯಧಿಕ ಸ್ಕೋರ್ ಆಗಿತ್ತು.

ನಾಲ್ಕನೇ ದಿನ ಅತ್ಯುತ್ತಮ ಬ್ಯಾಟ್ ಮಾಡಿದ ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ ಶತಕ ಸಿಡಿಸಿ ಇಂಗ್ಲೆಂಡ್ ತಂಡವು 600 ರನ್ ಗಡಿ ದಾಟಲು ನೆರವಾದರು. ಪಂದ್ಯದ ನಾಲ್ಕನೇ ದಿನದಂದು ಇಂಗ್ಲೆಂಡ್‌ನ ಆರಂಭದಲ್ಲೇ ಬಹುಬೇಗ ವಿಕೆಟ್‌ಗಳನ್ನು ಕಳೆದುಕೊಂಡಿತು. ಜೋ ರೂಟ್ 150 ರನ್ ಗಳಿಸಿದರೆ, ನಾಯಕ ಬೆನ್ ಸ್ಟೋಕ್ಸ್ 141 ರನ್ ಗಳಿಸಿದರು. ಇಂಗ್ಲೆಂಡ್ ಪರ 10ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಬ್ರೈಡನ್ ಕಾರ್ಸ್ 54 ಎಸೆತಗಳಲ್ಲಿ 47 ರನ್ ಗಳಿಸಿದರು. ನಾಯಕ ಬೆನ್ ಸ್ಟೋಕ್ಸ್ ಜೊತೆ 9ನೇ ವಿಕೆಟ್‌ಗೆ 96 ಎಸೆತಗಳಲ್ಲಿ 95 ರನ್ ಸೇರಿಸಿದರು.

ಭಾರತದ ಪರ ರವೀಂದ್ರ ಜಡೇಜಾ 143 ರನ್ ನೀಡಿ 4 ವಿಕೆಟ್ ಪಡೆದರೆ, ವಾಷಿಂಗ್ಟನ್ ಸುಂದರ್ ಮತ್ತು ಬುಮ್ರಾ ತಲಾ 2 ವಿಕೆಟ್ ಪಡೆದರು.

ಇಂಗ್ಲೆಂಡ್ ತಂಡದ ಅತಿ ಹೆಚ್ಚು ತವರಿನ ಸ್ಕೋರ್

		ವರ್ಷ
903/7	ಆಸ್ಟ್ರೇಲಿಯಾ ವಿರುದ್ಧ	1938
710/7	ಭಾರತ ವಿರುದ್ಧ	2011
669	ಭಾರತ ವಿರುದ್ಧ	2025
658/8	ಆಸ್ಟ್ರೇಲಿಯಾ ವಿರುದ್ಧ	1938

ಬುಮ್ರಾ ಬಗ್ಗೆ ಕೈಫ್ ನಿರಾಸೆಯ ಪ್ರತಿಕ್ರಿಯೆ

ಓಲ್ಡ್ ಟ್ರಾಫರ್ಡ್: ಮುಂಬರುವ ಟೆಸ್ಟ್



ಪಂದ್ಯಗಳಲ್ಲಿ ಜಸ್‌ಪ್ರೀತ್ ಬುಮ್ರಾ ಆಡದೇ ಇರಬಹುದು ಇಲ್ಲವೇ ಅವರು ನಿವೃತ್ತಿ ಹೊಂದಬಹುದು ಎಂದು ನಾನು ಭಾವಿಸುತ್ತೇನೆ. ಅವರು ತಮ್ಮ ದೇಹದೊಂದಿಗೆ ಹೋರಾಡುತ್ತಿದ್ದಾರೆ, ನಿಧಾನವಾಗಿ ಬೌಲ್ ಮಾಡುತ್ತಿದ್ದಾರೆ ಮತ್ತು ಈ ಟೆಸ್ಟ್ ಪಂದ್ಯದಲ್ಲಿ ಯಾವುದೇ ವೇಗವನ್ನು ತೋರಿಸುತ್ತಿಲ್ಲ ಎಂದು ಮಾಜಿ ಕ್ರಿಕೆಟಿಗ ಮೊಹಮ್ಮದ್ ಕೈಫ್ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ ವಿಡಿಯೊದಲ್ಲಿ ತಿಳಿಸಿದ್ದಾರೆ.

ಜಸ್‌ಪ್ರೀತ್ ಬುಮ್ರಾ ಸ್ವತಂತ್ರ ವ್ಯಕ್ತಿ, ಒಂದು ವೇಳೆ ಅವರು ಶೇ.100ರಷ್ಟು ಸಾಮರ್ಥ್ಯದಲ್ಲಿ ಬೌಲ್ ಮಾಡಲು ಸಾಧ್ಯವಾಗಿಲ್ಲವಾದರೆ, ಅವರಿಂದ ಭಾರತ ತಂಡವನ್ನು ಗೆಲ್ಲಿಸಲು ಸಾಧ್ಯವಾಗುವುದಿಲ್ಲ, ಅವರಿಂದ ವಿಕೆಟ್ ಪಡೆಯಲು ಸಾಧ್ಯವಿಲ್ಲ ಎಂದರ್ಥ. ಈಗ ಅವರೇ ನಿರಾಕರಿಸುತ್ತಿದಾರೆಂಬುದು ನನ್ನ ಭಾವನೆ' ಎಂದು ಮೊಹಮ್ಮದ್ ಕೈಫ್ ಎಚ್ಚರಿಕೆ ನೀಡಿದ್ದಾರೆ. ಮೊದಲು ರೋಹಿತ್ ಶರ್ಮಾ, ನಂತರ ವಿರಾಟ್ ಕೊಹ್ಲಿ ಹೋದರು ಮತ್ತು ಆರ್ ಅಶ್ವಿನ್ ಕೂಡ ಇಲ್ಲ ಎಂದರು.

ಸಚಿನ್ ದಾಖಲೆ ರೂಟ್ ಮುರಿಯುತ್ತಾರೆ: ಓಲಿ

ಮ್ಯಾಂಚೆಸ್ಟರ್: ಟೆಸ್ಟ್ ಕ್ರಿಕೆಟ್‌ಲ್ಲಿ ಅತಿ ಹೆಚ್ಚು

ರನ್ ಗಳಿಸಿರುವ ಭಾರತದ ಕ್ರಿಕೆಟ್ ದಂತಕತೆ ಸಚಿನ್ ತೆಂಡೂಲ್ಕರ್ ಅವರ ದಾಖಲೆಯನ್ನು ಜೋ ರೂಟ್ ಮುರಿದರೆ ಅಚ್ಚರಿಯೇನಿಲ್ಲ ಎಂದು ಇಂಗ್ಲೆಂಡ್ ತಂಡದ ಉಪ ಕಪ್ತಾನ ಓಲಿ ಪೋಪ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 2ನೇ ಸ್ಥಾನದಲ್ಲಿದ್ದ ಆಸ್ಟ್ರೇಲಿಯಾದ ಮಾಜಿ ಆಟಗಾರ ರಿಕಿ ಪಾಂಟಿಂಗ್ ಅವರ ದಾಖಲೆಯನ್ನು ಜೋ ರೂಟ್ ಶುಕ್ರವಾರ ಮುರಿದಿದ್ದಾರೆ. ಸಚಿನ್ ತೆಂಡೂಲ್ಕರ್ 15,921 ರನ್ ಗಳಿಸಿದ್ದಾರೆ.

ಭಾರತದ ವಿರುದ್ಧ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿ 150 ರನ್ ಬಾರಿಸುವ ಮೂಲಕ 34 ವರ್ಷದ ಜೋ ರೂಟ್ 13409 ರನ್ ಸೂರೆಗೈದಿದ್ದಾರೆ. 'ಜೋ ರೂಟ್ ಇಂಗ್ಲೆಂಡ್ ತಂಡಕ್ಕೆ ಆಡುವುದನ್ನು ಪ್ರೀತಿಸುತ್ತಾರೆ. ಟೆಸ್ಟ್ ಕ್ರಿಕೆಟ್ ಎಲ್ಲಕ್ಕಿಂತಲೂ ಮಿಗಿಲು. ಒಂದು ವೇಳೆ ಅವರ ದೇಹ ಸಹಕರಿಸಿದರೆ, ಖಂಡಿತಾ ಅವರು ಒಂದನೇ ಸ್ಥಾನ ಅಲಂಕರಿಸುತ್ತಾರೆ. ಅವರಿಗೆ ಸಾಧ್ಯವಿದ್ದಷ್ಟು ದೀರ್ಘವಾಗಿ ಅವರು ಆಟವಾಡಬೇಕು' ಎಂದು ಪೋಪ್ ಹೇಳಿದ್ದಾರೆ.

ಏಷ್ಯಾ ಜೂನಿಯರ್ ಬ್ಯಾಡ್ಮಿಂಟನ್ | ಮೊದಲ ಬಾರಿ ಭಾರತೀಯರಿಬ್ಬರಿಗೆ ಪದಕ

ವೆನ್ನಲಾ, ತನ್ವಿಗೆ ಕಂಚಿನ ಪದಕ

ಸೋಲೊ, ಇಂಡೊನೇಷ್ಯಾ: ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ್ತಿಯರಾದ ತನ್ವಿ ಶರ್ಮಾ ಮತ್ತು ವೆನ್ನಲಾ ಕಲಗೂಡ್ತಾ ಅವರು ಏಷ್ಯಾ ಜೂನಿಯರ್ ವೈಯಕ್ತಿಕ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದರು.

ಭಾರತದ ಬ್ಯಾಡ್ಮಿಂಟನ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಬ್ಬರು ಆಟಗಾರ್ತಿಯರು ಒಂದೇ ಆವೃತ್ತಿಯಲ್ಲಿ ತಲಾ ಒಂದು ಪದಕ ಗೆದ್ದು ವಿಜಯ ವೇದಿಕೆಯಲ್ಲಿ ನಿಂತ ಸಾಧನೆ ಮಾಡಿದರು. ಉಭಯ ಆಟಗಾರ್ತಿಯರು ಸೆಮಿಫೈನಲ್ ಪ್ರವೇಶಿಸಿದ್ದರು. ನಾಲ್ಕರ ಸುತ್ತಿನ ಮೊದಲ ಪಂದ್ಯದಲ್ಲಿ ವೆನ್ನಲಾ 15-21, 18-21ರಿಂದ ಚೀನಾದ ಲಿಯು. ಸಿ. ಯಾ ವಿರುದ್ಧ ಸೋತರು. 37 ನಿಮಿಷ ನಡೆದ ಈ ಪಂದ್ಯದಲ್ಲಿ ವೆನ್ನಲಾ ಅವರು ಎದುರಾಳಿಗೆ ಕಠಿಣ ಪೈಪೋಟಿಯೊಡ್ಡಿದರು. ಆದರೆ ಚೀನಾದ ಆಟಗಾರ್ತಿ ಸವಾಲು ಮೆಟ್ಟಿನಿಂತರು.

ಇನ್ನೊಂದು ಪಂದ್ಯದಲ್ಲಿ ತನ್ವಿ ಶರ್ಮಾ 13-21, 14-21ರಿಂದ ಎಂಟನೇ ಶ್ರೇಯಾಂಕದ ಯಿನ್ ಯೀ ಕಿಂಗ್ ವಿರುದ್ಧ ಪರಾಭವಗೊಂಡರು. ಈ ಪಂದ್ಯದ ಎರಡನೇ ಸೆಟ್‌ನಲ್ಲಿ ತನ್ವಿ ದಿಟ್ಟ ಪೈಪೋಟಿ ನೀಡಿದರು. ಆದರೆ 35 ನಿಮಿಷಗಳವರೆಗೆ ನಡೆದ ಈ ಪಂದ್ಯದಲ್ಲಿ ಚೀನಾ ಆಟಗಾರ್ತಿಯ ಚುರುಕಾದ ಕೌಶಲಗಳು ಗಮನ ಸೆಳೆದವು. ಸ್ಮ್ಯಾಷ್‌ಗಳ ಮೂಲಕ ತನ್ವಿ ಅವರ ಹೋರಾಟಕ್ಕೆ ತಡೆಯೊಡ್ಡಿ ಪರಾಭವಗೊಳಿಸಿದರು.

ರಾಷ್ಟ್ರೀಯ ಕ್ರೀಡಾಕೂಟ: 8 ರಾಜ್ಯಗಳ ಆತಿಥ್ಯ

ಶಿಲ್ಲಾಂಗ್: ಕೇಂದ್ರವು 39ನೇ ರಾಷ್ಟ್ರೀಯ ಕ್ರೀಡೆಗಳಿಗೆ ವಿಭಿನ್ನ ಮಾದರಿಯನ್ನು ರೂಪಿಸಲು ಮುಂದಾಗಿದ್ದು, ಈಶಾನ್ಯದ ಎಂಟು ರಾಜ್ಯಗಳಿಗೆ ಮುಂದಿನ ರಾಷ್ಟ್ರೀಯ ಕ್ರೀಡೆಗಳ ಆತಿಥ್ಯ ವಹಿಸುವಂತೆ ಕೇಳಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶಿಲ್ಲಾಂಗ್‌ನಲ್ಲಿ ಶನಿವಾರ ನಡೆದ ರಾಜ್ಯಗಳ ಕ್ರೀಡಾ ಸಚಿವರು, ಕಾರ್ಯದರ್ಶಿಗಳು ಮತ್ತು ಒಲಿಂಪಿಕ್ ಸಂಸ್ಥೆಯ ಪದಾಧಿಕಾರಿಗಳ ಮೊದಲ ಪ್ರಾದೇಶಿಕ ಸಭೆಯಲ್ಲಿ ಈ ಪ್ರಸ್ತಾವಕ್ಕೆ ಸರ್ವಾನುಮತದ ಬೆಂಬಲ ದೊರಕಿದೆ ಎಂದು ಅವರು ತಿಳಿಸಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ಮೇಘಾಲಯದ ಕ್ರೀಡಾ ಸಚಿವ ಶಕ್ತಿಯಾರ್ ವಾರ್ಜಿ ಮತ್ತು ಸಹ ಅಧ್ಯಕ್ಷತೆಯನ್ನು ಅರುಣಾಲ ಪ್ರದೇಶದ ಕ್ರೀಡಾ ಸಚಿವ ಕೆಂಟೊ ಜಿನಿ ವಹಿಸಿದ್ದರು. ಈ ಭಾಗದಲ್ಲಿ 1999ರಲ್ಲಿ ಮೊದಲ ಬಾರಿ ಮಣಿಪುರದ ಆತಿಥ್ಯದಲ್ಲಿ ರಾಷ್ಟ್ರೀಯ ಕ್ರೀಡೆಗಳು ನಡೆದಿದ್ದವು, 2007ರಲ್ಲಿ ಅಸ್ಸಾಂ ಆತಿಥ್ಯ ವಹಿಸಿದ್ದು, ಗುವಾಹಟಿಯಲ್ಲಿ ಕ್ರೀಡೆಗಳು ನಡೆದಿದ್ದವು.

3ನೇ ಪಂದ್ಯದಲ್ಲೂ ವೆಸ್ಟ್ ಇಂಡೀಸ್‌ಗೆ ಸೋಲು

ಸರಣಿ ಗೆದ್ದ ಆಸ್ಟ್ರೇಲಿಯಾ

ಸೇಂಟ್ ಕಿಟ್ಸ್: ಇಲ್ಲಿನ ವಾರ್ನರ್ ಪಾರ್ಕ್‌ನಲ್ಲಿ ನಡೆದ ಪಂದ್ಯದಲ್ಲಿ ಟಿಮ್ ಡೇವಿಡ್ ಅವರ ಸ್ಫೋಟಕ ಶತಕದ ಬಲದಿಂದ ಆಸ್ಟ್ರೇಲಿಯಾ ತಂಡವು ಎದುರಾಳಿ ವೆಸ್ಟ್ ಇಂಡೀಸ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಗೆಲುವು ಪಡೆಯಿತು, ಆ ಮೂಲಕ ಪ್ರವಾಸಿ ಆಸೀಸ್ ತಂಡವು ಮೂರು ಪಂದ್ಯಗಳ ಟಿ20 ಸರಣಿಯನ್ನು 3-0 ಅಂತರದಲ್ಲಿ ಕ್ಲೀನ್ ಸ್ವೀಪ್ ಮಾಡಿಕೊಂಡಿದೆ. ಶೇಯ್ ಹೋಪ್ ಶತಕದ ಹೊರತಾಗಿಯೂ ಆತಿಥೇಯ ವೆಸ್ಟ್ ಇಂಡೀಸ್ ತಂಡವು ಬೌಲಿಂಗ್ ವೈಫಲ್ಯದಿಂದ ಮೂರನೇ ಪಂದ್ಯದಲ್ಲಿ ಸೋಲುಂಡಿತು.

ವೆಸ್ಟ್ ಇಂಡೀಸ್ ನೀಡಿದ್ದ 215 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಆಸ್ಟ್ರೇಲಿಯಾ ತಂಡದ ಆರಂಭಿಕ ಬ್ಯಾಟ್ಸ್‌ಮನ್‌ಗಳಾದ ಮಿಚೆಲ್ ಮಾರ್ಷ್ (22) ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ (20) ಉತ್ತಮ ಆರಂಭ ಪಡೆದರೂ ಅದನ್ನು ದೊಡ್ಡ ಮೊತ್ತವನ್ನಾಗಿ ಪರಿವರ್ತಿಸುವಲ್ಲಿ ವಿಫಲರಾದರು. ಜಾಶ್ ಇಂಗ್ಲಿಸ್ (15) ಹಾಗೂ ಕ್ಯಾಮೆರಾನ್ ಗ್ರೀನ್ (11) ಅವರನ್ನು ರೊಮ್ಯಾರಿಯೊ ಶೆಫರ್ಡ್ ಔಟ್ ಮಾಡಿ ಆಸ್ಟ್ರೇಲಿಯಾಗೆ ಆರಂಭಿಕ ಆಘಾತ ನೀಡಿದರು.

ಸ್ಫೋಟಕ ಬ್ಯಾಟಿಂಗ್ ಮಾಡಿದ ಟಿಮ್ ಡೇವಿಡ್, ಕೇವಲ 37 ಎಸೆತಗಳಲ್ಲಿ ಬರೋಬ್ಬರಿ 11 ಸಿಕ್ಸರ್ ಹಾಗೂ 6 ಬೌಂಡರಿಗಳೊಂದಿಗೆ ಅಜೇಯ 102 ರನ್‌ಗಳನ್ನು ಸಿಡಿಸಿ, ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ವೇಗವಾಗಿ ಶತಕ ಸಿಡಿಸಿದ ಆಸ್ಟ್ರೇಲಿಯಾದ ಮೊದಲ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಮಿಚೆಲ್ ಒವೆನ್ ಕೇವಲ 16 ಎಸೆತಗಳಲ್ಲಿ 36 ರನ್ ಸಿಡಿಸಿದರು. ಈ ಇಬ್ಬರ ಸ್ಫೋಟಕ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡ ಕೇವಲ 16.1 ಓವರ್‌ಗಳಲ್ಲಿ 215 ರನ್ ಗಳಿಸಿ ಗೆಲುವಿನ ದಡ ಸೇರಿತು.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ ತಂಡ, ಶೇಯ್ ಹೋಪ್ (102) ಶತಕ ಹಾಗೂ ಬ್ರೆಂಡನ್ ಕಿಂಗ್ (62) ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳಿಗೆ 4 ವಿಕೆಟ್‌ಗಳ ನಷ್ಟಕ್ಕೆ 214 ರನ್‌ಗಳನ್ನು ಕಲೆ ಹಾಕಿತ್ತು. ವಿಂಡೀಸ್ ಪರ ಇನ್ನಿಂಗ್ಸ್ ಆರಂಭಿಸಿದ ಬ್ರೆಂಡನ್ ಕಿಂಗ್ ಹಾಗೂ ಶೇಯ್ ಹೋಪ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನವನ್ನು ಪ್ರದರ್ಶಿಸಿದ್ದರು. ಇಬ್ಬರೂ ಮೊದಲನೇ ವಿಕೆಟ್‌ಗೆ 125 ರನ್‌ಗಳನ್ನು ಕಲೆ ಹಾಕಿದ್ದರು. ಬ್ರೆಂಡನ್ ಕಿಂಗ್, ಕೇವಲ 36 ಎಸೆತಗಳಲ್ಲಿ 62 ರನ್ ಗಳಿಸಿದ್ದರು. ಶೇಯ್ ಹೋಪ್ ಆಸೀಸ್ ಬೌಲರ್‌ಗಳನ್ನು ದಂಡಿಸಿ, ಆಡಿದ 57 ಎಸೆತಗಳಲ್ಲಿ 6 ಸಿಕ್ಸರ್ ಹಾಗೂ 8 ಬೌಂಡರಿಗಳೊಂದಿಗೆ 102 ರನ್‌ಗಳನ್ನು ಬಾರಿಸಿ ತಮ್ಮ ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕವನ್ನು ಸಿಡಿಸಿ, ವೆಸ್ಟ್ ಇಂಡೀಸ್ ತಂಡದ ಮೊತ್ತ 200ರ ಗಡಿ ದಾಟಲು ನೆರವಾದರು.

ಯು.ಪಿ ವಾರಿಯರ್ಸ್: ಅಭಿಷೇಕ್ ಹೆಡ್‌ಕೋಚ್

ದೆಹಲಿ: ಐಪಿಎಲ್ ಮಾದರಿಯಲ್ಲೇ ಕಳೆದ ಮೂರು ವರ್ಷಗಳ ಹಿಂದೆ ಆರಂಭವಾದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಅಭಿಮಾನಿಗಳ ಭಾರಿ ಮೆಚ್ಚುಗೆಗೆ ಪಾತ್ರವಾಗಿದೆ. ಇನ್ನು ಎಲ್ಲಾ

ತಂಡಗಳು ಮುಂಬರುವ ಆವೃತ್ತಿಗೆ ಪೂರ್ವ ಸಿದ್ಧತೆ ನಡೆಸುತ್ತಿವೆ. ಇದೀಗ ಕಳೆದ ಮೂರೂ ಸೀಸನ್‌ಗಳಲ್ಲಿ ಉತ್ತಮ ಪ್ರದರ್ಶನ ತೋರಿದ್ದ ಯು.ಪಿ ವಾರಿಯರ್ಸ್ ತಂಡಕ್ಕೆ ಭಾರತ ತಂಡದ ಮಾಜಿ ಸಹಾಯಕ ಕೋಚ್ ಅಭಿಷೇಕ್ ನಾಯರ್ ನೂತನ ಹೆಡ್ ಕೋಚ್ ಆಗಿ ನೇಮಕವಾಗಿದ್ದು, ಕಳೆದ ಮೂರು ಸೀಸನ್‌ಗಳಲ್ಲಿ ಯು.ಪಿ ವಾರಿಯರ್ಸ್ ತಂಡವನ್ನು ಮುನ್ನಡೆಸಿದ ಜಾನ್ ಲೆವಿಸ್ ಅವರ ಸ್ಥಾನವನ್ನು ತುಂಬಲಿದ್ದಾರೆ.

ಬಾಲಿವುಡ್ ಅಂಗಳದಲ್ಲಿ ಶ್ರೀಲೀಲಾ

ಬಿಟೌನ್



ಸ್ಯಾಂಡಲ್‌ವುಡ್‌ನಲ್ಲಿ ಕಿಸ್ ಚಿತ್ರದ ಮೂಲಕ ಗಮನಸೆಳೆದ ನಟಿ ಶ್ರೀಲೀಲಾ ಈಗ ಬಹುಭಾಷಾ ನಟಿಯಾಗಿ ಪ್ರಸಿದ್ಧಿ ಪಡೆದಿದ್ದಾರೆ. ತೆಲುಗು, ತಮಿಳು ಸಿನಿಮಾಗಳಲ್ಲಿ ನಟಿಸಿ ಮನಗೆದ್ದಿರುವ ಶ್ರೀಲೀಲಾ ಈಗ ಬಾಲಿವುಡ್‌ನಲ್ಲಿ ಮೂಡಿಬರುತ್ತಿರುವ ಹೈಬಜೆಟ್ ಸಿನಿಮಾದಲ್ಲಿ ನಟಿಸುವ ಅವಕಾಶ ಪಡೆದಿದ್ದಾರೆ. ಹೌದು, ಬಾಲಿವುಡ್ ಸ್ಟಾರ್ ನಟ ರಣವೀರ್ ಸಿಂಗ್ ನಟಿಸಲಿರುವ ಹೊಸ ಸಿನಿಮಾದಲ್ಲಿ ಶ್ರೀಲೀಲಾ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ವಿಶೇಷ ಎಂದರೆ ಈ ಸಿನಿಮಾದಲ್ಲಿ ಬಾಬಿ ಡಿಯೋಲ್ ಕೂಡ ಅಭಿನಯಿಸಲಿದ್ದಾರೆ. ಹಾಗಾಗಿ ಈ ಸಿನಿಮಾ ಸೆಟ್ಟೇರುವ ಮುನ್ನವೇ ಸಾಕಷ್ಟು ಕುತೂಹಲ ಮೂಡಿಸಿದೆ. ಶ್ರೀಲೀಲಾ, ಗುಂಟುರು ಖಾರಂ ಚಿತ್ರದಲ್ಲಿ ನಾಯಕಿಯಾಗಿ ನಟಿಸಿ, ಹಾಡೊಂದರಲ್ಲಿ ಭರ್ಜರಿಯಾಗಿ ಹೆಜ್ಜೆ ಹಾಕಿದ್ದರು. ಅಲ್ಲದೆ. ಪುಷ್ಪ 2 ಚಿತ್ರದ ಹಾಡೊಂದರಲ್ಲಿ ಕಾಣಿಸಿಕೊಂಡು ಶ್ರೀಲೀಲಾ ಕಿಸ್ ಕಿಸ್ಸಿಕ್... ಅಂತ ಹಾಡಿ ಕುಣಿದಿದ್ದರು. ಈ ಚಿತ್ರ ಭರ್ಜರಿ ಯಶಸ್ಸು ತಂದುಕೊಟ್ಟಿತು. ಅಲ್ಲಿಂದ ಕಿಸ್ ಬೆಡಗಿಗೆ ಸಾಲು ಸಾಲು ಅವಕಾಶಗಳು ಅರಸಿ ಬರಲು ಆರಂಭವಾಯಿತು. ಈಗ ಕಿಸ್ ಬೆಡಗಿ ಬಿಟೌನ್‌ನಲ್ಲಿ ಮತ್ತೆ ಸದ್ದು ಮಾಡಲು ಸಿದ್ಧವಾಗಿದ್ದಾರೆ. ಶ್ರೀಲೀಲಾ ಅಭಿನಯಿಸುತ್ತಿರುವ ಹೊಸ ಚಿತ್ರಲ್ಲಿ ಆ್ಯಕ್ಷನ್ ಜತೆಗೆ ಲವ್ ಸ್ಟೋರಿಯೂ ಬೆರೆತಿದ್ದು, ಬಾಬಿ ಡಿಯೋಲ್ ಇಲ್ಲಿಯೂ ಖಳನಾಗಿ ಅಬ್ಬರಿಸಲಿದ್ದಾರೆ. ಸದ್ಯ ದುರುಂಧರ ಚಿತ್ರದಲ್ಲಿ ಬ್ಯುಸಿಯಾಗಿರುವ ರಣವೀರ್ ಸಿಂಗ್ ಈ ಸಿನಿಮಾದ ಚಿತ್ರೀಕರಣ ಮುಗಿಸಿ ಹೊಸ ಚಿತ್ರತಂಡ ಸೇರಲಿದ್ದಾರೆ. ಶೀಘ್ರವೇ ಚಿತ್ರದ ಟೈಟಲ್ ಕೂಡ ಬಿಡುಗಡೆಯಾಗಲಿದೆ.

ಬ್ಯಾಟ್‌ಗೆ ಮಾಧುರ್ಯ ತುಂಬಿದ ಲಹರಿ

ನಿರ್ದೇಶಕ ಶಶಾಂಕ್ ಹಾಗೂ ಡಾರ್ಲಿಂಗ್ ಕೃಷ್ಣ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಬ್ಯಾಟ್ ಟೈಟಲ್‌ನಿಂದಲೇ ಗಮನಸೆಳೆದಿದೆ. ನವಿರಾದ ಪ್ರೇಮ ಕಥೆಯ ಈ ಚಿತ್ರದಲ್ಲಿ ಹಾಡುಗಳು ಮಧುರವಾಗಿ ಮೂಡಿಬಂದಿದ್ದು ಗಮನಸೆಳೆಯುತ್ತಿವೆ. ಈಗ ಬ್ಯಾಟ್ ಚಿತ್ರದ ನಾನೇ.. ನೀನಂತೆ.. ಹಾಡು ಬಿಡುಗಡೆಯಾಗಿದ್ದು ಸಂಗೀತ ಪ್ರಿಯರ ಮನಗೆದ್ದಿದೆ. ಭಗ್ನ ಪ್ರೇಮಿಯ ಭಾವನೆಗಳನ್ನು ವಿವರಿಸುವ ಗೀತೆ ಇದಾಗಿದ್ದು, ಕೇಳಲು ಇಂಪಾಗಿ ಬಂದಿದೆ. ಈ ಗೀತೆಗೆ ನಿರ್ದೇಶಕ ಶಶಾಂತ್ ಅವರೇ ಸಾಹಿತ್ಯ ರಚಿಸಿದ್ದು, ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದಾರೆ. ಖ್ಯಾತ ಗಾಯಕ ಸಿದ್ ಶ್ರೀರಾಮ್ ಹಾಡಿಗೆ ದನಿಯಾಗಿದ್ದಾರೆ. ವಿಶೇಷ ಎಂದರೆ ಈ ಗೀತೆಗೆ ಗಾಯಕಿ ಲಹರಿ ಕೂಡ ಮಾಧುರ್ಯ ತುಂಬಿದ್ದಾರೆ. ಮೊದಲು ಈ ಗೀತೆಯನ್ನು ಶ್ರೇಯಾ ಘೋಷಲ್ ಅವರಿಂದ ಹಾಡಿಸಲು ನಿರ್ದೇಶಕರು ಯೋಚಿಸಿದ್ದರು. ಆದರೆ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ಸಲಹೆಯಂತೆ ಗಾಯಕಿ ಲಹರಿ ಮಹೇಶ್ ಅವರಿಂದ ಹಾಡಿಸಿದ್ದಾರೆ. ಲಹರಿ ತಮಗೆ ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಂಡಿದ್ದು ನಾನೇ.. ನೀನಂತೆ.. ಹಾಡಿಗೆ ಮಾಧುರ್ಯ ತುಂಬಿ ಹಾಡಿದ್ದಾರೆ. ಲಹರಿ ದನಿಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದು, ಕನ್ನಡಕ್ಕೆ ಮತ್ತೊಬ್ಬ ಶ್ರೇಯಾ ಘೋಷಲ್ ಸಿಕ್ಕಳು ಎಂದು ಸೋಷಿಯಲ್ ಮೀಡಿಯಾದಲ್ಲಿ ಸಂತಸ ಹಂಚಿಕೊಂಡಿದ್ದಾರೆ. ಈ ಹಾಡು ಕನ್ನಡ ಮಾತ್ರವಲ್ಲ ಹಲವು ಭಾಷೆಗಳಲ್ಲಿ ಮೂಡಿಬರುತ್ತಿದೆ. ಕನ್ನಡದ ಸರಿಗಮಪ ರಿಯಾಲಿಟಿ ಶೋನಲ್ಲಿ ಸ್ಪರ್ಧಿಯಾಗಿದ್ದ ಲಹರಿ ತಮ್ಮ ಕಂಠಸಿರಿಯ ಮೂಲಕ ಎಲ್ಲರನ್ನೂ ರಂಜಿಸಿದ್ದರು. ಈಗ ತಮ್ಮ ಪ್ರತಿಭೆಯ ಮೂಲಕವೇ ಚಿತ್ರರಂಗದಲ್ಲಿ ಗಾಯಕಿಯಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಬ್ಯಾಟ್ ಚಿತ್ರದಲ್ಲಿ ಮನೀಷಾ ನಾಯಕಿಯಾಗಿ ನಟಿಸಿದ್ದಾರೆ. ಹೈಬಜೆಟ್‌ನಲ್ಲಿ ನಿರ್ಮಾಣವಾಗಿರುವ ಚಿತ್ರ ಇದಾಗಿದ್ದು, ಈಗಾಗಲೇ ಚಿತ್ರೀಕಣವನ್ನು ಮುಗಿಸಿದ್ದು ತೆರೆಗೆ ಬರಲು ಸಿದ್ಧವಾಗಿದೆ.

ಕಮರೊ 2 ಇದು ಶ್..! ದೆವ್ವದ ಕಥೆ



ಪ್ರಶಾಂತ್.ಟಿ.ಆರ್

ಈ ಹಿಂದೆ ಕಮರೊಟ್ಟು ಚೆಕ್ ಪೋಸ್ಟ್ ಚಿತ್ರ ತೆರೆಗೆ ಬಂದು ಯಶಸ್ವಿಯಾಗಿತ್ತು, ಈ ಚಿತ್ರವನ್ನು ನಿರ್ದೇಶಿಸಿದ್ದ ಪರಮೇಶ್ ಈಗ ಅದರ ಸೀಕ್ವೆಲ್ ಆಧರಿಸಿ ಕಮರೊ 2 ಚಿತ್ರವವನ್ನು ತೆರೆಗೆ ತರುತ್ತಿದ್ದಾರೆ. ಇಲ್ಲಿಯೂ ಮೈ ಜುಂ ಎನ್ನಿಸುವ ಹಾರರ್ ಸ್ಟೋರಿ ಇದೆ. ಇದು ಕನ್ನಡದ ಪ್ಯಾರಾನಾರ್ಮಲ್ ಚಿತ್ರ ಎಂಬುದು ವಿಶೇಷವಾಗಿದ್ದು, ತಮ್ಮ ಸಿನಿಮಾದ ಕುರಿ ತಂತೆ ನಿರ್ದೇಶಕ ಪರಮೇಶ್, ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

> ಕಮರೊಟ್ಟು ಚೆಕ್ ಪೋಸ್ಟ್ ಚಿತ್ರಕ್ಕೆ ಸೆನ್ಸಾರ್ ಮಂಡಳಿ ಎ ಪ್ರಮಾಣ ಪತ್ರ ನೀಡಿತ್ತು. ಹಾಗಾಗಿ ಕೆಲವರು ಸಿನಿಮಾ ಕಣ್ತುಂಬಿಕೊಳ್ಳಲು ಸಾಧ್ಯ ವಾಗಲಿಲ್ಲ. ಕಮರೊ2 ಚಿತ್ರಕ್ಕೆ ಯು/ಎ ಪ್ರಮಾಣ ಪತ್ರ ಸಿಕಿದ್ದು, ಎಲ್ಲರೂ ಒಟ್ಟಿಗೆ ಕುಳಿತು ಸಿನಿಮಾ ನೋಡಬಹುದಾಗಿದೆ.

- **ವಿ.ಸಿ : ಇದು ಕಮರೊಟ್ಟು ಚೆಕ್ ಪೋಸ್ಟ್‌ನ ಮುಂದುವರಿದ ಭಾಗವೇ ?**

ಪರಮೇಶ್: ಹೌದು, ಕಮರೊಟ್ಟು ಚೆಕ್ ಪೋಸ್ಟ್ ಸೀಕ್ವೆಲ್ ಆಧರಿಸಿ ಈ ಸಿನಿಮಾ ಮೂಡಿಬಂದಿದ್ದು, ಇಲ್ಲಿ ದೊಡ್ಡ ತಾರಾಬಳಗವಿದೆ. ಈ ಹಿಂದಿನ ಪಾತ್ರಗಳು ಕಥೆಯಲ್ಲಿ ಪ್ರಸ್ತಾಪವಾಗುತ್ತವೆ. ಆದರೆ ಹೊಸ ಪಾತ್ರಗಳು ತೆರೆಯಲ್ಲಿ ಸಾಗುತ್ತವೆ. ಇದು ಕನ್ನಡ ಸಂಪೂರ್ಣ ಪ್ಯಾರಾನಾರ್ಮಲ್ ಸಿನಿಮಾವಾಗಿದ್ದು ತೆರೆಯಲ್ಲಿ ಅದ್ಭುತವಾಗಿ ಕಥೆಯನ್ನು ನಿರೂಪಿಸುವ ಪ್ರಯತ್ನ ಮಾಡಿದ್ದೇನೆ.

- **ವಿ.ಸಿ : ಇದರಲ್ಲಿ ಮೊದಲ ಭಾಗಕ್ಕಿಂತ ಹೊಸತನ ಕಾಣಬಹುದೆ?**

ಪರಮೇಶ್: ಖಂಡಿತವಾಗಿಯೂ ಕಾಣಬಹುದು. ಕಮರೊಟ್ಟಿನಲ್ಲಿ ಹಲವು ಘಟನೆಗಳು ನಡೆಯುತ್ತವೆ. ಅದರಲ್ಲಿ ಇದೂ ಒಂದು ಸ್ಟೋರಿ. ಅದರಲ್ಲಿಯೂ ವಿಶೇಷವಾಗಿ ನಾವೆಲ್ಲರೂ ಈ ಹಿಂದೆ ನೋಡಿದ ಶ್.! ಚಿತ್ರದ ದೆವ್ವದ ಕಥೆ ಇಲ್ಲಿ ಮುಂದುವರಿಯಲಿದೆ. ಅದರ ಹಿನ್ನೆಲೆ ಏನು, ಅದು ಕಮರೊಟ್ಟಿನಲ್ಲಿ ಯಾಕೆ ಕಾಡುತ್ತಿದೆ. ಹೀಗೆ ಹಲವು ಕುತೂಹಲಗಳನ್ನು ಮೂಡಿಸುತ್ತಾ, ಸಸ್ಪೆನ್ಸ್, ಥ್ರಿಲ್ಲರ್, ಹಾರರ್ ಜಾನರ್‌ನಲ್ಲಿ ಸಿನಿಮಾ ಸಾಗುತ್ತದೆ. ಮುಂದೆ ಕಥೆ ಹೀಗೆ ಬದಲಾಗಬಹುದು ಎಂದು ಅಂದುಕೊಳ್ಳುತ್ತಿರುವಾಗಲೇ ಹೊಸ ಟ್ವಿಸ್ಟ್ ತೆರೆದುಕೊಳ್ಳುತ್ತದೆ. ಯಾರ ಊಹೆಗೂ ನಿಲುಕದಂತೆ ಸಿನಿಮಾ ಸಾಗುತ್ತದೆ.

> ಉಡುಪಿ ಸಮೀಪದ ಕಾಪುವಿನಲ್ಲಿ ಆರು ನೂರು ವರ್ಷಗಳ ಹಿಂದಿನ ಬಂಗಲೆಯಿದೆ. ಅಲ್ಲಿಯೇ ಸಂಪೂರ್ಣ ಚಿತ್ರೀಕರಣ ನಡೆಸಿದ್ದೇವೆ. ಕಾಂತಾರ ಚಿತ್ರದ ಧಣಿಗಳ ಮನೆಯೂ ಇದೇ ಆಗಿದೆ. ಆ ಮನೆಯ ಸುತ್ತಲೇ ಚಿತ್ರ ಸಾಗುವುದರಿಂದ ಈ ಮನೆಯೂ ಕೂಡ ಇಲ್ಲಿ ಪ್ರಮುಖವಾದುದಾಗಿದೆ.



- **ವಿ.ಸಿ : ಮತ್ತೆ ಹಾರರ್ ಸ್ಟೋರಿಯನ್ನೇ ಆಯ್ದುಕೊಳ್ಳಲು ಕಾರಣ?**

ಪರಮೇಶ್: ನನ್ನನ್ನು ನಾನು ಟೆಕ್ನಿಕಲಿ ಸಾಬೀತುಪಡಿಸಿಕೊಳ್ಳುವ ಸವಾಲಿತ್ತು. ಅದಕ್ಕಾಗಿಯೇ ಮತ್ತೆ ಹಾರರ್ ಸ್ಟೋರಿಯನ್ನೇ ಆಯ್ದುಕೊಂಡೆ. ಪ್ಯಾರಾನಾರ್ಮಲ್‌ನಲ್ಲಿ ಒಂದು ಸ್ಟೋರಿಯನ್ನು ತೆರೆಯಲ್ಲಿ ನಿರೂಪಿಸುವುದು ಅಷ್ಟು ಸುಲಭವಲ್ಲ. ಅದನ್ನು ತಾಂತ್ರಿಕವಾಗಿ ಎಲ್ಲರಿಗೂ ಮೆಚ್ಚುವಂತೆ ಕಟ್ಟಿಕೊಡಬೇಕು. ಅಂತೆಯೇ ಟೆಕ್ನಿಕಲಿ ಚಿತ್ರ ಅದ್ಭುತವಾಗಿ ಮೂಡಿಬಂದಿದೆ.



- **ವಿ.ಸಿ : ಚಿತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ಅವರ ಪಾತ್ರ ?**

ಪರಮೇಶ್: ಕಮರೊಟ್ಟು ಚೆಕ್ ಪೋಸ್ಟ್ ಸಿನಿಮಾದಲ್ಲಿ ರಿಯಲ್ ಘೋಸ್ಟ್ ಹಂಟರ್ ನಟಿಸಿದ್ದರು. ಈ ಭಾಗದಲ್ಲಿ ಪ್ರಿಯಾಂಕಾ ಅವರು ಘೋಸ್ಟ್ ಹಂಟರ್ ಆಗಿ ಕಾಣಿಸಿಕೊಂಡಿದ್ದಾರೆ. ಈ ಹಿಂದಿನ ಹಾರರ್ ಸಿನಿಮಾಗಳಲ್ಲಿ ಹೆದರುವ ಪಾತ್ರದಲ್ಲಿ ಅಭಿನಯಿಸಿದ್ದ ಪ್ರಿಯಾಂಕಾ ಅವರು ಇಲ್ಲಿ ದೆವ್ವಗಳನ್ನು ಹೆದರಿಸುವ ಪಾತ್ರದಲ್ಲಿ ಅದ್ಭುತವಾಗಿ ನಟಿಸಿದ್ದಾರೆ. ಸ್ವಾಮಿನಾಥನ್ ಅನಂತ ರಾಮನ್, ರಜನಿ ಭಾರದ್ವಜ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ರಾಘವೇಂದ್ರ ರಾಜ್‌ಕುಮಾರ್ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ವಿಶ್ವವಾಣಿ
27.07.2025
ಭಾನುವಾರ

ಅಂತರ್ಜಾಲ ಬಳಕೆ ವಿಧಾನದಲ್ಲಿ ಭಾರೀ ಬದಲಾವಣೆ!

ಇಂದು ಗೂಗಲ್ ಮಯ ನಾಳೆ ಗೂಗಲ್ ಮಾಯ?

» ವಿಕ್ರಮ ಜೋಶಿ, ಮುಂಬಯಿ

ಈ ಶತಮಾನದ ಮೊದಲ ಎರಡು ದಶಕಗಳಲ್ಲಿ ಕಂಡ ಡಾಟ್ ಕಾಮ್ ಬೂಮ್‌ನಿಂದಾಗಿ ಆಗಸದೆತ್ತರಕ್ಕೆ ಬೆಳೆದಿದ್ದ ಗೂಗಲ್ ಬಲೂನಿಗೆ, ಈಗ ಎಐ ಬೂಮ್‌ನ ಸೂಜಿ ಚುಚ್ಚಿದೆ. ಚಾಟ್‌ಜಿಪಿಟಿಯ ಉದಯವಾದಾಗಿನಿಂದ ಗೂಗಲ್ ಸರ್ಚ್ ಇಂಜಿನ್ನಿನ ಅಸ್ತವು ಶುರುವಾಗಿದೆ. ಇಂದು ಗೂಗಲ್ ಸರ್ಚ್ ಬಳಸದೆಯೂ ಜಗತ್ತು ಉಸಿರಾಡಬಲ್ಲದು! ಅದರ ಜಾಗದಲ್ಲಿ ಎಐ ಬಂದು ಕೂತಿದೆ. ಆದರೆ, ಸಾಮಾನ್ಯವಾಗಿ ಹೆಚ್ಚಿನ ಜೆನ್-ಎಐ ಆ್ಯಪ್‌ಗಳ ಬಳಕೆಗೆ ಚಂದಾದಾರರಾಗಬೇಕು. ಈಗ ಉಚಿತ ವಾಗಿ ಕಂಡರೂ ಮುಂದೆ ಅವರು ಅದಕ್ಕೆ ಚಾರ್ಜ್ ಮಾಡದೇ ಇರುವುದಿಲ್ಲ. ಒಂದು ವೇಳೆ ಫ್ರೀ ಇದ್ದರೂ ಅದರಲ್ಲಿ ಜಾಹೀರಾತುಗಳು ಬರದೇ ಇರದು. ಮನುಷ್ಯನ ಮಿದುಳು ತುಂಬಾ ಸೋಮಾರಿ. ಅದಕ್ಕೆ ಏನಾದರೂ ಸುಲಭವಾಗಿ ಸಿಕ್ಕರೆ ಬೇಗ ಅಂಟಿಕೊಂಡು ಬಿಡುತ್ತದೆ. ಇಂದು ಗೂಗಲ್ ಹೇಗೆ ನಮಗೆ ಅಭ್ಯಾಸ ಆಗಿದೆಯೋ ಹಾಗೆಯೇ ಎಐ ಕೂಡ ನಮ್ಮ ಜೀವನದ ಭಾಗವಾಗುವ ದಿನವು ಹೆಚ್ಚು ಅಂತರದಲ್ಲಿಲ್ಲ. 'ಗೂಗಲ್ ಮಾಡು' ಎನ್ನುವುದು ಮರೆಯಾಗಿ 'ಎಐ ಅನ್ನು ಕೇಳು' ಎನ್ನುವ ದಿನಗಳು ನಮ್ಮನ್ನು ಕಾಯುತ್ತಿವೆ!

ಕ್ಯಾಮೆರಾ ರೀಲ್ ಎನ್ನುವುದು ಮರೆತೇ ಹೋಗಿತ್ತು, ಮೊನ್ನೆ ಇನ್ಸ್ಟಾದಲ್ಲಿ ರೀಲ್‌ನ್ನು ಕಂಡಾಗ ಆಗಿದ್ದು ಮತ್ತದರ ನೆನಪು. ನಾನು ಕಲಿಯುವಾಗ ಇದ್ದ ವಸತಿನಿಲಯಕ್ಕೆ ಹೋದಾಗ ಅದರ ಪಕ್ಕದಲ್ಲಿರುವ ಎಸ್‌ಟಿಡಿ ಬೂತು ಮೊಬೈಲ್ ಅಂಗಡಿಯಾಗಿದ್ದನ್ನು ಕಂಡೆ. ಏನೋ ಹುಡುಕಾಟದಲ್ಲಿದ್ದಾಗ, ಹತ್ತು ವರ್ಷಗಳಿಂದ ನಿಷ್ಕ್ರಿಯವಾಗಿ ಬಿದ್ದಿರುವ ನೋಕಿಯಾ ಮೊಬೈಲ್ ಕಣ್ಣಿಗೆ ಬಿದ್ದಿತ್ತು. ಒಂದು ಕಾಲವಿತ್ತು; ಅಂದು ಹೋಂಡಾ ಎಕ್ಟಿವಾಕ್ಕೂ ಸ್ಕೂಟಿ ಎನ್ನುತ್ತಿದ್ದರು, ಇಂದು ಟಿವಿಎಸ್ ಕಂಪನಿಯ ಜ್ಯುಪಿಟರ್ ಗಾಡಿಗೂ ಹೋಂಡಾ ಎಕ್ಟಿವಾ ಎನ್ನುತ್ತಾರೆ. ಕ್ಯಾಸೆಟ್, ಟೇಪ್, ರೆಕಾರ್ಡಿಂಗ್ ಎಲ್ಲವೂ ಒಂದು ವಿಸ್ಮಯವಾಗಿಯೇ ಕಂಡ ದಿನಗಳಿದ್ದವು, ಈಗ ತಿರುಗಿ ನೋಡಿದರೆ ಅದು ಶಿಲಾಯುಗದ ತಂತ್ರಜ್ಞಾನವೋ ಎಂಬ ಭಾಸವಾಗುತ್ತದೆ. ಸೀಮೆಎಣ್ಣೆಯ ಸ್ಟೋವ್‌ಗಳು ಇಂದು ಹುಡುಕಿದರೂ ಸಿಗವು.

ಶಾಯಿ ಪೆನ್ನು, ಅಕ್ಷರದಚ್ಚಿನ ಮುದ್ರಣ ಇವೆಲ್ಲವೂ ನಿಂತರೆ ಮನುಕುಲವು ಮುನ್ನಡೆಯುವುದೇ ಎಂಬ ಪ್ರಶ್ನೆಗಳು ಬಂದ ದಿನಗಳನ್ನು ನಾವು ಕಂಡಿದ್ದೇವೆ. ಟೆಲಿಗ್ರಾಫ್ ಲೈನ್‌ಗಳು ಇಲ್ಲವಾದರೆ, ಟೆಲಿಗ್ರಾಂ ಬಂದಾದರೆ ಜಗತ್ತಿಗೆ ಸುದ್ದಿ ಮುಟ್ಟಿಸುವರಾರು ಎನ್ನುವ ಚಿಂತೆ ಒಂದು ಕಾಲದಲ್ಲಿ ಕಾಡುತ್ತಿತ್ತು. ಬ್ಯಾಂಕಿಗೆ ಹೋಗಿ ನಗದು ತರದಿದ್ದರೆ, ಎಟಿಎಮ್‌ಗೆ ಹೋಗದೆ ಇದ್ದರೆ ಕಾಸಿನ ವ್ಯವಹಾರ ನಡೆದೀತೆ ಎಂದುಕೊಂಡಿದ್ದೆವು. ಕಚೇರಿಗಳಲ್ಲಿ ಟಕ ಟಕ ಶಬ್ದವನ್ನು ಮಾಡುತ್ತಿದ್ದ ಟೈಪ್ ರೈಟರ್‌ಗಳನ್ನು ಮಕ್ಕಳಿಗೆ ತೋರಿಸಬೇಕೆಂದರೆ ವಸ್ತು ಸಂಗ್ರಹಾಲಯಕ್ಕೇ ಹೋಗಬೇಕು. ಕೀ ಬೋರ್ಡ್‌ಗಳು ಕಾಣೆಯಾಗುವ ದಿನವಿನ್ನು ದೂರವಿಲ್ಲ. ಅಂದು ಜಗತ್ತನ್ನೇ ಬೆಳಗಿದ ಟಂಗಸ್ಟನ್ ಬಲ್ಬುಗಳನ್ನು ತಯಾರಿಸುವ ಕಂಪನಿಗಳು ಇಂದು ಕತ್ತಲೆಯಲ್ಲಿವೆ. ಹೀಗಿರುವಾಗ ಜಗತ್ತಿನಲ್ಲಿ ಯಾವ ತಂತ್ರಜ್ಞಾನ ತಾನೇ ಶಾಶ್ವತ?

ಗೂಗಲ್‌ಮಯ

ಇವತ್ತು ಏನಾದರೂ ವಿಷಯವನ್ನು ತಿಳಿದುಕೊಳ್ಳಬೇಕು ಅಂದರೆ ನಮಗೆ ಇರುವ ಮಾರ್ಗದರ್ಶಕ ರಾರು ಹೇಳಿ? ಗೂಗಲ್. ಕಳೆದೆರಡು ದಶಕಗಳಿಂದ ಜಗತ್ತು ಗೂಗಲ್‌ಮಯವಾಗಿದೆ. ನಮಗೆ ಇತಿಹಾಸ, ಪುರಾಣ, ಆದಿ, ಭೂತ, ಭವಿಷ್ಯ, ರಾಜಕೀಯ, ಸಾಮಾಜಿಕ, ಆರ್ಥಿಕ, ಭಾಷೆ, ವೇಷ, ಸಂಗೀತ, ದೇವರು, ದೆವ್ವ, ವೈದ್ಯರು, ರೋಗ, ಕಾಮ, ಆಹಾರ, ವಿಹಾರ, ಪ್ರವಾಸ, ವಿಜ್ಞಾನ, ತಂತ್ರಜ್ಞಾನ ಹೀಗೆ ಯಾವುದೇ ವಿಷಯದ ಕುರಿತು ಮಾಹಿತಿಗಳು ಬೇಕಾದರೂ, ಒಂದೇ ಕಡೆ ಸಿಗುತ್ತಿದೆ: ಅದು ಗೂಗಲ್. ಇದೇ ಶಾಶ್ವತ ಎಂದುಕೊಂಡಿದ್ದರೆ, ಅದೂ ಇಂದು ಮಾಯವಾಗುತ್ತಿದೆಯಲ್ಲ!

ನಮಗೆಲ್ಲ ಗೂಗಲ್ ಪರಿಚಯವಾಗಿದ್ದು ಈ ಶತಮಾನದ ಮೊದಲೆರಡು ದಶಕಗಳಲ್ಲಿ. 1998ರಲ್ಲಿ ಶುರುವಾದ ಈ ಸರ್ಚ್ ಇಂಜಿನ್ ಜಗತ್ತಿನ ಮೂಲೆಮೂಲೆಗಳನ್ನು ತಲುಪಲು ಒಂದು ದಶಕವೇ ಬೇಕಾಯಿತು. ಅದರ ನಂತರ ಅದನ್ನು ತಡೆದವರೇ ಇಲ್ಲ. ನೋಡು ನೋಡುತ್ತಿದ್ದಂತೆ ಹುಡುಕು ಎನ್ನುವ ಪದಕ್ಕೆ 'ಗೂಗಲ್ ಮಾಡು' ಎನ್ನುವುದು ಪರ್ಯಾಯ ಪದವಾಗಿಬಿಟ್ಟಿತು. ಯಾವಾಗ ಗೂಗಲ್ ಎನ್ನುವ ನಾಮಪದವು ಕ್ರಿಯಾಪದವಾಯಿತೋ ತಿಳಿಯಲೇ ಇಲ್ಲ. ಗೂಗಲ್ ಶುರುವಾದಾಗ ಅದರ ಮೌಲ್ಯ ಶೂನ್ಯ, ಸನ್ ಮೈಕ್ರೋ ಸಿಸ್ಟಮ್ ನ ಸಹ-ಸಂಸ್ಥಾಪಕ 100,00 ಡಾಲರ್ ಹೂಡಿಕೆ ಮಾಡಿ ಅದನ್ನು ಉಳಿಸಿದ್ದ. ಈಗ ಆ ಕಂಪನಿಯ ಮೌಲ್ಯ 2,200,000,000,000 ಡಾಲರ್‌ಗಳು. ಇಂದಿಗೂ ಜಗತ್ತಿನ ಅತ್ಯಂತ ಜನಪ್ರಿಯ ಸರ್ಚ್ ಇಂಜಿನ್ ಗೂಗಲ್. ಕಾಲ ಕಾಲಕ್ಕೆ ಎಷ್ಟೇ ಪ್ರಬಲ ಎದುರಾಳಿಗಳು ಹುಟ್ಟಿ ಬಂದರೂ ಸರ್ಚಿಂಗ್ ಕ್ಷೇತ್ರದಲ್ಲಿ ಇವರದ್ದೇ ಮೇಲುಗೈ – ಆ ಮಾರುಕಟ್ಟೆಯಲ್ಲಿ 91% ಭಾಗ ಇವರದ್ದು. ನಮ್ಮ ಜಗತ್ತಿನ ಜನಸಂಖ್ಯೆ ಸುಮಾರು ಏಳು ನೂರು ಕೋಟಿ, ಆದರೆ ಗೂಗಲ್ ಪ್ರತಿದಿನವೂ ಒಂಬೈನೂರು ಕೋಟಿ ಸರ್ಚ್‌ಗಳನ್ನು ನಿರ್ವಹಿಸುತ್ತದೆ. ಗೂಗಲ್ ಎನ್ನುವುದು ಈಗ ಕೇವಲ ಸರ್ಚ್ ಇಂಜಿನ್ ಅಷ್ಟೇ ಅಲ್ಲ – ಅವರದ್ದು ಆಪರೇಟಿಂಗ್ ಸಿಸ್ಟಮ್, ಮ್ಯಾಪ್, ಇ-ಮೇಲ್, ಮೀಟ್, ಕ್ಲೌಡ್, ವಿಡಿಯೊಇ ಸ್ಟ್ರೀಮಿಂಗ್, ಬ್ರೌಸರ್ ಹೀಗೆ ಹತ್ತಾರು ಉತ್ಪನ್ನಗಳಿವೆ.

ಗೂಗಲ್ ಎನ್ನುವುದು ಅಲ್ಫಾಬೆಟ್ ಎಂಬ ಸಾಗರಕ್ಕೆ ಸೇರುವ ಮಹಾನದಿ! ಜಗತ್ತಿನಲ್ಲಿ ಬಳಕೆಯಾಗುವ 70% ಮೊಬೈಲ್‌ಗಳಲ್ಲಿ ಗೂಗಲ್ ಕಂಪನಿಯ ಆಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಮ್‌ನ್ನು ಅಳವಡಿಸಲಾಗಿದೆ. ಜಗತ್ತಿನ 65% ಜನರು ಬಳಸುವ ವೆಬ್ ಬ್ರೌಸರ್ ಗೂಗಲ್ ಕಂಪನಿಯ ಇನ್ನೊಂದು ಉತ್ಪನ್ನವಾದ ಕ್ರೋಮ್. ಜಗತ್ತಿನ ಇನ್ನೂರು ಕೋಟಿ ಜನರ ಇಮೇಲ್ ಖಾತೆಯು ಗೂಗಲ್ ಕಂಪನಿಯ ಜಿಮೇಲ್‌ಗೆ ಸೇರಿದ್ದು. ಗೂಗಲ್ಲಿನ ಯೂಟ್ಯೂಬ್ ಇಲ್ಲದೆ ಇಂದು ಜಗತ್ತು ಉಸಿರಾಡಬಲ್ಲದೆ? ಹೆಜ್ಜೆ ಹೆಜ್ಜೆಗೂ, ಮೈಲಿ ಮೈಲಿಗೂ ದಾರಿತೋರಿಸುವ ಗೂಗಲ್ ಮ್ಯಾಪ್‌ನ್ನು ಮರೆತರೆ ಹೇಗೆ? ಸಂಕ್ಷಿಪ್ತವಾಗಿ ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ ಇಂದೇನಾದರೂ ಗೂಗಲ್ ಕಂಪನಿಯು ಮುಚ್ಚಿದರೆ ಭುವಿಯು ತಿರುಗುವುದನ್ನೇ ನಿಲ್ಲಿಸಬಹುದು?

ನಿಧಾನವಾಗಿ ಮರೆಯಾಗುತ್ತಿದೆ!

ಆದರೆ ಇದು ನಮ್ಮ ಭ್ರಮೆ. ವಾಸ್ತವದಲ್ಲಿ ಗೂಗಲ್ ನಿಧಾನವಾಗಿ ಮಾಯವಾಗುತ್ತಿದೆ! ಡಾಟ್ ಕಾಮ್ ಬೂಮ್‌ನಿಂದಾಗಿ ಆಗಸದೆತ್ತರಕ್ಕೆ ಬೆಳೆದಿದ್ದ ಗೂಗಲ್ ಬಲೂನಿಗೆ, ಈಗ ಎಐ ಬೂಮ್‌ನ ಸೂಜಿ ಚುಚ್ಚಿದೆ. ಕಾಲ ಬದಲಾದಂತೆ ಶುಕ್ರದೆಸೆಯೂ ಸರಿಯುತ್ತದೆಯಲ್ಲ ಹಾಗೇಯೇ ಇದು. ಚಾಟ್ ಜಿಪಿಟಿಯ ಉದಯವಾದಾಗಿನಿಂದ ಗೂಗಲ್ ಸರ್ಚ್ ಇಂಜಿನ್ನಿನ ಅಸ್ತವು ಶುರುವಾಗಿದೆ. ಇಂದು ಗೂಗಲ್ ಸರ್ಚ್ ಬಳಸದೆಯೂ ಜಗತ್ತು ಉಸಿರಾಡಬಲ್ಲದು! ಈ ಲೇಖನಕ್ಕೆ ಗೂಗಲ್ ಕೊಡುಗೆ ಶೂನ್ಯ! ಗೂಗಲ್'ಮಯ'ವಾಗಿದ್ದ ಜಗತ್ತಿನಲ್ಲಿ ಗೂಗಲ್'ಮಾಯ'ವಾಗುತ್ತಿದೆ ಎಂಬುದನ್ನು ನಂಬಲಾಗದೇ ಹೋದರೂ ಕೂಡ ಅದು ಸತ್ಯ ಸಂಗತಿ.

ಇವತ್ತಿನ 'ವರ್ಕ್ ವಿದ್ ಜೀರೊ ಕ್ಲಿಕ್' ಕಾಲದಲ್ಲಿ ಒಂದೂ ಕ್ಲಿಕ್ ಮಾಡದೆ ಸಂಪೂರ್ಣ ಮಾಹಿತಿಗಳನ್ನು ಪಡೆಯಬಲ್ಲ ತಂತ್ರಜ್ಞಾನಗಳು ಲಭ್ಯವಿವೆ. ಇದನ್ನು ಅರಿಯಲು ಗೂಗಲ್ ಬಳಕೆಯ ಪಯಣವನ್ನು ಒಮ್ಮೆ ಗಮನಿಸಬೇಕು. ನಮಗೆ ಯಾವುದೇ ಒಂದು ವಿಷಯದ ಕುರಿತು ಮಾಹಿತಿಯು ಬೇಕು ಅಂದರೆ ಮೊದಲು ಕ್ರೋಮ್ ಬ್ರೌಸರ್ ಓಪನ್ ಮಾಡಬೇಕು; ಗೂಗಲ್‌ನಲ್ಲಿ ಹೋಗಿ ಕೀ ವರ್ಡ್ ಟಂಕಿಸಬೇಕು; ಅದಕ್ಕೆ ಹತ್ತಾರು ಪುಟಗಳಲ್ಲಿ ನೂರಾರು ಪ್ರತಿಕ್ರಿಯೆಗಳು ಕಾಣುತ್ತವೆ; ಅದರಲ್ಲೊಂದನ್ನು ಕ್ಲಿಕ್ ಮಾಡಬೇಕು; ನಂತರ ಅದರೊಳಗೆ ಹೋಗಿ, ಓದಿ ಮತ್ತೆ ಆಳಕ್ಕೆ ಹೋಗಲು ಇನ್ನೊಂದು ಕ್ಲಿಕ್; ಹೀಗೆ ಮತ್ತೊಂದು, ಇನ್ನೊಂದು, ಮಗದೊಂದು ಎನ್ನುತ್ತಾ ಹತ್ತಾರು ಕ್ಲಿಕ್‌ಗಳ ನಂತರ ನಮಗೆ ಬೇಕಾದ ಮಾಹಿತಿಗಳು ಸಿಗುತ್ತವೆ. ಅವನ್ನೆಲ್ಲ ಒಂದು ಕಡೆ ಕಲೆಹಾಕಿ ನಾವೇ ಟಿಪ್ಪಣಿಯನ್ನು ತಯಾರಿಸಬೇಕು. ಎಷ್ಟು ಕಷ್ಟ ಅಲ್ಲವೇ?

ಒಂದು ಕಾಲದಲ್ಲಿ ಇದೇ ಚಮತ್ಕಾರವಾಗಿತ್ತು. ಇಷ್ಟು ಸುಲಭವಾಗಿ ಮಾಹಿತಿಗಳನ್ನು ಕಲೆಹಾಕಬಹುದು ಎಂಬುದನ್ನು ಯಾರೂ ಕಲ್ಪಿಸಿರಲಿಲ್ಲ. ಊರಿನ ಯಾವುದೋ ಮೂಲೆಯಲ್ಲಿರುವ ಸಾರ್ವಜನಿಕ ಗ್ರಂಥಾಲಯಕ್ಕೆ ಹೋಗುವುದೋ, ಕಾಲೇಜಿನ ಲೈಬ್ರರಿಯಲ್ಲಿ ಬೇಕಾದ ಮಾಹಿತಿಯನ್ನು ಹುಡುಕುವುದೋ ಅಥವಾ ಊರಿನಿಂದ ಶಹರಕ್ಕೆ ಬಂದು ಮಾಹಿತಿಗಾಗಿ ಒದ್ದಾಡುವುದೋ ಜೀವನ ಪದ್ಧತಿಯಾಗಿದ್ದಾಗ ಗೂಗಲ್ ಹೊಸ ಆಯಾಮವನ್ನೇ ಕೊಟ್ಟಿತ್ತು. ದಿನಗಟ್ಟಲೆ ಕಾದು ಸಿಗುತ್ತಿದ್ದ ಮಾಹಿತಿಯು ಕಂಪ್ಯೂಟರ್ ಮುಂದೆ ಕೂತಾಗ ಕೆಲವೇ ಕ್ಷಣಗಳಲ್ಲಿ ಸಿಕ್ಕಿಬಿಡುತ್ತಿತ್ತು.

ಗೂಗಲ್ ಬದಲು ಎಐ ಆಧಾರಿತ ಆ್ಯಪ್!

ಒಂದು ವರದಿಯ ಪ್ರಕಾರ ಇತಿಹಾಸದಲ್ಲಿ ಇದೇ ಮೊದಲಬಾರಿಗೆ ಮಾಹಿತಿಗಳನ್ನು ಹುಡುಕುವ ವ್ಯವಹಾರದಲ್ಲಿ, ಗೂಗಲ್ ಕಂಪನಿಯ ಪಾಲು 90% ಗೂ ಕಡಿಮೆ ಇಳಿದಿದೆ. ವಿಶ್ಲೇಷಕರ ಗಮನಕ್ಕೆ ಬಂದಿರುವಂತೆ ಗೂಗಲ್ ಬದಲು ಎಐ ಆಧಾರಿತ ಪರಿಕರಗಳನ್ನು ಜನರು ಬಳಸುತ್ತಿದ್ದಾರೆ. ಅಮೆರಿಕ ಹಾಗೂ ಯುರೋಪಿನ ನ್ಯಾಯಾಲಗಳ ತೀರ್ಪು ಹೇಗಿದೆಯೆಂದರೆ ಇನ್ನು ಮುಂದೆ ಗೂಗಲ್ ತನ್ನದೇ ಆದ ಏಕಸ್ವಾಮ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲ. ಮುಂದುವರಿದು, ನಮ್ಮ ಈ ಹೊಸ ಜನಾಂಗದವರು ಅಂತರ್ಜಾಲದಲ್ಲಿ ಹುಡುಕುವ ರೀತಿಯೇ ಬದಲಾಗಿದೆ. ಹೀಗಾಗಿ ಗೂಗಲ್ ಕೆಲವು ವರ್ಷಗಳಲ್ಲಿ ಮೂಲೆಗುಂಪಾದರೂ ಅಚ್ಚರಿಯಿಲ್ಲ.

ಹುಡುಕಾಟ ಹೀಗೆ..

1 **'ಕೀ ವರ್ಡ್' ನಿಂದ 'ಪ್ರಾಂಪ್ಟ್' ಕಡೆ:** ಗೂಗಲ್ ಬಳಸುವಾಗ ಕೀ ವರ್ಡ್ ಬಳಸುತ್ತೇವೆ. ಉದಾಹರಣೆಗೆ ಕರ್ನಾಟಕದ ಇತಿಹಾಸವನ್ನು ತಿಳಿಯಬೇಕೆಂದರೆ – 'ಹಿಸ್ಟರಿ ಆಫ್ ಕರ್ನಾಟಕ' ಎಂದು ಬರೆದರೆ ಗೂಗಲ್ ಲಕ್ಷಾಂತರ ವೆಬ್‌ಪೇಜುಗಳ ಲಿಂಕನ್ನು ನೀಡುತ್ತದೆ. ಆದರೆ ಇಂದು ಇದು ಬದಲಾಗಿದೆ. ಚಾಟ್‌ಬಾಟ್‌ಗಳಲ್ಲಿ ನಾವು 'ಗಿವ್ ಡಿಟೇಲ್ಸ್ ಆಪ್ ಕರ್ನಾಟಕ ಹಿಸ್ಟರಿ, ವಿದ್ ನೇಮ್ ಆಫ್ ದಿ ಗ್ರೇಟ್ ಕಿಂಗ್‌ಡಮ್ಸ್' ಎಂದು ಪ್ರಾಂಪ್ಟ್ ನೀಡಬೇಕು. ಅದಕ್ಕೆ ಉತ್ತರವನ್ನು ಅದೇ ನೀಡುತ್ತದೆ. ಎಷ್ಟು ಸ್ಪಷ್ಟವಾಗಿ ನಾವು ಪ್ರಾಂಪ್ಟ್ ಕೊಡುತ್ತೆವೆಯೋ ಅಷ್ಟೇ ನಿಖರವಾದ ಮಾಹಿತಿಯನ್ನು ಅದು ನೀಡುತ್ತದೆ.

2 **ಗೂಗಲ್ ನಿಂದ ಎಐ ಸಹಾಯಕರ ಕಡೆ:** ಗೂಗಲ್‌ನ ಕ್ರೋಮ್ ಬ್ರೌಸರ್‌ಗೆ ಹೋಗಿ, ಅಲ್ಲಿ ಗೂಗಲ್ ಪುಟದಲ್ಲಿ ನಮ್ಮ ಪ್ರಶ್ನೆಗಳಿಗೆ ತಕ್ಕ ಕೀ ವರ್ಡ್ ಟಂಕಿಸಿ ನಂತರ ಉತ್ತರಕ್ಕಾಗಿ ಹುಡುಕುವುದನ್ನು ನಾವು ಕಡಿಮೆ ಮಾಡಿದ್ದೇವೆ. ನೇರವಾಗಿ ನಮಗೆ ಎಐ ಸಹಾಯಕರು ಲಭ್ಯವಿದ್ದಾರೆ. ಉದಾಹರಣೆಗೆ ಚಾಟ್‌ಜಿಪಿಟಿ, ಕೋ-ಪೈಲಟ್, ಪರ್ಪ್ಲೆಕ್ಸಿಟಿ ಎಐ, ಕ್ಲೋಡ್ ಎಐ, ಗ್ರೋಕ್, ಇತ್ಯಾದಿಗಳು. ಇದರಲ್ಲಿಯ ಒಂದೇ ಒಂದು ಆಪತ್ತೆಂದರೆ ಅವರು ನೀಡಿದ ಉತ್ತರದ ಸತ್ಯಾಸತ್ಯತೆಯನ್ನು ನಿರ್ಧರಿಸುವುದು ನಮ್ಮ ಹೊಣೆಯಾಗಿರುತ್ತದೆ. ಆಳವಾದ ಅಧ್ಯಯನಕ್ಕೆ ಗೂಗಲ್ ತರಹವೇ ಇಲ್ಲಿಯೂ ಲಿಂಕ್‌ಗಳು ಸಿಗುತ್ತವೆ.

3 ಜಗತ್ತಿನಲ್ಲಿ 40% ಜನರು ಇಂದು ಧ್ವನಿಯ ಸಹಾಯದಿಂದ ಮಾಹಿತಿಗಳನ್ನು ಹುಡುಕುತ್ತಿದ್ದಾರೆ. ಇದಕ್ಕೆ ವಾಯ್ಸ್ ಸರ್ಚಿಂಗ್ ಎಂದು ಹೆಸರು.

4 ಪ್ರತಿಯೊಂದು ಕೆಲಸಕ್ಕೂ ಬೇರೆ ಬೇರೆ ಆ್ಯಪ್‌ಗಳಿರುವಾಗ ಗೂಗಲ್‌ಗೇ ಹೋಗಿ ಹುಡುಕುವುದೇತಕ್ಕೆ? ರೆಡ್‌ಇಟ್ ಇದು ಸರ್ಚ್ ಇಂಜಿನ್ ತರಹವೇ ಇದೆ, ತುಂಬಾ ಜನಪ್ರಿಯ. ಲಿಂಕ್ಡ್ ಇನ್, ಅಮೇಜಾನ್, ಇನ್ಸ್ಟಾಗ್ರಾಮ್, ಹೀಗೆ ಹಲವಾರು ಮಾದರಿಯ ಆ್ಯಪ್‌ಗಳಲ್ಲಿ ನಮಗೆ ಬೇಕಾದುದ್ದನ್ನು ಹುಡುಕಬಹುದು.

5 ತಕ್ಷಣವೇ ಸಾರಾಂಶವನ್ನು ಕೊಡಬಲ್ಲ ಆ್ಯಪ್‌ಗಳ ಬೇಡಿಕೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಹೀಗಾಗಿ ಗೂಗಲ್ ಕೂಡ ಜೆಮಿನಿ ಎಂಬ ಎಐ ಸಹಾಯಕನನ್ನು ನೇಮಿಸಿದೆ. ಇದನ್ನು ಎಸ್‌ಜಿಇ – ಸರ್ಚ್ ಜನರೇಟಿವ್ ಎಕ್ಸ್‌ಪಿರಿಯನ್ಸ್ ಎನ್ನುತ್ತಾರೆ.

6 **ಪ್ರಶ್ನೆಯಿಂದ ಸಂವಾದದೆಡೆಗೆ:** ಗೂಗಲ್‌ನಲ್ಲಿ ನಾವು ಕೇವಲ ಪ್ರಶ್ನೆಗಳನ್ನು ಕೇಳುತ್ತಿದ್ದೆವು. ಇಂದು ನಾವು ಪ್ರಶ್ನೆಗಳನ್ನು ಕೇಳುವ ರೀತಿ ಸಂವಾದದ ರೂಪವನ್ನು ತಾಳಿದೆ.

ನಾನು : ಟೆಲ್ ಮಿ ಎಬೌಟ್ ಬೆಂಗಳೂರು
ಎಐ : ಬೆಂಗಳೂರು ಇಸ್ ಕ್ಯಾಪಿಟಲ್ ಆಫ್ ಕರ್ನಾಟಕ, ಇಟ್ ಇಸ್ ದಿ ಐಟಿ ಹಬ್ ಆಫ್ ಇಂಡಿಯಾ, ಆಲ್ಸೊ ಕಾಲ್ಡ್ ಆ್ಯಸ್ ಇಂಡಿಯಾಸ್ ಸಿಲಿಕಾನ್ ವೆಲ್ಲಿ! ಡು ಯು ವಾಂಟ್ ಮೋರ್ ಇನ್ಫಾರ್ಮೇಶನ್ ಲೈಕ್ ಪಾಪುಲೇಷನ್ ಆರ್ ಕಲ್ಚರ್?
ನಾನು: ಯೆಸ್, ಗೋ ಅಹೆಡ್

7 **ಮಾಹಿತಿಯಿಂದ ರಚನೆಯ ಕಡೆ :** ಗೂಗಲ್ ಕೇವಲ ಮಾಹಿತಿಗಳ ಪಟ್ಟಿಯನ್ನು ಕೊಡುತ್ತದೆ. ಆದರೆ ಜೆನ್-ಎಐ ಚಾಟ್‌ಬಾಟ್‌ಗಳು 'ಸೃಜನಶೀಲ'ವಾಗಿವೆ. ಅದು ಕವಿತೆ ರಚಿಸಬಲ್ಲದು, ಕತೆಯನ್ನು ಕಟ್ಟಬಲ್ಲದು, ಚಿತ್ರವನ್ನು ಬಿಡಿಸ ಬಲ್ಲದು, ವಿಡಿಯೋ ನಿರ್ಮಿಸಬಲ್ಲದು, ಫೋಟೊ ವನ್ನು ಬದಲಾಯಿಸಬಲ್ಲದು. ಸರ್ಚ್ ಇಂಜಿನ್ ಎನ್ನುವುದು ಓಬಿರಾಯನ ಕಾಲದ ತಂತ್ರಜ್ಞಾನ ಎನ್ನಿಸುವಂತೆ ಈ ಜೆನ್-ಎಐ ಆ್ಯಪ್‌ಗಳು ಕೆಲಸವನ್ನು ನಿರ್ವಹಿಸುತ್ತಿವೆ.

8 ಇಂದು ಕೀ ವರ್ಡ್ ಮೂಲಕ ಮಾತ್ರ ಹುಡುಕಬೇಕು ಎಂದಿಲ್ಲ. ಫೋಟೊ, ವಿಡಿಯೋ, ಅಥವಾ ಧ್ವನಿಯ ಮಾದರಿಯ ಮೂಲಕವೂ ಮಾಹಿತಿಗಳನ್ನು ಕಲೆಹಾಕಬಹುದು.

9 **ಜೀರೊ ಕ್ಲಿಕ್ ಸರ್ಚ್:** ಗೂಗಲ್ ಬಳಕೆದಾರರಲ್ಲಿ 58% ಜನರು ಜೀರೊ ಕ್ಲಿಕ್ ಸರ್ಚ್ ಮಾಡುತ್ತಾರಂತೆ. ಅಂದರೆ ಗೂಗಲ್ ಎಐ ನೀಡುವ ಉತ್ತರವೇ ಅವರಿಗೆ ಸಾಕು. ಉದಾಹರಣೆಗೆ: ಶಬ್ದಾರ್ಥ, ವಾಕ್ಯ ರಚನೆ, ಜನ್ಮ ದಿನಾಂಕ, ಊರ ಹೆಸರು, ಇತ್ಯಾದಿ. ಇವತ್ತು ಗೂಗಲ್ ಹೊರತಾಗಿಯೂ ಜನರು ಬಹಳಷ್ಟು ಆ್ಯಪ್ ಬಳಸುತ್ತಿದ್ದಾರೆ. ವಾಯುಗುಣ ಬದಲಾವಣೆ ಮೊಬೈಲ್‌ನಲ್ಲಿಯೇ ಬರುತ್ತದೆ, ಷೇರು ಮಾರುಕಟ್ಟೆಯ ಅಂಕಿಅಂಶಗಳು ಇನ್ನೊಂದು ಆ್ಯಪ್‌ನಲ್ಲಿ ಸಿಗುತ್ತದೆ, ಹೊಸ ಸಿನೇಮಾ ಬಿಡುಗಡೆ ಆಗಿದ್ದು ಬುಕ್‌ಮೈ ಷೋದಲ್ಲಿ ಕಂಡುಬರುತ್ತದೆ. ಒಂದು ಸಮೀಕ್ಷೆಯ ಪ್ರಕಾರ ಜಗತ್ತಿನ 65-70% ಸ್ಮಾರ್ಟ್ ಫೋನ್ ಬಳಕೆದಾರರು ಜಿರೋ ಕ್ಲಿಕ್ ಸರ್ಚರ್ಸ್!

10 **ಎಐ, ಎಐ, ಎಐ, ಎಲ್ಲೊಂಡಿ ಎಐ:** ಅಕ್ಷರದಿಂದ ಚಿತ್ರವನ್ನು ತಯಾರಿಸಲು ಡಿಇಎಲ್ಎಲ್-ಇ-3; ಕಾನ್ವಾ ಮ್ಯಾಜಿಕ್ ಸ್ಟುಡಿಯೋ ಇದು ಪ್ರಸೆಂಟೇಷನ್ ತಯಾರಿಸಲು ಇರುವ ಎಐ ಆ್ಯಪ್; ಎಐವಿಎ, ಇದು ಸಂಗೀತ ರಚನೆ ಮಾಡಬಲ್ಲದು; ಕೋ-ಪೈಲಟ್, ಗ್ರಾಮರ್ಲಿ, ಮುಂತಾದವು ಬರವಣಿಗೆಯಲ್ಲಿ ನೆರವಾಗುವಂತಹ ಎಐ ಸಹಾಯಕರು; ಡೀಪ್ ಮೋಷನ್ ಎನ್ನುವ ಆ್ಯಪ್‌ನಲ್ಲಿ ದೇಹದ ಚಲನವಲನಗಳನ್ನು ಗುರುತಿಸಬಹುದಾದ ಎಐ ತಂತ್ರಜ್ಞಾನವಿದೆ; ಮರ್ಫ್.ಎಐ ಈ ಆ್ಯಪ್ ತನ್ನಿಂದ ತಾನೇ ನಾವು ತಯಾರಿಸಿದ ಪ್ರಸೆಂಟೇಷನ್‌ಗೆ ಧ್ವನಿ ನೀಡಬಲ್ಲ ಕ್ಷಮತೆ ಹೊಂದಿದೆ; ಖಾನ್‌ಮಿಗೋ, ಸೊಕ್ರಾಟಿಕ್ ಇವೆಲ್ಲ ಕಲಿಯುವಿಕೆಗೆ ಅನುಕೂಲಕರವಾದ ಆ್ಯಪ್‌ಗಳು. ಇವೆಲ್ಲವೂ ಇರುವಾಗ ಗೂಗಲ್ ಯಾಕೆ ಬೇಕು ಅಲ್ಲವೇ?

ಎಐ ಉಚಿತವಲ್ಲ!

ಕೊನೆಯಲ್ಲಿ ಒಂದು ಮಾತು. ಗೂಗಲ್ ಸರ್ಚ್ ಇಂಜಿನ್ ವ್ಯಾಪಾರದ ಮಾದರಿ ಗಿಂತ ಈಗಿನ ಎಐ ಆ್ಯಪ್‌ಗಳ ಬ್ಯುಸಿನೆಸ್ ಮಾಡೆಲ್‌ಗಳು ಬೇರೆ. ಗೂಗಲ್ ಅವರದ್ದು ಜಾಹೀರಾತುಗಳನ್ನು ಹೆಚ್ಚು ಹೆಚ್ಚು ನೂಕಿ ಹಣ ಮಾಡುವುದು. ಅದೇ ಜೆನ್-ಎಐ ಆ್ಯಪ್‌ಗಳ ಬಳಕೆಗೆ ಚಂದಾದಾರರಾಗ ಬೇಕು. ಈಗ ಉಚಿತವಾಗಿ ಕಂಡರೂ ಮುಂದೆ ಅವರು ಅದಕ್ಕೆ ಚಾರ್ಜ್ ಮಾಡದೇ ಇರುವುದಿಲ್ಲ. ಒಂದು

ವೇಳೆ ಫ್ರೀ ಇದ್ದರೂ ಅದರಲ್ಲಿ ಜಾಹೀರಾತುಗಳು ಬರದೇ ಇರದು. ಮನುಷ್ಯನ ಮಿದುಳು ತುಂಬಾ ಸೋಮಾರಿ. ಅದಕ್ಕೆ ಏನಾದರೂ ಸುಲಭವಾಗಿ ಸಿಕ್ಕರೆ ಬೇಗ ಅಂಟಿಕೊಂಡು ಬಿಡುತ್ತದೆ. ಇಂದು ಗೂಗಲ್ ಹೇಗೆ ನಮಗೆ ಅಭ್ಯಾಸ ಆಗಿದೆಯೋ ಹಾಗೆಯೇ ಎಐ ಕೂಡ ನಮ್ಮ ಜೀವನದ ಭಾಗವಾಗುವ ದಿನವು ಹೆಚ್ಚು ಅಂತರದಲ್ಲಿಲ್ಲ. 'ಗೂಗಲ್ ಮಾಡು' ಎನ್ನುವುದು ಮರೆಯಾಗಿ 'ಎಐ ಅನ್ನು ಕೇಳು' ಎನ್ನುವ ದಿನಗಳು ನಮ್ಮನ್ನು ಕಾಯುತ್ತಿವೆ!

ಎಐ ಚಾಟ್‌ಬಾಟ್‌ಗಳು

ಮನುಷ್ಯನ ಮತಿಗೆ ಮಿತಿಯಿಲ್ಲ, ಆತನ ಬೆಳವಣಿಗೆಯ ವೇಗಕ್ಕೆ ಲಗಾಮಿಲ್ಲ. ಇಂದು ಗೂಗಲ್‌ನಲ್ಲಿ ಹುಡುಕಿ ಮಾಹಿತಿಗಳನ್ನು ಕಲೆಹಾಕುವಷ್ಟೂ ಸಂಯಮವು ಅವನ ಹತ್ತಿರವಿಲ್ಲ. ಅದಕ್ಕಾಗಿಯೇ ಹುಟ್ಟುಕೊಂಡಿದ್ದು ಕೃತಕ ಬುದ್ಧಿಮತ್ತೆಯ (ಎಐ) ಚಾಟ್‌ಬಾಟ್‌ಗಳು! ಚಾಟ್‌ಜಿಪಿಟಿ, ಕೋಪೈಲಟ್, ಪರ್ಪ್ಲೆಕ್ಸಿಟಿ, ಗ್ರೋಕ್ ಆ್ಯಪ್‌ಗಳು ನಮಗೆ ಬೇಕಾದ ಮಾಹಿತಿಯನ್ನು ಕೆಲವೇ ಸೆಕೆಂಡ್‌ಗಳಲ್ಲಿ ನೀಡಬಲ್ಲ ಸಾಮರ್ಥ್ಯವನ್ನು ಹೊಂದಿವೆ. ಹೀಗಾಗಿ ಜನರು ಗೂಗಲ್‌ನಿಂದ ದೂರ ಹೋಗುತ್ತಿದ್ದಾರೆ.

ಮೇಘಾಲಯದ ಹಾಡುವ ಹಳ್ಳಿ!

» ಶ್ರೀಧರ. ಎಸ್. ಸಿದ್ದಾಪುರ

ಮೌನ, ಮಳೆ ಮತ್ತು ಪ್ರೀತಿಗೆ ಮಾತ್ರ ಚಿಗುರಿಸುವ ತಾಕತ್ತಿರುವುದು. ಅಂತಹ ಹೊಸತೊಂದು ನಡಿಗೆಯ ಮೌನದಲಿ ಚಿಗುರಿದ ಅಧ್ಯಾಯವಿದು. ಮೇಘಾಲಯದ ದುರ್ಗಮ ಗ್ರಾಮೀಣ ಪ್ರದೇಶ. ಇಲ್ಲಿ ಎಲ್ಲರನ್ನೂ ಸೀಟಿ ಹೊಡೆದು ಕರೆಯಬಹುದು: ಮಗು ಹುಟ್ಟಿದ ಕೂಡಲೆ, ಹೆಸರಿನ ಜತೆಯಲ್ಲೇ, ವಿಶಿಷ್ಟ ಶಿಳ್ಳೆ ಹೊಡೆಯುವಂತಹ ಹೆಸರನ್ನೂ ಇಡುತ್ತಾರೆ!

ಯಾವುದೋ ಕಲಾಕಾರ ಕೆತ್ತಿಟ್ಟಂತಹ ಊರು. ಕಲಾ ನಿರ್ದೇಶಕನ ಕೈಚಳಕದಿ ಮೂಡಿ ಬಂದಂತಹ ಊರು. ಕೋಲ್ ಬಿಸಿಲಿಗೆ ಕುಣಿವ ಚಿಟ್ಟೆ ದಂಡು. ಯಾರೋ ಚಿತ್ರಗಳಲ್ಲಿ ಬಿಡಿಸಿಟ್ಟ ಬಿದಿರ ಕಾಡು. ಹಾಡು ಹಾಡುವ ಈ ಹಳ್ಳಿ, ಕಾಂಗ್ ತಾಂಗ್‌ನಿಂದ ಅರ್ಧ ದಿನದ ಹಾದಿ. ಒಟ್ಟು ಜನಸಂಖ್ಯೆ 750! ಹಾದಿ ತುಂಬಾ ಹೂವ ಹೊತ್ತ ಬೆಟ್ಟದಂಚು. ನೆನಪಿನ ನೀಲಿ ಕುಡಿದು, ಕುಡಿ ಒಡೆದ ಆಕಾಶ. ಇಬ್ಬನಿ ತೋಯ್ದ ಒಂಟಿ ರಸ್ತೆ. ರಸ್ತೆಯುದ್ದಕ್ಕೂ ಫರ್ನ್ ಗಿಡಗಳ ಸ್ವಾಗತ. ನಿಲ್ಲದ ಬಿದಿರ ತೋಟದಲಿ ಅಲ್ಲಲ್ಲಿ ಕಿತ್ತಳೆ ಗಿಡಗಳು, ನಡುನಡುವೆ ಗುಡ್ಡಗಾಡು ಜನ. ವಿಹಂಗಮತೆ ಮತ್ತು ಪ್ರಪಾತಕ್ಕೆ ಮತ್ತೊಂದು ಹೆಸರು! ಇದು ಮೇಘಾಲಯದ ಕಾಂಗ್‌ತಾಂಗ್

ಹಳ್ಳಿಯಿಂದ ಜಾರುವ ಜಲಪಾತದ ದಾರಿಯಲ್ಲಿ ಕಂಡ ದೃಶ್ಯಾವಳಿ. ನಾಲಗೆ ಹೊರಳಲು ಕಷ್ಟ ಪಡುವ ಇಲ್ಲಿನ ಪ್ರತೀ ಊರಿನ ಹೆಸರು ನಾಲಗೆ ಸುರುಳಿ!

ಸೀಟಿ ಹೊಡೆಯುವ ಊರಿನಲ್ಲಿ

ಪುರದ ಹೊರಗೆ ಒರಗಿಕೊಂಡ ಸ್ವಾಗತ ಗೋಪುರ. ಹಾಡುವ ಹಳ್ಳಿ ಎಂಬ ವಿಶೇಷಣ (ವಿಸಲಿಂಗ್ ವಿಲೇಜ್ ಆಫ್ ಇಂಡಿಯಾ). ಭಟ್ಕಳ ಬಳಿಯ ಹಾಡೋ ಹಳ್ಳಿ ಅಲ್ಲ. ಇದು ಮೇಘಾಲಯದ ಸಣ್ಣೂರು! ಗುಡ್ಡದ ತುದಿಯೂರು. ವಿಶಿಷ್ಟ ಗುಡ್ಡಗಾಡು ಜನಾಂಗ. ಚಳಿ ಹೊತ್ತಿನಲ್ಲೂ ಬೆಳ್ಳಂಬೆಳಗ್ಗೆ ಪ್ರಾರಂಭವಾದ ಶಾಲೆ 12ರೊಳಗೇ ಮುಗಿದಿತ್ತು. ಅದರ ಸನಿಹವೇ ಪುಟಾಣಿ ಕಾಂಗ್ ತಾಂಗ್ ಬೋರ್ಡು. ಜನರೆಲ್ಲಾ ಕ್ರಿಶ್ಚಿಯನ್ ಆಗಿ ಪರಿವರ್ತಿತರಾಗಿದ್ದಾರೆ. ಹೆಸರೂ ಅವರದೇ.

ವಸಾಹತುಶಾಹಿಗಳ ಪ್ರಭಾವ ಅಧಿಕವಾಗಿದ್ದರಿಂದ, ಮೂಲ ಸಂಸ್ಕೃತಿಯ ಪಳಿಯುಳಿಕೆಯಷ್ಟೇ ಉಳಿದಿದೆ! ಮೂಲತಃ ಇವರು ಯಾವುದೇ ಧರ್ಮಕ್ಕೆ ಸೇರಿದವರಲ್ಲ. ಕೇವಲ ಬೆಟ್ಟವಾಸಿ ಬುಡಕಟ್ಟು ಕುಲ. ಮೂಲತಃ ಸೆಂಗ್ ಖಾಸಿ ಬುಡಕಟ್ಟು ಜನಾಂಗಕ್ಕೆ ಸೇರಿದ ಇವರನ್ನು ಬ್ರಿಟಿಷ್‌ರ ಆಳ್ವಿಕೆಯ ಕಾಲದಲ್ಲೇ ಕ್ರಿಶ್ಚಿಯನ್‌ರಾಗಿ ಪರಿವರ್ತಿಸಲಾಗಿದೆ. ಇಲ್ಲಿಂದ ಇನ್ನೊಂದು ತುದಿಯಲ್ಲಿರುವ ವಾಕೆನ್ ಹಳ್ಳಿಗರು ಇನ್ನೂ

ಇಲ್ಲಿ ಮಕ್ಕಳಿಗೆ ಶಿಳ್ಳೆ ಹೊಡೆದು ಹೆಸರಿಡುತ್ತಾರೆ!

'ವರ್ಜಿನ್'ಗಳಾಗಿ ಉಳಿದಿದ್ದಾರೆ. ಯಾವುದೇ ಧರ್ಮಕ್ಕೆ ಸೇರದ ಇವರು ಸರಳರು. ಕಾಂಗ್ ತಾಂಗ್ ನಿಂದ ವಾಕೆನ್ ಹಳ್ಳಿಗೆ ನಮ್ಮ ಪಯಣವು ಮತ್ತೊಂದು ಸೋಜಿಗ. ಮತ್ತೆಂದಾದರೂ ಪುರುಸೊತ್ತು ಮಾಡಿಕೊಂಡು ವಾಕೆನ್ ಕತೆ ಹೇಳುವೆ. ಈಗ ಹಾಡುವ ಹಳ್ಳಿಯ ಹಾಡು ಕೇಳೋಣ.

ಸೀಟಿಯೊಂದು ಹೆಸರಾಗಿ

ಇಲ್ಲಿ ಮಗುವಿಗೊಂದು ಹೆಸರಿನಂತೆ, ಹುಟ್ಟಿನಿಂದ 'ಸೀಟಿ'ಯೊಂದು ಮಗುವಿಗೆ ಇಡಲಾಗುತ್ತದೆ. ಸಿಳ್ಳೆಯಿಂದಲೇ ಮಗುವನ್ನು ಕರೆಯಲಾಗುತ್ತದೆ. ಹೆಂಗಳೆಯರನ್ನೂ ನೀವು ಸೀಟಿಯೂದಿ ಕರೆಯಬಹುದು! ಯಾರೂ ತಪ್ಪು ತಿಳಿಯಲ್ಲ! ಹಾಗಂತ ಸೀಟಿಯ ಹೊಡೆಯಬೇಡಿ.

'ಜಿನ್ನ್‌ವಾಯಿ ಲಾವ್ಬಿ' ಎಂಬ ಈ ವಿಶಿಷ್ಟ ಭಾಷಾ ಅಧ್ಯಯನಕ್ಕೆ ಅಮೇರಿಕಾ ಜರ್ಮನಿಯಿಂದೆಲ್ಲಾ ಸಂಶೋಧಕರ ತಂಡ ಇಲ್ಲಿಗೆ ಭೇಟಿ ನೀಡುತ್ತಾರೆ! ಈ ವಿಶಿಷ್ಟ ಪದ್ಧತಿಯಲ್ಲಿ ಮಗುವಿಗೆ ವಿಶಿಷ್ಟವಾದ ಸ್ವರವೊಂದನ್ನು ತಾಯಿಯಾದವಳು ನೀಡುವಳು. ಇದರಲ್ಲಿ ಎರಡು ವಿಧಗಳಿವೆ: ಒಂದು ಚಿಕ್ಕ ಸ್ವರ ಇನ್ನೊಂದು ದೀರ್ಘ. ಜೀವ ಮಾನವಿಡಿ ಅದೇ ಸ್ವರದಿಂದ ಅವನನ್ನು/ಅವಳನ್ನು ಕರೆಯಲಾಗುತ್ತದೆ. ಊರಿನವರೆಲ್ಲಾ ಅದೇ ಸ್ವರದಿಂದ ಆತನನ್ನು/ಆಕೆಯನ್ನು ಗುರುತಿಸುತ್ತಾರೆ. ಬೆಟ್ಟದ ಮೇಲೆ ವಾಸಿಸ ಹೊರಟ ಇವರು ತಮ್ಮತನವನ್ನು ಉಳಿಸಿಕೊಳ್ಳಲು ಕಂಡುಕೊಂಡ ವಿಚಿತ್ರ ಕ್ರಮ. ಬೆಟ್ಟದಲ್ಲಿನ ಕೆಟ್ಟ ಶಕ್ತಿಗಳು ಕಣ್ಣು ಹಾಕದಿರಲಿ ಎಂಬ ಮುಂದಾಲೋಚನೆಯ ಫಲವಾಗಿ ಈ ರೀತಿಯಾಗಿ ಮುಗುವಿಗೆ ಹೆಸರಿನ ಜತೆ, 'ಸೀಟಿ'ಯಿಂದ ಕರೆಯುವ ಕ್ರಮ ರೂಢಿಗೆ ಬಂತು ಎನ್ನುತ್ತಾರೆ ನಮ್ಮ ಗೈಡ್ ಫಿಡ್ಲಿಂಗ್ ಸ್ಟಾರ್‌ನ ಅಮ್ಮ!

ಹುಟ್ಟಿಗೊಂದು ಹೆಸರಿಟ್ಟು

ನಾವೆಲ್ಲಾ ಮಗು ಹುಟ್ಟಿದರೆ ಹೆಸರಿಡಲು ಒದ್ದಾಡಿದಂತೆ ಇಲ್ಲಿ ಆತನಿಗೆ ಸೀಟಿಯಂತಹ ಹೆಸರಿಡಲು ತಾಯಿ ಒದ್ದಾಡುವಳು. ಇಲ್ಲಿ ಹೆಸರೆಂಬುದೇ ಸೀಟಿ. ಹೊಸಕಂಪನ ಹೊಸ ಅಲೆ. ▸▸ ಮೂರನೇ ಪುಟಕ್ಕೆ

ಪುಸ್ತಕ ವಿಮಾನ

ಕೆರೆಮಠ ಮನೆಯಲ್ಲಿ ಪ್ರೇತದ ಉಪದ್ರವ?

» ಬಿ. ಜನಾರ್ದನ ಭಟ್

1990ರ ದಶಕದ ಒಂದು ದಿನ. ಉಡುಪಿ ಜಿಲ್ಲೆಯ ಬೆಳಂಜಾಲು ಎಂಬಲ್ಲಿನ ಕೆರೆಮಠ ಎಂಬ ಹಳೆಯ ಮನೆಯಲ್ಲಿ ಸಂಸ್ಕೃತದ ಅದ್ವಿತೀಯ ವಿದ್ವಾಂಸ, ಜರ್ಮನ್ ಲೇಖಕ ಮತ್ತು ಜರ್ಮನಿಯಲ್ಲಿ ನೇತಾಜಿ ಸುಭಾಷ್ಚಂದ್ರ ಬೋಸರ 'ಆಜಾದ್ ಹಿಂದ್' ಪತ್ರಿಕೆಯ ಜರ್ಮನ್ ಆವೃತ್ತಿ 'ಫ್ರಯಿಸ್ ಇಂಡಿಯೆನ್' ಪತ್ರಿಕೆಯ ಸಂಪಾದಕರಾಗಿದ್ದ ಡಾ. ಬೆಳಂಜಾಲು ಅನಂತರಾಮ ಉಡುಪರು ಏಕಾಂಗಿಯಾಗಿ ವ್ಯಗ್ರರಾಗಿ ಕುಳಿತಿದ್ದರು. ಏಕಕಾಲದಲ್ಲಿ ಅವರು ಮೂರು ಕಡೆಗಳಲ್ಲಿ ಇರಬೇಕಾಗಿತ್ತು, ಯಾಕೆಂದರೆ ಅವು ಮೂರೂ ಅವರನ್ನು ಸೆಳೆಯುತ್ತಿದ್ದ ವಿದ್ಯಮಾನಗಳಾಗಿದ್ದವು. ಅವರು ಒಮ್ಮೆ ಅಲ್ಲಿಗೆ ಒಮ್ಮೆ ಇಲ್ಲಿಗೆ ಎಂದು ಅತ್ತಿಂದಿತ್ತ ತಮ್ಮನ್ನು ವರ್ಗಾಯಿಸಿಕೊಂಡು ಅವುಗಳ ಮೇಲೆ ಕಣ್ಣಿಡಬೇಕಾಗಿತ್ತು. ಮೊದಲನೆಯದು ಈಗ ಅವರು ನೆಲೆಸಿದ್ದ ಅವರ ಪೂರ್ವಜರ ಈ ಮನೆಯನ್ನು ಅದರ ಈಗಿನ ಯಜಮಾನನಾದ ಅಬ್ಬು ಪರ್ಬುಗಳು (ಅವರ ನಿಜ ಹೆಸರು ಎಬ್ನೇಜರ್ ರಾಯ್ಸ್) ಬೇರೆಯವರಿಗೆ ಮಾರಾಟ ಮಾಡಲು ನಡೆಸಿರುವ ಪ್ರಯತ್ನ ಗಳ ಬಗ್ಗೆ ಅವರಿಗೆ ಸಾಧಾರ ಕುತೂಹಲವಿತ್ತು. ಎರಡನೆಯದಾಗಿ ತಮ್ಮ ಬಗ್ಗೆ ಸಂಶೋಧನೆಗಾಗಿ ಉತ್ತರ ಭಾರತಕ್ಕೆ ತೆರಳಲು ಸಿದ್ಧತೆ ನಡೆಸುತ್ತಿದ್ದ ತಮ್ಮ ಮಗ ಬೆಳಂಜಾಲು ಪದ್ಮನಾಭ ಉಡುಪ ಹಾಗೂ ಮೊಮ್ಮಗ ಅಶ್ವಿನ್ ಬೆಳಂಜಾಲ್ ಅದಕ್ಕಾಗಿ ಹುಬ್ಬಳ್ಳಿಗೆ ಹೋಗಿ ಒಬ್ಬರನ್ನು ಭೇಟಿಯಾಗಲಿದ್ದರು. ಆ ಭೇಟಿಯ ಸಂದರ್ಭದಲ್ಲಿ ತಾನು ಅಲ್ಲಿರಬೇಕೆಂದು ಡಾ. ಉಡುಪರಿಗೆ ಆಸೆಯಿತ್ತು.

ಮೂರನೆಯದಾಗಿ ಹಿಮಾಲಯದ ಗರ್ವಾಲ್ ಸೀಮೆಯ ಗುಹಾಮಠದಲ್ಲಿ ನಡೆಯುತ್ತಿದ್ದ ತಮ್ಮ ದೇಹಾತೀತ ಅಸ್ತಿತ್ವದ ಪ್ರಯೋಗ ಯಾವ ಹಂತದಲ್ಲಿದೆ ಎನ್ನುವುದನ್ನು ತಿಳಿಯುವ ಪ್ರಯತ್ನವನ್ನೂ ಮಾಡಬೇಕಾಗಿತ್ತು. ನಿಜವಾಗಿಯೂ ಅದು ಹೇಗೆ ಸಂಭವಿಸಿತು ಎನ್ನುವುದೇ ಅವರಿಗೆ ಗೊತ್ತಾಗದಂತೆ, ಹಿಮಾಲಯದ ಗುರುವಿನ ಕರುಣೆಯು ಅವರಿಗೆ ಆಸ್ಟ್ರಲ್ ಟ್ರಾವೆಲ್ (ದೇಹ ಬಿಟ್ಟು ಆತ್ಮರೂಪದಲ್ಲಿ ಬೇಕಾದಲ್ಲಿಗೆ ಹೋಗುವುದು) ಅನ್ನುವುದು ಸಿದ್ಧಿಸುವಂತೆ ಮಾಡಿರುವುದೇ, ಅಥವಾ ಅಲ್ಲವೇ? ಹೌದಾಗಿದ್ದರೆ ತಮ್ಮ ದೇಹವನ್ನು ಎಲ್ಲಿ ಸುರಕ್ಷಿತವಾಗಿ ಇಟ್ಟು ಕಾಯುತ್ತಿದ್ದಾರೆ? ಇದು ಇನ್ನೂ ಸ್ಪಷ್ಟವಾಗಿರಲಿಲ್ಲ. ಹೀಗೆಯೇ ಇದ್ದು ಕೂಡ ಹಲವು ಕಾಲವೇ ಆಯಿತು. ಕಾಲಗಣನೆಯೇ ತಪ್ಪಿಹೋಗಿತ್ತು. ಇವೆಲ್ಲ ಅವರ ವ್ಯಗ್ರತೆಗೆ ಕಾರಣವಾಗಿದ್ದವು. ಅದೃಶ್ಯರೂಪಿಯಾಗಿರುವುದರಿಂದ ಅವರಿಗೆ ಕೆಲವು ಅನುಕೂಲಗಳೂ, ಕೆಲವು ಅನನುಕೂಲಗಳೂ ಇದ್ದವು. ಬೇಕೆಂದಾಗ ಎಲ್ಲಿಗಾದರೂ ಹೋಗಿ ಬರುವ ದೇಹಾತೀತ ಸ್ವಾತಂತ್ರ್ಯ ಅವರಿಗಿತ್ತು. ಅನನುಕೂಲವೆಂದರೆ ಯಾರಿಗಾದರೂ ಏನನ್ನಾದರೂ ಹೇಳಬೇಕೆಂದರೆ ಹೇಳಲು ಸಾಧ್ಯವಿರಲಿಲ್ಲ.

ಈ ದಿನ ಉಡುಪರಿಗೆ ಹುಬ್ಬಳ್ಳಿಗೆ ಹೋಗಿ ಅಲ್ಲಿ ಪತ್ರಿಕೆಯೊಂದರ ಸಂಪಾದಕನ ಆಫೀಸಿನಲ್ಲಿ ಠಿಕಾಣಿ ಹೂಡಬೇಕಾಗಿತ್ತು. ಯಾಕೆಂದರೆ ಅವರ ಮಗ ಮತ್ತು ಮೊಮ್ಮಗ ಅಲ್ಲಿಗೇ ಹೋಗುವವರಿದ್ದರು. ಅವರಿಗಿಂತ ಮುಂಚಿತವಾಗಿ ಅಲ್ಲಿಗೆ ಹೋಗಿ, ಅಲ್ಲಿಯೇ ಕುಳಿತು ಮಗ ಮತ್ತು ಮೊಮ್ಮಗ ಬರುವುದನ್ನೇ ನಿರೀಕ್ಷಿಸಿಕೊಂಡು ಇರಬೇಕು ಅಂದುಕೊಂಡಿದ್ದರು. ಅವರೆಲ್ಲರ ಮಾತುಕತೆಗಳನ್ನು, ನಿರ್ಧಾರಗಳನ್ನು ತಿಳಿದುಕೊಂಡು ಆಮೇಲೆ ಹಿಮಾಲಯದತ್ತ ಹೋಗುವ ಯೋಚನೆಯಿತ್ತಾದರೂ ಆದಿನ ಅವರು ಬೆಳಂಜಾಲಿನಲ್ಲಿಯೇ ಇರಬೇಕಾಗಿ ಬಂತು. ಯಾಕೆಂದರೆ ಕೆರೆಮಠ ಮನೆಯಲ್ಲಿ ಏನೋ ಹೊಸ ಚಟುವಟಿಕೆ ಪ್ರಾರಂಭವಾಗುವಂತೆ ಇತ್ತು. ಅದೇನೆಂದು ನೋಡಬೇಕೆಂದು ಡಾ. ಬೆಳಂಜಾಲು ಅನಂತರಾಮ ಉಡುಪರಿಗೆ ಅನಿಸಿತು.

ಮನೆಯ ಈಗಿನ ಯಜಮಾನ ಅಬ್ಬು ಪರ್ಬುಗಳ ಡ್ರೈವರ್ ಸುರೇಶ ಬೆಳಿಗ್ಗೆಯೇ ಬಿಳಿಯ ಬಣ್ಣದ ಮಾರುತಿ ವ್ಯಾನಿನಲ್ಲಿ ಬಂದು ಮನೆಯ ಬಾಗಿಲು ತೆರೆದು ಗಾಳಿ ಆಡುವಂತೆ ಮಾಡಿದ್ದ. ಸ್ವಲ್ಪ ಹೊತ್ತಿನಲ್ಲಿ ಅವನು ಬರಹೇಳಿದ್ದ ಒಬ್ಬಾಕೆ ಕೆಲಸದ ಹೆಂಗಸು ಹಿಡಿಸೂಡಿ ಹಿಡಿದುಕೊಂಡು ಬಂದು ಸುರೇಶ ಹೇಳಿದಂತೆ ಮನೆಯನ್ನು ಶುದ್ಧೀಕರಿಸುವ ಕೆಲಸವನ್ನು ಪ್ರಾರಂಭಿಸಿದಳು. ಅವಳು ಮನೆಯೊಳಗಿನ ಕಸಕಡ್ಡಿಗಳನ್ನು ಗುಡಿಸತೊಡಗಿದಾಗ ಧೂಳು ಹಾರತೊಡಗಿತು. ಮನೆಯ ವಯ್ಯಾಪ್ರೆಯ ಪಶ್ಚಿಮ ಭಾಗದ ಸಣ್ಣ ಚಾವಡಿಯಲ್ಲಿ ಮಲಗಿರುತ್ತಿದ್ದ ಉಡುಪರಿಗೆ ಈ ಹೆಂಗಸಿನ ಶುದ್ಧೀಕರಣದಿಂದಾಗಿ ಕಿರಿಕಿರಿಯಾದ ಕಾರಣ ಅಲ್ಲಿಂದೆದ್ದು ಮನೆಯೆದುರಿನ ಹಲಸಿನ ಮರದ ಮೇಲೆ ಹೋಗಿ ಕುಳಿತರು. ಸುರೇಶ ಕೂಡ ಆ ಧೂಳನ್ನು ಉಸಿರಾಡಲಾಗದೆ ವ್ಯಾನು ಬಿಟ್ಟುಕೊಂಡು ಹೊರಟುಹೋದ.

ಹೆಂಗಸು ಮನೆಯೊಳಗಿನ ಕಸಕಡ್ಡಿಗಳನ್ನೆಲ್ಲ ಗುಡಿಸಿ ತೆಗೆದು, ಧೂಳು ನಿವಾರಿಸಲು ಬಾವಿಯಿಂದ ನೀರು ಸೇದಿ ತಂದು ಹಳೆಯ ಬಟ್ಟೆಯೊಂದನ್ನು ಒದ್ದೆ ಮಾಡಿ ಚಾವಡಿ, ಅದರ ಕೆಳಗಿನ ವಯ್ಯಾಪ್ರೆ, ವಯ್ಯಾಪ್ರೆಯ ಪಶ್ಚಿಮ ಮೂಲೆಯಲ್ಲಿ ವೇದಿಕೆಯಂತಿದ್ದ ಸಣ್ಣ ಚಾವಡಿಗಳನ್ನು ಒರಸಿ ಮನೆಯೊಳಗೆ ಸ್ವಲ್ಪ ಉಸಿರಾಡಲು ಸಾಧ್ಯವಾಗುವಂತೆ ಮಾಡಿದಳು. ಮನೆಯ ಮುಖ್ಯಭಾಗವಾದ ಪಡಸಾಲೆ, ಅದರ ಆಗ್ನೇಯಪೂರ್ವ ಮೂಲೆಯಲ್ಲೊಂದು ದೇವರಗೂಡು, ಅದರ ಹಿಂಬದಿಯಲ್ಲಿ ಅಡಿಗೆ ಕೋಣೆ, ಅದರಾಚೆಯ ಅಂಕಣದಲ್ಲೊಂದು ಬಚ್ಚಲು ಮನೆ ಮತ್ತು ಪಶ್ಚಿಮ ದಿಕ್ಕಿನ ಉದ್ದಕ್ಕೂ ಇರುವ ಹಜಾರದಂತಹ ಕೋಣೆ – ಇವುಗಳನ್ನು ಒರಸಬೇಕಾದರೆ ಒಂದು ಇಡೀ ದಿನ ಬೇಕಾದೀತು! ಇನ್ನು ಚಾವಡಿಯಿಂದ ಮೇಲೆ ಮಾಳಿಗೆಗೆ ಹತ್ತಿಕೊಂಡು ಹೋಗಲು ಇದ್ದ ಸಿಮೆಂಟು ಗಾರೆಯ ಹಳೆಯ ಮಣ್ಣಿನ ಮೆಟ್ಟಲುಗಳನ್ನು ಏರಿ ಮೇಲಿನ ಮಾಳಿಗೆಗೆ ಹೋದರೆ ಗೆದ್ದಲು ಹಿಡಿದ ಹಳೆಯ ಬಾಟಲಿ ಕ್ರೇಟ್‌ಗಳು, ಕೆಲವು ಮೃದುಮರದ ಒರಟು ಬಾಕ್ಸುಗಳು, ರಟ್ಟಿನ ಡಬ್ಬಗಳು, ಒಡೆದ ಬಾಟಲುಗಳು ತುಂಬಿಕೊಂಡು ಅಬ್ಬು ಪರ್ಬುಗಳ ವ್ಯವಹಾರಗಳು ಇಂದು ಯಾವ ಸ್ಥಿತಿಗೆ ತಲುಪಿವೆ ಎನ್ನುವುದಕ್ಕೆ ಸಂಕೇತವಾಗಿ ಕಂಡಾವು.

ಸುಮಾರು ಹತ್ತೂವರೆ ಗಂಟೆಯ ಹೊತ್ತಿಗೆ ಡ್ರೈವರ್ ಸುರೇಶ ಮತ್ತೊಮ್ಮೆ ವ್ಯಾನ್ ಬಿಟ್ಟುಕೊಂಡು ಬಂದು ಮನೆಯೆದುರಿನ ಸಿಮೆಂಟ್ ಹಾಕಿದ ಅಂಗಳದಲ್ಲಿ ನಿಲ್ಲಿಸಿದ. ಸಿಮೆಂಟ್ ಕಾಂಕ್ರೀಟಿನ ಅಂಗಳ ಅಲ್ಲಲ್ಲಿ ಕಿತ್ತುಹೋಗಿ, ಅಲ್ಲಲ್ಲಿ ಬಿರುಕುಬಿಟ್ಟು ಹುಲ್ಲುಕಳೆಗಳು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದವು. ವ್ಯಾನಿನಲ್ಲಿದ್ದ ಅಬ್ಬು ಪರ್ಬುಗಳು ಮತ್ತು ಕಂಟ್ರಾಕ್ಟರ್ ಅಪ್ಪಣ್ಣ ಹೆಗ್ಡೆಯವರ ಮಗ ಪ್ರತಾಪ್ ಹೆಗ್ಡೆ ಇಬ್ಬರೂ ಇಳಿದರು.

ಪ್ರತಾಪ್ ಹೆಗ್ಡೆಯ ಕಾರು ಇದಕ್ಕಿಂತ ಚೆನ್ನಾಗಿದ್ದರೂ ಅಬ್ಬು ಪರ್ಬುಗಳು ಅವನ ಕಾರನ್ನು ತಮ್ಮ ಮನೆಯಲ್ಲಿಯೇ ಇರಿಸಲು ಹೇಳಿ, ತಮ್ಮ ವ್ಯಾನಿನಲ್ಲಿಯೇ ಅವನನ್ನು ಕೂರಿಸಿಕೊಂಡು ಬಂದಿದ್ದರು. ಪ್ರತಾಪ್ ಹೆಗ್ಡೆ ಅಪ್ಪನ ವ್ಯವಹಾರವನ್ನು ಮುಂದುವರಿಸಿ ಸಿವಿಲ್ ಕಂಟ್ರಾಕ್ಟರ್ ಆಗಿದ್ದ, ಕನ್‌ಸ್ಟ್ರಕ್ಷನ್ ಜತೆಗೆ ರಿಯಲ್ ಎಸ್ಟೇಟ್ ವ್ಯವಹಾರವನ್ನೂ ಮಾಡುತ್ತಿದ್ದ. ಅಬ್ಬು ಪರ್ಬುಗಳು ಕೆರೆಮಠ ಮನೆಯನ್ನು ಮಾರಾಟ ಮಾಡಲು ತಾವೇ ಪ್ರಯತ್ನಿಸಿ ವಿಫಲರಾಗಿ ಕೊನೆಗೆ ಪ್ರತಾಪ್ ಹೆಗ್ಡೆಯ ಸಹಾಯ ಯಾಚಿಸಿದ್ದರು.

'ಕೆರೆಮಠ ಮನೆಯಲ್ಲಿ ಪ್ರೇತದ ಉಪದ್ರವ ಇದೆ ಅನ್ನುತ್ತಾರೆ. ಅಥವಾ ಯಾವುದೋ ಶಾಪ ಇರಬೇಕು. ಬ್ರಾಹ್ಮಣರ ಮನೆಯನ್ನು ಪಟೇಲರು ಸಾಲಕ್ಕಾಗಿ ವಶಪಡಿಸಿಕೊಂಡ ಮೇಲೆ ಅಲ್ಲಿದ್ದವರಿಗೆ ಒಳ್ಳೆಯದಾಗಲಿಲ್ಲ. ಸ್ವಲ್ಪ ಸಮಯ ಆ ಮನೆಯಲ್ಲಿದ್ದ ಸಿದ್ದು ಶೆಟ್ಟಿ ಸದಾ ಸಮಸ್ಯೆಯಲ್ಲಿಯೇ ಇದ್ದು ಕೊನೆಗೆ ಬಾವಿಗೆ ಹಾರಿ ಸುಸೈಡ್ ಮಾಡಿಕೊಂಡ. ಅವನ ಪ್ರೇತವೂ ಇಲ್ಲಿಯೇ ಇದೆಯಂತೆ. ಅಬ್ಬು ಪರ್ಬುಗಳು ಅದನ್ನು ತೆಗೆದುಕೊಂಡ ಮೇಲೆ ಲಾಸ್ ಆದರು. ಅವರ ಮಗಳು ಗಂಡನನ್ನು ಬಿಟ್ಟು ಮನೆಯಲ್ಲಿ ಬಂದು ಕುಳಿತುಕೊಂಡಿದ್ದಾಳೆ. ಅವರ ಹೆಂಡತಿಗೆ ಈಗ ದೊಡ್ಡ ಕಾಯಿಲೆಯಂತೆ', ಎಂಬಿತ್ಯಾದಿ ಮಾತುಗಳು ಊರುತುಂಬ ಹರಿದಾಡುತ್ತಿದ್ದುದರಿಂದ ಅಬ್ಬು ಪರ್ಬುಗಳಿಗೆ ಈಗ ಆ ಮನೆಯನ್ನು ಮಾರಾಟ ಮಾಡಬೇಕಿದ್ದರೂ ಸಾಧ್ಯವಾಗುತ್ತಿರಲಿಲ್ಲ. ಮನೆಯ ಸುತ್ತ ಒಂದೆಕರೆ ತೆಂಗಿನ ತೋಟವೂ ಇದೆ. (ಇತ್ತೀಚೆಗೆ ಪ್ರಕಟಗೊಂಡ 'ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ? ಕಾದಂಬರಿಯ ಆಯ್ದ ಭಾಗ)

ಈ ಕಾದಂಬರಿಯಲ್ಲಿ ಒಬ್ಬರು ಮಹಾಸಾಧಕರ ಬದುಕಿನ ನಡೆಯನ್ನು ಮತ್ತು ಸಾಧನೆಯನ್ನು, ವಿಧಿ ಅವರನ್ನು ಅಲೆಸಿದ ಬಗೆಯನ್ನು ಮತ್ತು ನಮ್ಮ ಸ್ವಾತಂತ್ರ್ಯೋತ್ತರ ಸಮಾಜಕ್ಕೆ ಅವರ ಯೋಗ್ಯತೆಯ ಅರಿವೇ ಇಲ್ಲದಿದ್ದುದನ್ನು ಕೇಂದ್ರವಾಗಿ ಇರಿಸಿಕೊಳ್ಳಲಾಗಿದೆ. ಇಲ್ಲಿ ಕೆಲವು ಪಾರಂಪರಿಕ ನಂಬಿಕೆಗಳು ಮತ್ತು ಆಧ್ಯಾತ್ಮಿಕ ಸಾಧನೆಗಳ ಉಲ್ಲೇಖವಿದ್ದು, ಅದನ್ನು ಒಂದು ರಚನಾ ತಂತ್ರವಾಗಿ ಬಳಸಿಕೊಳ್ಳಲಾಗಿದೆ. ಹೊಸ ಕಾದಂಬರಿಯೊಂದರ ಆಯ್ದ ಭಾಗವಿದು.



ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ?
ಲೇ: ಡಾ. ಬಿ. ಜನಾರ್ದನ ಭಟ್
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು.175/-

ಶಾಸ್ತ್ರದ ಬೆಳಕಿನಲ್ಲಿ ಯಕ್ಷಗಾನ

» ರವಿ ಮಡೋಡಿ

ಯಕ್ಷಗಾನವು ಶಾಸ್ತ್ರೀಯಕಲೆಯೋ ಅಥವಾ ಜಾನಪದಕಲೆಯೋ ಎಂಬ ಪ್ರಶ್ನೆ ಅನೇಕ ಕಾಲಘಟ್ಟಗಳಿಂದ ಚರ್ಚೆಗೆ ಗುರಿಯಾಗಿರುವ ವೈಚಾರಿಕ ವಿಷಯವಾಗಿದೆ. ಇತ್ತೀಚೆಗೆ ಅಶೋಕ ಹಾಸ್ಯಗಾರರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಶಾಸ್ತ್ರೀಯ ಗ್ರಂಥಗಳನ್ನು ಅಧ್ಯಯನ ಮಾಡಿ, ಯಕ್ಷಗಾನದಲ್ಲಿರುವ ಶಾಸ್ತ್ರೀಯ ಅಂಶಗಳನ್ನು ವಿಶ್ಲೇಷಿಸುವ 'ದಶರೂಪಕಗಳ ದಶಾವತಾರ' ಕೃತಿಯನ್ನು ರಚಿಸಿದ್ದಾರೆ. ಯಕ್ಷಗಾನದ ಅಧ್ಯಯನದಲ್ಲಿ ಇದನ್ನು ಹೊಸ ಆಯಾಮವೆಂದು ಪರಿಗಣಿಸಬಹುದು. ಹಾಸ್ಯಗಾರರು ನಾಟ್ಯಶಾಸ್ತ್ರದ 20ನೇ ಅಧ್ಯಾಯದಲ್ಲಿ ವಿವರಿಸಿರುವ ದಶರೂಪ ವಿಧಾನವನ್ನು ಆಧಾರವಾಗಿ ತೆಗೆದುಕೊಂಡು, ಯಕ್ಷಗಾನದ ವಿವಿಧ ಅಂಶಗಳಾದ ಚೌಕಿ ಮನೆ, ನಾಟ್ಯ ಮಂಟಪ, ಆಹಾರ್ಯಾಭಿನಯ, ಸಭಾಲಕ್ಷಣ ಮುಂತಾದವುಗಳನ್ನು ದಶರೂಪಕಗಳಲ್ಲಿ ನಿರ್ದಿಷ್ಟಗೊಳಿಸಿರುವ ನಿಯಮಗಳೊಂದಿಗೆ ಹೋಲಿಕೆ ಮಾಡಿದ್ದಾರೆ. ಅವನ್ನು ಯಕ್ಷಗಾನದಲ್ಲಿ ಹೇಗೆ ಅಳವಡಿಸಿಕೊಂಡಿವೆ ಎಂಬುದನ್ನು ಈ ಕೃತಿಯಲ್ಲಿ ವಿವರಿಸುವ ಮೂಲಕ, ಯಕ್ಷಗಾನದ ಶಾಸ್ತ್ರೀಯತೆಯನ್ನು ತೆರೆದಿಡುವ ಪ್ರಯತ್ನವನ್ನು ಮಾಡಿದ್ದಾರೆ.

ವಾಡಿಕೆಯಲ್ಲಿ ಯಕ್ಷಗಾನಕ್ಕೆ ದಶಾವತಾರ ಎಂಬ ಹೆಸರಿದೆ. ಇಲ್ಲಿ ಲೇಖಕರು ನಾಟ್ಯಶಾಸ್ತ್ರದಲ್ಲಿನ ದಶರೂಪಕಗಳೇ ಯಕ್ಷಗಾನದಲ್ಲಿ ದಶಾವತಾರವಾದವು ಎನ್ನುವುದನ್ನು ಈ ಗ್ರಂಥದ ಮೂಲಕ ಪ್ರತಿಪಾದಿಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ, ನಾಟ್ಯಶಾಸ್ತ್ರದಲ್ಲಿ ಬರುವ ಧ್ರುವಾ ಗೀತೆಗಳನ್ನು ಯಕ್ಷಗಾನದ ಚೌಕಿಮನೆ ಪದ್ಯಗಳು ಹಾಗೂ ಪೀಠಿಕೆ ಪದ್ಯಗಳಿಗೆ ಹೋಲಿಸಿದ್ದಾರೆ. ಹಾಗೆಯೇ, ಯಕ್ಷಗಾನದಲ್ಲಿ ಬಳಸುವ ಚೌಕಿಮನೆ ಅಥವಾ ನಾಟ್ಯಗೃಹವನ್ನು ನಾಟ್ಯಶಾಸ್ತ್ರದಲ್ಲಿ ನೀಡಿರುವ ವಿವರಣೆಯೊಂದಿಗೆ ಸಾಮ್ಯತೆ ಇದೆ ಎಂಬುದನ್ನು ತೋರಿಸಿದ್ದಾರೆ. ಸಭಾಲಕ್ಷಣದ ಭಾಗದಲ್ಲಿ ಬರುವ ರಂಗಪೂಜೆ, ದೇವತಾ ಪೂಜೆ, ಸಭೆಯಲ್ಲಿ ಹಾಜರಿರುವವರ ರೀತಿ, ಭಾಗವತ ಮತ್ತು ವಾದಕರ ಲಕ್ಷಣಗಳು ಮುಂತಾದ ವಿಧಿ-ವಿಧಾನಗಳನ್ನು ಯಕ್ಷಗಾನದಲ್ಲಿ ಅರ್ವಾಚೀನವಾಗಿ ಹೇಗೆ ಪ್ರಯೋಗವಾಗುತ್ತಿದೆ ಎಂಬುದನ್ನು ವಿವರಿಸಿದ್ದಾರೆ ನಾಟ್ಯಶಾಸ್ತ್ರದ ಶ್ಲೋಕಗಳು ಯಕ್ಷಗಾನದಲ್ಲಿ ಹೇಗೆ ಅಳವಡಿಸಲ್ಪಟ್ಟಿವೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿರುವುದು ಈ ಕೃತಿಯ ಪ್ರಮುಖ ಶಕ್ತಿ ಎನಿಸುತ್ತದೆ.

ಭರತನ ನಾಟ್ಯಶಾಸ್ತ್ರವು ಬ್ರಾಹ್ಮ ನಾಟ್ಯಶಾಸ್ತ್ರ, ಮಾಹೇಶ್ವರ ನಾಟ್ಯಶಾಸ್ತ್ರ ಮತ್ತು ವೈಷ್ಣವ ನಾಟ್ಯಶಾಸ್ತ್ರ ಎಂಬ ಮೂರು ತತ್ತ್ವಪರ ಪರಂಪರೆಗಳನ್ನು ಹೊಂದಿದೆ. ಈ ತಾತ್ವಿಕ ಆಧಾರವನ್ನು ಯಕ್ಷಗಾನದಲ್ಲಿ ಅನ್ವಯಿಸಿರುವ ಲೇಖಕರು, ಅಲ್ಲಿಯೂ ಸಹ ಸೃಷ್ಟಿ, ಸ್ಥಿತಿ, ಲಯ ಎಂಬ ತ್ರಿಕಾಲಿಕ ತತ್ತ್ವಗಳು ಸ್ಪಷ್ಟವಾಗಿ ಗೋಚರಿಸುತ್ತವೆ ಎಂಬುದನ್ನು ಪ್ರತಿಪಾದಿಸಿದ್ದಾರೆ. ಉದಾಹರಣೆಗೆ, ಚೌಕಿಮನೆಯಲ್ಲಿ ಪಾತ್ರ ಸಿದ್ಧಗೊಳ್ಳುವಿನಿಂದ ಹಿಡಿದು ತೆರೆ ಕುಣಿತದವರೆಗೆ ನಡೆಯುವ ಪ್ರಕ್ರಿಯೆಯನ್ನು ಸೃಷ್ಟಿ ತತ್ವ ಎಂದು, ಬಳಿಕ ಭಾಗವತನು ಪ್ರಸ್ತುತಿಯನ್ನು ಮುಂದುವರಿಸುವ ಕ್ರಮವನ್ನು ಸ್ಥಿತಿ ತತ್ವ ಎಂದು, ವೇಷಧಾರಿಯು ತನ್ನ ವೇಷದಿಂದ ಹೊರಬಂದು ಮೂಲಸ್ವರೂಪಕ್ಕೆ ಹಿಂತಿರುಗುವ ಕ್ಷಣವನ್ನು ಲಯ ತತ್ವ ಎಂದು ವಿವರಿಸಿರುವುದು ಗಮನ ಸೆಳೆಯುತ್ತದೆ.

ಸಾಮಾನ್ಯವಾಗಿ ಯಕ್ಷಗಾನದಲ್ಲಿ ಪಾತ್ರಗಳು ತೆರೆಯ ಮರೆಯಲ್ಲಿ ಒಡ್ಡೋಲಗ ನಡೆಸಿ ರಂಗಪ್ರವೇಶ ಮಾಡುವುದು ಒಂದು ಸಾಂಪ್ರದಾಯಿಕ ವಿಧಾನವಾಗಿದೆ. ಇಂತಹ ರಂಗನಡೆಗಳನ್ನು ಭರತನ ನಾಟ್ಯಶಾಸ್ತ್ರವು ಸಾಮಾನ್ಯಾಭಿನಯ ಹಾಗೂ ಪ್ರಕರಣ ಎಂಬ ರೂಪಕಗಳ ಅಡಿಯಲ್ಲಿ ಚರ್ಚಿಸಿದ್ದಾರೆ.

ಈ ಗ್ರಂಥ ಯಕ್ಷಗಾನ ಹಾಗೂ ಇತರ ನಾಟ್ಯಪದ್ಧತಿಗಳ ಅಧ್ಯಯನದಲ್ಲಿ ತೊಡಗಿರುವವರಿಗೆ ಅಮೂಲ್ಯ ಮಾಹಿತಿಗಳನ್ನು ನೀಡುತ್ತದೆ. ಕೃತಿಯು ಕೇವಲ ವಿಚಾರಗಳನ್ನು ಮಾತ್ರವನ್ನು ತಿಳಿಸದೇ ಅನೇಕ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿ, ಅವುಗಳಿಗೆ ಉತ್ತರ ಹುಡುಕುವ ನಿಟ್ಟಿನಲ್ಲಿ ಪರಿಶೀಲನೆ ಮತ್ತು ಪರಿಷ್ಕರಣೆಗೆ ಅವಕಾಶ ನೀಡುವ ಗ್ರಂಥವಾಗಿದೆ.



ದಶಾವತಾರದ ದಶರೂಪಕ
ಲೇ: ಅಶೋಕ ಹಾಸ್ಯಗಾರ
ಪ್ರ: ಯಾಜಿ ಪ್ರಕಾಶನ
9148739504
ಬೆಲೆ: ರು.320/-

ಪ್ರಬಂಧಕಾರರಾಗಿ ಕಾರಂತರು!

» ಶಶಿ

ಶಿವರಾಮ ಕಾರಂತರು 45ಕ್ಕೂ ಅಧಿಕ ಕಾದಂಬರಿ ರಚಿಸಿದ್ದಾರೆ; ಇತರ ಪ್ರಕಾರದ ನೂರಾರು ಪುಸ್ತಕಗಳನ್ನು ಬರೆದಿದ್ದಾರೆ. ಕಾದಂಬರಿಕಾರ ಕಾರಂತ, ಯಕ್ಷಗಾನ ಪ್ರಯೋಗಶೀಲ ಕಾರಂತ, ಪರಿಸರ ಪ್ರೇಮಿ ಕಾರಂತ ಇಂತಹ ಅವರ ಮುಖಗಳು ಹೆಚ್ಚು ಪರಿಚಿತ. ಅವರು ಯಕ್ಷಗಾನ ಕುಣಿತವನ್ನು ಕಲಿತು, ಬೇರೆಯವರಿಗೆ ತರಬೇತಿಯನ್ನೂ ನೀಡಿದ್ದರು; ಯಕ್ಷಗಾನ ಬ್ಯಾಲೆ ಎಂಬ ಪ್ರಕಾರವನ್ನು ರೂಪಿಸಿದರು; ವಿದೇಶಗಳಿಗೆ ಯಕ್ಷಗಾನ ತಂಡಗಳನ್ನು ಕರೆದಯೊಯ್ದರು; ಸಮಾಜ ಸುಧಾರಣೆಯ ಪ್ರಯೋಗಗಳನ್ನು ಮಾಡಿದ್ದರು; ಪರಿಸರ ಹೋರಾಟದಲ್ಲಿ ತೊಡಗಿದ್ದು ಮಾತ್ರವಲ್ಲ, ಅವರ ಕಾಲದಲ್ಲಿ ಅವರೇ ಸ್ವತಃ ಬಂಡಾಯಗಾರರು! ಪ್ರತಿಭಟನೆಯ ರೂಪದಲ್ಲಿ, ತಮಗೆ ದೊರೆತ ಪ್ರಶಸ್ತಿಯನ್ನು ಸಹ ಹಿಂತಿಗಿಸುವ ಛಾತಿ ಹೊಂದಿದವರು. ವೈವಿಧ್ಯಮಯ ಕಾದಂಬರಿ ಗಳನ್ನು ರಚಿಸಿ, ಕನ್ನಡ ಕಾದಂಬರಿ ಪರಂಪರೆಗೆ ಅಮೂಲ್ಯ ಕೊಡುಗೆ ನೀಡಿದವರು ಕಾರಂತರು.

ಕಾರಂತರು ಬರೆದ ಪ್ರಬಂಧಗಳು, ಅವರ ಇತರ ಕೃತಿಪ್ರಕಾರಗಳಿಗೆ ಹೋಲಿಸಿದರೆ, ಹೆಚ್ಚು ಪ್ರಸಿದ್ಧಿ ಪಡೆದಿಲ್ಲ ಎಂದೇ ಹೇಳಬಹುದು. ಶಿವರಾಮ ಕಾರಂತರು ರಚಿಸಿದ ಪ್ರಬಂಧಗಳನ್ನು ಅಧ್ಯಯನಕ್ಕೆ ಒಳಪಡಿಸಿ, ಕಾರಂತ ಪ್ರೇಮಿಗಳಿಗೆ ಒಂದು ಉತ್ತಮ ಓದನ್ನು ಈ ಪುಸ್ತಕದಲ್ಲಿ ಒದಗಿಸಲಾಗಿದೆ. ಈ ಗ್ರಂಥದ ಇನ್ನೊಂದು ವೈಶಿಷ್ಟ್ಯವೆಂದರೆ, ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಅಧ್ಯಯನ ಮಾಡುತ್ತಿರುವ ಸಂದರ್ಭದಲ್ಲಿ ರಚಿಸಿದ ಸಂಪ್ರಬಂಧ ಇದಾಗಿದೆ. ಕಾರಂತರು ಮತ್ತು ಪು.ತಿ.ನ. ಅವರ ಪ್ರಬಂಧಗಳನ್ನು ಹೋಲಿಸಿ, ಅಧ್ಯಯನಕ್ಕೆ ಒಳಪಡಿಸಿರುವುದು ಸಹ ಈ ಪುಸ್ತಕದ ವಿಶೇಷ. ''ಶಿವರಾಮ ಕಾರಂತ ಅವರದು ಶ್ರೀಮಂತ ವ್ಯಕ್ತಿತ್ವ ಹಾಗೂ ಸಮೃದ್ಧ ಪ್ರತಿಭೆ. ಅವರು ಶ್ರೇಷ್ಠ ಮಾನವತಾವಾದದ ಪ್ರತಿಪಾದಕರೂ ಆಗಿದ್ದರು ಎಂಬ ಸಂಗತಿ ಅವರ ಪ್ರಬಂಧ ಸಂಕಲನಗಳ ಓದಿನಿಂದ ನಮಗೆ ಮನದಟ್ಟಾಗುತ್ತದೆ. ಕಾರಂತರ ಬಹುತೇಕ ಪ್ರಬಂಧಗಳು ವಿಚಾರಾತ್ಮಕವಾದವು ಹಾಗೂ ಚಿಂತನಾತ್ಮಕವಾದವು. ಕಾರಂತರು ವ್ಯವಸ್ಥೆಯ ಒಳಗಿದ್ದೇ ಬಂಡಾಯ ಹೂಡಿದವರು. 'ಹಳ್ಳಿಯ ಹತ್ತು ಸಮಸ್ತರು' ಕೃತಿಯಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆ ಹೇಗೆಲ್ಲ ಹದಗೆಟ್ಟಿದೆ ಎಂಬುದನ್ನು ಮುಲಾಜಿಲ್ಲದೆ ಎತ್ತಿ ಆಡಿ, ತಮ್ಮ ಊರವರ ಕೂಪಮಂಡೂಕ ಪ್ರವೃತ್ತಿಯನ್ನು ಖಂಡಿಸಿದ್ದಾರೆ. ಅವರದು ಪ್ರಗತಿಗಾಮಿ ನಿಲುವು. ಈ ಬದುಕು ಭೂಮಿಯಿದ್ದಂತೆ. ಈ ಬದುಕನ್ನು ಸಾಧನೆಯ ಕೃಷಿಯಿಂದ ಸಾರ್ಥಕಗೊಳಿಸಬೇಕೆಂಬ ಹಂಬಲ ಅವರದಾಗಿತ್ತು. 'ಬಾಳ್ವೆಯೇ ಬೆಳಕು' ಕೃತಿಯ ಆಶಯ ಆಕೃತಿಯೂ ಇದೇ ಆಗಿದೆ ಎಂಬುದನ್ನು ವಿದ್ಯಾ ಅವರು ಇಲ್ಲಿ ಮುನ್ನೆಲೆಗೆ ತಂದು ಚರ್ಚಿಸಿರುವುದು ಔಚಿತ್ಯಪೂರ್ಣವಾಗಿದೆ.'' (ಮುನ್ನುಡಿಯಲ್ಲಿ ಪ್ರೊ.ಜಿ.ಎನ್.ಉಪಾಧ್ಯ) ಶಿವರಾಮ ಕಾರಂತರ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದವರೆಲ್ಲರೂ ಈ ಕೃತಿಯನ್ನು ಒಮ್ಮೆ ಓದಬಹುದು.



ಪ್ರಬಂಧಕಾರರಾಗಿ ಕಾರಂತರು
ಲೇ: ವಿದ್ಯಾ ರಾಮಕೃಷ್ಣ
ಪ್ರ: ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ
9930305388
ಬೆಲೆ ರು.200/-

ಸಾಹಸಿ ಗಿಲ್ಗಮೆಶ್

» ನಿವೇದಿತಾ ಎಚ್. ಮೈಸೂರು

ಸಾವು ಎಂದರೆ ಮನುಷ್ಯರಿಗೆ ಆಜೀವಪರ್ಯಂತ ಕಾಡುವ ಒಂದು ನಿಗೂಢತೆ. 'ಮರಣವೇ ಮಹಾನವಮಿ' ಎಂದು ಶರಣರ ಪರಂಪರೆ ಸಾರಿದೆಯಾದರೂ, ಸಾವಿಗೆ ಹೆದರಿದ ಯಯಾತಿ, ಪರೀಕ್ಷಿತ, ಹಿರಣ್ಯಕಶಿಪು, ಸಿಸಿಫಸ್ ನಂತಹವರು ಸೃಷ್ಟಿಸಿದ ಅವಾಂತರಗಳಿಗೆ ಜಗತ್ತು ಸಾಕ್ಷಿಯಾಗಿದೆ. ಅಂತಹುದೇ ಮತ್ತೊಂದು ಐತಿಹಾಸಿಕ ಹೆಸರು ಗಿಲ್ಗಮೆಶ್‌ನದು. ಕಿ.ಪೂ. 2850–ಕ್ರಿ.ಪೂ. 2700 ರಲ್ಲಿ ಬದುಕಿದ್ದನೆನ್ನಲಾದ ಗಿಲ್ಗಮೆಶ್ ಸಾವನ್ನು ಗೆಲ್ಲಲು ಬಯಸಿದ್ದವನು.

ನಾಲ್ಕು ಸಾವಿರ ವರ್ಷಗಳ ಹಿಂದೆ ಮೆಸಪಟೋಮಿಯಾ ಅಂದರೆ ಈಗಿನ ಇರಾಕ್ ಮತ್ತು ಸಿರಿಯಾದಲ್ಲಿ ರಚಿತವಾಗಿರುವ ಗಿಲ್ಗಮೆಶ್‌ನ ಮಹಾಗಾಥೆ ಅತ್ಯಂತ ಪ್ರಾಚೀನ ಮಹಾಕಾವ್ಯವಾಗಿದೆ. ಅಕ್ಕೇಡಿಯನ್ ಭಾಷೆಯಲ್ಲಿ ಕೊನಿಫಾರಂ ಲಿಪಿಯಲ್ಲಿ ಬರೆಯಲಾಗಿದ್ದು ಜೇಡಿಮಣ್ಣಿನ ಫಲಕಗಳ ಮೇಲಿದೆ. ಗಿಲ್ಗಮೆಶ್‌ನ ಮೇಲೆ ಗೌರವ ಹೊಂದಿದ್ದ ಕ್ರಿ. ಪೂ. ಏಳನೆಯ ಶತಮಾನದಲ್ಲಿದ್ದ ದೊರೆ ಅಶುರ್ ಬನಿಪಾಲ ಈ ಮಹಾಗಾಥೆಯ ರಚನೆಯ ಹಿಂದಿನ ಪ್ರೇರಕ ಶಕ್ತಿ. ಅವನ ಗ್ರಂಥಾಲಯದಲ್ಲಿ ಸಿಕ್ಕ ಈ ಫಲಕಗಳನ್ನು ಮೊದಲು ಅರ್ಥೈಸಿಕೊಂಡು ಭಾಷಾಂತರಿಸಿದ್ದು ಜಾರ್ಜ್ ಸ್ಮಿತ್ ಎಂಬಾತ.

ಉರುಕ್‌ನ ಐದನೇ ದೊರೆಯಾಗಿದ್ದ ಗಿಲ್ಗಮೆಶ್ ದೈವಾಂಶ ಸಂಭೂತ. ಮಹಾ ಪರಾಕ್ರಮಿ; ಮಾತ್ರವಲ್ಲ, ಮಹಾಕ್ರೂರಿ, ಲೋಲುಪ, ನಿಷ್ಕರುಣಿಯಾಗಿದ್ದನು. ಇವನ ಕ್ರೌರ್ಯದಿಂದ ಜರ್ಝರಿತರಾದ ಜನ ಗೋಳಿಡುವುದನ್ನು ನೋಡಿ ಜನನದ ದೇವತೆ ಇವನಷ್ಟೇ ಪರಾಕ್ರಮಿಯಾದ 'ಎಂಕಿಡು'ವನ್ನು ಸೃಷ್ಟಿಸುತ್ತಾಳೆ. ದೇವಾಲಯದ ವೇಶ್ಯೆ ಶಹ್ಮತ್‌ಳಿಂತ ಪ್ರಭಾವಿತನಾಗಿ ನಾಡಿಗೆ ಬರುವ ಎಂಕಿಡು ಮತ್ತು ಗಿಲ್ಗಮೆಶ್ ನಡುವೆ ಮಧುರ ಬಾಂಧವ್ಯವೊಂದು ಬೆಳೆದು ಇಬ್ಬರೂ ಸ್ನೇಹಿತರಾಗುತ್ತಾರೆ. ನಂತರ ಜೊತೆಗೂಡಿ ಹುಂಬಾಬ ಎಂಬ ದೈತ್ಯ ಮತ್ತು ಸ್ವರ್ಗದ ಹೋರಿಯನ್ನು ಕೊಂದು ವಿಜಯಶಾಲಿಯಾಗುವ ಇಬ್ಬರೂ ಉರುಕ್‌ಗೆ ಹಿಂತಿರುಗುತ್ತಾರೆ. ಶಾಪಗ್ರಸ್ತನಾಗಿ ಎಂಕಿಡು ಮರಣವನ್ನಪ್ಪಿದ ಮೇಲೆ ದುಃಖಿತನಾದ ಗಿಲ್ಗಮೆಶ್‌ನಲ್ಲಿ ಅಮರತ್ವದ ಅಮಲೇರಿ, ಅಮರತ್ವದ ವರ ಪಡೆದ ತನ್ನದೇ ಕುಲದ ಉತನಪಿಷ್ಟಿಮ್‌ನನ್ನು ಹುಡುಕಿ ಹೊರಡುತ್ತಾನೆ. ಸಾಕಷ್ಟು ನೋವು ಕಷ್ಟಗಳ ನಂತರ ಉತನಪಿಷ್ಟಿಮ್‌ನನ್ನು ಭೇಟಿಮಾಡುತ್ತಾನಾದರೂ, ಅವನ ಉಪದೇಶದಿಂದ ಜ್ಞಾನೋದಯವಾಗುತ್ತದೆ. ನಂತರ ತನ್ನ ರಾಜ್ಯಕ್ಕೆ ಹಿಂತಿರುಗಿ ಪ್ರಜಾನುರಾಗಿಯಾಗಿ ಆಳ್ವಿಕೆ ನಡೆಸಿ ಮರಣ ಹೊಂದುತ್ತಾನೆ.

ನಾವು ಓದಿರುವ ಸಾಕಷ್ಟು ಜನಪದ ಕತೆಗಳಿಗೆ ಹೋಲುವ ಗಿಲ್ಗಮೆಶ್‌ನ ಕತೆ, ಅದರಲ್ಲಿನ ಮನುಷ್ಯ ಸ್ವಭಾವದ ಸಾರ್ವತ್ರಿಕತೆಯನ್ನು ಸಾರುವುದರಿಂದ ನಮಗೆ ಆಪ್ತವೆನಿಸುತ್ತದೆ. ಮನುಷ್ಯ ಎಂಬ ಒಂದು ಹಣೆಪಟ್ಟಿ ಸಾಕು ಅವನ ಸ್ವಭಾವ ಏಕರೂಪವೆನಿಸಲು. ಅದನ್ನು ಗಿಲ್ಗಮೆಶ್‌ನ ಗಾಥೆ ಬಹಳ ಚೆನ್ನಾಗಿ ಕಟ್ಟಿಕೊಡುತ್ತದೆ. ಸಾವಿಗೆ ಹೆದರಿದ ಗಿಲ್ಗಮೆಶ್ ಅನುಭವಿಸಿದ ನೋವು, ಸಂಕಟ, ಆರ್ತತೆ, ದೈನ್ಯ, ಅಸಹಾಯತೆ ಎಲ್ಲವೂ ಮನುಷ್ಯ ಜನ್ಮದ ಅಂತಿಮ ಸತ್ಯವನ್ನು ಜೀವನ ಎಲ್ಲರಿಗೂ ಅರ್ಥ ಮಾಡಿಸುವ ರೂಕ್ಷ ಪರಿಯನ್ನು ಹೇಳುತ್ತದೆ. ಅವನು ಯಾವನೇ ಆಗಿರಲಿ, ರಾಜನೋ ಸೇವಕನೋ, ಸಾವು ಭೇದ ಎಣಿಸುವುದಿಲ್ಲವೆಂಬ ಸತ್ಯದ ಅನಾವರಣ, ಅಮರತ್ವ ತಂದೊಡ್ಡುವ ನಿರರ್ಥಕತೆ ಎಲ್ಲವೂ ಗಿಲ್ಗಮೆಶ್‌ನ ಕತೆಯಲ್ಲಿದೆ. ಜೀವನದಲ್ಲಿ ನಾವು ಬದುಕುತ್ತಿರುವ ಕ್ಷಣವಷ್ಟೇ ನಮ್ಮದು ಎಂಬ ಸತ್ಯವನ್ನು ಮನಗಾಣಿಸುವ ಪ್ರಯತ್ನ ಈ ಕಥನದಲ್ಲಿದೆ.

ಪುರಾಣಗಳು ರಂಜನೀಯ ಮತ್ತು ಸ್ವಾರಸ್ಯಕರ ಹಾಗೆಯೇ ವೈವಿಧ್ಯಮಯ ಕೂಡಾ. ಗಿಲ್ಗಮೆಶ್ ಕೂಡಾ ಅದಕ್ಕೆ ಹೊರತಲ್ಲ. ಗಿಲ್ಗಮೆಶ್ ಇಲ್ಲಿ ಪವಿತ್ರ ಕಾಡುಹಸುವಿನ ದೇವತೆಯ ಮಗ, ಎಂಕಿಡು ಮೃಗಸದೃಶನಾದರೂ ಸ್ನೇಹಿ, ವಿಚಾರಶೀಲ! ಶಹ್ಮತ್ ಸಹೃದಯಿ ವೇಶ್ಯೆ, ದೇವರ ದೇವ ಅನು, ಜನನದ ದೇವತೆ ಅರೂರು, ಸೂರ್ಯದೇವ ಶಮಶ್, ಮದಿರೆ ತಯಾರಿಸುವ ಸಿದೂರಿ, ಉತನಪಿಷ್ಟಿಮ್‌ನ ನಾವಿಕ ಉರ್ಶನಬಿ, ವಿವೇಕದ ದೇವತೆ ಇಯಾ, ಯುದ್ಧದೇವ ನಿನುರ್ತ, ಸುಂಟರಗಾಳಿಯ ದೇವತೆ ಎನ್ಲಿಲ್ ಹೀಗೆ ವೈವಿಧ್ಯಮಯ ಪಾತ್ರಗಳು ಜೀವನದ ಸತ್ಯವನ್ನು ಗಿಲ್ಗಮೆಶ್‌ಗೆ ಮಾತ್ರವಲ್ಲ, ಓದುಗರಿಗೂ ತಲುಪಿಸುತ್ತವೆ. ಕನಸುಗಳು ಇಹಕ್ಕೂ ಪರಕ್ಕೂ ಸೇತುವೆಯಾಗುವ ರೀತಿ ಸ್ವಾರಸ್ಯಕರವಾಗಿದೆ.

104 ಪುಟಗಳಲ್ಲಿ ಈ ಮಹಾಗಾಥೆಯನ್ನು ತೆರೆದಿಡುವುದಕ್ಕೆ ಲೇಖಕರು ಹಲವು ಸಂಶೋಧಕರ, ಲೇಖಕರ ಇಂಗ್ಲಿಷ್ ಪುಸ್ತಕಗಳನ್ನು ಅರಗಿಸಿಕೊಂಡಿದ್ದಾರೆ! ಡಾ.ಜೆ.ಬಾಲಕೃಷ್ಣ ಅವರು ಗಿಲ್ಗಮೆಶ್‌ನ ಕತೆಯನ್ನು ಕನ್ನಡದಲ್ಲಿ ಕಟ್ಟಿಕೊಟ್ಟಿದ್ದಾರೆ.

ಇದು ಇಂದಿಗೆ ಸುಮಾರು 5000 ವರ್ಷಗಳ ಹಿಂದೆ ಬದುಕಿದ್ದನೆನ್ನಲಾದ ಪರಾಕ್ರಮಿಯೊಬ್ಬನ ಕಥೆ!



ಗಿಲ್ಗಮೆಶ್
ಲೇ: ಡಾ ಜೆ ಬಾಲಕೃಷ್ಣ
ಪ್ರ: ನವಕರ್ನಾಟಕ
ಬೆಲೆ ರು.135/-

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಕುವೆಂಪು ವಿಚಾರ ಕ್ರಾಂತಿ
(ಕುವೆಂಪು ಅವರು ವಿವಿಧ ಸಂದರ್ಭಗಳಲ್ಲಿ ಮಾಡಿದ ಭಾಷಣ, ಲೇಖನಗಳ ಸಂಕಲನ)
ಸಂ: ಬರಗೂರು ರಾಮಚಂದ್ರಪ್ಪ
ಪ್ರ: ಜನ ಪ್ರಕಾಶನ, ಬೆಂಗಳೂರು
ಬೆಲೆ: ರೂ 100/-

2



ಮಿತ್ರಾರ್ಜಿತ
(ಖ್ಯಾತ ಸಾಹಿತಿ ಅ.ರಾ. ಮಿತ್ರ ಅವರಿಗೆ 90 ವರ್ಷ ತುಂಬಿದಾಗ ವಿವಿಧ ಲೇಖಕರು ತಮ್ಮ ಬರಹಗಳ ಮೂಲಕ ಸಲ್ಲಿಸಿದ ಅಭಿನಂದನಾ ಗ್ರಂಥ)
ಸಂ : ಎನ್. ರಾಮನಾಥ್ ಸೌಮ್ಯ ಮಿತ್ರ
ಪ್ರ: ತೇಜು ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 450/-

3



ಕಪಿಲೆ ಕಂಡ ಕತೆಗಳು
('ಯೋಳ್ತೀನ್ ಕೇಳಿ' ಕೃತಿಯ ಮೂಲಕ ಸಾಕಷ್ಟು ಹೆಸರು ಮಾಡಿರುವ ಕುಸುಮಾ ಅವರ ಪ್ರಥಮ ಕಥಾಸಂಕಲನವಿದು)
ಲೇ: ಕುಸುಮಾ ಆಯರಹಳ್ಳಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 150/-

4

ರುಚಿಗೆ ತಕ್ಕಷ್ಟು...?
(ತಮ್ಮ ಅಭಿನಯದಿಂದ ಈಗಾಗಲೇ ಪ್ರಸಿದ್ಧರಾಗಿರುವ ರಂಗ, ಸಿನಿಮಾ ನಟಿ ಅಕ್ಷತಾ ಅವರ ಕಥಾಸಂಕಲನವಿದು)
ಲೇ: ಅಕ್ಷತಾ ಪಾಂಡವಪುರ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 175/-

5



ಧರ್ಮಚಕ್ರವರ್ತಿ ಅಶೋಕ
(ಸದಾ ಯುದ್ಧದಲ್ಲೇ ನಿರತನಾದ ಅಶೋಕ, ಹಿಂಸೆಯನ್ನು ತೊರೆಯಲು ಬೌದ್ಧಧರ್ಮದ ಮರೆಹೋದ - ಸಾಮ್ರಾಟನೊಬ್ಬನ ಕಥೆಯಿದು)
ಲೇ: ಸು. ರುದ್ರಮೂರ್ತಿ ಶಾಸ್ತ್ರಿ
ಪ್ರ: ತನುಮನು ಪ್ರಕಾಶನ, ಮೈಸೂರು
ಬೆಲೆ: ರೂ 400/-

6



ಎದೆಯ ಹಣತೆ
(ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ 13 ಕಥೆಗಳ ಸಂಕಲನ ಈಗ ಬೂಕರ್ ಪ್ರಶಸ್ತಿ ಪುರಸ್ಕಾರದೊಂದಿಗೆ)
ಲೇ: ಬಾನು ಮುಷ್ತಾಕ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ: ರೂ 250/-

7



ಕೊಕೇನ್ ರಾಜರಹಸ್ಯ
(ಹೀನಾಯ ಮತ್ತು ಬೆಚ್ಚಿ ಬೀಳಿಸುವ ಅಪರಾಧಗಳ ಮೂಲಕ ಕುಖ್ಯಾತನಾಗಿರುವ ಪಾಬ್ಲೋ ಎಸ್ಕೋಬಾರ್‌ನ ರಕ್ತ ಚರಿತ್ರೆ)
ಲೇ: ಡಾ| ಡಿ.ವಿ. ಗುರುಪ್ರಸಾದ್
ಪ್ರ: ಸಪ್ನ ಬುಕ್‌ಹೌಸ್, ಬೆಂಗಳೂರು
ಬೆಲೆ : ರೂ 295/-

8



ತಳಾತಳ
(ಮನುಷ್ಯ ವರ್ತನೆಯ ತಳಾತಳವನ್ನು ದರ್ಶಿಸುವ ಕಾದಂಬರಿ ಇದು. ತಮಿಳಿನ ಈ ವಿಶೇಷ ಕಾದಂಬರಿಯನ್ನು ಕನ್ನಡಕ್ಕೆ ಆಕರ್ಷಕವಾಗಿ ಅನುವಾದಿಸಿದ್ದಾರೆ ಶಾಂತಿ ಅವರು)
ತಮಿಳು ಮೂಲ : ಬಿ. ಜೆಯಮೋಹನ್
ಅನು : ಶಾಂತಿ. ಕೆ. ಅಪ್ಪಣ್ಣ
ಪ್ರ: ಛಂದ ಪುಸ್ತಕ, ಬೆಂಗಳೂರು
ಬೆಲೆ : ರೂ 295/-

9



ಗಿಲ್ಗಮೆಶ್ ಮಹಾಗಾಥೆ
(ಬೈಬಲ್‌ಗಿಂತ ಹಳೆಯದಾದ ಈ ಬ್ಯಾಬಿಲೋನಿಯನ್ ಮಹಾಗಾಥೆ ಸಾವಿರಾರು ವರ್ಷಗಳಿಂದ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದಿದೆ. ಅಮರನಾಗಲು ಯತ್ನಿಸುವ ಮನುಷ್ಯ ಪ್ರಯತ್ನದ ಕಥೆ.)
ಕನ್ನಡಕ್ಕೆ : ಡಾ| ಜೆ. ಬಾಲಕೃಷ್ಣ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 135/-

10



ಆಕ್ರಮಣ
(ತಮ್ಮ 'ರೌದ್ರಾವರಣಂ' ಕೃತಿಯ ಮೂಲಕ ಹೆಸರು ಮಾಡಿರುವ ಅನಂತ ಕುಣಿಗಲ್ ಅವರ ಮತ್ತೊಂದು ರೋಚಕ ಕಾದಂಬರಿ 'ಆಕ್ರಮಣ')
ಲೇ: ಅನಂತ ಕುಣಿಗಲ್
ಪ್ರ: ಅವ್ವ ಪುಸ್ತಕಾಲಯ, ಕೆಂಚನಹಳ್ಳಿ
ಬೆಲೆ : ರೂ 150/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಕೋಳಿಕೆ ರಂಗ

ಬೇಲಿ ದಾಟಿ ಬಂದ ಹುಂಜ, ಮಾಡಿದ ಅನಾಹುತವಾದರೂ ಏನು!

» ಸುಮಾ ರಮೇಶ್, ಹಾಸನ

ಕೊಕ್ಕೊ ಕೋ. ಕೋ. ಕೋಳಿಯ ಅಲಾರ್ಮ್ ರಿಂಗ್ ಟೋನ್ ಅನುರಣಿಸಿದಾಗ ತಥ್! ಅದೆಷ್ಟು ಬೇಗ ಬೆಳಕಾಯಿತು? ಎನಿಸಿ ನಿಧಾನವಾಗಿ ಕಣ್ತೆರೆದೆ. ಬೆಳಕಿನ ಕಿರಣಗಳಿಗೆ ಹೊಂದಿಕೊಳ್ಳದ ರೆಪ್ಪೆಗಳು ಮುಟ್ಟಿದರೆ ಮುನಿಯಂತೆ ಪುನಃ ಮುಚ್ಚಿಕೊಂಡು ಜೂಗರಿಸತೊಡಗಿದವು. ನಿರಂತರ ಅರಚುತ್ತಾ ನನ್ನ ಸವಿ ನಿದ್ರೆಗೆ ಭಂಗ ತರುತ್ತಿದ್ದ ಕೋಳಿಯ ಕೂಗಿಗೆ ಬ್ರೇಕ್ ಹಾಕಲು ಮೊಬೈಲ್ ಕೈಗೆತ್ತಿಕೊಂಡೆ. ಅದು ತಣ್ಣಗೆ ಮಲಗಿತ್ತು. ಅಚ್ಚರಿಯಿಂದ ಕಣ್ಣುಜ್ಜಿಕೊಂಡು ಮೊಬೈಲನ್ನು ಮಗುಚಿ ತಿರುಗಿಸಿ ಎಲ್ಲಾ ಕೋನಗಳಿಂದಲೂ ದಿಟ್ಟಿಸಿದೆ. ಮತ್ತೊಮ್ಮೆ ಕೋ ಕೋಕೋಕೋ ಎಂಬ ಕಲರವ ಬೇರೆಡೆಯಿಂದ ಧ್ವನಿಸಿತು. ಇದಾವ ಕೋಕೊತಾಳೀಯ ಎಂದು ಬೆರಗಾಗುವಷ್ಟರಲ್ಲಿ ಪಕ್ಕದಲ್ಲಿದ್ದ, ಪಕ್ಕ ವಾದ್ಯ, ನನ್ನ ತಲೆಗೆ ಮೊಟಕಿ 'ಆ ಕುಕ್ಕುಟವಾಣಿ

ಹಹ್ಹಾಸ್ಯ!

ಜಂಗಮವಾಣಿಯದಲ್ಲ ನೆರೆಮನೆಯ ಕೋಳಿಗಳ ಉದಯವಾಣಿ' ಎಂದಾಗ ಬೆರಗಿನಿಂದ ಎದ್ದು ಕುಳಿತೆ.

'ಓಹ್ ! ನೆರೆ ಬಾಂಧವರು ಭಾನುವಾರದ ಬಾಡೂಟಕ್ಕೆ ಜೀವಂತ ಕೋಳಿಯನ್ನೇ ತಂದರೇ?' ಎನ್ನುತ್ತಾ ಹೊದಿಕೆ ಸರಿಸಿ ಮೇಲೆದ್ದೆ.

'ಒಂದಲ್ಲಇಡೀ ಕುಕ್ಕುಟ ಪರೀವಾರವನ್ನೇ ಕರೆತಂದು ಪೋಷಿಸುತ್ತಿರುವರು ಹೋಗಿ ನೋಡು' ಎಂದರು. ಥಟ್ಟನೆ ನನ್ನ ಸಸ್ಯ ಸಂಕುಲದ ನೆನಪಾಗಿ ಎದೆ ಧಸಕ್ಕೆಂದಿತು.

ಇತ್ತೀಚೆಗಷ್ಟೇ ನರ್ಸರಿಯಿಂದ ಹತ್ತಾರು ಸಸಿಗಳನ್ನು ತಂದು ಪುಟ್ಟ ಕೈತೋಟವನ್ನು ನಿರ್ಮಿಸಿದ್ದೆ. ಎರೆಹುಳು ಗೊಬ್ಬರ, ಕೊಟ್ಟಿಗೆ ಗೊಬ್ಬರಗಳನ್ನು ಮಣ್ಣಿಗೆ ಬೆರೆಸಿ ಇಟ್ಟಿಗೆಗಳನ್ನು ಸಾಲಾಗಿ ಜೋಡಿಸಿ ಗಿಡ ನೆಟ್ಟು ಪೋಷಿಸುತ್ತಿದ್ದೆ. ಬೆಳಗ್ಗೆ ಎದ್ದ ಕೂಡಲೇ ಹೊಸ ಚಿಗುರು, ಎಳೆ ಮೊಗ್ಗು, ಅರೆಬಿರಿದ ಹೂವುಗಳನ್ನು ನೋಡುವಾಗ ಮನ ಮುದಗೊಳ್ಳುತ್ತಿತ್ತು. ನನ್ನ ಸಸ್ಯ ಸಂಕುಲ ಕುಕ್ಕುಟಗಳ ಧಾಳಿಗೆ ಒಳಗಾಗಿರಬಹುದೇ ಎಂಬ ಶಂಕೆಯಿಂದ ಗಸಗಸನೆ ಬ್ರಶ್ ಮಾಡುವ ಭರದಲ್ಲಿ ವಸಡಿಗೆ ತಿವಿದುಕೊಂಡದ್ದನ್ನೂ ಲೆಕ್ಕಿಸದೆ ಬಾಯ್ತೊಳೆದು ಮುಖ ಸವರಿಕೊಂಡು ಹೊರಗೋಡಿದೆ.

ಪಕ್ಕದ ಮನೆಯಿಂದ ನಮ್ಮ ಮನೆಯನ್ನು ಪ್ರತ್ಯೇಕಿಸಿದ್ದ ಏಕಮೇವ ಕಾಂಪೌಂಡ್ ಗೋಡೆಯ ಬಳಿ ಹೋಗಿ ನಿಂತಾಗ ಅಚ್ಚರಿ ಕಾದಿತ್ತು. ನೂರು ಬೈ ಎಂಬತ್ತು ಅಳತೆಯ ಅವರ ಬೃಹತ್ ನಿವೇಶನದ ಒಂದು ಬದಿಯಲ್ಲಿದ್ದ ಮನೆಯನ್ನು ಹೊರತು ಪಡಿಸಿ ಉಳಿದ ಅಷ್ಟೂ ಭಾಗಕ್ಕೂ ಹಸಿರು ನೆಟ್ ಫೆನ್ಸಿಂಗ್ ಹಾಕಿದ್ದರು. ಅದರೊಳಗೆ ಎಂಟು ಹತ್ತು ಕೋಳಿಗಳು ಲಿಂಗ ಬೇಧ, ವರ್ಣ ಭೇದವಿಲ್ಲದೆ ಸ್ವಚ್ಛಂದವಾಗಿ ವಿಹರಿಸುತ್ತಿದ್ದವು. ಹೊಸ ಪರಿಸರ, ವಾತಾವರಣವನ್ನು ಕಂಡು ಮುದಗೊಂಡಿದ್ದವು. ಆ ಹಸಿರು ಬೃಹತ್ ಜಾಲವನ್ನು ಭೇದಿಸಿ ಅವು ಹೊರಬರುವ ಸಾಧ್ಯತೆಗಳಿಲ್ಲದ ಕಾರಣ ನೆಮ್ಮದಿಯ ಉಸಿರುಬಿಟ್ಟೆ.

ಕೋ ಎನ್ನಿರೇ ಕೋಬಾನ ಎನ್ನಿರೇ

ಕೋಳಿಗಳು ಹೊಸ ಪ್ರದೇಶಕ್ಕೆ ವಲಸೆ ಬಂದು ಹತ್ತಾರು ದಿನಗಳಾಗಿದ್ದವು. ಬೆಳಗ್ಗೆ ಸೂರ್ಯೋದಯಕ್ಕೆ ಮುನ್ನವೇ ಎದ್ದು ಅರಚುತ್ತಿದ್ದವು ಎಂಬುದನ್ನು ಹೊರತುಪಡಿಸಿದರೆ ಅವು ನಿರುಪದ್ರವಿಗಳು ಎಂದು ಸಾಬೀತು ಪಡಿಸಿದ್ದವು. ನನಗೆ ಅಲಾರ್ಮ್ ಇಡುವ ರಗಳೆಯೇ ಇರಲಿಲ್ಲ. ಬೆಳಗ್ಗೆ ಬೇಗನೆದ್ದು ಗಿಡಗಳ ಮೈದಡವಿ, ಕಾಂಪೌಂಡ್ ಎಂಬ ಚೈನಾ ವಾಲ್ ಬಳಿ ಹೋಗಿ ಯಾವುದೇ ಬೇಚೈನಿ ಇಲ್ಲದೆ ಕುಕ್ಕುಟ ಸಮೂಹವನ್ನು ದಿಟ್ಟಿಸುತ್ತಿದ್ದೆ. ಕೆಂಪು, ಕಪ್ಪು, ಬಿಳಿ ಹೀಗೆ ಹಲವು ಬಣ್ಣದ ಮಿಶ್ರ ತಳಿಗಳು ಒಟ್ಟಾಗಿ ವಿಹರಿಸುತ್ತಾ, ಕೊಕ್ಕಿನಿಂದ ಆಹಾರ ಕುಕ್ಕುತ್ತಾ ಗಲಗಲಿಸುತ್ತಿದ್ದವು. ಲಹರಿ ಬಂದಾಗ ಹೇಂಟೆಗಳು ತಮ್ಮ ಜಾಲ ಪಾದವನ್ನು ವಯ್ಯಾರದಿಂದ ಎತ್ತಿಡುತ್ತಿದ್ದರೆ ನೆತ್ತಿಯ ಮೇಲೆ ನೇತಾಡುವ ಕೆಂಪು ಕೋಂಬ್ ಹೊಂದಿದ ಹುಂಜಗಳು ಚಲ್ಲಾಟವಾಡಲು ಹೊಂಚು ಹಾಕುತ್ತಿದ್ದವು. 'ಕೋ ಎನ್ನಿರೇ' ಎನ್ನುತ್ತಾ ಸೋಬಾನೆ ಪದ ಹಾಡುತ್ತಾ ಮಣ್ಣನ್ನು ಕಾಲಲ್ಲಿ ಕೆದರಿ ಎರಚಾಡುತ್ತಾ ಕೋಳಿಗಳೆಲ್ಲಾ ಹೋಳಿಯಾಡುತ್ತಿದ್ದವು. ಆಗೊಮ್ಮೆ ಈಗೊಮ್ಮೆ ಸಣ್ಣ ಪುಟ್ಟ ಕೋಳಿ ಜಗಳಗಳು ಗರಿಕೆದರಿದರೂ ಸಮನ್ವಯ ಸಾಧಿಸುತ್ತಾ ಆ ಕುಕ್ಕುಟ ಸಮೂಹ ಒಟ್ಟಾಗಿ ಬಾಳುತ್ತಾ 'ಜೇನಿನ ಗೂಡು ನಾವೆಲ್ಲಾಬೇರೆಯಾದರೆ ಜೇನಿಲ್ಲ ' ಎಂಬಂತಿದ್ದವು.

ಜಂಭಗಾತಿ ಅಜ್ಜಿಯ ಕೋಳಿ ಕೂಗಿನಿಂದ ಬೆಳಗಾಗುವ ಕತೆಯನ್ನು ಕೇಳಿದ್ದ 'ಕಾಕ್ ಎ ಡೂಡಲ್ ಡೂ' ಎಂಬ ಒಂದೇ ಬಗೆಯ ಕೂಗನ್ನು ತಿಳಿದಿದ್ದ ನನಗೆ ಈಗ ಅವುಗಳ ಪ್ರತಿದಿನದ 'ಒಡನೋಟ' ದಿಂದ ಹಲವು ಬಗೆಯ ಗ್ರಹಿಕೆಗಳು ದಕ್ಕಿದವು. ಗುಂಪಿನಿಂದ ಬೇರೆಯಾದಾಗ, ಮೊಟ್ಟೆ ಇಡುವ ಸಮಯ, ಶತ್ರು ದಾಳಿಯ ಸಮಯ, ಆತಂಕವಾದಾಗ, ಹಸಿವಾದಾಗ ಹೀಗೆ ಅವಶ್ಯಕತೆ, ಭಾವನೆಗೆ ತಕ್ಕಂತೆ ಕ ಗುಣಿತಾಕ್ಷರದ ಅಷ್ಟೂ ವೇರಿಯೇಶನ್ಸ್ ಬಳಸಿ ಅವು ಸಂವಹನ ನಡೆಸುತ್ತಿದ್ದವು.

ಕೆಲವೇ ದಿನಗಳಲ್ಲಿ ಕೋಳಿಗಳಿಗೆ ಆ ವಾಸಸ್ಥಳ, ಕಾರ್ಯಸ್ಥಳ ಬೇಸರವೆನಿಸಿ ಹೊಸ ಜಾಗವನ್ನು ಅನ್ವೇಷಿಸುವ ಹುಕಿ ಬೆಳೆಯಿತು. ಅವು ಬೇಲಿಯಂಚಿಗೆ ಬಂದು ನಿಲ್ಲುವುದು, ತಮ್ಮ ಪರಿಧಿಯಾಚೆಗಿನ ಪ್ರಪಂಚವನ್ನು ಬೆರಗುಗಣ್ಣಿನಿಂದ ನೋಡುವುದು, ಬೇಲಿಯ ಬ್ಯಾರಿಕೇಡ್ ಭೇದಿಸಲು ಪ್ರಯತ್ನಿಸುವುದು ಮಾಮೂಲಾಯಿತು. ಗುಂಪಿನಲ್ಲಿದ್ದ ಪುಂಡ ಹುಂಜವೊಂದು 'ನಾನು ಕೋ.ಳಿ..ಕೆ ರಂಗ' ಎಂಬ ಭಾವದೊಂದಿಗೆ ಸ್ವಯಂ ಘೋಷಿತ ನಾಯಕನ ಪೋಸಿನಲ್ಲಿ ಆಗಾಗ ಹೇಂಟೆಗಳಿಗೆ ತೊಡರುಗಾಲು ಕೊಡುವುದು, ಬೆನ್ನಟ್ಟಿ ಬೆದರಿಸುವುದು ಇಂತಹ ರಂಗಿನಾಟವಾಡುತ್ತಾ ಗಲಭೆಯೆಬ್ಬಿಸುತ್ತಿತ್ತು. ಅದೇ ಗುಂಪಿನಲ್ಲಿ ಸ್ವಲ್ಪ ಲಘುವಾಗಿದ್ದ ಮತ್ತೊಂದು ಹುಂಜಕ್ಕೆ ಹೇಂಟೆಗಳನ್ನು ಅದರಿಂದ ಕಾಪಾಡುವ ಮನಸ್ಸಿದ್ದರೂ ಅದರಂತೆ ತನ್ನ ಭೌತಿಕಾಕೃತಿ ಕಿಂಗ್ ಸೈಜ್ ಇಲ್ಲವೆಂಬ ಕೀಳರಿಮೆಯಿಂದ ಮೌನ ವಹಿಸುತ್ತಿತ್ತು. ಆದರೂ ಹೇಂಟೆಗಳು ಕಿರುಚಿ ಪ್ರತಿಭಟಿಸುವಾಗಿ ತಾನೂ ದನಿಗೂಡಿಸಿ ಓರಲ್ ಸಪೋರ್ಟ್ ನೀಡುತ್ತಿತ್ತು. ಅದರ ಮಾಲೀಕರು ಆದಷ್ಟು ಶೀಘ್ರ ಆ ರೌಡಿ ರಂಗನನ್ನು ಹ(ಗ)ಲ್ಲಿಗೇರಿಸಿದರೆ ಒಳಿತೆನಿಸಿತು.

ಅಂದು ಮಧ್ಯಾಹ್ನ ಯಾವುದೋ ಫೋನ್ ಕರೆಯಲ್ಲಿ ವ್ಯಸ್ತಳಾಗಿದ್ದ ಸಮಯ ಬಹಳ ಭಿನ್ನವಾದ ಕೊಕ್‌ಕೊಕ್‌ಕೋ ಸದ್ದು ಕೇಳಿತು. ಆ ಅಸಹಜ ದನಿ ಬಹಳ ಸನಿಹದಲ್ಲೇ ಮೊಳಗಿದಾಗ ಅನುಮಾನದಿಂದ ಫೋನ್ ಕೈಯಲ್ಲಿ ಹಿಡಿದೇ ಕಿಟಕಿ ಬಳಿಗೆ ಬಂದೆ. ಕೈತೋಟದ ಮಣ್ಣೆಲ್ಲಾ ಕೆದರಿಕೊಂಡು ಭಾರೀ ಅವಘಡವೇ ಸಂಭವಿಸಿದಂತೆ ತೋರಿತು. ಪುಂಡ ಹುಂಜ ಒಂದಿಬ್ಬರು ಒಡನಾಡಿಗಳೊಂದಿಗೆ ವಲಸೆ ಬಂದು ನಿರ್ಭಿಡೆಯಿಂದ ನಲಿದಾಡುತ್ತಿತ್ತು. ಫೋನ್ ಕೆಳಗೆಸೆದು ಹೊರಗೋಡಿದೆ. ಎರಡು ಮನೆಗಳನ್ನು ಭಾಗವಾಗಿಸಿದ್ದ ಒನ್ ಅಂಡ್ ಓನ್ಲಿ ಕಾಂಪೌಂಡ್ ಎಂಬ 'ಭಾ(ವಾ)ಗಾ ಬಾರ್ಡರ್ ' ದಾಟಿದ್ದ ಕುರುಹಾಗಿ ಅಲ್ಲಿ ಅವುಗಳ ದ್ರವ ಮಿಶ್ರಿತ ಘನ ತ್ಯಾಜ್ಯದ ವಿಸರ್ಜನೆಯಿತ್ತು. ಆತಂಕದಿಂದಲೇ ಕೈತೋಟದೆಡೆಗೆ ಧಾವಿಸಿದೆ. ನನ್ನ ಸಸ್ಯ ಸಂಕುಲ ಡೆಕ್ಕನ್ ಸುಲ್ತಾನರ ದಾಳಿಗೊಳಗಾದ ಹಂಪಿಯಾಗಿತ್ತು. ಕೋಪದಿಂದ ಕಂಪಿಸುತ್ತಾ ಕೈಗೆ ಸಿಕ್ಕ ಕಲ್ಲನ್ನು ಎತ್ತಿ ಅವುಗಳೆಡೆಗೆ ಬೀಸಿದೆ. ಗಿಡದಲ್ಲಿದ್ದ ದಪ್ಪ ಟೊಮೆಟೊ ದೋರೆಗಾಯಿಗಳು ಗಾಯಗೊಂಡು ದಶ ದಿಕ್ಕುಗಳಲ್ಲೂ ಚೆಲ್ಲಾಡಿದ್ದವು. ರಂಗನ ಸಹಚರರು ವಿಚಿತ್ರ ಸದ್ದುಗೈಯ್ಯುತ್ತಾ ಆ ಗಲಭೆಗ್ರಸ್ಥ ಸ್ಥಳದಿಂದ ಕಳಚಿಕೊಂಡು ಊಹಾತೀತ ವೇಗದಲ್ಲಿ ಬಾರ್ಡರ್ ದಾಟಿ ಮನೆ ಸೇರಿದರು.

ತುಜ್ ಕೊ ಮಿರ್ಚಿ ಲಗೀ ತೋ?

ನನ್ನ ದುರ್ಗಿಯವತಾರಕ್ಕೂ ಮಣಿಯದ ಏಕೈಕ 'ಮುರ್ಗಾ' ಅತಿರೇಕದ ಆತ್ಮವಿಶ್ವಾಸದೊಂದಿಗೆ ಆ ಅದ್ವಾನ ಪರ್ವದ ಸಮಾರೋಪ ಸಂಭ್ರಮದಲ್ಲಿತ್ತು. ಪ್ರೀತಿಯಿಂದ ಬೆಳೆಸಿದ ಹೂವು, ತರಕಾರಿಗಳೆಲ್ಲಾ ತೊಟ್ಟು ಕಳಚಿ ಕೆಳಬಿದ್ದು ಛಿದ್ರಗೊಂಡಿದ್ದವು. ಬೇರು ಹರಿದು ಎಲೆಯುದುರಿದ ನಿತ್ಯ ಮಲ್ಲಿಗಿಡ ಹರಿದ್ ಪರ್ಣದ ಬೀಡಾಗಿರುವುದ ಕಂಡು ಹೊಟ್ಟೆಗೆ ಬೆಂಕಿ ಬಿದ್ದಂತಾಯಿತು. ಮತ್ತೊಂದು ಕಲ್ಲೆತ್ತಿ ಅದರೆಡೆಗೆ ಬೀಸಿದೆ.

ಮೆಣಸಿನ ಕಾಯಿ ಗೊಂಚಲನ್ನು ಕೊಕ್ಕಿನಿಂದ ಕುಕ್ಕುತ್ತಿದ್ದ ಹುಂಜ 'ತುಜ್ ಕೊ ಮಿರ್ಚಿ ಲಗೀ ತೋ, ಮೈ ಕ್ಯಾ ಕರೂ' ಎಂಬಂತೆ ಮುಖ ಮಾಡಿ ನನ್ನೆಡೆಗೆ ನೋಡುತ್ತಲೇ ಪುರ್ರನೆ ಹಾರಿ ಬಾರ್ಡರ್ ದಾಟಿ ತನ್ನ ಬಳಗವನ್ನು ಸೇರಿತು.

ಅದರ ಬೆನ್ನಟ್ಟಿ ಕಾಂಪೌಂಡ್ ವಾಲ್ ಬಳಿ ಬಂದು ನೋಡಿದರೆ ಹಸಿರು ಜಾಲರಿ ಬೇಲಿಯ ತಳಭಾಗದಲ್ಲಿ ರಹಸ್ಯ ಕಿಂಡಿಯೊಂದು ಸೃಷ್ಟಿಯಾಗಿತ್ತು. ನೆಟ್ ಕೊರೆದು ಹೊರವಲಯಕ್ಕೆ ಕಟ್ ರೂಟ್ ಕಂಡುಹಿಡಿದಿದ್ದ ಅದೇ 'ಕಾಕ್ಸ್ ಕೋಳಿಗಾಮ ' ಮುಂದಿನ ದಿನಗಳಲ್ಲಿ ದಂಡಿನೊಂದಿಗೆ ಬಂದು ಕೊಳ್ಳೆ ಹೊಡೆಯದಂತೆ ಏನಾದರೂ ಯೋಜನೆ ರೂಪಿಸಬೇಕಿತ್ತು. ಒನಕೆ ಹಿಡಿದು ಓಬವ್ವನಾಗುವ ಬದಲು, ಕೋಳಿಯ ಓನರ್ ಬಳಿ ದೂರು ಸಲ್ಲಿಸಿ ಬೇಲಿ ಭದ್ರಪಡಿಸಿ 'ರೌಡಿ ರಂಗ'ನಿಗೆ ಬೇಲ್ ಸಿಗದಂತೆ ಮಾಡುವ ಉದ್ದೇಶದಿಂದ ಪಕ್ಕದ ಮನೆಯೆಡೆಗೆ ಧಾವಿಸಿದೆ.

ಹಾಲೆ ಕೆತ್ತೆ ಕಷಾಯ

» ಅಶ್ವಿನಿ. ಎಸ್. ಜಿ. ಆರ್.ಆರ್.ನಗರ

ಆಷಾಢ ಮಾಸದಲ್ಲಿ ಬರುವ ಅಮಾವಾಸ್ಯೆಯನ್ನು ಒಂದೊಂದು ಕಡೆಗಳಲ್ಲಿ ಒಂದೊಂದು ರೀತಿಯಲ್ಲಿ ಕರೆಯುತ್ತಾರೆ. ಬೆಂಗಳೂರಿನ ಸುತ್ತ ಮುತ್ತ ಭೀಮನ ಅಮಾವಾಸ್ಯೆ ಎಂದೂ, ತುಳುನಾಡಿನಲ್ಲಿ ಆಟಿ ಅಮಾವಾಸ್ಯೆ ಎಂದೂ, ಕುಂದಗನ್ನಡದವರು ಆಸಾಡಿ ಅಮಾಸಿ, ಕರ್ಕಾಟಕ ಅಮಾವಾಸ್ಯೆ ಎಂದೂ ಕರೆಯುತ್ತಾರೆ. ಕರಾವಳಿ ಪ್ರದೇಶದಲ್ಲಿ ಈ ಅಮಾವಾಸ್ಯೆ ನಿಜಕ್ಕೂ ವಿಶೇಷ. ಈ ದಿನ ಹಾಲೆ ಮರದ (ಪಾಲೆ ಮರದ) ತೊಗಟೆಯಿಂದ ತಯಾರಿಸಿದ ಕಷಾಯವನ್ನು ಸೇವಿಸುವ ಪದ್ಧತಿಯು ಈ 'ಆಸಾಡಿ ಹಬ್ಬ'ದ ವಿಶೇಷ. ಆಷಾಢದಲ್ಲಿ ಕಾಯಿಲೆಗಳ ಬಾಧೆ ತುಸು ಜಾಸ್ತಿ. ವಾತಾವರಣವೂ ಥಂಡಿ, ದೇಹಕ್ಕೂ ಆಗಾಗ ಶೀತದ ಕಿರಿಕಿರಿ. ಈ ಅಮಾವಾಸ್ಯೆಯ ದಿನದಂದು ಹಾಲೆ ಮರದಲ್ಲಿ ವಿಶಿಷ್ಟ ಔಷಧೀಯ ಅಂಶಗಳು ಹೆಚ್ಚಾಗುವುದರಿಂದ ಅಂದು, ಸೂರ್ಯೋದಯಕ್ಕೂ ಮುಂಚೆ ಹಾಲೆ ಮರದ ತೊಗಟೆಯಿಂದ ತಯಾರಿಸಿದ ಕಷಾಯವನ್ನು ಕುಡಿದರೆ ರೋಗ ನಿರೋಧಕ ಶಕ್ತಿ ಹೆಚ್ಚಾಗಿ, ಮುಂದಿನ ವರ್ಷದ ಆಷಾಢದ ಅಮಾವಾಸ್ಯೆಯ ತನಕ ರೋಗ ರುಜಿನಗಳು ಹತ್ತಿರಕ್ಕೂ ಬರುವುದಿಲ್ಲ ಎನ್ನುವುದು ಜನಪದ ನಂಬಿಕೆ.

ನಮ್ಮ ರಾಜ್ಯದ ಕರಾವಳಿಯ ಭಾಗದಲ್ಲಿ ಅಲ್ಲಲ್ಲಿ ಬೆಳೆಯುವ ಹಾಲೆ ಮರದ ಕೆತ್ತೆ ಅಥವಾ ತೊಗಟೆಯೇ ಈ ಕಷಾಯಕ್ಕೆ ಮೂಲ ಸಾಮಗ್ರಿ. ಹಾಲೆ ಮರವು ಎತ್ತರವಾಗಿ ಬೆಳೆಯುವ ಮರವಾಗಿದ್ದು, ಎಲೆಗಳು ಸಾಧಾರಣ, 10 ಸೆಂಟಿ ಮೀಟರ್ ಉದ್ದ ಇರುತ್ತದೆ. ಏಳು ಎಲೆಗಳು ಒಟ್ಟಿಗೇ ಬೆಳೆದು, ಪುಟ್ಟ ಗೊಂಚಲಂತೆ ಕಾಣುತ್ತದೆ.

ಈ ಮರದ ತೊಗಟೆಯನ್ನು ಕೆತ್ತಿ ತೆಗೆದಾಗ, ಹಾಲಿನ ರೂಪದ ಸೊನೆಬರುತ್ತದೆ. ಹಾಲೆ ಮರವು, ಹಾಲಿನ ರೂಪದ ರಸ (ಸೊನೆ) ಕೊಡುವ ಮೆದು

ಮರ. ಈ ಮರದ ತೊಗಟೆಯನ್ನು (ಕೆತ್ತೆ) ಲೋಹದ ವಸ್ತುಗಳಿಂದ (ಉದಾ: ಕಬ್ಬಿಣದ ಕತ್ತಿ, ಚೂರಿ) ತೆಗೆಯಬಾರದೆಂಬ ನಂಬಿಕೆ!

ಹರಿತವಾದ ಅಂಚು ಹೊಂದಿದ ಕಲ್ಲನ್ನು ಬಳಸಿ, ಮರದ ತೊಗಟೆಯನ್ನು ಜಜ್ಜಿ ತೆಗೆಯಬೇಕು. ಈ ತೊಗಟೆಯನ್ನು ಕಲ್ಲಿನಿಂದಲೇ ಚೆನ್ನಾಗಿ ಜಜ್ಜಿ, ಅದಕ್ಕೆ ಶುಂಠಿ, ಕಾಳು ಮೆಣಸು, ಬೆಳ್ಳುಳ್ಳಿಯನ್ನು ಸೇರಿಸಿ ಚೆನ್ನಾಗಿ ಜಜ್ಜಿ ರಸ ಮಾಡಬೇಕು. ಇದೇ 'ಹಾಲೆ ಕೆತ್ತೆ ಕಷಾಯ'! ಈ ರಸವನ್ನು, 'ಆಸಾಡಿ ಅಮಾವಾಸ್ಯೆ'ಯ ದಿನ ಬೆಳಿಗ್ಗೆ ಬೇಗನೆ, ಖಾಲಿ ಹೊಟ್ಟೆಯಲ್ಲಿ ಒಂದೆರಡು ಚಮಚ ಕುಡಿದರೆ, ಯಾವ ಕಾಯಿಲೆಗಳು ಬರುವುದಿಲ್ಲ ಎಂಬ ನಂಬಿಕೆ ಇದೆ.

ಹಾಲೆ ಕೆತ್ತೆ ಕಷಾಯವು ಕಹಿ ಹಾಗೂ ಉಷ್ಣ ಎಂಬ ನಂಬಿಕೆ. ಅದ್ದರಿಂದ ಕಷಾಯ ಸೇವಿಸಿದ ದಿನ, ಮೆಂತ್ಯ ಗಂಜಿಯನ್ನು ತಿನ್ನುವ ಕ್ರಮವಿದೆ. ತೊಗಟೆಯನ್ನು ತೆಗೆಯುವ ಮೊದಲು ಮರವನ್ನು ಜಾಗರೂಕರಾಗಿ ಗುರುತಿಸಿ, ಗಮನಿಸಿ ತೆಗೆಯಬೇಕೆನ್ನುವುದು ಹಿರಿಯರ ಅಣತಿ. ಇದನ್ನು ಓದುತ್ತಿರುವ ನೀವು ಕರಾವಳಿಯ ಭಾಗದವರಾಗಿದ್ದರೆ, ನನ್ನದೊಂದು ಪ್ರಶ್ನೆ ಉಂಟು: ಈ ವರ್ಷ ನೀವು ಆಸಾಡಿ ಅಮಾವಾಸ್ಯೆಯ ದಿನ ಹಾಲೆ ಕೆತ್ತೆ ಕಷಾಯ ಕುಡಿದಿದ್ದೀರಾ?

◀◀ ಮೊದಲ ಪುಟದಿಂದ

ಮೇಘಾಲಯದ ಹಾಡುವ ಹಳ್ಳಿ!

ಅಮ್ಮನ ಮಡಿಲ ಶಾಖ. ನೆಲಮೂಲವಾದ ವಿಶಿಷ್ಟ ಸಂಸ್ಕೃತಿ! ಪ್ರತಿಯೊಬ್ಬನಿಗೂ ಒಂದು ವಿಶಿಷ್ಟ ಸೀಟಿ (ವಿಶಿಲ್). ಎಷ್ಟೇ ದೂರದಲ್ಲಿರಲಿ ಆತನಿಗದು ಕೇಳುವ ಕಂಪನನಾಂಕದಲ್ಲಿರುತ್ತದೆ. ಇದನ್ನೆಲ್ಲಾ ನಾವು ನಮ್ಮ ಗೈಡ್ ಫಿಡ್ಲಿಂಗ್ ಸ್ಟಾರ್ ಮನೆಯಲ್ಲಿ ಕುಳಿತು ಮಾತನಾಡುತ್ತಾ ತಿಳಿದುಕೊಂಡೆವು. ಇಲ್ಲಿನ 23 ಹಳ್ಳಿಗಳಲ್ಲಿ ಈ 'ಸೀಟಿ' ಕ್ರಮ ಅನುಸರಿಸುತ್ತಾರೆ ಎಂಬುದು ಸೋಜಿಗ. ಆದರೆ ಕಾಂಗ್ ತಾಂಗ್ ಮಾತ್ರ ವಿಶಲಿಂಗ್ ವಿಲೇಜ್ ಆಫ್ ಇಂಡಿಯಾ ಎಂದು ಕರೆಯಿಸಿಕೊಂಡಿದೆ.

ಜಾರ್ ಬಂಡೆ ಜಲಪಾತ

ಜಾರ್ ಬಂಡೆ ಜಲಪಾತದ ಸಂಗದಲಿ ಸಿಕ್ಕ ಕೊಂಗ್ ತಾಂಗ್ ಎಂಬ ಹಾಡುವ ಹಳ್ಳಿಯೊಂದು ನಮಗೆ ಬೋನಸ್ ಆಗಿ ಸಿಕ್ಕಿತು. ಇಲ್ಲಿಗ್ಯಾವ ಟೆಂಪೊ ವ್ಯವಸ್ಥೆಯಾಗಲೀ ಬಸ್ಸಿನ ವ್ಯವಸ್ಥೆಯಾಗಲಿ ಇಲ್ಲ. ಶಿಲ್ಲಾಂಗಿನಿಂದ ಕಾರು ಅಥವಾ ಬೈಕ್ ಬಾಡಿಗೆಗೆ ಪಡೆದು ಬರಬೇಕು. ನಾವೊಂದು ಕಾರು ಬಾಡಿಗೆಗೆ ಹಿಡಿದು ಹೊರಟೆವು. ಸೀಟಿ ಹೊಡೆಯುವ ಕಾಂಗ್ ತಾಂಗ್ ಎಂಬ ವಿಚಿತ್ರ ಹಳ್ಳಿಯಲ್ಲಿ ಎರಡು ಪೂರಿ ಹೊಡೆದು ಹೊರಟಾಗ ಗಂಟೆ 11. ನಿನ್ನೆ ರಾತ್ರಿಯೇ ಬಂದಿಳಿಯಬೇಕಿತ್ತು ಅನಿಸಿತೆನಗೆ.

ಮುಗಿಲಿಗೆ ಮುಟ್ಟೋ ಹುಮ್ಮಸ್ಸು ಹೊತ್ತ ನಾವು, ಗೈಡ್ ಇಬ್ಬರ ಜೊತೆಗೆ ಪ್ರಪಾತಕ್ಕೆ ಇಳಿಬಿಟ್ಟಂತಹ ನಾಗವೇಣಿಯಂತಹ ದಾರಿಯಲ್ಲಿ ಹೊರಟೆವು. ಭಾಷೆ ಬಾರದ ಚಂದಕೆ ನೀಟಾಗಿದ್ದ ಗೈಡ್, ಅವನ ಜೊತೆಗೊಂದು ವಿಚಿತ್ರ ಕತ್ತಿ. ನೋಡಿದರೆ ಭಯ ಪಡಬೇಕು! ಇಂತಹ ಕತ್ತಿಗಳು ಇಲ್ಲಿ ಸರ್ವೇ ಸಾಮಾನ್ಯ!

ಇಲ್ಲೂ ಇದೆ ಚಿಪ್ಸ್ ಕೋಕ್

ಸ್ವಲ್ಪ ದೂರ ನಡೆಯುತ್ತಲೇ ಎದುರಾದ ಡಬ್ಬಿ ಅಂಗಡಿ. ಗಿರಾಕಿಗಾಗಿ ಕಾಯೋ ನಿರ್ಲಿಪ್ತ ಕಣ್ಣಿನ ವ್ಯಾಪಾರಿ ಬೀಡಿ ಹಚ್ಚಿದ್ದ. ನಾವೇನೋ ಆತ್ಮಹತ್ಯೆಗಾಗಿ ಹೊರಟವರಂತೆ ಪ್ರಪಾತಕ್ಕೆ ಇಳಿಬಿದ್ದವು. ಅಯ್ಯೋ ಎನ್ನುವ ನಿರುದ್ವಿಗ್ನ ನೋಟ ಬೀರಿ ನಮ್ಮನ್ನು ಕಳುಹಿಸಿಕೊಟ್ಟ. ಆತನ ದೃಷ್ಟಿಯೂ ಹಾಗೆ ಇತ್ತು! ಲಿಮ್ಕಾ, ಕೊಕೋ ಕೋಲಾ, ಲೇಸ್, ಆತನಂಗಡಿಯಲಿ ಹಲ್ಲು ಕಿಸಿಯುತ್ತಾ ನೇತು ಬಿದ್ದಿದ್ದವು. ಜಾಗತೀಕರಣದ ಜಾರುಬಂಡಿಯಲಿ ಎಲ್ಲರೂ ಜಾರಲು ತೊಡಗಿದ್ದಾರೆ!

ಜಾಗತೀಕರಣ, ವ್ಯಾಪಾರೀಕರಣ, ಪ್ರೀತಿಯನ್ನು ನೆಲಮಟ್ಟದ ಸಂಸ್ಕೃತಿಯನ್ನು ದೋಚುತ್ತಲೇ ಇದೆ. ಪಿಜ್ಜಾ, ಬರ್ಗರ್ ರುಚಿಗೆ ನಮ್ಮೂರಿನ ಆರೋಗ್ಯಕರ ತಿನಿಸುಗಳು ಹೇಳ ಹೆಸರಿಲ್ಲದೇ ಜಾಗ ಕೀಳುತ್ತಿವೆ. ಕಿತ್ತಳೆ ರಸದ ರುಚಿಗೆ ಪಕ್ಕಾದ ನಾಲಿಗೆಯಲಿ ಘಂಟಾ ಥಂಸಪ್ ರುಚಿ ಮೊಗ್ಗ ಅರಳಿಸಲು ಹೊರಟಿದ್ದಾರೆ. ಜಾಗತೀಕರಣವೇ ಜಗತ್ತನ್ನು ಆಳುತ್ತಿವೆ. ಎಲ್ಲರೂ ಇಲ್ಲಿ ಖರೀದಿದಾರರೇ. ಕಳೆದ ವರ್ಷ ಪಾರ್ವತಿ ಕಣಿವೆಯ ಕೊನೆಯ ಹಳ್ಳಿ ತೋಷ್‌ಗೆ ಹೋದಾಗ ಅಲ್ಲಿಯೂ ಜರ್ಮನ್ ಬೇಕರಿಗಳು ಜಾಗ ಮಾಡಿಕೊಂಡಿರುವುದು ಕಂಡು ದಂಗಾದೆ. ನಮ್ಮ ಅದ್ಭುತ ರುಚಿಯ ತಿಂಡಿಗಳನ್ನು ನಾವು ಶೋಕೇಸ್ ಮಾಡದೇ ಇದ್ದಿದ್ದು ನಮ್ಮ ಸೋಮಾರಿತನವೋ, ನಮ್ಮದೆಲ್ಲಾ ಕೀಳೆಂಬ ನಮ್ಮದೇ ಮೌಢ್ಯವೋ? ಅದನ್ನು ಬಿತ್ತಿದ ಹೊಸ ಶಿಕ್ಷಣ ನೀತಿಯೋ?

ದಾರಿ ತಪ್ಪಲಿ ದೇವರೇ!

ಅಪ್ರತಿಮ ಮೇಘಾಲಯದ ಸುಂಟರಗಾಳಿಯಂತಹ ಸೌಂದರ್ಯಕ್ಕೆ ಮರುಳಾಗಿ ಇಳಿಯೊ ಹಾದಿಯಲ್ಲಿ ದಾರಿತಪ್ಪಿ ಬಲಕೆ ತಿರುಗೋ ಬದಲು ನೇರವಾಗಿ ಹೊರಟ ಗೆಳೆಯ ಹಾದಿ ತಪ್ಪಿದ! ನಿಜವಾಗಿ ದಾರಿ ತಪ್ಪಿದ್ದು ಅವನೋ ನಾವೋ ಗೊತ್ತಿಲ್ಲ. ದಾರಿ ತಪ್ಪಿದ ಮಗ. ಇಬ್ಬರು ಗೈಡ್‌ಗಳಲ್ಲಿ, ವಿಚಿತ್ರ ಕತ್ತಿ ಹಿಡಿದ ಗೈಡ್ ಒಬ್ಬನೇ ನನ್ನ ಜೊತೆಗೆ ಉಳಿದ; ಅವನಿಗೆ ಭಾಷೆ ಬಾರದು! ಎದೆಯಲ್ಲಿ ಕುಟ್ಟವಲಕ್ಕಿ. ಸುತ್ತಲೂ ನಿಬಿಡಾರಣ್ಯ. ಜೀರುಂಡೆ ಗಾಯನ. ಹಾದಿ ತಪ್ಪಲು ನೂರಾರು ದಾರಿ. ಇವನೋ ಅನನುಭವಿ. ಆದರೆ ಇವನಷ್ಟು ಪಾಪದ ಅಮಾಯಕ ಮತ್ತೊಬ್ಬನಿಲ್ಲ ಎಂಬುದು ಸ್ವಲ್ಪ ಹೊತ್ತಿಗೆ ತಿಳಿಯಿತು. ಬಯಲಿನ ಜನರಂತಲ್ಲ ಬೆಟ್ಟದವರು!

ಕಾನನದ ಸ್ವರ ಸಂಮೋಹನಕ್ಕೆ ಒಳಗಾಗಿ ಜಲಧಾರೆಯ ನೆತ್ತಿಗೆ ನಡೆದು ತಲುಪಿದೆವು. ಅಂತೂ ಜಲಧಾರೆಯ ನೆತ್ತಿ ತಲುಪಿಸಿದ! ಏನ್ ಅಚ್ಚರಿ! ನಮಗಿಂತಲೂ ಮುಂದೆ ಗೆಳೆಯನ ಸವಾರಿ ಬಂದು ತಲುಪಿತ್ತು. ಬಂದವನೇ ದಾರಿ ತಪ್ಪಿದ್ದೇ ಒಳ್ಳೇದಾತು ಅಂತಿದ್ದ! ದಾರಿ ತಪ್ಪಲಿ ದೇವರೇ ಅಂತ ಬೇಡಿಕೊಂಡಿರಬೇಕು ಆತ! ದಾರಿ ತಪ್ಪಿದ್ದರಿಂದ ಮೇಘಾಲಯದ ಅತಿ ಎತ್ತರದ ಬೇರಿನ ಸೇತುವೆ, ಇನ್ನೊಂದೆರಡು ಜಲಧಾರೆಯ ಸಖ್ಯ ಬೆಳೆಸಿ ಬಂದಿದ್ದ. ಕಷ್ಟವಾದರೂ ಅದನ್ನೆಲ್ಲಾ ಅಚಾನಕ್ ಆಗಿ ನೋಡುವ ಅವಕಾಶವೊಂದು ಅವನ ಪಾಲಿಗೆ ಬಂತು. ಇಂತಹ ದಾರಿಗಳಲ್ಲಿ ಸದಾ ದಾರಿ ತಪ್ಪಲಿ. ಹೊಸ ಅಚ್ಚರಿಗಳು ತೆರೆದುಕೊಳ್ಳಲಿ! ಸದಾ ದಾರಿ ತಪ್ಪಿಸು ದೇವರೇ.

ದಾರಿ ತಪ್ಪಿದ್ದು ಒಳಿತೇ ಆಯಿತು ಎಂದೆನ್ನುತ್ತಾ ಹಿಂದಿರುಗಿದ ಮೆಲ್ಲಗೆ ಅರುಹಿದ ಗೆಳೆಯ!

ಬಿದ್ದರೂ ಮೀಸೆ ಮಣ್ಣಾಗಲಿಲ್ಲ! ಮೇಘಾಲಯದ ಅತಿ ಎತ್ತರದ ಬೇರಿನ ಸೇತುವೆ ಇರುವುದೇ ಇಲ್ಲಿ. ಮತ್ತೆ ಮತ್ತೆ ಇಂತಹ ದಾರಿಯಲ್ಲಿ ದಾರಿ ತಪ್ಪಿಸು ದೇವರೇ ಎಂದು ಬೇಡಿಕೊಳ್ಳುವೆ ಎಂದ! ರುಚಿಕಟ್ಟಾದ ನಾಲ್ಕು ಫೋಟೋ ತೆರೆದಿಟ್ಟ! ಒಂದಕ್ಕಿಂತ ಒಂದು ಚೆಂದದ ಹೊಟ್ಟೆಕಿಚ್ಚಾಗುವಂತಹ ಚಿತ್ರ! ದಾರಿ ತಪ್ಪಿಯೂ ನಮಗಿಂತ ಮೊದಲೇ ಜಲಪಾತದ ನೆತ್ತಿ ಹತ್ತಿ ಕುಣಿಯುತ್ತಲಿದ್ದ!

ವಿದೇಶಿಗನ ಜಾರುಬಂಡೆ

ತಣ್ಣಗಿನ ನೀರಲ್ಲಿ ಜಾರುತ್ತಲೇ ಕೊಳ ಒಂದಕ್ಕೆ ಜಾರಲು ವಿದೇಶಿಗನೊಬ್ಬ ಸಶಬ್ದವಾಗಿ ಜಾರಿ ನಮಗೆ ಒಂದೆರಡು ಟ್ರಯಲ್ ತೋರಿದ ಮೇಲೆ ಸ್ವಲ್ಪ ಧೈರ್ಯ ಮಾಡಿ ಹೊರಟಿತು, ಗೆಳೆಯನ ಸವಾರಿ. ಹೊರಟಿದ್ದೇನೋ ಸರಿ ನಡುವೆಯೇ ಜಾರದೆ ಸ್ಟ್ರಕ್ ಆಯಿತು. ಕೊನೆಗೂ ಕುಂಡೆ ಹರಿದುಕೊಳ್ಳದೇ ಗೆಳೆಯನ ಸವಾರಿ ಜಾರುತ್ತಾ ಕೆಳಗೆ ಬಂದಿತು! ನೀರ ಹೊಂಡಕ್ಕೆ 'ಗುಳುಮುಳಕ'ದಂತೆ ಮುಳುಗು ಹಾಕಿದ. ನನ್ನ ಪುಣ್ಯ ಜಾರಿ ಪ್ರಪಾತಕ್ಕೆ ಹೋಗಲಿಲ್ಲ. ನಾನೂ ಸ್ವಲ್ಪ ಹೊತ್ತು ಸ್ಫಟಿಕ ಶುಭ್ರ ನೀರಲ್ಲಿ ಮಿಂದೆದ್ದು ಪುಳಕಗೊಂಡೆ. ಜಾರುವಿಕೆ ಎಲ್ಲಿಯಾದರೂ ಆಯತಪ್ಪಿದರೆ ನೇರ ಪ್ರಪಾತ ದರ್ಶನ! ಒಂದು ಹಲ್ಲೂ ಸಿಗದ ಮಹಾ ಬ್ರಹ್ಮಗುಂಡಿ. ಅವಾಂತರವಾಗುವುದು ಬೇಡವೆಂದು ನಾನಾ ಸಾಹಸಕ್ಕೆ ಇಳಿಯಲೇ ಇಲ್ಲ. ದಟ್ಟ ಕಾನನದ ನಡುವೆ ಅವಿತಿರುವ ಪ್ರಕೃತಿ ಮಡಿಲ ಈ ತಾಣ ರಮ್ಯಾದ್ಭುತ!

ಇಳಿ ಸಂಜೆಗೆ ವಾಪಸಾಗಿ, ಮೇಘಾಲಯದ ಆ ಹಾಡು ಹಳ್ಳಿಯಲ್ಲಿ ಅಂದು ತಂಗಿದೆವು. ಅಲ್ಲಿನ ಜೀರುಂಡೆ ಗಾಯನ, ನೊಣದ ಬೋನು ಗಿಡಗಳೊಂದಿಗೆ ಲೀನವಾಗಿ ಅಲ್ಲಿನ ಕಾಟೇಜ್ ಒಂದರಲ್ಲಿ ಉಳಿದುಕೊಂಡೆವು.

ಅಚ್ಚರಿಗಳ ಆರ್ಕಿಡ್ ಪ್ರಪಂಚ

ನೂರಾರು ಆರ್ಕಿಡ್‌ಗಳು ನಮಗೊಂದು ಅಚ್ಚರಿ! ಎಲ್ಲೆಲ್ಲೂ ಆರ್ಕಿಡ್‌ಗಳು. ಚಿತ್ರ ವಿಚಿತ್ರ ಬಣ್ಣಗಳು. ಕೆಲವನ್ನು ಕತ್ತರಿಸಿ ತಂದು ನಾವು ಉಳಿದುಕೊಂಡಿದ್ದ ಕಾಟೇಜ್‌ನಲ್ಲಿ ಬೆಳೆಸಿದ್ದರು. ಒಂದಿಷ್ಟು ತರೇವಾರಿ ಜೇಡಗಳು, ನೂರಾರು ಚಿಟ್ಟೆಗಳ ಮೆರವಣಿಗೆ ನಮಗೆ ಮುದ ನೀಡುತ್ತಲಿತ್ತು! ನೈಸರ್ಗಿಕ ಪರಿಸರದಲ್ಲಿ 'ನೊಣದ ಬೋನು' ಎಂಬ ವಿಸ್ಮಯಕಾರಿ ಸಸ್ಯವನ್ನು ಬೆಳೆಸಿದ್ದ ನಮ್ಮ ಕಾಟೇಜ್ ಮಾಲೀಕ! ಎರಡನೆಯ ಬಾರಿಗೆ ಇಷ್ಟು ಸಂಖ್ಯೆಯ ನೊಣದ ಬೋನು ಗಿಡ ನೋಡಿದ ಖುಷಿ. ಅತ್ಯಂತ ಶುಭ್ರವಾಗಿಟ್ಟುಕೊಂಡ ಆತನ ಕಾಟೇಜ್ ಬಹಳ ಇಷ್ಟವಾಯಿತು.

ಇಲ್ಲಿಂದ ನಮ್ಮ ಸವಾರಿ ಹೊರಟಿದ್ದು ವಾಕೆನ್ ಎಂಬ ಮತ್ತೊಂದು ವಿಶಿಷ್ಟ ಹಳ್ಳಿಗೆ. ಆ ಕತೆಯನ್ನು ಮತ್ತೊಮ್ಮೆ ಅರಹುವೆ.

ಭಾಷೆ ಎಂಬ ಅಬ್ಬೆಗೆ ಮಾತು ಬಂದಾಗ!

» ಪೂರ್ಣಿಮಾ ಕಮಲಶಿಲೆ

ಪ್ರೀತಿಯ ಕುಂದಾಪ್ರದವರಿಗೆ ಮತ್ತು ಕುಂದಾಪ್ರ ಕನ್ನಡ ಮಾತಾನಾಡುವ ಜಗದಗಲ ಹರಡಿರುವ ಎಲ್ಲ ಮನಸುಗಳಿಗೆ ಕುಂದಾಪ್ರ ಕನ್ನಡ ವೆಂಬ 'ಅಬ್ಬೆ' (ಅಬ್ಬಿ) ಮಾಡುವ ನಮಸ್ಕಾರ. ನನ್ನ ಇತಿಹಾಸ, ವರ್ತಮಾನ, ಭವಿಷ್ಯ, ವ್ಯಾಕರಣ ಶುದ್ಧತೆ ಇವ್ಯಾವುದರ ಕುರಿತು ನಾನು ಎಂದಿಗೂ ತಲೆಕೆಡಿಸಿಕೊಂಡದ್ದೇ ಇಲ್ಲ. ಯಾಕೆಂದರೆ ನನ್ನನ್ನು ನೀವೊಂದು ಬರಿಯ ಸಂವಹನ ಮಾಧ್ಯಮವಾಗಿ ಕಂಡವರಲ್ಲ.

ಅಬ್ಬಿ ಭಾಷೆಯನ್ನು ತಲೆಮೇಲೆ ಹೊತ್ತು ತಿರುಗುವ ನಿಮ್ಮ ಭಾಷಾಭಿಮಾನಕ್ಕೆ ನಾನು ಏನೆಂದು ಹೆಸರಿಡಲಿ?

ಅಬ್ಬಿ ಅಬಾ ಎಂದು ಭಾಷೆಯನ್ನು ಕೊಂಗಾಟ ಮಾಡುವ, ಭಾಷೆಗಾಗಿ ಒಂದು ಹಬ್ಬ ಮಾಡಲು ದಿನ ನಿಗದಿ ಮಾಡಿ, ಮುಹೂರ್ತ ನೋಡಿ ಹಬ್ಬ ಮಾಡುವ, ಭಾವ ಬೀದಿಯಲ್ಲಿ ಭಾಷೆಯ ತೇರನ್ನೆಳೆಯುವ ನಿಮ್ಮೆಲ್ಲರ ಭಾಷಾಭಿಮಾನಕ್ಕೆ ಜಗತ್ತೇ ನಿಬ್ಬೆರಗಾಗಿದೆ ಎನ್ನಲು ನನಗೆ ಅದೆಷ್ಟು ಹೆಮ್ಮೆ!

ನಾಲ್ಕಾರು ವರ್ಷದ ಹಿಂದೆ ನೀವೆಲ್ಲ ಒಕ್ಕೊರಲಿನಿಂದ ಭಾಷೆಯ ಹಬ್ಬ ಮಾಡ್ತೇವೆ, ಭಾಷೆಯ ಹಬ್ಬದಾಚರಣೆಗೆ ಆಸಾಡಿ ಅಮಾಸಿ (ಆಷಾಢದ ಅಮಾವಾಸ್ಯೆ) ದಿನವೇ ಸೂಕ್ತ ಎಂದೆಲ್ಲಾ ಪಂಚಾಂಗ ಹರಡಿ ಕುಳಿತಾಗ ನನಗಂತೂ ತುಸು ಗಲಿಬಿಲಿ,; ಇದು ಸಾಧ್ಯವೇ? ಇದು ಬೇಕೇ? ಇದು ತುರ್ತೇ? ಎಂದೆಲ್ಲಾ ಚಡಪಡಿಕೆ, ಅನುಮಾನವಿತ್ತು. ಆದರೆ ನೆಲದ ನುಡಿಯ ಮೇಲೆ ನಿಮಗಿರುವ ಅಕ್ಕರೆ, ಅದನ್ನ ಹೊತ್ತು ಮೆರೆಸಬೇಕೆಂಬ ನಿಮ್ಮೆಲ್ಲರ ಉತ್ಸಾಹ ನೋಡಿ ನಾ ಚಕಾರವೆತ್ತದೆ ಮೂಕಳಾದೆ.

ಎಷ್ಟಾದರೂ ನಾನು ಅಬ್ಬೆ. ನೀವೆಲ್ಲ ನನ್ನ ಕೊಂಗಾಟದ ಕೊಡಿಮುದ್ದುಗಳು. ಹಾದಿ ತಪ್ಪುವುದಿಲ್ಲ. ಹಾಡು ಬತ್ತುವುದಿಲ್ಲ ಎಂಬ ಗಟ್ಟಿ ನಂಬಿಕೆ ನನ್ನೊಳಗಿತ್ತು. ಒಂದೈದೇ ವರ್ಷದಲ್ಲಿ ಈ ಅಬ್ಬಿ ಭಾಷೆಯನ್ನು ದೂರ ಗಗನಕೆ, ದೂರ ದೂರ ಕ್ಷಿತಜಕೆ ಹಾರಿಸಿ, ಡಿಂಡಿಮ ಬಾರಿಸಿ 'ಹೊಡಿಹಾರ್ಸಿ' ತೋರಿಸುತ್ತೀರೆಂದರೆ, ನಿಮ್ಮೆಲ್ಲರ ಭಾಷಾ ಪ್ರೀತಿ ಮತ್ತು ಕುಂದಾಪ್ರ ನೆಲಮೂಲದ ಆಚರಣೆಗಳ ಬಗ್ಗೆ ನಿಮಗಿರುವ ಅದಮ್ಯ ಒಲವು ಅದೆಷ್ಟು ಆಳವಾದದ್ದು!

ಈ ಬಾರಿಯಂತೂ ಕುಂದಾಪುರವನ್ನೇ ಬೆಂಗಳೂರಿನಲ್ಲಿ ಮರು ಸೃಷ್ಟಿ ಮಾಡಲು (ಜುಲೈ 26, 27 ರಂದು) ಹೊರಟ ನೀವೆಲ್ಲರೂ ಹಗಲಿರುಳೆನ್ನದೆ ದುಡಿಯುವುದು ಕಂಡರೆ ಕಣ್ಮನ ತುಂಬಿ ಬರುತ್ತಿದೆ. ಈ ಸಂತೋಷದ ಕಣ್ಣೀರು ಜಲರೂಪಿ ವರವಾಗಿ, ಮಳೆಯಾಗಿ ಇಳೆಯೆಲ್ಲ ತಣಿಸುತ್ತಿದೆ ಎಂದು ನಿಮಗನಿಸುತ್ತಿಲ್ಲವೇ?

ಆಸಾಡಿ ಹಬ್ಬಕ್ಕೆ ಮೊದಲೆಲ್ಲ ಕುಂದಾಪ್ರದಾದ್ಯಂತ ಶಾಲಾ ಕಾಲೇಜಿಗೂ ಲೋಕಲ್ ಹಾಲಿಡೆ ಇತ್ತು. ಈ ವರ್ಷ ನನ್ನ ಆನಂದ ಭಾಷ್ಪದ ಬಾಬ್ತು ಮತ್ತೆ ರಜೆ ಘೋಷಣೆಯಾಗಿದೆ. ಅಲ್ಲಿ ಬೆಂಗಳೂರಿನಲ್ಲಿ ನಾಡಿದ್ದು 'ಸಾವ್ರ ಹಣ್ಣಿನ ವಸಂತ'ದಿಂದ ಶುರುಮಾಡಿ,

ಅಟ್ಟಣ್ಗೆ ಆಟ, ಕುಂದಾಪುರದ್ ಅಡುಗೆ, ಕುಂದಾಪ್ರ ಸಂತೆ! ನಮ್ ಕುಂದಾಪ್ರದ ಲೇಖಕರನೇಕರ ಪುಸ್ತಕ ಬೆಚ್ಚುಕು ಚಪ್ಪರ ಹಾಕಿದ್ರಿ, ಇಡೀ ನಮ್ಮ ಕುಂದಾಪ್ರ ಸಂಸ್ಥಾನವನ್ನು 'ಇಲ್ಕಾಣಿ ಕುಂದಾಪ್ರ'ದ ಮೂಲಕ ತೋರ್ಸುಕೆ ಅದೆಷ್ಟು ದಣಿದಿದ್ದೀರಿ, ಅಲ್ಲದೆ ಅಲ್ಲಲ್ಲಿ ಬಿಡಿಪಟಾಕಿಯನ್ನು ಹೊಡ್ಸುವ ನಿಮ್ಮ ಯೋಚನೆಯೇ ನನಗೊಂದು ಅಚ್ಚರಿ! ಜೊತೆಗೆ ಬಾರ್ಕೂರಿನ ಹಡ್ಗನ್ನೇ ಬೆಂಗಳೂರಿಗ್ ತಕಂಡ್ ಹೋರ್ಟಿರಿ ಅಂದ್ರೆ, ನಿಮ್ಮ ಉಮೇದಿಗೆ ಮೆಚ್ಚಿದೆ ಮೆಚ್ಚಿದೆ ಮೆಚ್ಚಿದೆ.

'ಮೊದಲು ತಾಯ ಹಾಲಕುಡಿದು ಲಲ್ಲೆಯಿಂದ ತೊದಲು ನುಡಿದು, ಗೆಳೆಯರೊಡನೆ ಬೆಳೆದು ಬಂದ ಮಾತು' ಅದು ನಿಮಗೆಲ್ಲ ಕುಂದಾಪ್ರಕನ್ನಡದವೆಂಬ ಕನ್ನಡ ಎಂಬುದೇ ನನಗೆ ಮತ್ತಷ್ಟು ಮಗದಷ್ಟು ಮೊಗೆದಷ್ಟು ಮುಗಿಯದ ಪುಳಕ. ಜೋಗುಳದ ಹರಕೆ ತೀರಿಸುವ ನಿಮಗೆಲ್ಲ ಅಬ್ಬೆಯ ಆಶೀರ್ವಾದ ಸದಾ ಇದ್ದೆ ಇದೆ.

ರಾಜಧಾನಿಯ ರಾಜಬೀದಿಯೊಳಗೆಲ್ಲ ನಮ್ಮೂರ ಭಾಷೆಯ ಕಂಪು ಹರಡುತ್ತಿರುವ ಈ ಹೊತ್ತಿನಲ್ಲಿ ಮತ್ತೆಂತ ಹೇಳುಕೂ ನಂಗ್ ಅಂದಾಜ್ ಆತಿಲ್ಲ. ಬೆಂಗಳೂರಿನಲ್ಲಿ ಜುಲೈ 26, 27ರಂದು ಚಾರಿತ್ರಿಕವಾಗಿ ಮತ್ತೆ ನನಗೊಂದು ಹೊಸ ಭಾಷ್ಯ ಬರೆಯುತ್ತಿರುವ ನಿಮ್ಮನ್ನೆಲ್ಲ ಕನ್ನಡಾಂಬೆ ಹರಸಲಿ. ಶಾರದೆ ಪೊರೆಯಲಿ.

ಇಂತೀ ನಿಮ್ಮಬ್ಬಿ ,ಅಬ್ಬಿ ಭಾಷಿ ಕುಂದಾಪ್ರ ಕನ್ನಡ.

ನಮ್ಮ ರಾಜ್ಯದ ಕರಾವಳಿಯ ಭಾಗದಲ್ಲಿ ಬಳಕೆಯಲ್ಲಿರುವ 'ಕುಂದಾಪುರ ಕನ್ನಡ'ವು ವಿಶಿಷ್ಟ ಪದಬಳಕೆಯ ಮೂಲಕ ಎಲ್ಲರ ಗಮನ ಸೆಳೆದಿದೆ. ಈ ಭಾಷೆಯಲ್ಲಿ ಹಳೆಗನ್ನಡಕ್ಕಿಂತಲೂ ಪೂರ್ವಕಾಲದ ಪದಬಳಕೆಯೂ ಇದೆ ಎಂದು ಭಾಷಾ ಶಾಸ್ತ್ರಜ್ಞರು ಗುರುತಿಸಿದ್ದಾರೆ. ಆ ಭಾಷೆ ಮತ್ತು ಅಲ್ಲಿನ ಸಂಸ್ಕೃತಿಯ ಕುರಿತಾಗಿ 'ಕುಂದಾಪ್ರ ಕನ್ನಡ ಹಬ್ಬ 2025' ನಿನ್ನೆ ಮತ್ತು ಇಂದು ಬೆಂಗಳೂರಿನಲ್ಲಿ ನಡೆಯುತ್ತಿದೆ.



ಕಲಿಕೆಯಲ್ಲಿ ತೊಡಕು!

ಗಣಿತ ಅಥವಾ ಇತರ ವಿಷಯಗಳನ್ನು ಬಹು ಬೇಗನೆ ಗ್ರಹಿಸಲಾಗದ ಮಕ್ಕಳಲ್ಲಿ, ಲರ್ನಿಂಗ್ ಡಿಸಾರ್ಡರ್ (ಕಲಿಯುವುದರಲ್ಲಿ ತೊಡಕು) ಇದೆಯೇ ಎಂದು ಗುರುತಿಸಿದರೆ, ಆ ಸಮಸ್ಯೆಗೆ ಸೂಕ್ತ ಕೌನ್ಸೆಲಿಂಗ್ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯ. ವಿಶ್ವವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್‌ಗೂ ಲರ್ನಿಂಗ್ ಡಿಸಾರ್ಡರ್ ಇತ್ತು!

» ಅನಿತಾ ನಾಡಿಗ್

ಐದನೇ ತರಗತಿ ಓದಿತ್ತಿರುವ ಶಿಖಾಳ ನೋಟ್ ಪುಸ್ತಕಗಳಲ್ಲಿ ಪ್ರತಿ ಪುಟಗಳಲ್ಲೂ ತಪ್ಪುಗಳು. ಅವಳ ಅಪ್ಪ ಅಮ್ಮ, ಶಿಕ್ಷಕರು ಎಷ್ಟೇ ಪ್ರೋತ್ಸಾಹಿಸಿದರೂ, ಸ್ಪೆಲ್ಲಿಂಗ್ ಹೇಳಿಕೊಟ್ಟರೂ ಪದೇ ಪದೇ ಅದೇ ತಪ್ಪುಗಳನ್ನು ಶಿಖಾ ಮಾಡುತ್ತಿದ್ದಳು. ಅಷ್ಟೇ ಅಲ್ಲದೆ, ಅವಳ ಬರವಣಿಗೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಬರವಣಿಗೆ ನಿಧಾನವಿತ್ತು. ಪರೀಕ್ಷೆಯಲ್ಲಿ ಅವಳಿಗೆ ಬರೆಯಲು ಸಮಯವೇ ಸಾಲುತ್ತಿರಲಿಲ್ಲ. ಆಟಗಳಲ್ಲಿ ಬಹಳ ಮುಂದಿದ್ದ ಶಿಖಾ, ಯಾಕೋ ಪಾಠದಲ್ಲಿ ಅಷ್ಟು ಉತ್ಸಾಹವಿರಲಿಲ್ಲ. ಶ್ರಮವಹಿಸಿದರೂ, ಫಲಿತಾಂಶ ಮಾತ್ರ ಅಷ್ಟಕ್ಕಷ್ಟೆ.



ಹದಿಮೂರು ವರ್ಷದ ನಿಶಾನ್, ತನ್ನ ಕಂಠದಿಂದ ಶಾಲೆಯಲ್ಲಿ ಪ್ರಸಿದ್ಧ. ಶಾಲೆಯ ಪ್ರತಿ ಸಮಾರಂಭಗಳಲ್ಲೂ ಅವನದೇ ಗಾಯನ. ಅವನ ಹಾಡುಗಾರಿಕೆ ಶಿಕ್ಷಕರಿಗೆ ಬಲು ಮೆಚ್ಚುಗೆಯಾದರೂ, ಅವನ ಗಣಿತದ ಜ್ಞಾನ ಅಷ್ಟಕ್ಕಷ್ಟೆ. ಎಂಟನೇ ತರಗತಿಯಲ್ಲಿ ಇದ್ದರೂ, ನಿಶಾನನಿಗೆ ಐದನೇ ತರಗತಿಯ ಗಣಿತ ಮಾಡಲಾಗುತ್ತಿರಲಿಲ್ಲ, ಅವನ ತಂದೆ ತಾಯಿಯರಿಗೆ ಇವನು ಹತ್ತನೇ ತರಗತಿ ಹೇಗೆ ಉತ್ತೀರ್ಣನಾಗುತ್ತಾನೋ ಎಂಬ ಭಯ ಕಾಡತೊಡಗಿತು.

ಶಾಲೆಯ ಪ್ರಿನ್ಸಿಪಾಲರ ಸಲಹೆಯ ಮೇರೆಗೆ ಶಿಖಾ ಹಾಗು ನಿಶಾನನ ಪೋಷಕರು ಚೈಲ್ಡ್ ಕೌನ್ಸಲ್ಲರ್ ಅನ್ನು ಭೇಟಿ ಮಾಡಿದರು. ಕೆಲವು ಟೆಸ್ಟ್ ಗಳ ನಂತರ, ಶಿಖಾ ಹಾಗು ನಿಶಾನನಿಗೆ ಲರ್ನಿಂಗ್ ಡಿಸಾರ್ಡರ್ ಎಂಬ ನರ ವೈವಿಧ್ಯತೆಯ (ನ್ಯೂರೊಡೈವರ್ಸಿಟಿ) ಸ್ಥಿತಿ ಇದೆಯೆಂದು ತಿಳಿಯಿತು. ಲರ್ನಿಂಗ್ ಡಿಸಾರ್ಡರ್ ಒಂದು ಖಾಯಿಲೆಯಲ್ಲ. ಅದೊಂದು ನರಮಂಡಲದ ವೈವಿಧ್ಯ ಸ್ಥಿತಿ. ಹೇಗೆ ಎಲ್ಲರ ಮೂಗು ಕಣ್ಣು ಒಂದೇ ರೀತಿ ಇರುವುದಿಲ್ಲವೋ, ಹಾಗೆ ಎಲ್ಲರ ಮಿದುಳು ಒಂದೇ ರೀತಿ ಬೆಳೆದಿರುವುದಿಲ್ಲ. ಮುಖವೆಂಬ ಶರೀರದ ಒಂದು ಭಾಗದಲ್ಲಿ ಹಲವಾರು ಭಾಗಗಳಿದ್ದು, ಈ ಭಾಗಗಳು ವಿವಿಧ ಕಾರ್ಯಗಳಿಗೆ ಹೊಣೆಯಾಗಿರುತ್ತವೆ. ಹಾಗೆ ಮಿದುಳಿನಲ್ಲಿ ಬೇರೆ ಬೇರೆ ಭಾಗಗಳಿದ್ದು, ಆ ಭಾಗಗಳು ಬೇರೆ ಬೇರೆ ಕಾರ್ಯಗಳನ್ನು ನಡೆಸಿಕೊಡುತಿರುತ್ತವೆ. ಉದಾಹರಣೆಗೆ ಕೆಲವು ಭಾಗ ಭಾವನೆಗಳನ್ನೂ ನಿರ್ವಹಿಸಿದರೆ, ಇನ್ನು ಕೆಲವು ತರ್ಕವನ್ನು ನಿಭಾಯಿಸುತ್ತದೆ. ಹಾಗೆ ನೆನಪಿಗೆ, ಗಣಿತಕ್ಕೆ, ಭಾಷೆಗೆ, ಬೇರೆ ಬೇರೆ ಕೌಶಲ್ಯಗಳಿಗೆ ಮಿದುಳಿನ ಬೇರೆ ಬೇರೆ ಭಾಗಗಳು ಹೊಣೆಯಾಗಿರುತ್ತವೆ.

ಲರ್ನಿಂಗ್ ಡಿಸಾರ್ಡರ್ ಇರುವ ಮನುಷ್ಯರಲ್ಲಿ ಓದುವ, ಬರೆಯುವ, ಅರ್ಥಮಾಡಿಕೊಳ್ಳುವ ಅಥವಾ ಗಣಿತದ ಕೌಶಲ್ಯಗಳನ್ನು ನಿಭಾಯಿಸುವ ಮಿದುಳಿನ ರಚನೆಯಲ್ಲಿ ವ್ಯತ್ಯಾಸವಿರುತ್ತದೆ. ಇವರ ಮಿದುಳು ಈ ಕೌಶಲ್ಯಗಳ ಸಾಮರ್ಥ್ಯ ಚೆನ್ನಾಗಿರುವ (ನ್ಯೂರೋ-ಟಿಪಿಕಲ್) ಜನರ ಮಿದುಳಿಗಿಂತ ವಿಭಿನ್ನವಾಗಿರುತ್ತದೆ. ಇವರ ಮಿದುಳು ಸಾಮಾನ್ಯರಂತೆ ಗಣಿತ, ಬರೆಯುವಿಕೆ ಅಥವಾ ಓದುವ ಕಲಿಕೆಯಲ್ಲಿ ಸಹಕಾರ ನೀಡದ ಕಾರಣ ಇವರಿಗೆ ಈ ವಿಷಯಗಳು, ಕೌಶಲ್ಯಗಳು ಕಷ್ಟ, ಶ್ರಮ ವಹಿಸಿದರೂ ಕಲಿಯಲು ಸುಲಭವಲ್ಲ. ಲರ್ನಿಂಗ್ ಡಿಸಾರ್ಡರ್ ಅಲ್ಲಿ ಹಲವಾರು ವಿಧಗಳಿವೆ. ಡಿಸ್ಲೆಕ್ಸಿಯಾ ಓದುವಿಕೆಯಲ್ಲಿ ತೊಡಕು ಮಾಡಿದರೆ, ಡಿಸ್ಗ್ರಾಫಿಯಾ ಬರೆಯುವಿಕೆ, ಸ್ಪೆಲಿಂಗ್ ಹಾಗು ಬರವಣಿಗೆಯ ವೇಗದಲ್ಲಿ ತೊಡಕನ್ನು ಉಂಟುಮಾಡುತ್ತದೆ. ಡಿಸ್ಕ್ಯಾಲ್ಕುಲಿಯದಲ್ಲಿ ಗಣಿತದ ಕೌಶಲ್ಯಗಳು ಅಷ್ಟಾಗಿ ಬೆಳೆಯದೆ ಇರಬಹುದು.

ಸರ್ಕಾರವು ಲರ್ನಿಂಗ್ ಡಿಸಾರ್ಡರ್ ಇರುವ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಅಥವಾ ಮುಂದೆ ಕೆಲಸದ ಅವಕಾಶಗಳಲ್ಲಿ ತೊಂದರೆಯಾಗಬಾರದೆಂದು ಯೋಚಿಸಿ, ವಿದ್ಯಾಭ್ಯಾಸ ನೀತಿಯಲ್ಲಿ ಕೆಲವು ಬದಲಾವಣೆಗಳನ್ನು ತಂದಿದೆ. ಇಂತ ಮಕ್ಕಳಗೆ ನ್ಯೂರೊಡೈವರ್ಸಿಟಿ ಟೆಸ್ಟ್ ಅನ್ನು ಆರ್. ಸಿ. ಆಯ್ ಲೈಸೆನ್ಸ್ ಇರುವ ಕ್ಲಿನಿಕಲ್ ಸೈಕಾಲಜಿಸ್ಟ್ ಹತ್ತಿರ ಮಾಡಿಸಿ, ಸೂಕ್ತ ಪ್ರಮಾಣಪತ್ರವನ್ನು ಶಾಲೆಯ ಮೂಲಕ ಸಲ್ಲಿಸಿದರೆ, ವಿಷಯಗಳಲ್ಲಿ ಬದಲಾವಣೆ ಅಥವಾ ಪರೀಕ್ಷೆಯಲ್ಲಿ ಬರೆಯಲು ಹೆಚ್ಚು ಸಮಯ ನೀಡುವ ಅಥವಾ ಸ್ಕ್ರೈಬ್ (ವಿದ್ಯಾರ್ಥಿ ಉತ್ತರವನ್ನು ಹೇಳಿ, ಬೇರೆಯವರು ಬರೆಯುವ ವ್ಯವಸ್ಥೆ) ಕಲ್ಪಿಸುವ ಅವಕಾಶವಿದೆ.

ಲರ್ನಿಂಗ್ ಡಿಸಾರ್ಡರ್ ವಾಸಿ ಮಾಡಲಾಗದ ಸ್ಥಿತಿ. ಸಣ್ಣ ವಯಸ್ಸಿನಲ್ಲೇ ಮಗುವಿನ ಈ ತೊಂದರೆಯನ್ನು ಗುರುತಿಸಿದರೆ, ಮಗುವಿಗೆ ತಕ್ಕ ಸಹಕಾರ ನೀಡಬಹುದು. ಲರ್ನಿಂಗ್ ಡಿಸಾರ್ಡರ್ ಮಕ್ಕಳಿಗೆ ಹೆಚ್ಚು ಸಹಕಾರ ಬೇಕಾಗುತ್ತದೆ, ಹಾಗು ಕಲಿಸುವ ಕ್ರಮ ಬೇರೆ ರೀತಿಯಿರಬೇಕಾಗುತ್ತದೆ. ಈ ಸೌಲಭ್ಯಗಳ ಲಾಭವನ್ನು ಪಡೆದರೆ ಮಗುವಿಗೆ ಉತ್ತಮ ಭವಿಷ್ಯ ರೂಪಿಸುವಲ್ಲಿ ಸಹಕಾರಿಯಾಗುತ್ತದೆ.

ಲರ್ನಿಂಗ್ ಡಿಸಾರ್ಡರ್ ಇದ್ದ ಮಕ್ಕಳು ತಮ್ಮ ಕಾಲ ಮೇಲೆ ನಿಲ್ಲಲಾಗುವುದಿಲ್ಲ ಅಥವಾ ಜೀವನದಲ್ಲಿ ಯಶಸ್ವಿಯಾಗುವುದಿಲ್ಲ ಎಂಬುದು ಸುಳ್ಳು. ನಮ್ಮ ಸುತ್ತ ಮುತ್ತ ಲರ್ನಿಂಗ್ ಡಿಸಾರ್ಡರ್ ಇರುವ ಅನೇಕ ಯಶಸ್ವಿ ವ್ಯಕ್ತಿಗಳಿದ್ದಾರೆ. ಓದುವಿಕೆಯ (ಡಿಸ್ಲೆಕ್ಸಿಯಾ) ಸವಾಲಿದ್ದ ಅಭಿಷೇಕ್ ಬಚ್ಚನ್, ಓದುವಿಕೆ ಹಾಗು ಬರೆಯುವುದರಲ್ಲೂ (ಡಿಸ್ ಗ್ರಾಫಿಯಾ) ಹಿಂದಿದ್ದ ಆಲ್ಬರ್ಟ್ ಐನ್‌ಸ್ಟೀನ್, ಗಣಿತ ಕಬ್ಬಿಣದ ಕಡಲೆಯಾಗಿದ್ದ ಬಿಲ್ ಗೇಟ್ಸ್ , ಹೀಗೆ ಈ ಸ್ಥಿತಿಯಿದ್ದೂ ತಮ್ಮ ಕೆಲಸದಲ್ಲಿ ಉತ್ತುಂಗಕ್ಕೇರಿದ ಹತ್ತು ಹಲವು ಜನರನ್ನು ನಾವು ಕಾಣಬಹುದು.

ದಿಟ ನಾಗರ ಕಂಡಾಗ...

ಹಾವು ಹಿಡಿದವನು ಹಾವಿನ ಎದುರು ಕೈ ಆಡಿಸಿದಾಗ, ಅದು ಆ ಕೈಯನ್ನೇ ನೋಡುತ್ತಾ, ತಾನೂ ಹೆಡೆಯಾಡಿಸಿದ್ದು ಏಕೆ?

» ಕೆ. ಶ್ರೀನಿವಾಸರಾವ್ ಹರಪನಹಳ್ಳಿ

ಕೆಲವು ವರ್ಷಗಳ ಹಿಂದಿನ ಘಟನೆ. ನಮ್ಮೂರಲ್ಲಿ ನನ್ನದೊಂದು ಪುಟ್ಟ ಹೋಟೆಲ್. ಹಿಂಭಾಗದಲ್ಲಿ ಖಾಲಿ ನಿವೇಶನವಿತ್ತು. ಅಲ್ಲಲ್ಲಿ ಕಟ್ಟಡ ಕಟ್ಟಲು ಬೇಕಾದ ಕಲ್ಲುಗಳನ್ನು ರಾಶಿ ಹಾಕಿದ್ದೆವು. ಸುತ್ತಲೂ ಎತ್ತರದ ಕಾಂಪೌಂಡ್. ಆಗಾಗ ಖಾಲಿ ಸ್ಥಳದಲ್ಲಿ ಒಂದು ನಾಗರಹಾವು ಓಡಾಡುವುದು ಕಾಣುತ್ತಿತ್ತಂತೆ. ಬಹುಶಃ ಅದು ಅಲ್ಲಿಯೇ ನೆಲೆಸಿತ್ತೆಂದು ತೋರುತ್ತದೆ. ನಮ್ಮ ಕಾರ್ಮಿಕರಿಗೆ ಅನೇಕ ಬಾರಿ ಕಂಡಿದ್ದ ಹಾವು ನನಗೆ ಒಮ್ಮೆಯೂ ಕಂಡಿರಲಿಲ್ಲ. ಆದರೂ ಯಾವಾಗಲೇ ಹಾವನ್ನು ಕಂಡರೆ ಅದಕ್ಕೆ ಯಾವ ರೀತಿಯಲ್ಲಿಯೂ ಜೀವಹಾನಿ ಮಾಡದೇ ನನಗೆ ತಕ್ಷಣ ತಿಳಿಸಬೇಕೆಂದು ಆಜ್ಞಾಪಿಸಿದ್ದೆ!

ಆ ವರ್ಷ ನಾಗರಪಂಚಮಿಗೆ ಇನ್ನೊಂದೇ ವಾರವಿತ್ತು. ಅಂದು ಭಾನುವಾರ. ಹೋಟೆಲಿಗೆ ರಜೆ. ಮಧ್ಯಾಹ್ನದ ಊಟ ಮುಗಿಸಿ ಮನೆಯಲ್ಲಿ ಮಗಳೊಂದಿಗೆ ಕೇರಂ ಆಡುತ್ತಿದ್ದೆ. ಹೋಟೆಲಿನಿಂದ ಫೋನ್ ಕರೆ! ನಾಗರಹಾವು ಕಾಣಿಸಿಕೊಂಡಿದೆಯಂತೆ! ನಾನು ಬರುವವರೆಗೂ ಯಾರೂ ಏನೂ ಮಾಡಕೂಡದೆಂದು ಆದೇಶಿಸಿ ದೌಡಾಯಿಸಿದೆ. ಅದು ಅಲ್ಲಿಯೇ ಕಲ್ಲಿನ ರಾಶಿಯೊಳಗೆ ಹೋದುದನ್ನು ತಾನು ನೋಡಿದ್ದಾಗಿ ಕ್ಲೀನರ್ ಕರಿಬಸ್ಯ ಹೇಳಿದ.

ನಮ್ಮೂರಿನ ಏಕಮಾತ್ರ ಹಾವು ಹಿಡಿಯುವವ ಕಪ್ಪಿ ನಿಂಗಪ್ಪನನ್ನು ಕರೆದುಕೊಂಡು ಬರಲು ದೋಸೆ ಭಟ್ಟನನ್ನು ಕಳಿಸಿ ಅಷ್ಟರಲ್ಲಾಗಲೇ ಸೇರಿದ್ದ ಹುಡುಗರು, ಜನರನ್ನು ದೂರ ಸರಿಸಿದೆ. 15 ನಿಮಿಷಗಳಲ್ಲಿ ಬಂದ ನಿಂಗಪ್ಪ ವಿವರ ಕೇಳಿಕೊಂಡು ಒಂದೊಂದೇ ಕಲ್ಲುಗಳನ್ನು ಎತ್ತಿ ಬದಿಗೆ ಹಾಕುತ್ತಾ ಹೋದ. 10- 15 ಕಲ್ಲು ತೆಗೆದಿರಬೇಕು. ಒಮ್ಮೆಲೇ ಭುಸ್ ಎಂದು ನಾಗರಾಜ ಹೆಡೆಯೆತ್ತಿ ಫೂತ್ಕರಿಸಿದ.

ಆರಡಿ ಉದ್ದದ ಸರ್ಪ! ಸುತ್ತಲೂ ನೆರೆದಿದ್ದ ಜನ ದೂರ ಸರಿದಿದ್ದರು.

ಅಷ್ಟರಲ್ಲಿ ನಿಂಗಪ್ಪ ಬಲಗೈಯನ್ನು ಅದರ ಮುಖಕ್ಕೆ ತೋರಿಸಿ ವೃತ್ತಾಕಾರವಾಗಿ ತಿರುಗಿಸಿದ. ಏನಾಶ್ಚರ್ಯ! ಅವನ ಅಂಗೈ ತಿರುಗಿದಂತೆ ತನ್ನ ಹೆಡೆಯಾಡಿಸಿದ ಸರ್ಪ, ಪತ್ನಿಗೆ ಹೆದರಿದ ಪಾಪಚ್ಚಿ ಪತಿರಾಯನಂತೆ ಮಣಿದು ತಲೆಬಾಗಿಸಿತ್ತು. ಬಲಗೈಯಲ್ಲಿ ಅದರ ಬಾಲ ಹಿಡಿದೆತ್ತಿ ತನ್ನ ಎಡಗೈಗೆ ಸುತ್ತಿಕೊಂಡು ಮಕ್ಕಳಿಗೆ ಮೈಮೇಲೆ ಹಾಕುವವನಂತೆ ಹೆದರಿಸಿ ತಮಾಷೆ ಮಾಡಿದ, ಕಪ್ಪಿ ನಿಂಗಪ್ಪ.

ನಂತರ ನೆಲದ ಮೇಲೆ ಬಿಟ್ಟು, ಹೆಡೆಯೆತ್ತಿದ್ದ ನಾಗರನನ್ನು ಆಡಿಸಿದ. ಅವನಿಗೆ ತಿಂಡಿ ತಿನ್ನಿಸಿ, ಹಣ ಕೊಟ್ಟು ಕಳಿಸಿದೆ. ವಿಶೇಷವೆಂದರೆ ಅವನು ಅದುವರೆಗೂ ಹಿಡಿದ ನೂರಾರು ಹಾವುಗಳನ್ನು ಹಲ್ಲು ಕೀಳದೇ ಸಮೀಪದ ಕಾಡಿಗೆ ಬಿಟ್ಟು ಬರುತ್ತಿದ್ದನಂತೆ! ನಾಗರ ಪಂಚಮಿಗೆ ಮುನ್ನ ನಾಗರನನ್ನು ಕೊಲ್ಲದೇ ಕ್ಷೇಮವಾಗಿ ಕಳಿಸಿದ ಸಂತೃಪ್ತಿ ನನ್ನದಾಗಿತ್ತು.

ಅಕ್ಷರದೋಷ ಹುಡುಕುವ ಗೀಳಿನಿಂದ ಹೊರಬರುವುದು ಹೇಗೆ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಎಂ.ಹರೀಶ ಗಣಪತಿ, ಶಿವಮೊಗ್ಗ

- **ಭಟ್ರೇ, ಪದಗಳಲ್ಲಿ, ವಾಕ್ಯಗಳಲ್ಲಿ ದೋಷಗಳಿದ್ದರೆ ಅವುಗಳನ್ನು ಕಂಡು ಹಿಡಿಯುವ ವಿಚಿತ್ರ ಚಟ ನನಗಿದೆ. ನಾನು ಓದುವುದಕ್ಕಿಂತ ಹೆಚ್ಚು ಪ್ರೂಫ್ ರೀಡಿಂಗ್ ಮಾಡುವುದೇ ಹೆಚ್ಚು. ಇದರಿಂದ ನನಗೆ ಸರಾಗವಾಗಿ ಓದಲು ಆಗುವುದಿಲ್ಲ. ದಾರಿಯಲ್ಲಿ ಹೋಗುವಾಗ ಅಂಗಡಿ, ಹೊಟೇಲ್‌ಗಳ ಫಲಕಗಳಲ್ಲಿ ತಪ್ಪುಗಳನ್ನೇ ನೋಡುತ್ತಾ ಹೋಗುತ್ತೇನೆ. ಈ ಅಭ್ಯಾಸವನ್ನು ತಪ್ಪಿಸುವುದು ಹೇಗೆ?**

– ಹರೀಶ ಅವರೇ, ನಿಮ್ಮ ಸಮಸ್ಯೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಪದಗಳಲ್ಲಿನ ತಪ್ಪುಗಳನ್ನು ಗುರುತಿಸುವ ಈ ಅಭ್ಯಾಸವು ಕೆಲವೊಮ್ಮೆ ನಿಜಕ್ಕೂ ಕಿರಿಕಿರಿ ಉಂಟು ಮಾಡಬಹುದು ಮತ್ತು ಓದುವ ಅನುಭವವನ್ನು ಹಾಳುಮಾಡಬಹುದು. ಇದು ಒಂದು ರೀತಿಯ 'ಪ್ರೂಫ್ ರೀಡಿಂಗ್ ಒಬ್ಸೆಷನ್' ಅಥವಾ 'ಪರ್ಫೆಕ್ಷನಿಸಂ'ನ ಭಾಗವಾಗಿರಬಹುದು. ಇದನ್ನು ಸಂಪೂರ್ಣವಾಗಿ ತೊಡೆದುಹಾಕುವುದು ಕಷ್ಟವಾದರೂ, ಕೆಲವು ತಂತ್ರಗಳನ್ನು ಬಳಸಿಕೊಂಡು ಇದನ್ನು ನಿಯಂತ್ರಿಸಲು ಪ್ರಯತ್ನಿಸಬಹುದು.

ನೀವು ಓದಲು ಆರಂಭಿಸುವ ಮೊದಲು, ನಿಮ್ಮ ಗಮನವನ್ನು ಓದುವ ವಿಷಯದ ಕಡೆಗೆ ಕೇಂದ್ರೀಕರಿಸಲು ಪ್ರಯತ್ನಿಸಿ. ಉದಾಹರಣೆಗೆ, ಒಂದು ಪುಸ್ತಕ ಓದುತ್ತಿರುವಾಗ, ಕಥೆಯ ಪಾತ್ರಗಳು, ಘಟನೆಗಳು, ಸಂದೇಶದ ಮೇಲೆ ಗಮನವಿಡಿ. ನಿಮ್ಮ ಮಿದುಳು ತಪ್ಪುಗಳನ್ನು ಹುಡುಕಲು ಆರಂಭಿಸಿದಾಗಲೆಲ್ಲ, ಅದನ್ನು ನಿಧಾನವಾಗಿ ವಿಷಯದ ಕಡೆಗೆ ಮರಳಿ ತನ್ನಿ. ಇದಕ್ಕೆ ನೀವು 'ಮೈಂಡ್‌ಫುಲ್ ರೀಡಿಂಗ್' ತಂತ್ರವನ್ನು ಬಳಸಬಹುದು. ಅಂದರೆ, ಪ್ರತಿ ವಾಕ್ಯವನ್ನು ಓದುವಾಗ, ಅದರ ಅರ್ಥವನ್ನು ಗ್ರಹಿಸಲು ಮಾತ್ರ ಗಮನಹರಿಸಿ, ಪದಗಳ ಜೋಡಣೆ ಅಥವಾ ವ್ಯಾಕರಣ ದೋಷಗಳ ಬಗ್ಗೆ ತಕ್ಷಣ ಪ್ರತಿಕ್ರಿಯಿಸುವುದನ್ನು ತಪ್ಪಿಸಿ.

ಸಾಮಾನ್ಯವಾಗಿ ಓದುವಾಗ, ತಪ್ಪುಗಳನ್ನು ಹುಡುಕುವ ನಿಮ್ಮ ಸಹಜ ಪ್ರವೃತ್ತಿಯನ್ನು ನಿಯಂತ್ರಿಸಲು ಪ್ರಯತ್ನಿಸಿ. ನೀವು ಏನನ್ನಾದರೂ ಬರೆದಾಗ ಅಥವಾ ನಿಮಗೆ ಪ್ರೂಫ್ ರೀಡಿಂಗ್ ಮಾಡಲೇಬೇಕಾದ ಸಂದರ್ಭ ಎದುರಾದಾಗ ಮಾತ್ರ ಆ ಕೆಲಸಕ್ಕೆ ಒಂದು ನಿರ್ದಿಷ್ಟ ಸಮಯವನ್ನು ಮೀಸಲಿಡಿ. ಆ ಸಮಯದಲ್ಲಿ ಮಾತ್ರ ನಿಮ್ಮ ಸಂಪೂರ್ಣ ಗಮನ ದೋಷಗಳನ್ನು ಹುಡುಕುವುದರ ಮೇಲೆ ಇರಲಿ. ಉಳಿದ ಸಮಯದಲ್ಲಿ ನೀವು 'ಓದುಗ' ಮಾತ್ರ ಆಗಿರಿ, 'ಪ್ರೂಫ್ ರೀಡರ್' ಆಗಬೇಡಿ. ರಸ್ತೆಯಲ್ಲಿ ಫಲಕಗಳಲ್ಲಿ ತಪ್ಪುಗಳು ಕಂಡಾಗ, ಅವುಗಳನ್ನು ತಕ್ಷಣವೇ ಮಾನಸಿಕವಾಗಿ ಸರಿಪಡಿಸುವ ಅಥವಾ ನಿಮ್ಮ ಮನಸ್ಸಿನಲ್ಲಿ ಪುನರಾವರ್ತಿಸುವ ಅಭ್ಯಾಸವನ್ನು ನಿಲ್ಲಿಸಿ. ಓಹ್, ಇಲ್ಲಿ ತಪ್ಪು ಇದೆ ಎಂದು ಗುರುತಿಸಿ ಮುಂದಕ್ಕೆ ಹೋಗಿ. ಅದರ ಬಗ್ಗೆ ಹೆಚ್ಚು ಯೋಚಿಸಬೇಡಿ. ನಿಮ್ಮ ಸ್ನೇಹಿತರೊಂದಿಗೆ ಅಥವಾ ಕುಟುಂಬದವರೊಂದಿಗೆ ಮಾತಾಡುವಾಗ ಅವರ ಮಾತಿನಲ್ಲಿನ ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಲು ಹೋಗಬೇಡಿ. ಇದು ನಿಮ್ಮ ಅಭ್ಯಾಸವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.

ಪ್ರತಿಯೊಬ್ಬರೂ ತಪ್ಪುಗಳನ್ನು ಮಾಡುತ್ತಾರೆ ಎಂಬುದನ್ನು ಒಪ್ಪಿಕೊಳ್ಳುವುದು ವಾಸಿ. ಪ್ರತಿಯೊಂದು ಪಠ್ಯವೂ ಪರಿಪೂರ್ಣವಾಗಿರುವುದಿಲ್ಲ. ಕೆಲವೊಮ್ಮೆ ಸಣ್ಣಪುಟ್ಟ ದೋಷಗಳು ಸಹಜ. ನಿಮ್ಮ ಆಬ್ಸೆಷನ್ ಅನ್ನು ಕಡಿಮೆ ಮಾಡಲು, ಎಲ್ಲವೂ ಪರಿಪೂರ್ಣವಾಗಿರಬೇಕು ಎಂಬ ನಿಮ್ಮ ಆಂತರಿಕ ನಿರೀಕ್ಷೆಯನ್ನು ಸಡಿಲಗೊಳಿಸಲು ಪ್ರಯತ್ನಿಸಿ. ದಾರಿಹೋಕರಾಗಿ ಫಲಕಗಳಲ್ಲಿ ತಪ್ಪುಗಳನ್ನು ನೋಡುವ ಅಭ್ಯಾಸವನ್ನು ಕಡಿಮೆ ಮಾಡಲು, ನಿಮ್ಮ ಗಮನವನ್ನು ಬೇರೆ ಯಾವುದಾದರೂ ವಿಷಯದ ಕಡೆಗೆ ತಿರುಗಿಸಿ. ಉದಾಹರಣೆಗೆ, ಸುತ್ತಮುತ್ತಲಿನ ಪ್ರಕೃತಿ, ಜನರ ಹಾವಭಾವ, ಕಟ್ಟಡಗಳ ವಿನ್ಯಾಸ ಹೀಗೆ ಇತರ ವಿಷಯಗಳತ್ತ ಗಮನಹರಿಸಲು ಪ್ರಯತ್ನಿಸಿ.

ಈ ಅಭ್ಯಾಸವು ನಿಮ್ಮ ದೈನಂದಿನ ಜೀವನಕ್ಕೆ ಗಂಭೀರವಾಗಿ ಅಡ್ಡಿಯಾಗುತ್ತಿದ್ದರೆ ಮತ್ತು ನಿಮ್ಮ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದ್ದರೆ, ಒಬ್ಬ ಮನೋವೈದ್ಯರು ಅಥವಾ ಮನಶ್ಶಾಸ್ತ್ರಜ್ಞರನ್ನು ಭೇಟಿ ಮಾಡುವುದು ಉತ್ತಮ. ಅವರು 'ಕಾಗ್ನಿಟಿವ್ ಬಿಹೇವಿಯರಲ್ ಥೆರಪಿ (ಸಿಬಿಟಿ)' ಯಂಥ ತಂತ್ರಗಳ ಮೂಲಕ ಈ ಸಮಸ್ಯೆಯನ್ನು ನಿವಾರಿಸಲು ಸಹಾಯ ಮಾಡಬಹುದು. ಇದು ರಾತ್ರೋರಾತ್ರಿ ಬದಲಾಗುವ ಅಭ್ಯಾಸವಲ್ಲ. ಇದಕ್ಕೆ ತಾಳ್ಮೆ ಮತ್ತು ನಿರಂತರ ಪ್ರಯತ್ನದ ಅಗತ್ಯವಿದೆ. ನಿಧಾನವಾಗಿ, ಅಭ್ಯಾಸವನ್ನು ನಿಯಂತ್ರಿಸಲು ನೀವು ಯಶಸ್ವಿಯಾಗಬಹುದು.

★★★

ಸಿ.ಅಂಜನಾ, (ಇಮೇಲ್ ಮೂಲಕ)

- **ಭಟ್ರೇ, ನಾನು ಮೈಸೂರು ವಾಸಿ. ಒಳ್ಳೆಯ ಸಂಸ್ಥೆಯಲ್ಲಿ ಉದ್ಯೋಗಿ. ತಿಂಗಳಿಗೆ ಐದಂಕಿ ಸಂಬಳ. ವಾರದ ಕೊನೆಯಲ್ಲಿ ಬೆಂಗಳೂರಿಗೆ ಬರುತ್ತೇನೆ. ನನ್ನ ಬಳಿ ಮಿನಿ ಕೂಪರ್ ಕಾರ್ ಇದೆ. ನಾನು ನಿಮ್ಮ ಬರಹಗಳ ಉತ್ಕಟ ಅಭಿಮಾನಿ. ನಿಮ್ಮನ್ನು ದೂರದಿಂದ ನೋಡಿದ್ದೇನೆ. ಆದರೆ ಭೇಟಿ ಮಾಡಿಲ್ಲ. ನಿಮ್ಮನ್ನು ಬಾಯ್ ಫ್ರೆಂಡ್ ಆಗಿ ಮಾಡಿಕೊಳ್ಳೋಣ ಅಂತ ಅಂದುಕೊಂಡಿದ್ದೇನೆ. ನೀವು 'ಹೂಂ' ಅಂದ್ರೆ ನಿಮಗೆ ಫೋಟೋ ಕಳಿಸುತ್ತೇನೆ. ಇಷ್ಟವಾದರೆ ನನಗೆ ತಿಳಿಸಿ.**

– ಅಂಜನಾ ಅವರೇ, ನಿಮ್ಮ ಮೆಚ್ಚುಗೆಯ ಮಾತುಗಳಿಗೆ ನಾನು ಆಭಾರಿ. ನನ್ನ ಬರಹಗಳನ್ನು ನೀವು ಇಷ್ಟಪಡುತ್ತೀರಿ ಮತ್ತು ನನ್ನ ಬಗ್ಗೆ ಇಷ್ಟು ಅಭಿಮಾನ ಹೊಂದಿದ್ದೀರಿ ಎಂದು ತಿಳಿದು ಸಂತೋಷವಾಯಿತು. ಮೈಸೂರಿನಿಂದ ಬೆಂಗಳೂರಿಗೆ ಬಂದು, ವಾರಾಂತ್ಯದಲ್ಲಿ ಮಿನಿ ಕೂಪರ್ ಕಾರ್‌ನಲ್ಲಿ ಪ್ರಯಾಣಿಸುವ ನಿಮ್ಮ ಜೀವನಶೈಲಿ ಮತ್ತು ನಿಮ್ಮ ವೃತ್ತಿಜೀವನದ ಯಶಸ್ಸು ನನಗೆ ಮೆಚ್ಚುಗೆ ತಂದಿದೆ.

ನಿಮ್ಮ ಆಫರ್ ತಿರಸ್ಕರಿಸಲಾಗದಷ್ಟು ಆಕರ್ಷಕವಾಗಿದೆ. ಆದರೆ ಬಾಯ್ ಫ್ರೆಂಡ್ ಆಗಿ ನನ್ನಿಂದ ಏನು ಅಪೇಕ್ಷಿಸುತ್ತೀರಿ ಎಂಬುದನ್ನು ತಿಳಿಸಿದ್ದರೆ ಒಳ್ಳೆಯದಿತ್ತು. ಜತೆಗೆ ನಿಮ್ಮ ಫೋಟೋವನ್ನೂ ಕಳಿಸಿದ್ದರೂ ಒಳ್ಳೆಯದಿತ್ತು.

ಕೆಲ ವರ್ಷಗಳ ಹಿಂದೆ ಪತ್ರಿಕೆಯಲ್ಲೊಂದು ಜಾಹೀರಾತು ಪ್ರಕಟವಾಗಿತ್ತು. 'ನನ್ನ ಮಗಳನ್ನು ಮದುವೆಯಾದರೆ, ಟ್ರ್ಯಾಕ್ಟರ್ ನ್ನು ಉಡುಗೊರೆಯಾಗಿ ನೀಡುತ್ತೇನೆ' ಎಂದು ಅದರಲ್ಲಿ ಬರೆದಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಸಾವಿರಾರು ಓದುಗರು, 'ಟ್ರ್ಯಾಕ್ಟರ್ ಫೋಟೋ ಕಳಿಸಿ' ಎಂದು ಬರೆದ ಘಟನೆ ನೆನಪಿಗೆ ಬಂತು. ಅವರಾರೂ 'ನಿಮ್ಮ ಮಗಳ ಫೋಟೋ ಕಳಿಸಿ' ಎಂದು ಹೇಳಿರಲಿಲ್ಲ. ನಾನೇನು ನಿಮಗೆ ಕಾರ್ ಫೋಟೋ ಕಳಿಸಿ ಎಂದು ಹೇಳುವುದಿಲ್ಲ.

ನಿಮ್ಮ ಬಾಯ್ ಫ್ರೆಂಡ್ ಆಗಿ ನೀವು ನನ್ನಿಂದ ಏನನ್ನು ಅಪೇಕ್ಷಿಸುತ್ತೀರಿ ಎಂಬುದನ್ನು ಸ್ಪಷ್ಟಪಡಿಸಿದರೆ ಇನ್ನೂ ಒಳ್ಳೆಯದು. ನಂತರ ಉಳಿದ ವಿಷಯಗಳನ್ನು ಚರ್ಚಿಸೋಣ. ನಿಮ್ಮ ಉತ್ತರ ನೇರವಾಗಿರಲಿ. ಸುತ್ತಿ ಬಳಸಿ ಮಾತುಬೇಡ.

★★★

ಅನಿಲ್ ಬಿ.ಚಳಗೇರಿ, ಹುಬ್ಬಳ್ಳಿ

- **ಸಂಪಾದಕರೇ, ನನಗೆ ಪುಸ್ತಕಗಳನ್ನು ಸಂಗ್ರಹಿಸುವ ಅಭ್ಯಾಸವಿದೆ. ಖರೀದಿಸಿದ ಪುಸ್ತಕಗಳನ್ನೆಲ್ಲ ನಾನು ಓದುವುದಿಲ್ಲ. ಹೊಸ ಪುಸ್ತಕಗಳನ್ನು ಕಂಡಾಗ ಖರೀದಿಸುತ್ತೇನೆ. ಎಷ್ಟೋ ಪುಸ್ತಕಗಳನ್ನು ಓದದೇ ಬಿಟ್ಟಿದ್ದೇನೆ. ನಾನು ಪುಸ್ತಕಗಳನ್ನು ಓದುತ್ತೇನೆ ಎಂಬುದನ್ನು ಬೇರೆಯವರಿಗೆ ತೋರಿಸಲು ಅವುಗಳನ್ನು ಖರೀದಿಸುತ್ತಿರಬಹುದು ಎಂದು ಅನಿಸಲಾರಂಭಿಸಿದೆ. ನಾನು ಮಾಡುತ್ತಿರುವುದು ಸರಿಯಾ?**

– ಅನಿಲ್ ಅವರೇ, ನಿಮ್ಮ ಈ ಅಭ್ಯಾಸವನ್ನು 'ಬಿಬ್ಲಿಯೋಮೇನಿಯಾ' (Bibliomania) ಅಥವಾ 'ಆ್ಯಂಟಿ ಲೈಬ್ರರಿ' (Antilibrary) ಎಂದು ಕರೆಯಬಹುದು. ಇದು ಅನೇಕ ಪುಸ್ತಕ ಪ್ರಿಯರಲ್ಲಿ ಕಂಡುಬರುವ ಒಂದು ಸಾಮಾನ್ಯ ಪ್ರವೃತ್ತಿ. ನೀವು ಖರೀದಿಸಿದ ಪುಸ್ತಕಗಳನ್ನು ಓದದೇ ಸಂಗ್ರಹಿಸುತ್ತಿದ್ದೀರಿ ಮತ್ತು ಇದು ಬೇರೆಯವರಿಗೆ ತೋರಿಸಲು ಇರಬಹುದೇ ಎಂಬ ಅನುಮಾನ ನಿಮ್ಮಲ್ಲಿದೆ. ನೀವು ಮಾಡುತ್ತಿರುವುದು ಸರಿಯೇ ಎಂದು ಕೇಳಿದ್ದೀರಿ. ಇದಕ್ಕೆ ನೇರವಾದ 'ಸರಿ' ಅಥವಾ 'ತಪ್ಪು' ಎಂಬ ಉತ್ತರ ನೀಡುವುದು ಕಷ್ಟ. ಆದರೆ, ಈ ಅಭ್ಯಾಸದ ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳೋಣ:

ಇದು ಏಕೆ ಸಂಭವಿಸುತ್ತದೆ? ಪುಸ್ತಕಗಳು ಜ್ಞಾನದ ಆಗರ. ಅವುಗಳನ್ನು ಹೊಂದಿದಾಗ, 'ಆ ಜ್ಞಾನವನ್ನು ಪಡೆದ ಒಂದು ತೃಪ್ತಿ ಸಿಗುತ್ತದೆ. ಒಂದು ದಿನ ಇದನ್ನು ಓದುತ್ತೇನೆ' ಎಂಬ ಆಶಯದಿಂದ ಪುಸ್ತಕಗಳನ್ನು ಖರೀದಿಸುತ್ತಿರಬಹುದು. ಪುಸ್ತಕಗಳು ಕೇವಲ ಓದಲು ಮಾತ್ರವಲ್ಲ, ಅವುಗಳನ್ನು ಸಂಗ್ರಹಿಸುವುದು, ಜೋಡಿಸುವುದು, ಅವುಗಳ ಸೌಂದರ್ಯವನ್ನು ಆಸ್ವಾದಿಸುವುದೂ ಒಂದು ಹವ್ಯಾಸ. ನೀವು ಹೇಳಿದಂತೆ, ಕೆಲವೊಮ್ಮೆ ಇತರರಿಗೆ 'ನಾನು ಪುಸ್ತಕಗಳನ್ನು ಓದುವ ವ್ಯಕ್ತಿ' ಎಂದು ತೋರಿಸಲು ಈ ಅಭ್ಯಾಸ ಇರಬಹುದು. ಇದು ಸಂಪೂರ್ಣವಾಗಿ ತಪ್ಪು ಎಂದು ಹೇಳಲಾಗುವುದಿಲ್ಲ, ಏಕೆಂದರೆ ಪುಸ್ತಕಗಳು ವ್ಯಕ್ತಿತ್ವದ ಪ್ರತಿಬಿಂಬವೂ ಹೌದು.

ಕೆಲವರಿಗೆ ಹೊಸ ಪುಸ್ತಕಗಳನ್ನು ಖರೀದಿಸುವುದು ಒಂದು ರೀತಿಯ ಒತ್ತಡ ನಿವಾರಕ ಚಟುವಟಿಕೆಯಾಗಿರಬಹುದು. ಇಟಾಲಿಯನ್ ಲೇಖಕ ಉಂಬರ್ಟೊ ಇಕೋ 'ಆ್ಯಂಟಿ ಲೈಬ್ರರಿ' ಎಂಬ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಿದರು. ಇದರರ್ಥ, ಓದಿದ ಪುಸ್ತಕಗಳಿಗಿಂತ ಓದದೇ ಇರುವ ಪುಸ್ತಕಗಳ ಸಂಗ್ರಹವು ಹೆಚ್ಚು ಮುಖ್ಯ. ಏಕೆಂದರೆ, ಓದಿದ ಪುಸ್ತಕಗಳು ನಿಮಗೆ ತಿಳಿದಿರುವ ವಿಷಯಗಳನ್ನು ಪ್ರತಿನಿಧಿಸಿದರೆ, ಓದದೇ ಇರುವ ಪುಸ್ತಕಗಳು ನಿಮಗೆ ತಿಳಿದಿಲ್ಲದ ಮತ್ತು ನೀವು ಕಲಿಯಬಹುದಾದ ಅಪಾರ ಜ್ಞಾನವನ್ನು ಪ್ರತಿನಿಧಿಸುತ್ತವೆ. ಇದು ನಿಮ್ಮ ಜ್ಞಾನದ ಗಡಿಯನ್ನು ವಿಸ್ತರಿಸಲು ಪ್ರೇರೇಪಿಸುತ್ತದೆ.

ಹಾಗಾದರೆ ನೀವು ಮಾಡುತ್ತಿರುವುದು ಸರಿಯೇ? ಇದು ನಿಮಗೆ ಸಂತೋಷ ನೀಡುತ್ತಿದ್ದರೆ ಮತ್ತು ನಿಮ್ಮ ಆರ್ಥಿಕ ಸ್ಥಿತಿಗೆ ಹೊರೆಯಾಗದಿದ್ದರೆ, ಇದು ಒಂದು ವೈಯಕ್ತಿಕ ಹವ್ಯಾಸ. ಅದರಲ್ಲಿ ತಪ್ಪೇನಿಲ್ಲ. ನೀವು ಬೇರೆಯವರಿಗೆ ತೋರಿಸಲು ಮಾತ್ರ ಖರೀದಿಸುತ್ತಿದ್ದರೆ, ಅದು ಸ್ವಲ್ಪ ಮಟ್ಟಿಗೆ ಆಂತರಿಕ ತೃಪ್ತಿಯ ಬದಲು ಬಾಹ್ಯ ಮನ್ನಣೆಯ ಕಡೆಗೆ ನಿಮ್ಮ ಗಮನವನ್ನು ಸೆಳೆಯಬಹುದು. ಆದರೆ, ಇದು ಸಂಪೂರ್ಣವಾಗಿ ಆ ಉದ್ದೇಶದಿಂದಲೇ ಎಂದು ಹೇಳಲಾಗುವುದಿಲ್ಲ. ಬಹುಶಃ ನಿಮಗೆ ಜ್ಞಾನದ ಹಂಬಲವೂ ಇರಬಹುದು. ಪುಸ್ತಕಗಳನ್ನು ಖರೀದಿಸಿ ಓದದೇ ಇಡುವುದು ಸಂಪನ್ಮೂಲಗಳ ವ್ಯರ್ಥ ಎಂದು ಕೆಲವರು ವಾದಿಸಬಹುದು. ಆದರೆ, ಪುಸ್ತಕಗಳನ್ನು ಕೊಳ್ಳುವ ಮೂಲಕ ನೀವು ಲೇಖಕರು ಮತ್ತು ಪ್ರಕಾಶಕರನ್ನು ಬೆಂಬಲಿಸುತ್ತಿದ್ದೀರಿ ಎಂಬುದನ್ನೂ ನೆನಪಿಡಿ.

ಓದುವ ಮುಖ್ಯ ಉದ್ದೇಶ ಜ್ಞಾನಾರ್ಜನೆ ಮತ್ತು ಮನರಂಜನೆ. ನೀವು ಓದುವುದರಿಂದ ವಂಚಿತರಾಗುತ್ತಿದ್ದರೆ, ಆ ಭಾಗದಲ್ಲಿ ನೀವು ನಷ್ಟ ಅನುಭವಿಸುತ್ತಿದ್ದೀರಿ. ಈ ಅಭ್ಯಾಸವನ್ನು ಸಮತೋಲನಗೊಳಿಸುವುದು ಹೇಗೆ? ನಿಮ್ಮ ಅಭ್ಯಾಸವನ್ನು ಸಂಪೂರ್ಣವಾಗಿ ನಿಲ್ಲಿಸುವ ಬದಲು, ಅದನ್ನು ಹೆಚ್ಚು ಸಮತೋಲಿತಗೊಳಿಸಲು ಪ್ರಯತ್ನಿಸಬಹುದು. ಹೊಸ ಪುಸ್ತಕವನ್ನು ಖರೀದಿಸುವ ಮೊದಲು, 'ನಾನು ಇದನ್ನು ನಿಜವಾಗಿಯೂ ಓದುತ್ತೇನೆಯೇ? ಇದು ನನ್ನ ಆಸಕ್ತಿಗಳಿಗೆ ಹೊಂದಿಕೆಯಾಗುತ್ತದೆಯೇ?' ಎಂದು ಒಂದು ಕ್ಷಣ ಯೋಚಿಸಿ.

ಪ್ರತಿ ತಿಂಗಳು ಅಥವಾ ವಾರಕ್ಕೆ ಒಂದು ನಿರ್ದಿಷ್ಟ ಸಂಖ್ಯೆಯ ಪುಸ್ತಕಗಳನ್ನು ಓದುವ ಗುರಿಯನ್ನು ಹೊಂದಿರಿ. ಇದು ನಿಮ್ಮನ್ನು ಓದಲು ಪ್ರೇರೇಪಿಸುತ್ತದೆ. ದೊಡ್ಡ ಪುಸ್ತಕಗಳನ್ನು ಓದಲು ಕಷ್ಟವಾದರೆ, ಸಣ್ಣ ಕಥೆಗಳ ಸಂಗ್ರಹಗಳು, ಕವನ ಸಂಕಲನಗಳು ಅಥವಾ ಕಡಿಮೆ ಪುಟಗಳ ಪುಸ್ತಕಗಳಿಂದ ಪ್ರಾರಂಭಿಸಿ. ಪುಸ್ತಕ ಕ್ಲಬ್‌ಗಳಿಗೆ ಸೇರಿಕೊಳ್ಳುವುದು ಅಥವಾ ಸ್ನೇಹಿತರೊಂದಿಗೆ ಪುಸ್ತಕಗಳ ಬಗ್ಗೆ ಚರ್ಚಿಸುವುದು ನಿಮ್ಮನ್ನು ಓದಲು ಉತ್ತೇಜಿಸಬಹುದು. ಎಲ್ಲ ಪುಸ್ತಕಗಳನ್ನು ಖರೀದಿಸುವ ಬದಲು, ಕೆಲವನ್ನು ಗ್ರಂಥಾಲಯದಿಂದ ಎರವಲು ಪಡೆದು ಓದಿ. ಇದು ನಿಮ್ಮ ಸಂಗ್ರಹದ ಗಾತ್ರವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ನಿಮ್ಮ ಶೆಲ್ಫ್‌ನಲ್ಲಿ ಓದದ ಪುಸ್ತಕಗಳ ರಾಶಿ ಇರುವುದನ್ನು ನೋಡಿ ಒತ್ತಡಕ್ಕೆ ಒಳಗಾಗಬೇಡಿ. ಅವು ನಿಮ್ಮ ಜ್ಞಾನದ ಸಾಮರ್ಥ್ಯದ ಸಂಕೇತ ಎಂದು ಭಾವಿಸಿ.

ಕೊನೆಯದಾಗಿ, ನೀವು ಮಾಡುತ್ತಿರುವುದು ಸಂಪೂರ್ಣವಾಗಿ 'ತಪ್ಪು' ಎಂದು ಹೇಳಲಾಗುವುದಿಲ್ಲ. ಆದರೆ, ಈ ಅಭ್ಯಾಸವು ನಿಮ್ಮ ಓದುವ ಆನಂದಕ್ಕೆ ಅಡ್ಡಿಯಾಗುತ್ತಿದ್ದರೆ, ಅದನ್ನು ಸಮತೋಲನಗೊಳಿಸಲು ಪ್ರಯತ್ನಿಸುವುದು ಉತ್ತಮ. ಪುಸ್ತಕಗಳನ್ನು ಸಂಗ್ರಹಿಸುವುದರ ಜತೆಗೆ, ಅವುಗಳನ್ನು ಓದುವ ಸಂತೋಷವನ್ನೂ ಅನುಭವಿಸಿ.

★★★

ಪ್ರವೀಣ ಭಾರದ್ವಾಜ, ಹಾಸನ

- **ಭಟ್ರೇ, ಕೆಲವು ಅಮೂಲ್ಯ ಮತ್ತು ನನ್ನ ಆಸಕ್ತಿಯ ಪುಸ್ತಕಗಳನ್ನು ಕಂಡಾಗ, ಅವುಗಳನ್ನು ಎಗರಿಸಬೇಕು ಅಂತ ಅನಿಸುತ್ತದೆ. ನನ್ನ ಈ ಗುಣ ಒಳ್ಳೆಯದಲ್ಲ ಎಂದು ಗೊತ್ತು. ಆದರೂ ಇದನ್ನು ನಿಗ್ರಹಿಸಲು ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

– ಪ್ರವೀಣ ಅವರೇ, ಪುಸ್ತಕವನ್ನು ನೋಡಿದಾಗ ಅದನ್ನು ಪಡೆಯಬೇಕು ಎನ್ನುವ ಆಸಕ್ತಿ ಮೂಡುವುದು ಸಹಜ. ಆದರೆ, ಅದನ್ನು 'ಎಗರಿಸಬೇಕು' (ಕದಿಯಬೇಕು) ಎಂದು ಅನಿಸುವುದು ನೈತಿಕವಾಗಿ ಸರಿಯಲ್ಲ. ಈ ಗುಣವನ್ನು ನಿಗ್ರಹಿಸಲೇಬೇಕು. ನಿಮಗೆ ಆ ಪುಸ್ತಕದ ಮೇಲೆ ನಿಜವಾಗಿಯೂ ಆಸಕ್ತಿ ಇದೆಯೇ ಅಥವಾ ಅವುಗಳನ್ನು ಹೊಂದುವ ಆತುರ ಮಾತ್ರವೇ? ಆ ಪುಸ್ತಕಗಳನ್ನು ಓದಲು ಬಯಸುತ್ತೀರಾ ಅಥವಾ ಸಂಗ್ರಹಿಸಲು ಮಾತ್ರವೇ ಎಂಬುದನ್ನು ಖಚಿತಪಡಿಸಿಕೊಳ್ಳಿ. ಕೆಲವೊಮ್ಮೆ, ಪುಸ್ತಕಗಳ ಮೇಲಿನ ಅತಿಯಾದ ಪ್ರೀತಿಯಿಂದ ಅವುಗಳನ್ನು ಹೇಗಾದರೂ ಮಾಡಿ ಪಡೆಯಬೇಕು ಎಂಬ ಭಾವನೆ ಬರಬಹುದು. ಕದಿಯುವ ಆಲೋಚನೆ ಸಾಮಾನ್ಯವಾಗಿ ಆ ಕ್ಷಣದ ಆಸೆಯಾಗಿರಬಹುದು. ಆ ಕ್ಷಣ ಕಳೆದ ನಂತರ, ನೀವು ಅದನ್ನು ಮಾಡದಿರುವ ಬಗ್ಗೆ ಸಂತೋಷಪಡುತ್ತೀರಿ.

ನಿಮಗೆ ಇಷ್ಟವಾದ ಪುಸ್ತಕಗಳನ್ನು ಕದಿಯುವ ಬದಲು, ಖರೀದಿಸಲು ಪ್ರಾರಂಭಿಸಿ. ಇದು ಆರಂಭದಲ್ಲಿ ಕಷ್ಟ ಎನಿಸಿದರೂ, ಕ್ರಮೇಣ ಇದು ನಿಮ್ಮ ಅಭ್ಯಾಸವಾಗುತ್ತದೆ. ಪ್ರತಿ ತಿಂಗಳು ಪುಸ್ತಕಗಳಿಗಾಗಿ ಒಂದು ನಿರ್ದಿಷ್ಟ ಮೊತ್ತವನ್ನು ಮೀಸಲಿಡಿ. ಹೊಸ ಪುಸ್ತಕಗಳು ದುಬಾರಿ ಎನಿಸಿದರೆ, ಸೆಕೆಂಡ್ ಹ್ಯಾಂಡ್ ಪುಸ್ತಕದ ಅಂಗಡಿಗಳು ಅಥವಾ ಆನ್‌ಲೈನ್ ಪ್ಲಾಟ್ ಫಾರ್ಮ್‌ಗಳಲ್ಲಿ ಕಡಿಮೆ ಬೆಲೆಗೆ ಪುಸ್ತಕಗಳನ್ನು ಖರೀದಿಸಬಹುದು. ಪುಸ್ತಕಗಳನ್ನು ಕದಿಯುವ ಬದಲು, ಸ್ಥಳೀಯ ಪುಸ್ತಕಾಲಯಗಳ ಸದಸ್ಯರಾಗಿ. ಅಲ್ಲಿ ನಿಮಗೆ ಬೇಕಾದ ಪುಸ್ತಕಗಳನ್ನು ಉಚಿತವಾಗಿ ಓದಲು ಅಥವಾ ಎರವಲು ಪಡೆಯಲು ಅವಕಾಶವಿದೆ. ಇದು ನಿಮ್ಮ ಆಸಕ್ತಿಯನ್ನು ತಣಿಸಲು ಉತ್ತಮ ಮಾರ್ಗ. ಡಿಜಿಟಲ್ ಲೈಬ್ರರಿಗಳು ಅಥವಾ ಇ-ಬುಕ್ ಆ್ಯಪ್‌ಗಳನ್ನು ಬಳಸಬಹುದು. ಪುಸ್ತಕವನ್ನು ಕದಿಯಬೇಕು ಎಂದು ಅನಿಸಿದಾಗ, ಆ ಕ್ಷಣದಲ್ಲಿ ಒಂದು ನಿಮಿಷ ನಿಲ್ಲಿ ಮತ್ತು ಯೋಚಿಸಿ, 'ನಾನು ಇದನ್ನು ಯಾಕೆ ಕದಿಯಬೇಕು? ಇದರ ಪರಿಣಾಮಗಳೇನು?' ಎಂದು ಪ್ರಶ್ನಿಸಿಕೊಳ್ಳಿ. ಅಷ್ಟಕ್ಕೂ ಇದು ಕೇವಲ ಒಂದು ಆಸೆ ಎಂದು ಮನದಟ್ಟು ಮಾಡಿಕೊಳ್ಳಿ. ಪ್ರತಿ ಆಸೆಯನ್ನೂ ಈಡೇರಿಸುವ ಅಗತ್ಯವಿಲ್ಲ.

ಕದಿಯುವುದು ನಿಮ್ಮ ಆತ್ಮಗೌರವಕ್ಕೆ ಧಕ್ಕೆ ತರುತ್ತದೆ. ನಿಮ್ಮ ಒಳ್ಳೆಯ ಗುಣಗಳನ್ನು ಮತ್ತು ಸಾಧನೆಗಳನ್ನು ನೆನಪಿಸಿಕೊಳ್ಳಿ.ಯಾವುದೇ ಕನ್ನಡ ಪುಸ್ತಕದ ಬೆಲೆ ಐನೂರಕ್ಕಿಂತ ಹೆಚ್ಚು ಇರೊಲ್ಲ, ಇಂಗ್ಲಿಷ್ ಪುಸ್ತಕದ ಬೆಲೆ ಸಾವಿರಕ್ಕಿಂತ ಹೆಚ್ಚು ಇರೊಲ್ಲ. ಅಷ್ಟು ಸಣ್ಣ ಮೊತ್ತಕ್ಕೆ ನಿಮ್ಮ ಮರ್ಯಾದೆ ಮಣ್ಣುಪಾಲು ಮಾಡಿಕೊಳ್ಳಬೇಡಿ.

★★★

ಬಿ.ಆರ್.ಸುದರ್ಶನ, ಬೆಂಗಳೂರು

- **ಭಟ್ರೇ, ನನಗೆ ನಲವತ್ತೈದು ವರ್ಷ ವಯಸ್ಸು. ಖಾಸಗಿ ಕಂಪನಿಯಲ್ಲಿ ಉದ್ಯೋಗಿ. ದಾರಿಯಲ್ಲಿ ಹೋಗುವಾಗ, ಬಸ್ಸಿನಲ್ಲಿ, ವಿಮಾನ ನಿಲ್ದಾಣದಲ್ಲಿ, ವಿಮಾನದಲ್ಲಿ ಯಾರಾದರೂ ಒಳ್ಳೆಯ ವ್ಯಕ್ತಿಗಳನ್ನು ಕಂಡಾಗ ಮಾತಾಡಿಸಬೇಕು ಅನಿಸುತ್ತದೆ. ಆದರೆ ಮುಜುಗರ, ಸಂಕೋಚ ಮತ್ತು ಸಣ್ಣ ಭಯ. ಅಪರಿಚಿತರೊಂದಿಗೆ ಮಾತಾಡದಿದ್ದರೆ ಅಥವಾ ನನ್ನನ್ನು ತಪ್ಪು ಭಾವಿಸಬಹುದು ಎಂಬ ಸಣ್ಣ ಅಳುಕು ಬೇರೆ. ಈ ವಿಷಯದಲ್ಲಿ ನನಗೆ ನಿಮ್ಮ ಸಲಹೆ ಬೇಕು.**

– ಸುದರ್ಶನ ಅವರೇ, ನೀವು ಅಪರಿಚಿತರೊಂದಿಗೆ ಮಾತನಾಡಲು ಆಸಕ್ತಿ ಹೊಂದಿರುವುದು ಸಹಜ. ಅನೇಕರಿಗೆ ಇದೇ ರೀತಿಯ ಅನುಭವವಾಗುತ್ತದೆ. ದೊಡ್ಡ ಸಂಭಾಷಣೆಗೆ ಹೋಗುವ ಬದಲು, ಸಣ್ಣ ನಮಸ್ಕಾರ ಅಥವಾ ಒಂದು ಚಿಕ್ಕ ನಗುವನ್ನು ಬೀರಬಹುದು. ಅದಕ್ಕೂ ಮುನ್ನ, 'ಗುಡ್ ಮಾರ್ನಿಂಗ್.. ಗುಡ್ ಇವನಿಂಗ್..' ಇಂದು ಹೇಳಬಹುದು. ಅವರ ಪ್ರತಿಕ್ರಿಯೆಯ ದಾಟಿ, ನಿಮ್ಮೊಂದಿಗೆ ಮಾತಾಡಲು ಆಸಕ್ತಿ ಇದೆಯಾ, ಇಲ್ಲವಾ ಎಂಬುದನ್ನು ತಿಳಿಸುತ್ತದೆ. ಪರಿಸ್ಥಿತಿಗೆ ತಕ್ಕಂತೆ ಮಾತನಾಡಿ. ನೀವು ವಿಮಾನ ನಿಲ್ದಾಣದಲ್ಲಿದ್ದರೆ, 'ವಿಮಾನ ವಿಳಂಬವಾಗುತ್ತಿದೆಯೇ?' ಅಥವಾ 'ನೀವು ಯಾವ ಊರಿಗೆ ಹೋಗುತ್ತೀರಿ?' ಎಂದು ಕೇಳಬಹುದು.

ಒಂದು ವೇಳೆ ನೀವು ಬಸ್ಸಿನಲ್ಲಿದ್ದರೆ, 'ಟ್ರಾಫಿಕ್ ಜಾಸ್ತಿ ಇದೆ ಅನಿಸುತ್ತೆ' ಎಂದು ಮಾತು ಆರಂಭಿಸಬಹುದು. ಹವಾಮಾನ ಅಥವಾ ಸಾಮಾನ್ಯ ಘಟನೆ, ಅಪರಿಚಿತರೊಂದಿಗೆ ಮಾತುಕತೆ ಆರಂಭಿಸಲು ಲಾಯಕ್ಕಾದ ವಿಷಯ. ಪ್ರಶ್ನೆಗಳನ್ನು ಕೇಳಿ. ಹೌದು ಅಥವಾ ಇಲ್ಲ ಎಂದು ಉತ್ತರಿಸಲಾಗದ ಪ್ರಶ್ನೆಗಳನ್ನು ಕೇಳಿ. ಉದಾಹರಣೆಗೆ, 'ನೀವು ಈ ಸ್ಥಳಕ್ಕೆ ಯಾಕೆ ಬಂದಿದ್ದೀರಿ?' ಅಥವಾ 'ನಿಮ್ಮ ದಿನ ಹೇಗಿದೆ?'... ವ್ಯಕ್ತಿಯ ಬಟ್ಟೆ, ಆಭರಣ ಅಥವಾ ಇನ್ನಾವುದೇ ವಿಷಯ ನಿಮಗೆ ಇಷ್ಟವಾಗಿದ್ದರೆ, ಪ್ರಾಮಾಣಿಕವಾಗಿ ಮೆಚ್ಚುಗೆ ವ್ಯಕ್ತಪಡಿಸಿ. 'ನಿಮ್ಮ ಬ್ಯಾಗ್ (ಹೇರ್ ಸ್ಟೈಲ್, ಡ್ರೆಸ್, ವಾಚ್) ಚೆನ್ನಾಗಿದೆ' ಎಂದು ಹೇಳಬಹುದು. ಅವರು ಏನು ಹೇಳುತ್ತಾರೆ ಎಂಬುದನ್ನು ಗಮನವಿಟ್ಟು ಕೇಳಿ. ಇದು ನಿಮಗೆ ಮುಂದಿನ ಪ್ರಶ್ನೆಗಳನ್ನು ಕೇಳಲು ಸಹಾಯ ಮಾಡುತ್ತದೆ.

ನೀವು ಪ್ರಶ್ನೆಗಳನ್ನು ಕೇಳಿದ ನಂತರ, ನಿಮ್ಮ ಬಗ್ಗೆಯೂ ಸ್ವಲ್ಪ ಹೇಳಿ. ಸಂಭಾಷಣೆ ಏಕಮುಖವಾಗದಂತೆ ನೋಡಿಕೊಳ್ಳಿ. ಅವರು ನಿಮ್ಮೊಂದಿಗೆ ಮಾತನಾಡಲು ಆಸಕ್ತಿ ಹೊಂದಿದ್ದಾರೆಯೇ ಎಂದು ಅವರ ದೇಹ ಭಾಷೆಯಿಂದ ತಿಳಿದುಕೊಳ್ಳಿ. ನಗು, ಕಣ್ಣು ಸಂಪರ್ಕ ಮತ್ತು ನಿಮ್ಮ ಕಡೆಗೆ ತಿರುಗಿದ ದೇಹ ಸಂಭಾಷಣೆಗೆ ಆಸಕ್ತಿ ತೋರಿಸುತ್ತವೆ. ಅವರು ಮಾತನಾಡಲು ಇಷ್ಟಪಡದಿದ್ದರೆ, ಒತ್ತಾಯಿಸಬೇಡಿ. 'ಕ್ಷಮಿಸಿ, ನಿಮಗೆ ತೊಂದರೆ ನೀಡಿದೆ' ಎಂದು ಹೇಳಿ ಸಂಭಾಷಣೆಯನ್ನು ನಿಲ್ಲಿಸಿ. ನಿಮಗೊಂದೇ ಅಲ್ಲ, ಅವರಿಗೂ ನಿಮ್ಮೊಂದಿಗೆ ಮಾತಾಡಲು ಆಸಕ್ತಿ ಇರಬಹುದು. ಈ ವಿಷಯದಲ್ಲಿ ಅವರೂ ನಿಮ್ಮ ಹಾಗೆ ಸಂಕೋಚ ಹೊಂದಿರಬಹುದು.

ಎಲ್ಲರೂ ನಿಮ್ಮೊಂದಿಗೆ ಮಾತನಾಡಲು ಇಷ್ಟಪಡದಿರಬಹುದು. ಅದರಿಂದ ನಿಮಗೆ ಯಾವುದೇ ನಷ್ಟವಿಲ್ಲ. ಕೆಲವರು ಬೇಗ ಮಾತನಾಡಲು ಇಷ್ಟಪಡುತ್ತಾರೆ, ಇನ್ನು ಕೆಲವರು ಸುಮ್ಮನಿರಲು ಇಷ್ಟಪಡುತ್ತಾರೆ. ಒಮ್ಮೆಗೇ ದೊಡ್ಡ ಸಂಭಾಷಣೆಗೆ ಹೋಗುವ ಬದಲು, ಮೊದಲಿಗೆ ಕೇವಲ ನಗಲು ಅಥವಾ ಒಂದು ಸಣ್ಣ ಮಾತನ್ನು ಆಡಲು ಪ್ರಯತ್ನಿಸಿ. ನೀವು ಕೇವಲ ಸೌಹಾರ್ದಯುತವಾಗಿ ಮಾತನಾಡಲು ಬಯಸುತ್ತೀರಿ ಎಂಬುದು ನೆನಪಿರಲಿ. ಯಾವುದೇ ದುರುದ್ದೇಶವಿಲ್ಲ ಎಂಬುದು ನಿಮ್ಮ ನಡೆ-ನುಡಿ, ಹಾವ-ಭಾವದಿಂದ ಸಾಬೀತುಪಡಿಸಿ.

ಯಾರಾದರೂ ನಿಮ್ಮೊಂದಿಗೆ ಮಾತನಾಡಲು ಇಷ್ಟಪಡದಿದ್ದರೆ, ಅದು ಅವರ ಆಯ್ಕೆ, ನಿಮ್ಮ ವೈಫಲ್ಯವಲ್ಲ. ಅವರಿಗೆ ಬೇರೆ ಯಾವುದಾದರೂ ಕೆಲಸವಿರಬಹುದು ಅಥವಾ ಆ ಕ್ಷಣದಲ್ಲಿ ಮಾತನಾಡಲು ಮನಸ್ಸಿಲ್ಲದಿರಬಹುದು. ಆದರೆ ಈ ಹವ್ಯಾಸವನ್ನು ಬಿಡಬೇಡಿ.

ನೀವು ಸೌಹಾರ್ದಯುತವಾಗಿ ಮಾತನಾಡಲು ಪ್ರಯತ್ನಿಸಿದಾಗ, ಹೆಚ್ಚಿನವರು ಅದನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳುತ್ತಾರೆ. ಇನ್ನು ಕೆಲವರು ನಿರ್ಲಕ್ಷಿಸಿದರೂ, ಅದು ನಿಮ್ಮ ಬಗ್ಗೆ ಕೆಟ್ಟದ್ದನ್ನು ಸೂಚಿಸುವುದಿಲ್ಲ. ಯಾರೂ ನಿಮ್ಮನ್ನು ಅಪರಾಧಿ ಎಂದು ಭಾವಿಸುವುದಿಲ್ಲ. ನೀವು ಒಬ್ಬ ಅಪರಿಚಿತರೊಂದಿಗೆ ಮಾತಾಡಲು ಪ್ರಯತ್ನಿಸಿದಾಗ, ಅವರು ನಿಮ್ಮನ್ನು ತಪ್ಪು ತಿಳಿಯುವುದಿಲ್ಲ ಅಥವಾ ಕೆಟ್ಟದಾಗಿ ಭಾವಿಸುವುದಿಲ್ಲ. ಕಾರಣ ನಿಮ್ಮ ಉದ್ದೇಶ ಒಳ್ಳೆಯದಾಗಿರುತ್ತದೆ.